
ದೇಸಿ ಕೃಷಿ ಜ್ಞಾನ

ಸಂಪುಟ 2

# ಅರಣ್ಯ

ಶಿವಾನಂದ ಕಳವೆ



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ದೇಸೀ ಕೃಷಿ ಜ್ಞಾನ ಮಾಲೆ

# ಅಡವಿ ಜ್ಞಾನದ ಅನನ್ಯ ತೋಟ

(ಅರಣ್ಯ)

ಶಿವಾನಂದ ಕಳವೆ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ದೂರವಾಣಿ : ೨೨೪೮ ೪೫೧೬

**Adavi Jnyanada Ananya Tota** [Karnataka Desi Aranya Jnyana Kurita Grantha (Aranya)] by **Shivananda Kalave**, Published by **Ashok N. Chalawadi**, **Administrative Officer, Kannada Pustaka Pradhikara**, Kannada Bhavana, J.C. **Road**, Bangalooru-**560** 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ – ಕನ್ನಡ ಪುಸ್ತಕ ಪ್ರಾಧಿಕಾರ

ಮೊದಲ ಮುದ್ರಣ: ೨೦೦೮
ಪುಟಗಳು : xviii + ೧೫೦
ಬೆಲೆ : ರೂ. ೬೦/–
ಪ್ರತಿಗಳು : ೧೦೦೦

©Author :
Print : 2008
Page : xviii + 150
Price : **Rs. 60**/-
Copies : 1000
ISBN : 81-7713-243-1

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು–೫೬೦ ೦೦೨

ಮುಖಪುಟ ವಿನ್ಯಾಸ : ಎಂ.ಎಸ್. ಮೂರ್ತಿ
ಕರಡು ತಿದ್ದಿದವರು : ಶಿವಾನಂದ ಕಳವೆ
ಚಿತ್ರಗಳು : ಲೇಖಕರು

ಮುದ್ರಕರು :
**ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು–೫೬೦ ೦೨೭. ದೂ: ೨೨೨೩೪೦೬೬

ಪ್ರಧಾನ ಸಂಪಾದಕರು

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

ಸಂಪಾದಕ ಸಲಹಾ ಮಂಡಳಿ

ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಗಳು
ನಾಗೇಶ್ ಹೆಗಡೆ
ಡಾ. ಕೆ. ಪುಟ್ಟಸ್ವಾಮಿ
ಡಾ. ಕೆ.ವೈ. ನಾರಾಯಣಸ್ವಾಮಿ
ಭರಮಗೌಡ
ಜಿ. ನಾರಾಯಣರೆಡ್ಡಿ

ಶ್ರೀ ಹೊರೆಯಾಲ ದೊರೆಸ್ವಾಮಿ ಡಾ. ಕಾಶಿನಾಥ ಅಂಬಲಗಿ
ಡಾ. ಶರಣಮ್ಮ ಗೊರೆಬಾಳ ಶ್ರೀಮತಿ ಶೀಲಾ ತಿವಾರಿ

ಪ್ರಕಾಶಕರು

ಶ್ರೀ ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು

ಲೇಖಕರು

| | | |
|---|---|---|
| ೧. | ಮಣ್ಣು ಮತ್ತು ನೀರು | ಶ್ರೀಪಡ್ರೆ |
| ೨. | ಅರಣ್ಯ | ಶಿವಾನಂದ ಕಳವೆ |
| ೩. | ಬೀಜ | ಕೃಷ್ಣಪ್ರಸಾದ್ |
| ೪. | ಆಹಾರ / ಆರೋಗ್ಯ | ಬಿ.ಎಸ್. ಸೋಮಶೇಖರ್ |
| ೫. | ಕೃಷಿ ಆಚರಣೆ | ಮಲ್ಲಿಕಾರ್ಜುನ ಹೊಸಪಾಳ್ಯ |
| ೬. | ಕೃಷಿ ಉಪಕರಣಗಳು | ಗಾಣದಾಳು ಶ್ರೀಕಂಠ |
| ೭. | ನಿರ್ಮಾಣ ಕಲೆ | ಆನಂದತೀರ್ಥ ಪ್ಯಾಟಿ, ನರೇಂದ್ರ ರೈ ದೇರ್ಲ |
| ೮. | ಕೀಟ / ರೋಗ | ವಿಜಯ ಅಂಗಡಿ |
| ೯. | ಜಾನುವಾರು | ಡಾ. ಎಂ. ನಾರಾಯಣಸ್ವಾಮಿ |
| ೧೦. | ಕುರಿಸಾಕಣೆ | ಡಾ. ಸಿ.ಎಸ್. ರಘುಪತಿ |
| ೧೧. | ತೋಟಗಾರಿಕೆ | ಪೂರ್ಣಪ್ರಜ್ಞ ಬೇಳೂರು |

# ಅಧ್ಯಕ್ಷರ ಮಾತು

ಭಾರತ ಕೃಷಿ ಪ್ರಧಾನವಾದ ದೇಶವೆಂಬುದು ಹಿಂದೆ ಇದ್ದ ಖ್ಯಾತಿ. ಈಗ ಈ ಖ್ಯಾತಿ ಬಹುತೇಕ ಕಳೆದುಹೋಗಿದೆ. ಅದರಲ್ಲೂ ಜಾಗತೀಕರಣದ ಮಾಯಾಜಾಲಕ್ಕೆ ಒಳಗಾಗುತ್ತಿರುವ ಇಂದಿನ ಜೀವನ ಗತಿಯಲ್ಲಿ ಕೃಷಿಯೆಂಬುದು ಕೈಸುಟ್ಟುಕೊಳ್ಳುವ ಕರ್ಮಕಾಂಡವಾಗಿದೆ. ಕೃಷಿ ಕಾಯಕವನ್ನು ಬಿಡಲೂ ಆಗದ, ಕಟ್ಟಿಕೊಳ್ಳಲೂ ಆಗದ ಸಂದಿಗ್ಧದಲ್ಲಿ ರೈತನ ಬದುಕು ಡೋಲಾಯಮಾನವಾಗಿದೆ. ಇದಕ್ಕೆ ಕೇವಲ ಜಾಗತೀಕರಣದ ವಿದ್ಯಮಾನಗಳು ಮಾತ್ರ ಕಾರಣವಲ್ಲ ; ಇದಕ್ಕೂ ಮುನ್ನ ಹಸಿರು ಕ್ರಾಂತಿಯ ಯೋಜನೆ ಕೃಷಿ ನೆಲವನ್ನು ಬಂಜೆಯಾಗಿಸುವಲ್ಲಿ ಸಾಕಷ್ಟು ಪಾತ್ರ ವಹಿಸಿದೆ. ಅಧಿಕ ಇಳುವರಿಯ ಮೋಹಕ್ಕೆ ಬಿದ್ದು ಕೃಷಿಯನ್ನು ಕೈಗಾರಿಕೋದ್ಯಮಿಗಳ ಕೈಗೊಂಬೆಯಾಗಿಸುವಲ್ಲಿ ನಮ್ಮ ಆಧುನಿಕ ಕೃಷಿಪಂಡಿತರು ತುಂಬಾ ಯಶಸ್ವಿಯಾಗಿದ್ದಾರೆ. ಆಧುನಿಕ ಕೃಷಿಯ ಪರಿಣಾಮವಾಗಿ ಪಶುಪಾಲನೆ ನಾಶವಾಯಿತು. ಕೃಷಿಗೆ ಅಂಟಿಕೊಂಡಂತೆ ಗ್ರಾಮ ಸಂಸ್ಕೃತಿಯನ್ನು ಸಮೃದ್ಧಗೊಳಿಸುತ್ತಿದ್ದ ಗುಡಿಕೈಗಾರಿಕೆಗಳು ನಾಶವಾದವು. ನೆಲದ ಜೀವಸತ್ವ ಹಾಳಾಯಿತು, ನಿಸರ್ಗದ ಜೀವಸರಪಳಿ ಸಾಕಷ್ಟು ಹಾನಿಗೀಡಾಯಿತು. ಗುಂಡು ತೋಪುಗಳು ಇಲ್ಲವಾದವು. ಕೆರೆ ಕಟ್ಟೆ ಕುಂಟೆ ಬೆಂಚೆ ಪೆಂಚೆ ತಲಪರಿಗೆಗಳು ಕಣ್ಮರೆಯಾದವು. ಇವುಗಳು ಕೇವಲ ನೀರು ಸಂಗ್ರಹ ತಾಣಗಳಾಗಿ ಇರಲಿಲ್ಲ. ಜೀವ ಸಂಕುಲಗಳ ಬದುಕಿನ ಜೀವನಾಡಿಗಳಾಗಿದ್ದವು. ಇದೆಲ್ಲವನ್ನೂ ಪ್ರಗತಿಯೆನ್ನುವುದಾದರೆ ಇಂಥ ಪ್ರಗತಿಯನ್ನು ನಿಸರ್ಗ ವಿರೋಧಿಯೆನ್ನದೆ ವಿಧಿಯಿಲ್ಲ. ನಮ್ಮ ಜನಪದರಿಗೆ ಕೃಷಿ ಎಂಬುದು ಕೇವಲ ಹೊಟ್ಟೆಪಾಡಿನ ದಂಧೆಯಾಗಿರಲಿಲ್ಲ. ಅದೊಂದು ಸಂಸ್ಕೃತಿಯಾಗಿತ್ತು. ಅದು ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾಗಿದ್ದ ಕಸುಬಾಗಿರಲಿಲ್ಲ. ನಿಸರ್ಗ ಧರ್ಮವನ್ನು ಗೌರವಿಸಿದಂತೆ ಕಟ್ಟಿಕೊಂಡ ಕಾಯಕವಾಗಿತ್ತು. ಆದ್ದರಿಂದಲೇ ಸಾವಿರಾರು ವರ್ಷಗಳಿಂದ ಕೃಷಿಯನ್ನು ಜೀವನ ಧರ್ಮವಾಗಿಸಿಕೊಂಡು ಬಂದಿದ್ದ ನಮ್ಮ ಜನಪದಕ್ಕೆ

ಕೃಷಿ ಒಂದು ನೆಲಮೂಲ ವಿಜ್ಞಾನವಾಗಿತ್ತು; ಭೂಮಿ ಬಿಸಿಲು ಮಳೆ ಹಾಗೂ ಋತುಗತಿಗಳಿಗೆ ಹೊಂದಿಕೊಂಡಂತೆ ಅರಳಿ ರೂಪುಗೊಂಡ ಅನುಭವದ ಅರಿವಾಗಿತ್ತು. ಇಂಥ ಅರಿವು ಅರ್ಥಾತ್ ನೆಲಮೂಲ ವಿಜ್ಞಾನ ಇಂದು ಕಳೆದುಹೋಗುತ್ತಿದೆ. ಆಧುನಿಕ ಕೃಷಿ ಪಂಡಿತರ ಹಾಗೂ ಕೃಷಿಯಾಧಾರಿತ ಕೈಗಾರಿಕೋದ್ಯಮಿಗಳ ಹುನ್ನಾರದಲ್ಲಿ ಅದು ಕಡೆಗಣನೆಗೆ ಒಳಗಾಯಿತು. ಬೃಹತ್ತಿನ ಭ್ರಮೆಯಲ್ಲಿ ಕನಸಿದ ನಮ್ಮ ರಾಜಕೀಯ ಆರ್ಥಿಕ ನೀತಿ ಈ ನೆಲಮೂಲ ಜ್ಞಾನವನ್ನು ಸಂಪೂರ್ಣವಾಗಿ ಉಪೇಕ್ಷಿಸಿತು. ಅಧಿಕ ಇಳುವರಿಗೆ ಮೋಹಿತನಾದ ರೈತ ಕೈಗಾರಿಕೋದ್ಯಮಿಗಳ ತಾಳಕ್ಕೆ ಹೆಜ್ಜೆ ಹಾಕಿದ. ಭೂ ಅಭಿವೃದ್ಧಿಯ ಹೆಸರಿನ ಬ್ಯಾಂಕುಗಳ ರೈತನ ಭೂಮಿಕಾಣೆಯನ್ನು ಅಡವಿಟ್ಟುಕೊಂಡು ಸಾಲಕೊಟ್ಟವು. ಸಾಲ ಪಡೆದ ರೈತ ಬೋರು ಕೊರೆಸಿದ, ತಂತಿಬೇಲಿ ಹಾಕಿದ. ಸಿಕ್ಕ ನೀರಿಗೆ ಸಂಭ್ರಮಿಸಿದ. ಒಂದು ಬೋರು ಹೋಗಿ ನೂರಾರು, ಸಾವಿರಾರು ಆಗಿ ಅಂತರ್ಜಲ ಮಟ್ಟ ಪಾತಾಳಕ್ಕಿಳಿಯಿತು. ಕುಡಿಯುವ ನೀರಿಗೆ ತತ್ವಾರವಾದ ದುಸ್ಥಿತಿಯನ್ನು ರೈತ ತನ್ನ ಮನೆ ಬಾಗಿಲಿಗೆ ಆಹ್ವಾನಿಸಿದ. ಸಾಲ ಕೊಟ್ಟ ಬ್ಯಾಂಕುಗಳು ಬಡ್ಡಿಗೆ ಬಡ್ಡಿ ಸೇರಿಸಿ ಅದನ್ನು ಅಸಲಾಗಿ ಪರಿವರ್ತಿಸಿ ಸುಸ್ತಿಯ ಸುಳಿಗೆ ಸಿಕ್ಕಿಸಿ ರೈತನನ್ನು ಆತ್ಮಹತ್ಯೆಗೆ ಶರಣಾಗುವಂತೆ ಮಾಡಿದುವು. ಹಿಂದೆ ಎಂಥ ಬರದಲ್ಲೂ ರೈತ ತನ್ನ ಆತ್ಮವಿಶ್ವಾಸ ಕಳೆದುಕೊಂಡಿರಲಿಲ್ಲ. ಸಾಲ ತೀರಿಸಲಾರದ್ದಕ್ಕೆ ಸಾವಿಗೆ ಶರಣಾಗುವ ದುರ್ಬಲ ಮನಸ್ಥಿತಿಗೆ ಎಂದೂ ಈ ಪ್ರಮಾಣದಲ್ಲಿ ಇಳಿದಿರಲಿಲ್ಲ. ಇಂದು ಹಳ್ಳಿಗಳಲ್ಲಿ ದುಡಿಯುವ ಯುವಕರ ಪಡೆ ಉಳಿದಿಲ್ಲ. ನಗರದ ಗಾರ್ಮೆಂಟ್ಸ್‌ಗಳಲ್ಲಿ ಸಿಕ್ಕುವ ಮಾಸಿಕ ಎರಡು ಮೂರು ಸಾವಿರ ರೂಪಾಯಿಗಳ ಜೀತಕ್ಕೆ ಸೇರಿದ್ದಾರೆ. ಗುಟ್ಕಾ ಸಾರಾಯಿಗಳ ದುಶ್ಚಟಗಳಿಗೆ ಬಲಿಯಾಗಿದ್ದಾರೆ. ಕಾರಣ ಬಿಡುವಿಲ್ಲದ ದುಡಿತದ ನಡುವೆ ಅವರಿಗೆ ಬಿಡುಗಡೆ ಕೊಡುವ ಚಟಗಳು ಇವಾಗಿವೆ. ಇವುಗಳ ಜೊತೆಗೆ ಮಚ್ಚು ಲಾಂಗುಗಳ ಉಪ್ಪಿ ಶಿವು ನಾರಾಯಣರು ಅವರನ್ನು ಸಿನಿಮಾ ಎಂಬ ಭ್ರಾಮಕ ಲೋಕದಲ್ಲಿ ಉದ್ರೇಕಿಸುತ್ತಿದ್ದಾರೆ. ಇಂದು ನಮ್ಮ ಹಳ್ಳಿಗಳಲ್ಲಿ ಉಳಿದಿರುವವರು ಮುದುಕರು ಕೈಲಾಗದವರು ಹಾಗೂ ಮಕ್ಕಳು. ಇವರ ಜೊತೆಗೆ ಕಳ್ಳುಬಳ್ಳಿಯ ಮೋಹಕ್ಕೆ ಬಿಡಲಾರದ ಬಂಧದಲ್ಲಿ ಅಲ್ಲಿಯೇ ಉಳಿದಿರುವವರು. ಹಬ್ಬ ಹರಿದಿನಗಳ ಸಂಭ್ರಮದಲ್ಲಿ ಪಾಲ್ಗೊಳ್ಳಲು

ಮಾತ್ರ ನಗರಕ್ಕೆ ಹೋದ ಹುಡುಗರು ಹಳ್ಳಿಗಳಿಗೆ ಬರುತ್ತಿದ್ದಾರೆ. ಮಿಕ್ಕಂತೆ ಹಳ್ಳಿಗಳ ಬೀದಿಗಳು ಬಿಕೋ ಎನ್ನುತ್ತಿದೆ. ಕೃಷಿಕಾಯಕದಿಂದ ದೂರವಾಗುತ್ತಿರುವ ಹಳ್ಳಿಗಳ ಭೂಮಿಯನ್ನು ನಗರದ ಭೂ ಮಾಫಿಯಾ ಜಗತ್ತು ಕಬಳಿಸುತ್ತಿದೆ. ಇಂಥ ದಾರುಣತೆಯ ನಡುವೆ ಅಲ್ಲೊಬ್ಬ ಇಲ್ಲೊಬ್ಬ ಹಠಮುನಿಯಂತೆ ನೆಲಮೂಲ ಜ್ಞಾನಕ್ಕೆ ನಿಷ್ಠನಾಗಿ ಕೃಷಿಕಾಯಕದಲ್ಲಿ ತತ್ಪರನಾಗಿದ್ದಾನೆ. ಆಧುನಿಕ ಕೃಷಿಗೆ ಹಂಬಲಿಸಿದರೂ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕಾದ ಅನಿವಾರ್ಯತೆಯಲ್ಲಿ ಹಲವರು ಸಾಂಪ್ರದಾಯಿಕ ಕೃಷಿಗೆ ಜೋತುಬಿದ್ದಿದ್ದಾರೆ. ಇವರ ನಡುವೆ ಆಧುನಿಕ ಪ್ರಯೋಗದ ಪ್ರಾತ್ಯಕ್ಷತೆಗೆ ಒಡ್ಡಿಕೊಂಡವರೂ ಸಾಗಿದ್ದಾರೆ. ಹೀಗಾಗಿ ಇಂದು ಕೃಷಿ ಬದುಕು ದಿಕ್ಕು ತಪ್ಪಿದೆ. ಇಂಥ ವಾತಾವರಣದಲ್ಲಿ ದೇಸಿ ಕೃಷಿ ಜ್ಞಾನದ ಹೆಸರು ಹೇಳುತ್ತಾ ಹಲವು ಜೈವಿಕ ಪದ್ಧತಿಯ ಹೊಸ ಪ್ರಯೋಗಗಳನ್ನು ನಡೆಸುವ ಅದನ್ನು ಎಲ್ಲ ಕಡೆಗೂ ಏಕ ಮಾದರಿಯಂತೆ ಪ್ರಚುರಪಡಿಸುವ ಜ್ಞಾನಿಗಳು ಹುಟ್ಟಿಕೊಂಡಿದ್ದಾರೆ. ಅದನ್ನು ಅಲ್ಲಗಳೆಯುತ್ತಾ ಮತ್ತೊಂದು ರೀತಿಯಲ್ಲಿ ಪ್ರಯೋಗಶೀಲರಾಗಿ ಇದೇ ನಿಜವಾದ ದೇಸಿ ಪದ್ಧತಿ ಎಂದು ತಮ್ಮದೇ ಆದ ಮಾದರಿಯೊಂದನ್ನು ಹೇಳುತ್ತಾ ಪ್ರಾತ್ಯಕ್ಷತೆಗಳನ್ನು ತೋರುತ್ತಿರುವ ನೆಲನಿಷ್ಠೆಯಲ್ಲಿ ಮಾತನಾಡುವವರೂ ಇದ್ದಾರೆ. ಈ ಎಲ್ಲ ಪ್ರಯೋಗಗಳೂ ವಸ್ತುಸ್ಥಿತಿಗಿಂತ ಹೆಚ್ಚಾಗಿ ಉತ್ಪ್ರೇಕ್ಷಿತ ಮಾತುಗಳ ಸೂತಕದಲ್ಲಿ ರೈತರನ್ನು ದಿಕ್ಕು ತಪ್ಪಿಸುತ್ತಿವೆ ಎಂಬ ಅನುಮಾನ ದಟ್ಟವಾಗುತ್ತಿದೆ. ಏಕೆಂದರೆ ನೆಲಮೂಲ ವಿಜ್ಞಾನವೆಂಬುದು ಎಂದೂ ಏಕಮಾದರಿಯದಲ್ಲ. ಅದರ ಗುಣವೇ ಬಹುತ್ವ ಮೂಲದ್ದು. ಹಾಗೂ ಪ್ರದೇಶನಿಷ್ಠೆಯಲ್ಲಿ ಅನುಭವ ಜನ್ಯವಾದದ್ದು. ಈ ಹಿನ್ನೆಲೆಯಲ್ಲಿಯೇ ದೇಸಿ ಜ್ಞಾನ ಎನ್ನುವಾಗ 'ದೇಸಿ' ಪದವನ್ನು ವಿಶೇಷವಾಗಿ ಅರ್ಥೈಸಿ ಕೊಳ್ಳಬೇಕಾಗಿದೆ. ದೇಸಿ ಎಂಬುದು ಜನಪದಕ್ಕೆ ಸಮಾನಾರ್ಥಕ ವಾಗಿಯಾಗಲೀ ಪೂರಕವಾಗಿಯಾಗಲೀ ಪರ್ಯಾಯವಾಗಿಯಾಗಲೀ ಬಳಸುವ ಪದವಲ್ಲ. ಅದು ಮಾರ್ಗಕ್ಕೆ ವಿರುದ್ಧವಾಗಿ ಸಾಮಾನ್ಯೀಕರಿಸಿ ಪ್ರಯೋಗಿಸುವ ಪದವಾದರೂ ಅದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತಲೇ ಏಕ ಎಂಬುದನ್ನು ನಿರಾಕರಿಸುತ್ತ ಅನೇಕ ಎಂಬುದನ್ನು ತುಂಬಿಕೊಳ್ಳುತ್ತ ತನ್ನ ಅರ್ಥವ್ಯಾಪ್ತಿಯನ್ನು ಪ್ರತೀತಗೊಳಿಸುತ್ತದೆ. ಕೃಷಿಗೆ ಸಂಬಂಧಿಸಿದಂತೆ ಈ ಪದವನ್ನು ಪ್ರಯೋಗಿಸುವಾಗಲಂತೂ ಅದರ ಬಹುತ್ವದ ಶ್ರೀಮಂತಿಕೆ ಸಮೃದ್ಧವಾಗಿ ಕಾಣುವಂಥಾದ್ದು. ಉದಾಹರಣೆಗೆ

ಕರ್ನಾಟಕವನ್ನು ಕೃಷಿಗೆ ಸಂಬಂಧಿಸಿ ನಾಲ್ಕು ನೆಲೆಗಳಲ್ಲಿ ವಿಂಗಡಿಸಬಹುದು. ಮಲೆನಾಡು, ಅರೆಮಲೆನಾಡು, ಬಯಲುಸೀಮೆ, ಬೆಂಗಾಡು ಸೀಮೆ. ಈ ನಾಲ್ಕು ಪ್ರದೇಶಗಳ ಭೂವೈಲಕ್ಷಣ್ಯ ಮಳೆ ಬಿಸಿಲಿನ ಹವಾಮಾನ ಪರಿಸ್ಥಿತಿ ತೀರ ವಿಭಿನ್ನವೂ ವಿಶಿಷ್ಟವೂ ಆದದ್ದು. ಆದರೆ ಮಲೆನಾಡು ಎಂದ ತಕ್ಷಣ ಅದನ್ನು ಏಕಮಾದರಿಯಲ್ಲಿ ಗ್ರಹಿಸುವುದು ತಪ್ಪು. ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಧಾರವಾಡ ಈ ಪ್ರದೇಶಗಳು ಮಲೆನಾಡು ಪ್ರದೇಶಗಳಾದರೂ ಅವುಗಳ ವಿಭಿನ್ನತೆಗಳು ಆಯಾ ನೆಲದ ಗುಣವಿಶೇಷತೆಯ ಅಸ್ಮಿತೆಗಳು. ಹಾಗೆಯೇ ಬಯಲುಸೀಮೆಯೆಲ್ಲಾ ಒಂದೇ ಅಲ್ಲ. ಹೀಗಾಗಿ ದೇಸಿ ಎಂಬುದು ಐದು ಮೈಲಿಯ ಅಂತರದಲ್ಲಿ ತನ್ನ ವ್ಯತ್ಯಾಸವನ್ನು ಢಾಳಾಗಿ ಕಾಣಿಸುವ ಅನನ್ಯತೆಯಿಂದ ಕೂಡಿರುತ್ತದೆ. ಈ ಅನನ್ಯತೆಯ ಅರಿವೆಂಬುದು ಆಯಾ ನೆಲಮೂಲದ ಅನುಭವ ಮೂಸೆಯಲ್ಲಿ ಪರಿಪಾಕಗೊಂಡು ಮೂಡಿರುತ್ತದೆ. ಬಯಲುಸೀಮೆಯಲ್ಲಿ ಒಂದೇ ಪ್ರದೇಶದ ಕೆರೆ ಬಯಲಿಗೂ ಅಲ್ಲಿಂದ ಐದು ಮೈಲಿ ಆಚೆಗಿರುವ ಕುಂಟೆ, ಬೆಂಚೆ, ಕಟ್ಟೆಗಳನ್ನು ಮಾತ್ರ ಒಳಗೊಂಡ ಬಯಲಿಗೂ ವ್ಯತ್ಯಾಸವಿರುತ್ತದೆ. ಬಿತ್ತುವ ಬೀಜ, ಬಳಸುವ ಗೋಡುಗೊಬ್ಬರ ಉಪಕರಣ ಕೃಷಿ ಮಾಡುವ ವಿಧಾನ, ಕಾಲಮಾನ ಎಲ್ಲವೂ ಸಾವಿರಾರು ವರ್ಷಗಳ ಅನುಭವದ ಮೂಸೆಯಲ್ಲಿ ಅರಳಿದ ಅರಿವಿನ ಪಕ್ವಫಲಗಳಾಗಿರುತ್ತವೆ. ಇದು ನೆಲಮೂಲ ಜ್ಞಾನ. ಇದು ದೇಸಿವಿಜ್ಞಾನ. ಇಂಥ ಅರಿವನ್ನು ಗಂಭೀರವಾಗಿ ಸ್ವೀಕರಿಸಿ ಇದನ್ನು ಮೂಲ ಬೇರಾಗಿಸಿಕೊಂಡು ನಮ್ಮ ಹೊಸ ಸಂಶೋಧನೆಗಳು ಬೆಳೆಯಬೇಕಾಗಿದೆ. ಒಗ್ಗದ ನೆಲಕ್ಕೆ ವೆನಿಲಾ ಹಾಕುವುದು ಮಿಡಿ ಸೌತೆ, ಬೀಟಿ ಹತ್ತಿಯ ಭ್ರಮೆಗೆ ಸಿಲುಕಿ ಹೊಂದಿಕೊಳ್ಳದ ಬೀಜ ಬಿತ್ತುವುದು ಆಗಬಾರದು. ನಿರ್ಬೀಜ ತಳಿಗಳನ್ನು ಮಾರುತ್ತಿರುವ ಬೀಜ ಗೊಬ್ಬರ ಔಷಧಿ ಕಂಪನಿಗಳ ಭ್ರಮಾತ್ಮಕ ಜಾಹೀರಾತಿನ ಮೋಸ ಜಾಲದಲ್ಲಿ ನಮ್ಮ ಬಡರೈತರು ಹಾಳಾಗಿರುವುದು ಹೀಗೆ. ನಮ್ಮ ಅಕ್ಷರ ಬುದ್ಧಿಯ ಕೃಷಿ ಪಂಡಿತರು ಇಂಥ ಹುನ್ನಾರಗಳಿಗೆ ಮುಖವಾಣಿಗಳಾಗಿ ಕೆಲಸ ಮಾಡುತ್ತಿರುವುದು ವಿಷಾದನೀಯ. ಇದು ತಪ್ಪಬೇಕು. ಜೊತೆಗೆ ಇವರ ದಂಧಾದುಂಧಿಯ ಆಕ್ರಮಣದಲ್ಲಿ ಹಾಳಾಗುತ್ತಿರುವ ಭೂಮಿ ಹಾಗೂ ಜೀವಜಗತ್ತು ರಕ್ಷಿತವಾಗಬೇಕು. ಭೂಮಿಯ ಧರ್ಮಕ್ಕೆ ಅಂದರೆ ಪಂಚಭೂತಗಳಿಗೆ ಎಂದೂ

ವಂಚನೆಯೆಸಗದಂತೆ ರೂಪುಗೊಂಡ ದೇಸಿಜ್ಞಾನ ಪದ್ಧತಿ ಅಳಿದು ಹೋಗಬಾರದು. ಅದನ್ನು ಪುನರುಜ್ಜೀವಿಸುತ್ತ ಆ ಪರಂಪರೆಯ ಮುಂದುವರಿಕೆಯಾಗಿ ಹೊಸ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುವ ದಿಕ್ಕಿನಲ್ಲಿ ನಮ್ಮ ಕೃಷಿ ಸಂಶೋಧನೆಗಳು ನಡೆಯಬೇಕು. ಆಧುನಿಕ ಕೃಷಿಪಂಡಿತರು ಕೈಗಾರಿಕಾ ಉತ್ಪನ್ನಮುಖಿಗಳಾಗದೆ ಮಾನವ ಸಂಪನ್ಮೂಲ ಬಳಕೆಯ ಶ್ರಮ ಸಲಕರಣೆಗಳ ಸಾಧ್ಯತೆಗಳತ್ತ ಗಮನಹರಿಸಬೇಕು. ನೆಲಮೂಲ ತಳಿಗಳ ನಿರಾಕರಣೆಯನ್ನು ಬಿಟ್ಟು ಅವುಗಳ ಬಲವರ್ಧನೆಯ ಕಡೆಗೆ ಆಸಕ್ತಿ ವಹಿಸಬೇಕು. ಹಾಗೆಯೇ ದೇಸಿಯ ಬಹುತ್ವವನ್ನು ಮನಗಂಡು ನೆಲನಿಷ್ಠೆಯ ಜ್ಞಾನವನ್ನು ಗೌರವಿಸುವ ವಿಸ್ತರಿಸುವ ತಿಳುವಳಿಕೆ ನೀಡುವ ಕಡೆ ತೊಡಗಿಸಿ ಕೊಳ್ಳಬೇಕು, ಇದು ತುರ್ತಾಗಿ ಆಗಬೇಕಾದ ಕೆಲಸ.

ಇಂದು ದೇಸಿ ಜ್ಞಾನಕ್ಕೆ ಪೂರಕವಾಗುವ ಮೂರು ಬಗೆಯ ಕೃಷಿ ಪದ್ಧತಿಗಳು ನಮ್ಮ ನಡುವೆ ಬಳಕೆಯಲ್ಲಿವೆ. ಸಾಂಪ್ರದಾಯಿಕ ಕೃಷಿ ಪದ್ಧತಿ; ಸಾವಯವ ಕೃಷಿಪದ್ಧತಿ; ಸಹಜ ಕೃಷಿಪದ್ಧತಿ. ಮೇಲುನೋಟಕ್ಕೆ ಈ ಮೂರೂ ಮಾದರಿಗಳು ಭಿನ್ನ ಎಂಬಂತೆ ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ; ಭೂಮಿಯ ಜೈವಿಕ ಸತ್ವವನ್ನು ನಾಶಮಾಡದೆ ಉತ್ತು ಬಿತ್ತಿ ಬೆಳೆ ತೆಗೆಯುವುದು ಮತ್ತು ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನ ಪ್ರಯೋಗದಲ್ಲಿ ವ್ಯವಸಾಯ ಮಾಡುವುದು. ದುರಾಸೆಗೆ ಬಲಿಯಾಗದೇ ನಿರಾಶೆಯ ಕೂಪಕ್ಕೂ ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಈ ಮೂರೂ ಕೃಷಿ ಪದ್ಧತಿಗಳು ನೆಲಕ್ಕೆ ವಿಷಉಣ್ಣಿಸುವ ದ್ರೋಹ ಚಿಂತನೆಗೆ ಎಂದೂ ತೊಡಗಿದವುಗಳಲ್ಲ. ನೆಲ, ಜಲ, ಹವಾಮಾನಗಳ ಲಭ್ಯತೆಯನ್ನು ಅರಿತು ಕೃಷಿಜ್ಞಾನವನ್ನು ಬಳಸಿಕೊಂಡವು. ಹಾಗೂ ಬೆಳೆಸಿಕೊಂಡವು. ಇದರ ಜೊತೆಗೆ ಸ್ಥಳೀಯ ಪ್ರಾಕೃತಿಕ ಲಭ್ಯತೆಯನ್ನು ನಾಶವಾಗದ ಪರಿಯಲ್ಲಿ ಕೃಷಿಗೆ ಪೂರಕವಾಗಿ ದುಡಿಸಿಕೊಂಡವು. ಈ ಎಲ್ಲ ಸಮಾನಾಂಶಗಳನ್ನು, ಗಮನಿಸಿದರೆ ಇವುಗಳನ್ನು ಸರಳವಾಗಿ ಜೈವಿಕ ಕೃಷಿಪದ್ಧತಿಗಳೆಂದು ಕರೆಯಬಹುದು. ಈ ಮೂರೂ ಪದ್ಧತಿಗಳಲ್ಲಿ ಸ್ಥಳೀಯ ಜ್ಞಾನ ಪ್ರಧಾನವಾಗಿ ಬಿಂಬಿತವಾಗುವುದರಿಂದ ದೇಸಿ ಜೈವಿಕ ಕೃಷಿ ಪದ್ಧತಿಗಳೆಂದು ಸಾಮಾನ್ಯೀಕರಿಸಬಹುದು. ಅಲ್ಲದೆ ಈ ಮೂರು ವಿಧಾನಗಳನ್ನು ಪ್ರತ್ಯೇಕ

ಜ್ಞಾನ ಮಾರ್ಗಗಳಾಗಿ ಕಾಣದೆ ಪರಸ್ಪರ ಬಳಕೆಯ ಪೂರಕ ಮಾದರಿಗಳಾಗಿ ಸ್ವೀಕರಿಸುವ ಅಗತ್ಯವೂ ಇದೆ. ಹಾಗಾದಾಗ ಮಾತ್ರ ನೆಲಮೂಲ ಜ್ಞಾನದ ಬಳಕೆಯ ಹೊಸತನಕ್ಕೆ ಅವಕಾಶಗಳನ್ನು ಕಲ್ಪಿಸುವುದು, ಹೊಸ ಹೊಸ ಆವಿಷ್ಕಾರಗಳು ಈ ಜೈವಿಕ ಕೃಷಿ ಪದ್ಧತಿಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ. ದಿಕ್ಕು ತಪ್ಪಿರುವ ಕೃಷಿ ಬದುಕಿಗೆ ಒಂದು ನಿರ್ದಿಷ್ಟವೂ ಅತಿರೇಕಗಳ ಅವಾಂತರವೂ ಇಲ್ಲದ ತಿಳುವಳಿಕೆಯನ್ನು ನೀಡುವುದು ಇದರಿಂದ ಸಾಧ್ಯವಾಗುತ್ತದೆ. ಇಲ್ಲಿ ದುರಾಸೆಯಿಂದ ಭ್ರಮೆಗಳ ಬೆನ್ನುಹತ್ತುವ ಪ್ರಮೇಯವಿಲ್ಲ. ವಸ್ತುಸ್ಥಿತಿ ಅರಿವಿನಲ್ಲಿ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಧ್ಯಮ ಮಾರ್ಗದ ಜೀವನ ವಿಧಾನ ಇದಾಗಿದೆ. ಮಧ್ಯಮ ಮಾರ್ಗವೆಂಬುದು ಮಧ್ಯಮ ವರ್ಗದ ಜೀವನ ಮಾರ್ಗವಲ್ಲ. ನಿಸರ್ಗ ಧರ್ಮಕ್ಕೆ ಎರವಾಗದಂತೆ ಬದುಕನ್ನು ಅರಿಯುವ ಬದುಕನ್ನು ಬಾಳುವ ಜೀವನ ಮಾರ್ಗ. ತಾನೂ ಬದುಕಿ ಜೀವಜಗತ್ತನ್ನೂ ಬದುಕಿಸುವಂತೆ ತನ್ನ ನಡೆಯನ್ನು ನಿಯಂತ್ರಿಸಿಕೊಳ್ಳುವ ಜೀವನಮಾರ್ಗ. ಇಂಥ ಒಂದು ಜೀವನ ಮಾರ್ಗಕ್ಕೆ ಸದಾ ಹಂಬಲಿಸುವ ಜನಪದ ಇಂದಿಗೂ ನಮ್ಮ ನಡುವೆ ಇದೆ. ಅವರ ಎದೆಯಾಳದಲ್ಲಿ ಈ ಮೂರೂ ಕೃಷಿ ಪದ್ಧತಿಗಳ ಪಾರಂಪರಿಕ ಅನುಭವ ಜ್ಞಾನ ನೆನಪಾಗಿ ನೆಲದ ಕರ್ಮರೂಪಿ ಪ್ರಾತ್ಯಕ್ಷಿತೆಯಾಗಿ ಮರುಭೂಮಿಯಲ್ಲಿನ ಓಯಸಿಸ್‌ಗಳಂತೆ ಇನ್ನೂ ಜೀವಂತವಿವೆ. ಅವುಗಳನ್ನು ಸಂಗ್ರಹಿಸಿ ಉಳಿಸುವ ಹಾಗೂ ಆಸಕ್ತ ರೈತ ಪ್ರಜ್ಞೆಗಳಿಗೆ ಒದಗಿಸುವ ಉದ್ದೇಶದಿಂದ ಈ ದೇಸಿಕೃಷಿ ಜ್ಞಾನ ಮಾಲಿಕೆಯನ್ನು ಪ್ರಾರಂಭಿಸಲಾಗಿದೆ.

ಈ ಮಾಲಿಕೆಯನ್ನು ಪುಸ್ತಕ ಪ್ರಾಧಿಕಾರ ಕೈಗೆತ್ತಿಕೊಂಡಾಗ ಹಲವು ರೀತಿಯ ಅಪಸ್ವರಗಳು ಕೇಳಿಬಂದವು. ಕೃಷಿಗೂ ಪುಸ್ತಕ ಪ್ರಾಧಿಕಾರಕ್ಕೂ ಎಲ್ಲಿಂದೆಲ್ಲಿಗೆ ಸಂಬಂಧ? ಎಂದು ಪ್ರಶ್ನಿಸಿದವರೂ ಇದ್ದಾರೆ. ಪುಸ್ತಕ ಹಾಗೂ ಪುಸ್ತಕ ಸಂಸ್ಕೃತಿ ಎಂದರೆ ಕೇವಲ ಸಾಹಿತ್ಯ, ಸಂಶೋಧನೆ ವಿಜ್ಞಾನ, ವಿಚಾರ, ಇತ್ಯಾದಿ ಅಕ್ಷರ ಜಗತ್ತಿನ ವ್ಯವಹಾರಕ್ಕೆ ಮಾತ್ರ ಸಂಬಂಧಿಸಿದ್ದು ಎಂದು ನಂಬಿದವರಿಗೆ ಹಾಗನ್ನಿಸುವುದು ಸಹಜ. ನಮ್ಮ ಸಮಾಜದಲ್ಲಿ ಶ್ರಮಿಕ ಮೂಲಕ ಕಾಯಕ ಜೀವಿಗಳನ್ನು ಪುಸ್ತಕ ಸಂಸ್ಕೃತಿಯಿಂದ ದೂರವಿಟ್ಟು ಮಾತನಾಡುವ ಇಂಥ ಜಾಡ್ಯ ಇನ್ನೂ ಮುಂದುವರೆದಿದೆ. ಪುಸ್ತಕ ಚಿಂತನೆ ಇವರಿಗೆ ತಿಳಿಯಲಾರದ್ದು ಎನ್ನುವ

ಮೇಲರಿಮೆಯ ಭಾವ ಅಕ್ಷರ ಜಗತ್ತಿನ ಜನರದ್ದಾದರೆ ಅದು ಸಮಾಜದ ಸ್ವಾಸ್ಥ್ಯ ಕೆಟ್ಟಿದ್ದರ ಸೂಚನೆ. ಸಂಸ್ಕೃತಿಯನ್ನು ವಿಸ್ತರಿಸುವ ಹೊಣೆಗಾರಿಕೆಯನ್ನು ಹೊತ್ತ ಅಕಾಡೆಮಿಗಳು, ಪ್ರಾಧಿಕಾರಗಳು, ಪ್ರಸಾರಾಂಗಗಳು ನಿರ್ದಿಷ್ಟ ವರ್ಗಗಳಿಗೆ ಸೀಮಿತಗೊಳಿಸಿಕೊಂಡ ಕಾರ್ಯಕ್ರಮಗಳಲ್ಲಿ ಪರ್ಯವಸಾನವಾಗುವ ಪರಿಪಾಠ ತಪ್ಪಬೇಕು. ಇವುಗಳು ನಮಗೆ ಏನು ಕೊಟ್ಟಿವೆ ಎಂದು ಪ್ರಶ್ನಿಸುವ ಶ್ರಮಿಕ ಸಮುದಾಯಗಳಿಗೆ ಉತ್ತರಿಸುವ ನೈತಿಕ ಹೊಣೆಗೆ ಇವುಗಳ ಭಾಜನವಾಗಬೇಕು. ಶ್ರಮಿಕ ಬಹುಸಮುದಾಯಗಳು ಈ ಎಲ್ಲ ಸಂಸ್ಥೆಗಳ ನೇರ ಫಲಾನುಭವಿಗಳಾಗಬೇಕು. ಜನರ ಬೆವರಿನ ಸಂಪತ್ತು ಸಾಮಾಜಿಕ ನ್ಯಾಯದ ನೈತಿಕ ಎಚ್ಚರದಲ್ಲಿ ವಿನಿಯೋಗವಾಗಬೇಕು. ಪುಸ್ತಕ ಪ್ರಾಧಿಕಾರ ಇದನ್ನು ಕರ್ತವ್ಯವೆಂಬ ಭಾವದಲ್ಲಿ ಸ್ವೀಕರಿಸಿ ಕಾರ್ಯಮುಖಿಯಾಗಿದೆ. ಈ ಕಾರ್ಯಯೋಜನೆಗೆ ಕೈಜೋಡಿಸಿದ ಮನಸ್ಸುಗಳು ನೂರಾರು. ಅವುಗಳನ್ನು ಇಲ್ಲಿ ನೆನೆಯುವುದು ಕರ್ತವ್ಯದ ಒಂದು ಭಾಗವೆಂದು ಭಾವಿಸಿದ್ದೇನೆ.

ದೇಸಿ ಕೃಷಿ ಜ್ಞಾನವನ್ನು ದಾಖಲಿಸುವ ಆಶಯಕ್ಕೆ ಪ್ರಾಧಿಕಾರದ ಎಲ್ಲ ಸದಸ್ಯ ಬಂಧುಗಳು ಒಕ್ಕೊರಲಿನ ಸಹಮತ ನೀಡಿದ್ದು ಈ ಯೋಜನೆ ಕಾರ್ಯರೂಪಕ್ಕಿಳಿಯಲು ಕಾರಣವಾದ ಮೊದಲ ಹಂತ. ಅದಾದ ಮೇಲ್ ತೇಜಸ್ವಿಯವರು ನೀಡಿದ ಮಾರ್ಗದರ್ಶನ ಮರೆಯಲಾರದ್ದು. ಅವರನ್ನು ಈ ಕಾರ್ಯದಲ್ಲಿ ನೇರವಾಗಿ ಭಾಗವಹಿಸಲು ಮನವಿಮಾಡಿಕೊಂಡಾಗ ತಮ್ಮ ಸಹಜ ಒರಟು ಭಾಷೆಯಲ್ಲಿ ಬೈದು ನಿರಾಕರಿಸಿದ ಅವರ ಪ್ರೀತಿ ಅದು ತೋರಿದ ದಾರಿ ಶ್ರೀಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ ಮೊದಲಾದ ಸಾಧಕರ ಪರಿಚಯ ಮಾಡಿಸಿತು. ಎಲ್ಲಕ್ಕಿಂತ ಮಿಗಿಲಾಗಿ ಜಿ. ಕೃಷ್ಣಪ್ರಸಾದರ ಆಸ್ಥೆ, ನೇತೃತ್ವ ಈ ಯೋಜನೆಯ ಸ್ವರೂಪಕ್ಕೆ ಚಾಲನೆ ನೀಡಿತು. ಗಾಣಧಾಳು, ಪ್ಯಾಟಿ, ಗೆಳೆಯರು ಈ ಸ್ವರೂಪವನ್ನು ಮನಸ್ಸಿಗೆ ತಂದುಕೊಂಡು ಶಿಬಿರಗಳ ಹೊಣೆಹೊತ್ತು ಸಂಪರ್ಕ ಸೇತುಗಳಾಗಿ ಎಲ್ಲರನ್ನೂ ಕೂಡಿಸುವಲ್ಲಿ ನೆರವಾದರು. ಮೊದಲ ಶಿಬಿರವನ್ನು ಹಮ್ಮಿಕೊಳ್ಳಲು ಆಶ್ರಯ ಹಾಗೂ ನೈತಿಕ ಬೆಂಬಲವನ್ನು ನೀಡಿದವರು ಆತ್ಮೀಯ ಗುರುಗಳಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು. ಶಿಬಿರದಲ್ಲಿ ಚರ್ಚೆಯನ್ನು, ಮಾಹಿತಿ ವಿಧಾನವನ್ನು ರೂಪುರೇಷೆ

ಮಾಡಿದವರು ಶ್ರೀ ನಾಗೇಶ ಹೆಗಡೆ ಅವರು. ಇವರೆಲ್ಲರ ಜೊತೆಗೆ ಅನುಭವದ ಜ್ಞಾನ ಸಮೃದ್ಧಿಯನ್ನು ಧಾರೆ ಎರೆದು ಬೆಳೆಸಿದವರು ಶ್ರೀಪಡ್ರೆ, ಭರಮಗೌಡ, ಶ್ರೀರಾಮರೆಡ್ಡಿ, ಕಳವೆ ಹಾಗೂ ನಾಡಿನ ರೈತಬಂಧುಗಳು. ಎರಡನೆಯ ಶಿಬಿರವನ್ನು ಹಮ್ಮಿಕೊಳ್ಳಲು ಸ್ಥಳ ನೀಡಿದವರು ಸೂರಶೆಟ್ಟಿಕೊಪ್ಪದ ಬೈಫ್ ಬಳಗ. ಆ ಶಿಬಿರದಲ್ಲಿ ಭಾಗವಹಿಸಿದ ಆ ಸುತ್ತಲಿನ ರೈತಬಂಧುಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಭಾಗದ ರೈತಬಂಧುಗಳು. ನೀಡಿದ ಮಾಹಿತಿಯನ್ನು ದಾಖಲಿಸುವಲ್ಲಿ ಶ್ರಮಿಸಿದವರು ಶ್ರೀಮತಿ ರೇಖಾ. ತಮ್ಮ ಜಾನಪದೀಯ ಅಧ್ಯಯನ ದೃಷ್ಟಿ ಸೂಕ್ಷ್ಮತೆಗಳಿಂದ ಚರ್ಚೆಗೆ ಹೊಸ ಆಯಾಮ ನೀಡುತ್ತಿದ್ದ ಗೆಳೆಯರು ಕೆ.ವೈ.ನಾರಾಯಣಸ್ವಾಮಿ, ಕೆ. ಪುಟ್ಟಸ್ವಾಮಿ, ಎಂ.ಎಸ್.ಮೂರ್ತಿ, ಬಿ.ಎಸ್. ಸೋಮಶೇಖರ್, ಡಾ. ರಘುಪತಿ, ಡಾ. ನಾರಾಯಣಸ್ವಾಮಿ, ಡಾ. ಮುರಳಿ, ಪೂರ್ಣಪ್ರಜ್ಞ, ದೇರ್ಲ, ಜಿ.ಎನ್. ಮೋಹನ್, ಬಸವರಾಜ ಸಂತೇಶಿವರ, ಶಿವನಹಳ್ಳಿ ರಮೇಶ್, ಪ್ರೊ. ಶಿವರಾಮಯ್ಯ, ಡಾ. ರಾಮಕೃಷ್ಣಯ್ಯ ಮೊದಲಾದ ಗೆಳೆಯರು. ಶಿಬಿರಗಳ ಮಾಹಿತಿಯನ್ನು, ಸಭೆಗಳ ನಡಾವಳಿಯನ್ನು ದಾಖಲಿಸಿ ಡಿ.ಟಿ.ಪಿ. ಮಾಡಿ ಒದಗಿಸುತ್ತಿದ್ದವರು ಶ್ರೀವಾಣಿ, ವಿಜಯ, ಮಂಜು, ಶಂಕರ, ರಾಮಯ್ಯ ಮೊದಲಾದವರು. ಶಿಬಿರದ ಆಯೋಜನೆಯಿಂದ ಹಿಡಿದು ಸಂಪೂರ್ಣ ನಿರ್ವಹಣೆಯವರೆಗೆ ಬದ್ಧತೆಯಿಂದ ದುಡಿದವರು ಆಡಳಿತಾಧಿಕಾರಿಗಳಾದ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಅಶೋಕ ಎನ್. ಚಲವಾದಿ ಅವರು. ಇದೆಲ್ಲದರ ಜೊತೆಗೆ ಈ ಯೋಜನೆ ಕಾರ್ಯಗತವಾಗಲು ಅವಕಾಶ ಕಲ್ಪಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಐ.ಎಂ. ವಿಠ್ಠಲಮೂರ್ತಿ ಅವರು, ಮನು ಬಳಿಗಾರ್, ಕಾ.ತ. ಚಿಕ್ಕಣ್ಣ, ಜೆ.ಎನ್. ಶಾಮರಾವ್, ಎಸ್.ಐ. ಭಾವಿಕಟ್ಟಿ, ಮುಂತಾದವರು. ಹೀಗೆ ಈ ಕೃತಿಗಳ ರೂಪಣದ ಹಿಂದೆ ನೂರಾರು ಮನಸ್ಸುಗಳ ಸಂಕಲ್ಪ ಶಕ್ತಿ ಕೆಲಸ ಮಾಡಿದೆ. ಇವರೆಲ್ಲರಿಗೆ ಆತ್ಮೀಯ ಕೃತಜ್ಞತೆಗಳು.

ಫೆಬ್ರವರಿ ೨೦೦೮ —ಪ್ರೊ. ಎಸ್.ಜಿ. ಸಿದ್ಧರಾಮಯ್ಯ

# ಲೇಖಕರ ಮಾತು

## ಬೆಟ್ಟದ ಮೂಲದ ಪುಟ್ಟ ತೊರೆ

ಆನೆಯ ಬಲ, ಜಿಂಕೆ ಓಟ, ಕೋಗಿಲೆ ಕಂಠ, ಸಿಂಹ ಗಾಂಭೀರ್ಯ, ಹುಲಿಯ ಶೌರ್ಯ, ನರಿಯಂತಹ ಮನುಷ್ಯ ಎಂದು ವನ್ಯಜೀವಿ ಹೋಲಿಕೆ ಮುಖೇನ ಮನುಷ್ಯ ಗುಣ ಗುರುತಿಸುವ ವಿದ್ಯೆಯನ್ನು ಕಾಡು ನೀಡಿದೆ. ಮರವನ್ನು ವರ ಕೊಡುವ ದೇವರೆಂದೆವು, ಹುಲಿಯನ್ನು ಪೂಜಿಸಿದೆವು. ಸಂರಕ್ಷಣೆಯ ದೇಸೀ ದಾರಿಗಳಲ್ಲಿ ಹೆಜ್ಜೆ ಹೆಜ್ಜೆಗೆ ಕೌತುಕ ತೆರೆದಿಟ್ಟ ಸಂಸ್ಕೃತಿ ನಮ್ಮದು. ಆಹಾರ , ಔಷಧ ಪರಂಪರೆಯ ನಮ್ಮ ಬಳಸಿ ಬಲ್ಲ ಅಡವಿ ಜ್ಞಾನ ಶತಮಾನಗಳ ಅಪುರೂಪದ ಬಳುವಳಿ. ಸ್ವಾತಂತ್ರ್ಯ ಬಳಿಕ ನೈಸರ್ಗಿಕ ಸಂಪನ್ಮೂಲ ಬಳಸಿ ಕಾರ್ಖಾನೆ ಬೆಳೆಸುವ ಪೈಪೋಟಿಯಲ್ಲಿ ನೈಸರ್ಗಿಕ ಕಾಡು ಬಸವಳಿದಿದೆ. ಜನಸಂಖ್ಯೆ, ಬೃಹತ್ ಯೋಜನೆಗಳು ಜೀವ ವೈವಿಧ್ಯಕ್ಕೆ ಧಕ್ಕೆ ತಂದಿವೆ.

ಇಂದಿನ ತಲೆಮಾರಿಗೆ ವನಸಿರಿಯ ಕಾಲದ ನೆನಪುಗಳಿವೆ. ಕಣ್ಣೆದುರು ಕಣ್ಮರೆಯಾದ ಹಸುರಿನ ಖಾಸಾ ಕತೆಗಳಿವೆ, ದುಃಖವಿದೆ. ಬಾಲ್ಯದಲ್ಲಿ ಕಾಡು ಹಣ್ಣಿನ ಸವಿ ನಮ್ಮನ್ನು ಕಾಡಿಗೆ ಕರೆದಿದೆ. ಮರ, ಗಿಡ, ಬಳ್ಳಿ, ಹೂವು, ಜೇನು, ಹಕ್ಕಿ ನೋಡುವ ಆಸಕ್ತಿ ಅಲ್ಲಿಂದ ಮೂಡಿದೆ. ಈಗ ನಮ್ಮ ಸುತ್ತ ಕೈಗಾರಿಕಾ ನೆಡುತೋಪು ನಿಂತಿದೆ, ಯೂನಿಫಾರ್ಮ ತೋಪು ಗೆಲ್ಲುತ್ತಿದೆ. ಇದ್ದಕ್ಕಿದ್ದಂತೆ ನಾವು ಲಾಗಾಯ್ತಿನಿಂದ ಓದಿ ಬಲ್ಲ ಅಡವಿಯ ಭಾಷೆ ಅರ್ಥವಾಗದಷ್ಟು ಅದು ಪರಕೀಯವಾಗಿದೆ, ಅಳಿದುಳಿದ ಕಾಡು ಓದುವ ನಮ್ಮ ಪ್ರಜ್ಞೆ ಈಗ ಜ್ಞಾನ ಕ್ಷಾಮಕ್ಕೆ ತುತ್ತಾಗಿದೆ, ಹಸುರು ಪಾಠಗಳು ಮರೆತು ಹೋಗುತ್ತಿವೆ. ಸಸಿ ನೆಟ್ಟು ನೆಡುತೋಪು ಬೆಳೆಸುವದೇ ಏಕೈಕ ದಾರಿ ಎಂದು ಶತಮಾನಗಳಿಂದ ಸಾಲು ಸಸಿ ಬೆಳೆಸಿದ್ದೇವೆ. ನೆಡುವುದು, ಕಡಿಯುವದರಲ್ಲಿ ಸಾಕಷ್ಟು ಪಳಗಿದ್ದೇವೆ.

ಕಾಡೇ ನಮ್ಮ ನದಿಗಳ ತಾಯಿ. ಸತತ ಅರಣ್ಯ ನಾಶದ ಪ್ರಹಾರಕ್ಕೆ ಝರಿ, ತೊರೆಗಳು ಬತ್ತುತ್ತಿವೆ. ಕಾಡಿನೂರುಗಳು ಕಂಗಾಲಾಗಿವೆ. ವನವಾಸಿಗರು,ಕೃಷಿಕರು, ಬಡಿಗರು, ದನಗಾಹಿಗಳು, ಮೂಲಿಕಾ ವೈದ್ಯರ ಒಡನಾಟದಲ್ಲಿ ತಂದ ಒಂದು ಬೊಗಸೆ ಹನಿ ಹೊತ್ತಿಗೆಯಾಗಿ ನಿಮ್ಮೆದುರು ಹಿಡಿದಿದ್ದೇನೆ.

ಬೇರು ಮೂಲಕ್ಕೆ ರಕ್ಷಣೆ ನೀಡುವ ಜನಪದ ವಿದ್ಯೆ ವನಸಿರಿ ಬೆಳೆಸುವ ಸಾಧ್ಯತೆ ಹೇಳುತ್ತಿದೆ. ಬಳಕೆಗಿಂತ ಸಂರಕ್ಷಣೆ ಜ್ಞಾನ ದಾಖಲೆಗೆ ಗಮನ ಹರಿಸಲಾಗಿದೆ. ಸಂರಕ್ಷಣೆಯಿಂದ ಕಾಡು ಬೆಳೆಸಿದ ವಿದ್ಯೆ ಬಯಲು ಸೀಮೆ, ಅರೆಮಲೆನಾಡು, ಮಲೆನಾಡುಗಳಲ್ಲಿದೆ. ನೆಲದ ಪುಟ್ಟ ಪುಟ್ಟ ಮಾದರಿಗಳ ಜೀವಂತ ಪಾಠಗಳಿವೆ. ಈ ನಿಟ್ಟಿನಲ್ಲಿ ನಡೆಯಬೇಕಾದ ಅಧ್ಯಯನ ಬಹಳವಿದೆ, ಇದೊಂದು ಪುಟ್ಟ ಪ್ರಯತ್ನ ಮಾತ್ರ. ಗಮನಿಸಿ ನೋಡಿ, ಹುಲಿ ದೇವರ ಪವಿತ್ರ ಬನದಲ್ಲಿ ಸಂತೆ ನಡೆದು ಚೌಕಾಶಿಯ ಗದ್ದಲ ಕೇಳುತ್ತಿದೆ, ನಾಗಬನ ಮಧ್ಯೆ ಸಿಟಿ ಬಸ್ ಓಡುತ್ತಿದೆ. ನೋವು ನೂರು ನೆನಪುಗಳನ್ನು ಸೆಳೆಯುತ್ತಿದೆ. ಬತ್ತುತ್ತಿರುವ ಅರಣ್ಯ ಜ್ಞಾನದ ಪುಟ್ಟ ತೊರೆ ನಮ್ಮೆದುರಿದೆ. ಬೆಟ್ಟದ ತುದಿಯಲ್ಲಿ ಹುಟ್ಟಿ ಹರಿಯುತ್ತ ಬಂದ ಇದು ಈಗ ಬತ್ತತೊಡಗಿದೆ.

ಕರ್ನಾಟಕ ದೇಸೀ ಅರಣ್ಯ ಜ್ಞಾನ ಕುರಿತು ಪುಸ್ತಕ ಬರೆಯುವ ಜವಾಬ್ದಾರಿ ಬಂದಾಗ ಭಯವಿತ್ತು. ಮಲೆನಾಡಿನ ಒಡನಾಟ ಬಲ್ಲವನಿಗೆ ಬಯಲುಸೀಮೆಯ ಕಾಡು ಅಪರಿಚಿತ. ಇಡೀ ಕರ್ನಾಟಕದ ಅಧ್ಯಯನವಂತೂ ಸೀಮಿತ ಅವಧಿಯಲ್ಲಿ ಕಷ್ಟ ಸಾಧ್ಯ. ಹಸುರು ಹಳ್ಳಿಯ ಗೆಳೆಯರು ನೀಡಿದ ಸಹಕಾರದಿಂದ ಒಂದು ಪ್ರಯತ್ನಕ್ಕೆ ಮುಂದಾದೆ. ಇದೇನು ಸಮಗ್ರ ಕೃತಿಯಲ್ಲ, ದೇಸೀ ಅರಣ್ಯ ಜ್ಞಾನದ ಬಗೆಗೆ ಗಮನ ಸೆಳೆಯುವ ಒಂದು ಪುಟ್ಟ ಯತ್ನ ಮಾತ್ರ.

ಪುಸ್ತಕ ಬರೆಯಲು ಅವಕಾಶ ನೀಡಿ ಸಲಹೆ ಮಾರ್ಗದರ್ಶನ ನೀಡಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಹಾಗೂ ಪ್ರಾಧಿಕಾರದ ಎಲ್ಲ ಸದಸ್ಯರಿಗೆ, ಪುಸ್ತಕಕ್ಕೆ ಮಾಹಿತಿ ನೀಡಿ ಸಹಕರಿಸಿದ ಎಲ್ಲರಿಗೆ ಕೃತಜ್ಞತೆಗಳು.

೭-೦೨-೨೦೦೮ **ಶಿವಾನಂದ ಕಳವೆ**

# ಅನುಕ್ರಮಣಿಕೆ

ಅಧ್ಯಕ್ಷರ ಮಾತು v

ಲೇಖಕರ ಮಾತು xiii

ಬೇರು ಮೂಲಕ್ಕೆ ಪುಟ್ಟ ಪಯಣ 1

ದೇಸೀ ದಿಕ್ಕು

೧. ಕಾಡು ಫಲದಲ್ಲಿ ಕೃಷಿ ಶಕುನಗಳು 14

೨. ಕಡಲ ಮಕ್ಕಳ ಜ್ಞಾನ ಪಾತ್ರೆ 22

೩. ಹಸರು ನೋಟ್ ಬುಕ್‌ನ ಹಳೆಯ ಪುಟಗಳು 26

೪. ಮಣ್ಣಿನ ವಿದ್ಯೆಯ ಬೀಜ ಮಾತು 31

೫. ಮುರುಗಲು ನೆರಳಲ್ಲಿ ಬೇರಿನ ಮಕ್ಕಳು 35

೬. ಹಣ್ಣೆಲೆ ಬೀಳುವಾಗ ಹಸಿರೆಲೆ ನಗಬೇಕು 40

೭. ಕಾಡು ಬೆಂಕಿ ತಡೆಗೆ ದೇಸೀ ದಾರಿ 45

೮. ತುಂಗೆಯ ನೀರಿನಲ್ಲಿ ಬೇವಿನ ಆತ್ಮಹತ್ಯೆ 49

೯. ಹಸರು ಜೀವಕ್ಕೆ ಹನಿ ಹನಿ ಕಣ್ಣೀರು 53

೧೦. ಊರಿನ ದುಃಖಕ್ಕೆ ಕಾಡೇ ಮೂಲ 57

೧೧. ಬ್ರಿಟೀಷ್ ದಪ್ತರಿನಲ್ಲಿ ಅಡವಿ ಸೌಲಭ್ಯದ ಕಗದ 61

೧೨. ಕಂಗಾಲು ಬೇಂಚಿನಲ್ಲಿ ಕಮರಾ ಕಾಡು 66

೧೩. ಸೀಗೆ ಬಳ್ಳಿಯಲ್ಲಿ ಶೂನ್ಯ ಕೃಷಿಯ ಮಾಯಾ ಪಾಠ 72

೧೪. ದೇಸೀ ನೆಲದ ಹಸುರು ಭೀಮ – ಹೆಬ್ಬೇವು 77

೧೫. ಕಾಡು ಕಣಗಿಲು – ಅಲೆಮಾರಿ ಜಾನುವಾರುಗಳ ಅಮೃತ ಫಲ 83
೧೬. ಚಂದಕಲು – ಕಾಡು ನೆಲದ ಹಸರು ಗುರಾಣಿ 88
೧೭. ಹೆಬ್ಬತ್ತಿ ಗೌಡರ ಪಾಳಯದಲ್ಲಿ ರಾಜವೃಕ್ಷದ ಸಂಸಾರ 93
೧೮. ಮಸಣಕ್ಕೆ ಮರ ಬೆಳೆದವರು 99
೧೯. ಹೈಗದ ಬೆಟ್ಟ – ಕೃಷಿಕರ ಅಕ್ಕರೆಯ ಮೊನೋಕಲ್ಚರ್ ತೋಪು 104
೨೦. ಮಲೆನಾಡು ಗುಡ್ಡದಲ್ಲಿ ಅರಣ್ಯ ಜ್ಞಾನದ ಹತ್ಯಾಕಾಂಡ 108
೨೧. ಕಲ್ಲಳ್ಳಿ ಃ ಬರದ ಸೀಮೆಯ ಹಸುರು ಗಾಥೆ 114
೨೨. ಕಾರ್ಲಕಟ್ಟೆಯ ಕಲ್ಲಿನಲ್ಲಿ ಕಾಡು ಬೆರಗು 120
೨೩. ದರೋಜಿ ನೆಲದ ಕರಡಿ – ಕಾಡು 125
೨೪. ಜೋಗಿಮಟ್ಟಿ – ಬಯಲು ನೆಲದ ಹಸುರು ಶಕ್ತಿ 130
೨೫. ಕೋಟಿಗೊಬ್ಬ ಮೇಟಿ 135

# ಬೇರು ಮೂಲಕ್ಕೆ ಪುಟ್ಟ ಪಯಣ




ಕಾಡಿನಲ್ಲಿ ಕಲಿಕೆ, ಇದು ನಮ್ಮ ವನವಾಸಿ ಸಂಸ್ಕೃತಿ

ಶೀನಾ ಸಿದ್ದಿ ಜತೆ ಕಾಡು ಅಲೆಯುತ್ತಿದ್ದೆ. ಪಕ್ಷಿಯ ಕೂಗು ಆಲಿಸಿದೆ. ಅದು ಕಾಜಾಣ (Racket Tailed Drango) ಎಂದು ತಟ್ಟನೆ ತಿಳಿಯಿತು. ಆದರೆ ವನವಾಸಿ ಶೀನು 'ಕಾಟಾಕ್ವಯ್' ಎಂದು ಅದನ್ನು ತಮ್ಮದೇ ಹೆಸರಿನಿಂದ ಗುರುತಿಸಿದರು ! ಕೂಗುವ ಸ್ವರ ಆಧರಿಸಿ ಪಕ್ಷಿಗೆ ವನವಾಸಿ ಲೋಕ ಇಟ್ಟ ಗ್ರಾಮ್ಯ ಹೆಸರು. ಮರಕುಟುಕವನ್ನು ಕುಟ್ಟುಂಬ, ಮಳೆ ಜಿರಲೆ (ಸಿಕಾಡಾ)ಗೆ 'ವಯ್‌ವಯ್‌ರೇ' ಎಂದು ಹೊಸ ಶಬ್ಧ ಓದಿಸಿದರು. ಲಾಗಾಯ್ತಿನಿಂದ ಬುಷ್‌ಚಾಟ್ ಎಂದು ನಾವು ಕರೆಯುತ್ತಿದ್ದ ನಮ್ಮ ಕಾಡು ಹಕ್ಕಿಯನ್ನು ಇಂಗ್ಲೀಷ್ ಬಾರದ ಪುಟ್ಟ ಪೋರ 'ಮಟ್ಟಿಪುರ್ಲ್ಯಾ' ಎಂದು ಚೆಂದದ ದೇಸೀ ನುಡಿಯ ತಾಜಾ ಸುಗಂಧ ಬೀರಿದ್ದ !. ನಮ್ಮ ಜೀವ ಸಂಕುಲ ಸುಲಭದಲ್ಲಿ ಅರ್ಥವಾಗಬೇಕೆಂದು ಜಗತ್ತಿನ ವಿಜ್ಞಾನ ಅನುಸರಿಸಿದ ನಾಮಕರಣ ಪದ್ಧತಿಗೂ, ತಮ್ಮ ಹಳ್ಳಿಗರು ತಮ್ಮ ಅನುಭವ, ಸಂಸ್ಕೃತಿ ಸತ್ವದಿಂದ ಹೆಸರಿಟ್ಟ ಪ್ರಜ್ಞೆಗೂ ಸಾಕಷ್ಟು ಅಂತರವಿದೆ. ವೈವಿಧ್ಯತೆ ಇಲ್ಲಿ ದೇಸೀತನದ ತಾಕತ್ತಾಗಿದೆ.

## ಕಾಡು ದಾರಿಯ ಕೌತುಕ

'ಟೆಟ್ರಾಮೆಲಸ್ ನ್ಯೂಡಿಪ್ಲೋರಾ' ಎಂದರೆ ಇಡೀ ಜಗತ್ತಿನ ಸಸ್ಯಶಾಸ್ತ್ರಜ್ಞರು

ಪಶ್ಚಿಮ ಘಟ್ಟದ ಆ ಮರ ಯಾವುದೆಂದು ಅರಿಯಬಹುದು. ಆದರೆ ಅಡವಿಯೊಳಗೆ ಮರದ ಒಡನಾಟ ಬಲ್ಲವರಿಗೆ ಈ ಹೆಸರು ತಮ್ಮ ಕಾಡಿನ ಮರದ್ದೇ ಎಂಬ ಅನುಮಾನ, ಪರಕೀಯ. ಇದೇ ಮರವನ್ನು ಜೇನುಮರ, ಜರ್ಬಂಧಿ ಮರ, ಸತ್ನಾಲ್ ಮರ, ಪಡೆಮರ ಎಂದು ಊರಿಗೊಂದು ಹೆಸರಿಟ್ಟು ಕರೆಯುತ್ತಾರೆ. ಧಾರ್ಮಿಕ ನಂಬಿಕೆ, ಜನಪದ ಕತೆ ಸೇರಿಸಿ ಮರವನ್ನು ಸರಹದ್ದಿನ ಹಳ್ಳಿಗರಿಗೆ ಆಪ್ತವಾಗಿಸುತ್ತಾರೆ. ಮರದ ಸುತ್ತಳತೆ, ಕಾಡಿನ ಸಾಂದ್ರತೆಗಳ ಸೈನ್ಸ್ ಹಿಡಿದು ಅಡವಿ ನೋಡುವದು ಎಲ್ಲರಿಗೂ ತಿಳಿದಿಲ್ಲ. ಆದರೆ ಜಾನುವಾರು ಮೇವು, ಜೇನು ತೆಗೆಯುವ ಹವ್ಯಾಸ, ಹಣ್ಣು ಕೊಯ್ಯುವ ವೃತ್ತಿ, ನಾಟಿಮದ್ದು ಅರೆಯುವ ಪರಂಪರೆ, ಕತ್ತಿ ಹಿಡಿದು ಕಡಿದ ಅನುಭವ ಕಲಿಸಿದ ಪಾಠ ಅನನ್ಯ.



ಹೆಜ್ಜೇನಿನ ಮನೆ- ಜರ್ಬಂಧಿ ಮರ

ನಿರಂತರ ಒಡನಾಟದಲ್ಲಿ ಅರ್ಥವಾದ ಕಾಡನ್ನು ನೆಲದ ಭಾಷೆಯಲ್ಲಿ ಎದುರಿಡುವ ರೀತಿ ಮತ್ತೆಲ್ಲಿಯೂ ದೊರೆಯದು. ಇದನ್ನು ಬಳಸಿ ಬಲ್ಲವರು ಮಾತ್ರ ಪರಿಣಾಮಕಾರಿಯಾಗಿ ಪರಿಚಯಿಸಬಲ್ಲರು. ಒಂದು ಮರದ ವಿಜ್ಞಾನ ನೇರವಾಗಿ ಜಗತ್ತಿಗೆಲ್ಲ ಒಂದು ಸತ್ಯ ಸಾರಬಹುದು. ಅಲ್ಲಿ ಕಾರ್ಯ – ಕಾರಣ ಬಿಟ್ಟು ಇನ್ನುಳಿದ ಅವಯವಗಳಿಲ್ಲ. ಮರದ ಮೂಲದ ಜನ ಕಾಡಿನ ಒಡನಾಟದಲ್ಲಿ ವಿಜ್ಞಾನ ಗುರುತಿಸದ ಇನ್ನಷ್ಟು ಸಂಗತಿ ಹೇಳಬಹುದು. ಅವರಲ್ಲಿ ಅರಣ್ಯ ಸಂರಕ್ಷಣೆ, ಸುಸ್ಥಿರ ಬಳಕೆಯ ನಾಟಿ ಜ್ಞಾನದ ದೊಡ್ಡ

ಖಜಾನೆಯಿದೆ. ಇಲ್ಲಿನ ಅರಿವು ಪ್ರದರ್ಶನಕ್ಕಿಂತ ಬದುಕಾಗಿ ಮೊಳೆತದ್ದು, ಬೆಳೆದು ಮಾಗಿದ ಬಳಿಕ ಹಳ್ಳಿಗಾಡಿನ ಕೊಪ್ಪ, ಕೇರಿ, ವಾಡಾ, ಪೋಡು, ಕಣಿವೆಗಳ ಸರಹದ್ದುಗಳ ಬೆಳಕಾಗಿ ಬಂದಿದೆ.



ದನಗಾಹಿಗಳು– ಕಾಡು ಓದಿದ ಜ್ಞಾನಿಗಳು

ವನವಾಸಿ, ಬಡಿಗ, ಬೇಟೆಗಾರ, ದನಗಾಹಿ, ನಾಟಿ ವೈದ್ಯ, ಕೃಷಿಕ, ಮೀನುಗಾರ ಹೀಗೆ ಊರಿನಲ್ಲಿ ನಿಂತ ಎಲ್ಲರ ದಾರಿಗಳು ಕಾಡು ಸುತ್ತಿ ಬಂದಿವೆ. ಕಾಡು ನಂಬಿ ಊರಿನ ಬೇರು ಬೆಳೆದಿದೆ. ನೆರೆಯ ಹಿತ್ತಲಿನ ವಿಶ್ವಾಸದಂತೆ ಕಾಡಿನ ಪ್ರತಿ ಮರವೂ ಕಲ್ಪವೃಕ್ಷ. ಬೇರೆ ಬೇರೆ ಕಸುಬಿನ ಜನ ಕಾಡು ನೋಡುವ ಖಾಸಗಿ ಕಣ್ಣಿನಲ್ಲಿ ವಿಶೇಷವಿದೆ. ನಡುರಾತ್ರಿ ಕಾಡು ಕಣಿವೆಯಿಂದ ಕೋತಿಗಳ ಸ್ವರ ಆಲಿಸಿದ ಬೇಟೆಗಾರ ಹುಲಿ ಬಂದಿರ ಬೇಕು ಎಂದು ಕೂತಲ್ಲೇ ಅಂದಾಜಿಸಬಹುದು. ಮೇವಿಗೆ ಹೋದ ಜಾನುವಾರು ಇದ್ದಕ್ಕಿದಂತೆ ಮಲಗಿ ಒದ್ದಾಡಿ ನಿತ್ರಾಣಗೊಂಡರೆ ಕರಿ ಬಸರಿ ಸೊಪ್ಪಿನ ವಿಷ ಆಹಾರ ಸೇವಿಸಿರಬಹುದೇ ಎಂಬ ಅನುಮಾನ ದನಗಾಹಿಗೆ ಸಿಗಬಹುದು. ಕಾಡಲ್ಲಿ ದಾರಿ ತಪ್ಪಿ ಅಲೆದಿದ್ದಕ್ಕೆ ದಾಟು ಬಳ್ಳಿ ದಾಟಿದ್ದೇ ಕಾರಣವೆಂದು ನಂಬಿಕ ಕತೆ ಸಾರುವವರು, ಕೃಷಿ ಬೇಲಿಗೆ ಬಗಿನೆ ಬಳ್ಳಿ ಕಡಿಯಲು ಹೋದವರು ಮೈ ತುರಿಕೆಯಿಂದ ಬಚಾವಾಗುವ ವಿದ್ಯೆ ಅನುಸರಿಸುವವರು ಹೀಗೆ ಕಾಡಿಗೆ ಹೋದರೆ ನಮ್ಮ ನಡುವಿನವರೆಲ್ಲ ಮಹಾಜ್ಞಾನಿಗಳಾಗಿ ಕಾಣುತ್ತಾರೆ !. ನಾವು ಇದ್ದಕ್ಕಿದ್ದಂತೆಯೇ ಚಿಕ್ಕವರಾಗುತ್ತೇವೆ. ಇಲ್ಲಿ ಮೀನು ಹಿಡಿಯುವವನಿಗೆ ಕಾಡು ತಾಳೆಯ ಹಣ್ಣು, ಏಡಿ ನಿಯಂತ್ರಣಕ್ಕೆ ಮತ್ತಿ ಸೊಪ್ಪು, ಗೆದ್ದಲು ತಡೆಗೆ ದಾಲ್ಚಿನ್ನಿ ಎಂದು ಅಡವಿ ಓದಿ ಬೆಳೆದವರನ್ನು

ಕಾಣಬಹುದು. ಮಾತಾಡದ ಮರ, ಮೂಲಿಕೆಗಳನ್ನು ಮಾತಾಡಿಸುವ ಇವರ ವಿಶ್ವಾಸ ಪರಂಪರೆ ನೀಡಿದ ಬಳುವಳಿ.

'ನೆಲ್ಲಿ ಎಲೆಯಲ್ಲಿ ತಿನ್ನುವಷ್ಟು ಜೇನು ತುಪ್ಪ ಸಿಕ್ಕಿತು !' ಕಾಡಿನ ಜೇನು ತೆಗೆಯಲು ಹೋದವರು ಮನೆಗೆ ಬಂದು ಮಾತಾಡುತ್ತಿದ್ದರು. ಮಾತು ಕೇಳಿದವರು ಜೇನು ತುಪ್ಪ ಸಿಗಲಿಲ್ಲ ಎಂದು ತಟ್ಟನೆ ತಿಳಿಯುತ್ತಿದ್ದರು. ಜೇನನ್ನು ಕಾಡಿನ ಚಂದಕಲಿನ ದೊಡ್ಡ ಎಲೆಯಲ್ಲಿ ಹಾಕಿ ತರುವದು ವಾಡಿಕೆ, ಕಾಡಿನ ನೆಲ್ಲಿ ಎಲೆ ಅತ್ಯಂತ ಚಿಕ್ಕದು, ಇದರಲ್ಲಿ ಜೇನುತುಪ್ಪ ಹಾಕಿದರೆಂದರೆ ಜೇನು ಇರಲಿಲ್ಲ ಎಂದರ್ಥ ! ಒಂದೆರಡು ಮಳೆ ಸುರಿದ ಬಳಿಕ ಜೇನು ತೆಗೆಯಬೇಕಿತ್ತು ಎಂಬ ಮಾತುಗಳು ಸಲಹೆಯಾಗಿ ಬರುತ್ತಿದ್ದವು. ಮತ್ತಿ ಹೂವು ಅರಳಿದ ಬಳಿಕ ಜೇನು ತೆಗೆಯಬೇಕು ಎಂದು ಹೇಳುತ್ತಿದ್ದರು. ಗುರಿಗೆ ಹೂವು ಅರಳಿದ ವರ್ಷಗಳಲ್ಲಿ ಹೆಜ್ಜೇನನ್ನು ಹಗಲಿನಲ್ಲೇ ತೆಗೆಯಬಹುದು, ಆಗ ಜೇನಿಗೆ ಕಣ್ಣು ಕಾಣಿಸುವದಿಲ್ಲ ಹೀಗಾಗಿ ಕಡಿಯುವದಿಲ್ಲ ಎಂದು ತಮ್ಮ ಅನುಭವ ಎದುರಿಡುತ್ತಿದ್ದರು. ಮಕರಂಧ ಹೀರಲು ಬಂದ ಜೇನು ಸುತ್ತು ಹೊಡೆದು ಹಾರುವ ರೀತಿಯಲ್ಲಿ ಅದರ ಗೂಡು ಎಷ್ಟು ದೂರದಲ್ಲಿದೆ ಎಂದು ಪತ್ತೆಹಚ್ಚುವ ನಿಪುಣರಿದ್ದರು, ಇವರಲ್ಲಿ ಚಿಕಿತ್ಸಕ ಕಣ್ಣು ಬಿಟ್ಟರೆ ಮತ್ತೆ ಯಾವ ಸಾಧನ ಸಲಕರಣೆಯಿಲ್ಲ ! ಕಾಡು ಜೇನಿನ ಕುರಿತು ಮಲೆನಾಡಿನ ಮನೆ ಜಗುಲಿಯ ಮಾತುಕತೆ ಪುಟ್ಟ ಸೆಮಿನಾರು. ಜೇನು ಯಾವಾಗ ತುಪ್ಪ ಮಾಡುತ್ತವೆ, ನಂದಿ ಮರ ಹೂವರಳಿದಾಗ ತಿಂಗಳ ಬೆಳಕಿನಲ್ಲಿಯೂ ಮಕರಂಧ ಹೀರುವ ದುಂಬಿಯ ಸ್ವರ ಹೇಗೆ ಕೇಳುತ್ತದೆ, ತುಡವಿ ಜೇನು ಎಲ್ಲಿ ಗೂಡು ಕಟ್ಟುತ್ತದೆ, ಅಕಾಲಿಕ ಮಳೆ ಸುರಿದು ಬಿಸಿಲು ಬಂದ ತಕ್ಷಣ ಜೇನು ಹುಡುಕುವ ಯಶಸ್ಸಿನ ಸೂತ್ರಗಳೆಲ್ಲ ಪ್ರಾತ್ಯಕ್ಷಿಕೆ ಪಾಠ. ವ್ಯಕ್ತಿ, ಕುಟುಂಬ, ಕಣಿವೆಗಳನ್ನು ದಾಟುತ್ತ ದೇಸೀ ಜ್ಞಾನ ಸರಹದ್ದು ಸಾಗಿದ ರೀತಿ ಅನೂಹ್ಯ. ಅಕ್ಷರ ತಿದ್ದಿ, ಪಾಠ ಓದಿಸಿ, ಪರೀಕ್ಷೆಯ ಸರ್ಕಸ್‌ನಲ್ಲಿ ಗೆದ್ದರೂ ಕೈಗೆಟುಕದ ಪರಿಣಾಮಕಾರಿ ಸಂವಹನ ಕಲೆ ನಮ್ಮ ನಿಸರ್ಗ ರಂಗದ ಅಚ್ಚರಿಯ ಉಡುಗೊರೆ.

ಕಾಡು ಹಾಗೂ ಮನುಷ್ಯರ ತಲತಲಾಂತರದ ಸಂಬಂಧದಲ್ಲಿ ಒದಗಿ ಬಂದ ಜ್ಞಾನ ವಿಕಾಸ ಇಲ್ಲಿ ಮಹತ್ತದ್ದು. ಬೇಟೆ, ಕುಂಬ್ರಿಕೃಷಿ, ಅಲೆಮಾರಿತನ, ಸ್ಥಿರ ನೆಲೆಯ ಶೋಧ, ಆಹಾರ, ಔಷಧ, ಉದ್ಯಮಗಳಿಗಾಗಿ ಬಳಕೆ

ಬೆಳೆಯುತ್ತ ನಾವು ಬೆಳೆದು ಬಂದವರು. ಬೇರು, ಕಾಂಡ, ತಿರುಳು, ತೊಗಟೆ, ಚಿಗುರು, ಹೂ, ಕಾಯಿ, ಬೀಜ ಹೀಗೆ ಒಂದೊಂದಾಗಿ ಒಡೆದು ನೋಡುತ್ತ ಬಳಸಿ ಬಲ್ಲಜ್ಞಾನ ಬಲಿತಿದೆ. ತಿಂಗಳಿಂದ ಕಾಡುತ್ತಿದ್ದ ಕೆಮ್ಮಿಗೆ ಅತ್ತಿ ಚಕ್ಕೆ ಕಷಾಯಕ್ಕೆ ಬೆಲ್ಲ ಸೇರಿಸಿ ಕುಡಿಯಬೇಕು ಎಂದು ಹಿರಿಯರೊಬ್ಬರು ಮನೆ ಮದ್ದು ಹೇಳಿದರು. ಮಾತಿಗೊಂದು ಕೆಮ್ಮು ಹೊಡೆಯುತ್ತಿದ್ದವನಿಗೆ ಕಷಾಯ ಸೇವನೆ ಬಳಿಕ ಸಮಸ್ಯೆ ಪರಿಹಾರವಾಯ್ತು. ಮಲೆನಾಡಿನಲ್ಲಿ ಗಣೇಶ ಚೌತಿಗೆ ಚಕ್ಕುಲಿ ಕಂಬಳ ಮಾಡುತ್ತಾರೆ. ಈ ಚಕ್ಕುಲಿ ತಯಾರಿಗೆ ಅತ್ತಿ ಮರದ ನೀರು ಬಳಕೆಯಾಗುತ್ತದೆ. ಮರದ ಬುಡದ ಬೇರು ಬಿಡಿಸುವದು, ಕತ್ತಿಯಲ್ಲಿ ತೊಗಟೆ ಕೆತ್ತುವದು, ಜಿನುಗುವ ಹನಿ ಹನಿ ನೀರನ್ನು ಪಾತ್ರೆಯಲ್ಲಿ ಹಿಡಿಯುವದು ವಾಡಿಕೆ. ಸಾಯಂಕಾಲ ಮರದ ಬುಡದಲ್ಲಿ ಇಟ್ಟ ಪಾತ್ರೆಯಲ್ಲಿ ಬೆಳಿಗ್ಗೆ ಒಂದೆರಡು ಲೀಟರ್ ಅತ್ತಿ ನೀರು ಸಂಗ್ರಹ, ಇದು ಚಕ್ಕುಲಿ ತಯಾರಿಕೆಗೆ ಬಳಕೆ. ಎಣ್ಣೆಯಲ್ಲಿ ಕರಿದ ತಿಂಡಿ ತಿಂದು ಗಂಟಲು ಕೆರೆತ, ಕೆಮ್ಮು ಸಹಜ. ಅತ್ತಿ ನೀರಿನಲ್ಲಿ ಮಾಡಿದ ಚಕ್ಕುಲಿಯಲ್ಲಿ ಔಷಧವೂ ಸೇರಬಹುದೇ ? ಸಾಂಪ್ರದಾಯಿಕ ಆಹಾರ ಪಾಠ ಹೇಳುತ್ತದೆ. ಬೆಟ್ಟದ ತುದಿಯಿಂದ ಬಟ್ಟಲು ಮೂಲಕ್ಕೆ ಇಂತವೆಲ್ಲ ಕೂಡಿ ಬರಲು ಎಷ್ಟು ವರ್ಷ ಬೇಕಾದವು ? ಲೆಕ್ಕವಿಟ್ಟವರಿಲ್ಲ.

## ದೇವರ ಕಾಡಿನಲ್ಲಿ ಸಂಸ್ಕೃತಿ ಸತ್ವ

ಭಟ್ಕಳದ ಬೈಲೂರು ಎಂಬ ಹಳ್ಳಿಯಲ್ಲಿ ವನಕಾನಮ್ಮ ದೇವಿ ದೇವಸ್ಥಾನವಿದೆ. ಅಲ್ಲಿ ಸುಮಾರು ೧೫ ಅಡಿ ಎತ್ತರದ ಹುತ್ತಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ದೇವಾಲಯ ಸುತ್ತ ಎರಡು ಎಕರೆ ಜಾಗದಲ್ಲಿ ರಂಜಲು, ಸುರಗಿ, ಆಶ್ವತ್ಥ ಮುಂತಾದ ಮರಗಳಿವೆ. ದೇವಾಲಯದ ಅರ್ಚಕರು ಕಾಲದ ಕತೆ ಹೇಳಿದರು, ಸುಮಾರು ೭೦೦ ವರ್ಷಗಳ ಹಿಂದೆ ಈ ಊರಿನ ಶ್ರೀಮಂತ ಕೊಪ್ಪಿಕರ ನಾರಾಯಣಪ್ಪನವರ ಏಕೈಕ ಪುತ್ರ ಸರ್ಪ ಕಡಿತದಿಂದ ಮರಣ ಹೊಂದಿದನಂತೆ, ಮಗನ ಹೆಣವನ್ನು ಸುರಗಿ ಮರದ ಬುಡದ ವಿಗ್ರಹದ ಎದುರು ಮಲಗಿಸಿ ಪುತ್ರ ಶೋಕದಲ್ಲಿ ನಾರಾಯಣಪ್ಪ ಪ್ರಾರ್ಥಿಸಿದರು. ಭಕ್ತರ ಪ್ರಾರ್ಥನೆಗೆ ದೇವತೆ ಮಣಿದಳು. ಕೆಂಪುತಲೆಯ ಓತಿಕ್ಯಾತದ ಬಾಯಲ್ಲಿ ದೂರ್ವೆ ಕಡ್ಡಿಯನ್ನು ನೀಡಿದ ದೇವತೆ ಬಾಲಕನಿಗೆ

ಕಚ್ಚಿದ ಸರ್ಪ ಕರೆತರಲು ಕಳಿಸಿದಳು. ಅಲ್ಲಿಗೆ ಮರಳಿದ ಸರ್ಪ ಬಾಲಕನ ದೇಹದಲ್ಲಿನ ವಿಷವನ್ನು ತಾನೇ ಮರಳಿ ಸೇವಿಸಿತು. ನಾರಾಯಣಪ್ಪನ ಮಗನಿಗೆ ಮರುಜನ್ಮ ದೊರೆತು ಎದ್ದು ಕುಳಿತ. ಆ ಹೊತ್ತಿಗೆ ವಿಷ ಸೇವಿಸಿದ ಸರ್ಪ ಸಾವನ್ನಪ್ಪಿತು. ಸರ್ಪಕ್ಕೊಂದು ದೇವಾಲಯ ನಿರ್ಮಿಸಲು ಆಜ್ಞೆ ಮಾಡಿ ದೇವತೆ ಕಣ್ಣರೆಯಾದಳು ! ಸರ್ಪ ಸಾವನ್ನಪ್ಪಿದ ಸ್ಥಳದಲ್ಲಿ ದೇವಾಲಯ ನಿರ್ಮಿಸಿ ನಿರಂತರ ಪೂಜಾ ವ್ಯವಸ್ಥೆಯನ್ನು ಕೊಪ್ಪಿಕರ ನಾರಾಯನಪ್ಪ ಮಾಡಿದರು ಎಂಬುದು ಇಲ್ಲಿನ ಜನಪದ ಕತೆ.




ಕರಾವಳಿ ಕೌತುಕ ವನದೇವಿ ದೇವಾಲಯ



ಮರಕಾಯುವ ಶಕ್ತಿಮಾತೆ– ವನದುರ್ಗೆ

ಇದು ವನಕಾನಮ್ಮ ದೇವಾಲಯ ಎಂದು ಪ್ರಸಿದ್ಧಿ ಪಡೆದಿದೆ. ಸಂತತಿ ಇಲ್ಲದವರು, ಸರ್ಪವನ್ನು ಕೊಂದವರೆಲ್ಲ ಇಲ್ಲಿ ಬಂದು ನಾಗ ಪ್ರತಿಷ್ಠೆ ಮಾಡಿಸುವ ಪರಂಪರೆಯಿದೆ. ದೇವಾಲಯ ಸುತ್ತಲಿನ ಪ್ರದೇಶದ ಗಿಡದ ಟೊಂಗೆಯನ್ನು ಯಾರೂ ಕಡಿಯುವದಿಲ್ಲ. ವನಕಾನಮ್ಮ ದೇವಿಯ ಶಾಪಕ್ಕೆ ತುತ್ತಾಗುವ ಭಯದಿಂದ ಸಸ್ಯಗಳು ಉಳಿದಿವೆ. ಮಲೆನಾಡಿನ ಉತ್ತರ ಕನ್ನಡದ ಭಟ್ಕಳದಿಂದ ಕಾರವಾರದ ಕರಾವಳಿ ತೀರದ ಹಳ್ಳಿಗಳಲ್ಲಿ ೭೦ಕ್ಕೂ ಹೆಚ್ಚು ಇದೇ ತರಹದ ವನಕಾನಮ್ಮ, ವನದುರ್ಗಾ ದೇವಾಲಯಗಳಿವೆ ! ಅಲ್ಲಿ ಎತ್ತರದ ಹುತ್ತಕ್ಕೆ ಪೂಜೆ ಸಲ್ಲಿಸಲಾಗುತ್ತಿದೆ. ಪ್ರತಿ ದೇವಾಲಯದ ಹಿಂದೆ ವನ ಸಂರಕ್ಷಣೆಯ ಧಾರ್ಮಿಕ ಮಹತ್ವಸಾರುವ ಕೌತುಕದ ಸಂಗತಿಗಳಿವೆ. ದೇವರ ಕಾಡಿನ ನಂಬಿಗೆಗಳು ನೆಲದ ಹಸುರು ಸಂಸ್ಕೃತಿ ಸಾರುತ್ತವೆ.

ಬಿಹಾರದ ಸರಣಿ, ರಾಜಸ್ತಾನದ ವರಣ, ಮಹಾರಾಷ್ಟ್ರದ ದೇವರಿ, ಕೇರಳದ ಕಾವು, ಕರ್ನಾಟಕದ ಕಾನು, ಪವಿತ್ರವನ, ನಾಗಬನ, ಭೂತನ ಕಾಡುಗಳೆಲ್ಲ ಸಂರಕ್ಷಣೆಯ ಮಾದರಿಗಳಾಗಿವೆ. ವಿಜ್ಞಾನಿ ಡಾ। ಸುಭಾಷ್‌ಶ್ಚಂದ್ರನ್ ಶರಾವತಿ ಕೊಳ್ಳದ ೨೫ ಚದರ ಕಿಲೋಮೀಟರ್ ಕ್ಷೇತ್ರದಲ್ಲಿ ೫೧ ದೇವರ ಬನ ದಾಖಲಿಸಿದ್ದಾರೆ. ಮಾನವ ಹಸ್ತಕ್ಷೇಪರಹಿತ ನೈಜ ಕಾಡು ಸಮುದಾಯದ ಆಸ್ತಿಯಾಗಿ ಇಲ್ಲಿ ಸಂರಕ್ಷಿತವಾಗುತ್ತಿದ್ದ ದಾಖಲೆಯಿದೆ. ಕ್ರಿ, ಶ, ೧೮೦೧ರ ಮಾರ್ಚ್ ೫ ರಂದು ಡಾ। ಫ್ರಾನ್ಸಿಸ್ ಬುಕಾನನ್ ಕಾರವಾರದ ಕದ್ರಾಕ್ಕೆ ಬರುತ್ತಾರೆ. 'ಇಲ್ಲಿ ಮರಗಳು ದೇವರ ಆಸ್ತಿ, ಮರ ಕಡಿಯಲು ಊರ ಗೌಡನ ಅಪ್ಪಣೆ ಬೇಕು ಪ್ರವಾಸ ವರದಿಯಲ್ಲಿ ಬರೆಯುತ್ತಾರೆ. ಮುಂದೆ ಬ್ರಿಟೀಷ್ ಆಡಳಿತದಲ್ಲಿ ಕಾಡನ್ನು ಸರಕಾರಿ ಆಸ್ತಿಯೆಂದು ಸಮುದಾಯ ಹಿಡಿತದಿಂದ ಕಿತ್ತು ಕೊಳ್ಳಲಾಯಿತು.



ಕದ್ರಾದ ದೇವರ ಕಾಡು

ರಾಜ್ಯದ ಮಲೆನಾಡುಗಳಲ್ಲಿ ದೇವರ ಕಾಡುಗಳು ಈಗಲೂ ಉಳಿದಿವೆ. ಕೊಡಗಿನಲ್ಲಿ ೧೨೧೪ ದೇವರ ಕಾಡು ಗುರುತಿಸಲಾಗಿದ್ದು ಇವು ೨೫೫೦ ಹೆಕ್ಟೇರ್ ಕ್ಷೇತ್ರದಲ್ಲಿವೆ. ಭಗವತಿ, ಬದ್ರಕಾಳಿ, ಪಾರ್ವತಿ, ಕಾವೇರಮ್ಮ, ನಾದಮ್ಮ, ಧುರ್ಗಿ, ಚಾಮುಂಡಿ, ಮಾದೇವ, ಅಯ್ಯಪ್ಪ, ಗುಳಿಯ, ಭೂತದೇವ, ಮುತ್ತಪ್ಪ, ಮಲದೇವ, ರಾಮೇಶ್ವರ ಮುಂತಾದ

ದೇವಾಲಯಗಳು ಈ ಕಾಡಿನಲ್ಲಿವೆ. ವಿರಾಜಪೇಟೆ, ಮಡಕೇರಿ, ಸೋಮವಾರ ಪೇಟೆ ಪ್ರದೇಶಗಳಲ್ಲಿ ಇವನ್ನು ಗುರುತಿಸಬಹುದು. ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಆಯ್ದ ೧೫ ಗ್ರಾಮಗಳ ದೇವರ ಕಾಡಿನ ಅಧ್ಯಯನ ನಡೆಸಿದ ನಾಗರಿಕಾ ಸೇವಾ ಟ್ರಸ್ಟ್ ೧೧೧೧ ನಾಗಬನ, ದೇವರ ಕಾಡನ್ನು ದಾಖಲಿಸಿದೆ. ಒಂದು ಅಂದಾಜಿನ ಪ್ರಕಾರ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ೪೫ – ೫೦ ಸಾವಿರ ದೇವರ ಕಾಡಿನ ನೆಲೆಗಳಿರಬಹುದೆಂದು ಅಂದಾಜಿಸಲಾಗಿದೆ !. ಶಿವಮೊಗ್ಗ ಜಿಲ್ಲೆ ಸಾಗರದ ಹೊಸಗುಂದ ಎಂಬಲ್ಲಿ ಒಂದು ದೇವರ ಕಾಡು ೪೦೦ ಎಕರೆ ವಿಸ್ತೀರ್ಣವಾಗಿದೆ. ಈಗಲೂ ಅಪುರೂಪದ ಸಸ್ಯಗಳು ಕಾಡಿನಲ್ಲಿವೆ. ಪುರಾತನ ಸಸ್ಯಗ್ರಂಥಗಳಲ್ಲಿ ಉಲ್ಲೇಖಿತವಾದ ಸಸ್ಯಗಳು ಎಲ್ಲಿಯೂ ದೊರೆಯದಿದ್ದಾಗ ಅವು ಇಂತಹ ದೇವರ ಕಾಡುಗಳಲ್ಲಿ ಪತ್ತೆಯಾದ ಉದಾಹರಣೆಗಳಿವೆ.

ನಂಬಿಕೆಯ ನೆಲೆಯಲ್ಲಿ ಹಸುರು ಉಳಿಸುವ ಇಂತಹ ಪ್ರಕಿಯೆಗೆ ನಮ್ಮ ಪುರಾಣಗಳ ಪ್ರೇರಣೆ ದೊಡ್ಡದು. ಮಹಾಭಾರತ, ರಾಮಾಯಣಗಳಲ್ಲಿನ ಅರಣ್ಯ ಪರ್ವ, ಅರಣ್ಯಕಾಂಡ, ಅಶೋಕವನ, ಕಾಂಡವವನ, ವನವಾಸದ ವರ್ಣನೆಗಳಲ್ಲಿ ಜೀವ ವೈವಿಧ್ಯ ಕೋಶವಿದೆ. ಅರಣ್ಯದ ಮಹತ್ವ ಸಾರುವ ಹಲವು ಉದಾಹರಣೆಗಳಿವೆ. ಕ್ರೌಂಚ ಪಕ್ಷಿ ಸಾವು ಬೇಡನೊಬ್ಬನ ಹೃದಯ ಪರಿವರ್ತಿಸಿ ತಪಸ್ಸಿಗೆ ಸೆಳೆಯಿತು ! ವಲ್ಮೀಕ(ಹುತ್ತು)ದಿಂದ ಮೇಲೆದ್ದ ವಾಲ್ಮೀಕಿ ಜೀವೈವಿಧ್ಯದ ಅಮರ ಪಾಠ ಹೇಳುವ ರಾಮಾಯಣ ಬರೆದರು. ಶ್ರೀರಾಮ ವನವಾಸದ ಅನುಭವದಲ್ಲಿ ರಾಜ್ಯಭಾರದ ಸೂಕ್ಷ್ಮ ಕಲಿತರು. ಎಲ್ಲರ ಪಾಲಿಗೆ ರಾಕ್ಷಸನಂತೆ ಕಾಣುವ ರಾವಣ ಕೂಡಾ ಅಶೋಕವನದಲ್ಲಿ ೩೬ ವೃಕ್ಷಗಳನ್ನು ಬೆಳೆಸಿ ಸಂರಕ್ಷಣೆಯ ಪಾಠ ಹೇಳಿದವರು ! ಸಂಕಷ್ಟ ಬಂದಾಗೆಲ್ಲ ರಾಜ ಮಹಾರಾಜರು, ಮುನಿಗಳು 'ವನವಾಸ'ದಲ್ಲಿ ಹೊಸ ಚೈತನ್ಯ, ಬೆಳಕು, ದಿವ್ಯ ಶಕ್ತಿ ಪಡೆದವರು. ನದಿ, ಕಾಡು, ಕಣಿವೆ, ಮಹಾಮರ, ಪ್ರಾಣಿ ಪಕ್ಷಿಗಳಲ್ಲಿ ದೈವತ್ವ ಕಾಣುತ್ತ ಅರಣ್ಯ ಮೂಲದಿಂದ ಎದ್ದು ಬಂದ ವೇದ ಪುರಾಣಗಳು ನಮ್ಮ ಮಣ್ಣಿನ ಕಣಕಣದಲ್ಲೂ ಸಂಸ್ಕೃತಿಯ ಬಿಂಬ ತೋರಿಸಿದವು. ಇಂದು ದೇವರಕಾಡು, ನಾಗಬನ, ಭೂತದ ಕಾಡು, ಹುಲಿಯಪ್ಪನ ಗುಡ್ಡಗಳನ್ನು ಸಂರಕ್ಷಿಸಿದ ಜನಪದರ ಕ್ರಮಗಳು ಹಸುರು ನೆಮ್ಮದಿಗೆ ದೇಸೀ ನೆಲದ ಅರಣ್ಯನೀತಿಯಂತಿದೆ !.

ನಾವು ನಮ್ಮ ಬೇರಿನಲ್ಲಿ ಮೋರೆ ನೋಡುತ್ತಿಲ್ಲ, ವಿದೇಶಿ ನೀತಿಗೆ ತಕ್ಕಂತೆ ನರ್ತಿಸಿದವರು. ಗುಂಡಿ ತೋಡಿ ಗಿಡ ಬೆಳೆಸುವದು ಮಾತ್ರ ಅರಣ್ಯೀಕರಣ ಎಂದು ಕಣ್ಣುಚ್ಚಿ ಸಾಗಿದವರು. ಹೀಗಾಗಿ ನೈಸರ್ಗಿಕ ಸಸ್ಯ ಬೆಳೆಸಲು ಧಾರ್ಮಿಕ, ಸಮುದಾಯ ನಂಬಿಕೆಗಳಿಂದ ಸಂರಕ್ಷಣೆ ಪಾಠ ಹೇಳಿದ್ದ ದೇಸೀ ಪ್ರಜ್ಞೆ ಈಗ ಹಿಂದೆ ಸರಿದಿದೆ. ಮರ ಗಿಡಗಳ ನಾಟಿಯಿಂದ ತಮಗೇನು ಲಾಭ ಎಂದು ಹಣದ ಗುರಿ ಹಿಡಿದಿದ್ದೇವೆ, ಲಾಭದ ಜೋಳಿಗೆ ಹಿಡಿದು ಕಣಿವೆ ಕಣಿವೆಗಳಲ್ಲಿ ಅಲೆದಿದ್ದೇವೆ. ಕಡಿಯುವದಕ್ಕೆಂದು ಬೆಳೆಸಿದ ಕೈಗಾರಿಕಾ ನೆಡುತೋಪನ್ನೇ ದೊಡ್ಡ ಕಾಡು ಎಂದು ಬಣ್ಣಿಸುವ ಮಟ್ಟಕ್ಕೆ ಕುಸಿಯುತ್ತಿದ್ದೇವೆ. 'ಕಾಡಿಗೂ – ತೋಪಿಗೂ' ವ್ಯತ್ಯಾಸ ಇನ್ನೇನು ಇಲ್ಲೇ ಇಲ್ಲ ಎನ್ನುವಷ್ಟು ನಮ್ಮ ಅರಣ್ಯ ಅನುಭವ ಜ್ಞಾನ ಬಾಟಲಿಯೊಳಗಿನ ಬ್ರಾಹ್ಮಿ ತೈಲವಾಗುತ್ತಿದೆ. ಖುದ್ದಾಗಿ ಬ್ರಾಹ್ಮಿಗಿಡವೇ 'ನಾನು ಬಂದೀದಿನಿ ಕಣಯ್ಯ' ಎಂದು ಎದುರು ಬಂದರೂ ಬಾಟಲಿಗೆ ಸಿಗುವ ಸರಕುಗಳಲ್ಲಿ ನಿಸರ್ಗದ ಚೆಂದ ಹುಡುಕುವವರಿಗೆ ನೆಲದ ಕಾಡು ಏಕೆ ಕಾಡುತ್ತಿಲ್ಲ ? ಮಣ್ಣಿನಲ್ಲಿ ಪ್ರಶ್ನೆಯಿದೆ.

ಕೃಷಿ, ಕೈಗಾರಿಕೆ ಅಭಿವೃದ್ಧಿಯಲ್ಲಿ ಓಡುತ್ತ ಬಂದು ಜನಸಂಖ್ಯೆಯಲ್ಲಿ ಏರಿದ ನಾವು ವಿಜ್ಞಾನದ ಬೆಳಕಲ್ಲಿ ಎಷ್ಟೇತ್ತರ ಬೆಳೆದಿದ್ದೇವೆ. ಈಗ ನಮ್ಮ ಸಂಸ್ಕೃತಿಯ ತೊಟ್ಟಿಲಾದ ಅಡವಿಯನ್ನೇ ಅಂಗಾತ ಎತ್ತಿ ಸತ್ವ ಹೀರಿದ್ದೇವೆ, ಬುಲ್ಡೋಜರ್‌ನ ಮಹೋರುಗ ತಂದು ಸಂಜೀವಿನಿ ಬೆಟ್ಟ ಅಪಹರಿಸಿದ್ದೇವೆ. ಒಂದು ಮರ ಒಂದು ಸಂಸ್ಕೃತಿಯನ್ನು ಬದಲಿಸುತ್ತದೆ ಎನ್ನುತ್ತಾರೆ, ನಮ್ಮ ಸಂಸ್ಕೃತಿಯ ಸಂಬಂಧವೇ ಇಲ್ಲದ ಮರಗಳನ್ನು ನೆಡುತೋಪಾಗಿ ಆಕ್ರಮಣ ಮಾಡಿದ್ದೇವೆ. ಆಸ್ಟ್ರೇಲಿಯನ್ ಮೂಲದ ಅಕೇಸಿಯಾ, ನೀಲಗಿರಿ, ಮ್ಯಾಂಜಿಯಮ್ ಎಂದು ವಿದೇಶಿ ಸಸ್ಯಗಳನ್ನು ಊರಿನ ಗುಡ್ಡಕ್ಕೆಲ್ಲ ಊರಿ ಭೂದೇವಿಗೆ ಆಸ್ಟ್ರೇಲಿಯನ್ ಉಡುಗೆ ತೊಡಿಸಿದ್ದೇವೆ. ಹಾಡುವ ಹಕ್ಕಿ, ಮಧುರ ಜೇನು, ಬಣ್ಣದ ಚಿಟ್ಟೆಗಳು ಕಾಡಿನ ದಾರಿ ತಪ್ಪಿ ಅಲೆದಾಡಿ ನೆಡುತೋಪಿನಲ್ಲಿ ನಿತ್ರಾಣವಾಗಿವೆ.



ಶಿಸ್ತಿನ ಸಾಲು– ವೈವಿಧ್ಯದ ನೆಲೆಯಲ್ಲಿ ಏಕಜಾತಿ ನೆಡುವ ತಯಾರಿ



ನೆಡುತೋಪು ಕಟಾವಿನ ಬಳಿಕ ಉಳಿಯುವದು ಇಷ್ಟೇ !

ಅರಣ್ಯಾಭಿವೃದ್ಧಿ ಕಾರ್ಯಗಳಿಗೆ ನೆಲದ ಮಾದರಿ ಹೇಳಲು ಮಲೆನಾಡಿನಲ್ಲಷ್ಟೇ ಅಲ್ಲ ಬರಗಾಲದ ತವರಿನಲ್ಲೂ ಯಶೋಗಾಥೆಗಳಿದ್ದವು. ಸಾಲುಮರದ ತಿಮ್ಮಕ್ಕ ಮರಗಳನ್ನು ಮಕ್ಕಳಾಗಿ ಬೆಳೆಸಿದವಳು, ತಿಪಟೂರಿನ ಗ್ಯಾರಘಟ್ಟದ ಬೀರಜ್ಜ ರಸ್ತೆ ಪಕ್ಕ ಆಲದ ಮರ ಬೆಳೆದವರು ಹೀಗೆ ದಿಕ್ಕು ತೋರಿದ ದೀಪಗಳು ಹಲವು. ಮರ ಉಳಿಸಿದ ನೆಲದ ಪರಂಪರೆಯಲ್ಲಿ

ನೈಸರ್ಗಿಕ ಸಂಪನ್ಮೂಲ ಅಭಿವೃದ್ಧಿಗೆ ವಿಕೇಂದ್ರೀಕರಣದ ಮಾದರಿ ಮರೆತಿದ್ದೇವೆ. ೨೦೦ ವರ್ಷಗಳ ಅರಣ್ಯೀಕರಣ ಚರಿತ್ರೆಯಲ್ಲಿ ಉದ್ಯಮ, ಉರುವಲು ಗುರಿಯಾಗಿಸಿಕೊಂಡು ಕ್ರಮಿಸಿದ ನೀತಿಗಳು ಮೆರೆದಿವೆ. 'ಆಧಾಯಕ್ಕಾಗಿ ಅರಣ್ಯ' ನೋಡವಲ್ಲಿ ಕತ್ತಲು ಕಣಿವೆಯ ಘಟ್ಟವೇರಿ ಲಾರಿ ಓಡಿದೆ, ರೈಲು ಮಾರ್ಗ ಬೆಳೆದಿದೆ, ಕಾರ್ಖಾನೆಯ ಸಾಲು ನಿಂತಿದೆ. ಗಿಡ ನೆಟ್ಟರೆ ಬೆಳೆಯುತ್ತದೆಂದು ೧೯ನೇ ಶತಮಾನದಲ್ಲಿ ಜರ್ಮನ್ನರು ಹೇಳಿದ್ದನ್ನು ಉರುವು ಹೊಡೆದು ಊರೂರಿನ ಗುಡ್ಡಗಳಲ್ಲಿ 'ಮೂಲಂಗಿ' ನೆಡುವ ಹಾಗೇ ನೆಡುತೋಪು ಬೆಳೆಸಿದ್ದೇವೆ !. ಕಾಡಿನ ಬೇರಿನೆ ಬದುಕುವ ಅವಕಾಶ ಕಸಿದಿದ್ದೇವೆ.

ಪ್ಲಸ್ ಟ್ರೀ, ನರ್ಸರಿ, ಗ್ರೀನ್‌ಹೌಸ್, ವೆಜಿಟ್ಟೆಟಿವ್ ಪ್ರೊಪಗೇಶನ್, ಬಿಜೋಪಚಾರ, ಪಾಲಿಥೀನ್ ಚೀಲ, ಬುಲ್ಡೋಜರ್, ರಿಪ್ಪಿಂಗ್, ಸಾಲು ಸಸಿ, ತಂತಿ ಬೇಲಿ, ವಾಕಿಟಾಕಿ, ವಾಚ್‌ಮನ್, ವಾಚ್‌ಟವರ್, ಯೂನಿಫಾರ್ಮ, ವಿದೇಶಿ ಹಣ, ವಿದೇಶಿ ತರಬೇತಿ, ರಾಸಾಯನಿಕ ಗೊಬ್ಬರ ಬಳಸಿ ನೆಡುತೋಪು ಬೆಳೆಸಿದ್ದೇವೆ. ಕೃಷಿ ನೆಲದಲ್ಲಿ ಆಧಿಕ ಉತ್ಪಾದನೆ ಹಸುರು ಕ್ರಾಂತಿ ಹಾಗೇ ನಾಟಿ – ಕಾವಲು – ಕಟಾವು ಮಂತ್ರದಲ್ಲಿ ಯಂತ್ರಗಳು ಗುಡ್ಡವೇರಿವೆ. ನೆಲದ ಭಾಷೆ ಗೊತ್ತಿಲ್ಲದ ಸಸ್ಯ ಸಂಕುಲ ಬಂದು ಕಾಡು ಮೌನವಾಗಿದೆ. ಬೆಟ್ಟಕ್ಕೆ ಬೆಟ್ಟವೇ ಚೆಂದದ ಚಿಟ್ಟೆಗೆ, ಹಾಡುವ ಹಕ್ಕಿಗೆ, ಸುರಿವ ಮಳೆಗೆ, ನೆಲದ ಮಣ್ಣಿಗೆ ಇದ್ದಕ್ಕಿದ್ದಂತಯೇ ಪರಕೀಯವಾಗಿದೆ !. ಅರಣ್ಯ ವಿಜ್ಞಾನದ ಪುಸ್ತಕದ ತುಂಬ ನೆಲದ ಸತ್ವದಲ್ಲಿ ಮೇಲೆದ್ದ ಮಾತಿಗಿಂತ ಬ್ರಿಟೀಷರ ನೆಡುತೋಪಿನಲ್ಲಿ ಸಿಕ್ಕ ಕಾರ್ಯ – ಕಾರಣ ಸಂಬಂಧಗಳಿವೆ, ಅರಣ್ಯ ಕಾರ್ಯ ಯೋಜನೆಯ ಕಡತಗಳಿವೆ. ಅರಣ್ಯಾದರಿತ ಉದ್ದಿಮೆಗಳ ಒಪ್ಪಂದಕ್ಕೆ ತಕ್ಕಂತೆ ನಿತ್ಯ ಕಾಡು ನೆಲ ಕುಣಿಯುವ ದ್ರಶ್ಯಗಳಿವೆ. ತಲೆಮಾರಿನ ಅಧಿಕಾರಿಗಳಿಗೆ ಮಣ್ಣಿನ ಭಾಷೆಗಿಂತ ವಿಜ್ಞಾನದ ಶಿಸ್ತು, ಯಶಸ್ಸಿನ ಪಲಿತಾಂಷ ರೂಡಿಯಾಗಿದೆ. ಜೀವ ಸರಪಳಿಯ ವಿಸ್ಮಯ ಜಗತ್ತಿನಲ್ಲಿ ಹುಲ್ಲಿನಿಂದ ಹೆಮ್ಮರ ಬೆಳೆಯುತ್ತದೆ. ಆದರೆ ಕಳೆಗಿಡಗಳ ಸತ್ವದಲ್ಲಿ ನೆಲಕ್ಕೆ ಶಕ್ತಿ ಬಂದು ಕಾಡು ಕೂಡುವ ಪ್ರಮೇಯ ಗಮನಿಸಲು ಸಂಯಮವಿಲ್ಲ. ಗುರಿಗೆ ಗಿಡಗಳು ಅರೆ ನಿತ್ಯಹರಿದ್ವರ್ಣ ಕಾಡಿನಲ್ಲಿ ಬೆಳೆದು ಗೊಬ್ಬರವಾಗುವ ತತ್ವ ಗೊತ್ತಿಲ್ಲ. ಅರಣ್ಯೀಕರಣದ ಒತ್ತಡದಲ್ಲಿ ನೆಡುತೋಪಿನ ನೇಣಿಗೆ ಜೀವವೈವಿಧ್ಯ ಬಲಿಯಾಗುತ್ತಿದೆ.

ನಮ್ಮ ಉಳಿತಿಗಾಗಿ ಅರಣ್ಯ ಸಂರಕ್ಷಣೆಯ ಕಾರ್ಯ ಇಂದಿನ ತುರ್ತು ಅಗತ್ಯ. ನೆಲದ ಕಾಡು ಉಳಿಸುವದು ಇನ್ನೂ ಮುಖ್ಯ, ಇದಕ್ಕೆ ಬಳಸಿಬಲ್ಲವರ ಅನುಭವ ಬೇಕು. ನೆಡುತೋಪಿನ ಆವೇಗದಲ್ಲಿ ಕಾಡು ಹಣ್ಣಿನ ಸವಿ ನೆನಪು ಮಾಸುತ್ತಿದೆ. ಹೂವಿಗೆ ಪರಾಗಸ್ಪರ್ಶ ಮಾಡುವ ಕೀಟ, ಹಣ್ಣುತಿಂದು ಬೀಜೋಪಚಾರ ಮಾಡುವ ಪ್ರಾಣಿ ಪಕ್ಷಿಗಳಿಂದ ಪಾಠ ಕಲಿತು ಬೆಳೆಸುವ ದಾರಿ ಹುಡುಕಬೇಕಾಗಿದೆ. ಬೆಂಕಿ ಸಹಿಷ್ಣು, ಬರನಿರೋಧಕ, ಮರ, ಮಣ್ಣು ಸಂರಕ್ಷಣೆ, ಜಲಕೊಯ್ಲಿನ ನೇತ್ರತ್ವವಹಿಸುವ ಹುಲ್ಲು, ಮುಳ್ಳುಕಂಟಿ, ಬಳ್ಳಿಗಳನ್ನು ಹುಡುಕಿ ಹುಡುಕಿ ನೋಡಬೇಕಾಗಿದೆ. ಕಾಡು ಬೆಟ್ಟದಲ್ಲಿ ಓಡಾಡಿ ಬಲ್ಲವರ ಮಾತು ಕೇಳಬೇಕಿದೆ.

ಒಂಟಿಯಾಗಿ ಬಯಲಲ್ಲಿ ನಿಂತ ಕರಿಬಸರಿ ಮರ ಆಗಾಗ ಹಣ್ಣಾಗಿ ಪಕ್ಕಿಗಳನ್ನು ಸೆಳೆಯುತ್ತದೆ. ದೂರ ದೂರದಿಂದ ಬಂದ ಚಿಲಿಪಿಲಿಗಳ ಕಲರವದಲ್ಲಿ ಕಾಡು ಮಾತಾಡುತ್ತದೆ. ಮರದ ಕೆಳಗೆ ಚಳ್ಳೆ, ಅಂಡಿ, ನುರುಕಲು, ಪರಗೆ ಹಣ್ಣಿನ ಗಿಡ ಬೆಳೆಯುತ್ತದೆ. ಪಕ್ಷಿ ಹಿಕ್ಕೆಯೊಳಗಿನ ಬೀಜ ಅರಣ್ಯ ಕೃಷಿ ಎಷ್ಟು ಸಹಜ ಎಂದು ಸಾರುತ್ತದೆ. ಹಾಗಂತ ಹಸುರು ಸೃಷ್ಠಿಯ ಬೀಜ ರಹಸ್ಯ ಅಷ್ಟು ಸುಲಭಕ್ಕೆ ಸಿಗುವ ಸರಕಲ್ಲ. ಲಕ್ಷಾಂತರ ಅಣಲೆಕಾಯಿ ನರ್ಸರಿಗೆ ತಂದು ಸುರಿದರೂ ಒಂದೇ ಒಂದು ಸಸಿ ಮೊಳಕೆಯೊಡೆಯುವದಿಲ್ಲ, 'ಏನು ಮಾರಾಯ ಆಣಲೆಕಾಯಿ ಸಸಿಯಾಗೋದಿಲ್ಲ !?' ಕಾಡಲ್ಲಿ ದನಕರು ಮೇಯಿಸುವ ಅಜ್ಜನನ್ನು ಕೇಳಿದರೆ ನಗುತ್ತಾನೆ. ಅದು 'ದನ ಮೆಟ್ಟಿದರೆ ಮಾತ್ರ ಸಸಿಯಾಗೋದು' ಎಂದು ಒಗಟು ಬಿಡಿಸುತ್ತಾನೆ. ಜಾನುವಾರುಗಳ ಕಾಲ್ಗೊರಸಿನ ಭಾರಕ್ಕೆ ಕಾಯಿ ಕವಚ ಸೀಳಿದಾಗ ನೈಸರ್ಗಿಕವಾಗಿ ಮೊಳಕೆ ಬರುವ ಒಗಟು ಬಿಡಿಸುತ್ತಾನೆ. ಕಾಡಿಗೆ ಹತ್ತಿರಾದವರಿಗೆ ನಾವು ಹತ್ತಿರವಾದರೆ ಎದೆಯ ಮಾತು ಕೇಳುತ್ತದೆ. ಸ್ಟಾರ್ ಹೊಟೆಲ್‌ಗಳಲ್ಲಿ ಪವರ್‌ಫಾಯಿಂಟ್ ಪ್ರಸೆಂಟೇಶನ್‌ನಲ್ಲಿ ಕಾಡನ್ನು ಅರೆದು ಕುಡಿದಂತೆ ಮಾತಾಡುವ ನಮ್ಮ ವಿಜ್ಞಾನ ತೂಗಲು ಯಾವ ಅಂತರಾಷ್ಟ್ರೀಯ ತಜ್ಞರು ಬೇಡ, ೧೦ ವರ್ಷ ಕಾಡು ಅಲೆದ ಒಬ್ಬ ದನಗಾಹಿ ಸಾಕು ! ಆದರೆ ಅವರೇಕೆ ನಮ್ಮ ಶಾಲೆ, ಕಾಲೇಜು, ವಿಶ್ವವಿದ್ಯಾಲಯ, ಅರಣ್ಯ ಭವನದ ಸೆಮಿನಾರುಗಳಲ್ಲಿ ಮಾತಾಡುವದಿಲ್ಲ ? ಕ್ಷಮಿಸಿ ಇವರಿಗೆ ಇಷ್ಟೆಲ್ಲ ಜ್ಞಾನವಿದೆ ಎಂದು ಯಾರಿಗೂ ಗೊತ್ತಿಲ್ಲ. ದೇಸೀ ಬೇರಿನ ಕುರಿತ ಅಜ್ಞಾನದಿಂದ ಇಂದು ಜ್ಞಾನ ಬೆಟ್ಟ ಬತ್ತಗೊಡಗಿದೆ. ರಾಮಾಯಣ ಕಾಲದ

ದಂಡಕಾರಣ್ಯ ಎಂಬ ಖ್ಯಾತಿಯ ಪಶ್ಚಿಮ ಘಟ್ಟದ ಕಾಡನ್ನು ಪಾಶ್ಚಾತ್ಯ ಜ್ಞಾನಕ್ಕೆ ತಕ್ಕಂತೆ ನರ್ತಿಸುವಂತೆ ಮಾಡಿದವರು ನಾವು. ನೆಲದ ನೋವು ಅರ್ಥಮಾಡಿಕೊಳ್ಳಲು ಯಾರಿಗೆ ಸಮಯವಿದೆ ? ಗೊತ್ತಿಲ್ಲ. ಎಲೆ ಮರೆಯ ಕಾಯಿಯಂತಿದ್ದ ಅಡವಿ ಅನುಭವ ಫಲಗಳು ಈಗ ಮಾಗಿ ಮಣ್ಣಾಗುತ್ತಿವೆ. ಬರಿದಾಗುವ ಮುಂಚೆ ಹುಡುಕಿ ಹೆಕ್ಕುವವರು ಬೇಕಾಗಿದ್ದಾರೆ.

## ಹುಲಿಯಪ್ಪನ ಕಟ್ಟೆ




ಒಂದಾನೊಂದು ಕಾಲದಲ್ಲಿ ಇಲ್ಲಿ ಹುಲಿ ಇದ್ದುದಕ್ಕೆ ಸಾಕ್ಷಿ

ಕಾಡಿನ ಹುಲಿ ಜನ, ಜಾನುವಾರುಗಳಿಗೆ ತೊಂದರೆ ನೀಡಿದರೆ ಹುಲಿದೇವರು ನಮ್ಮ ಮೇಲೆ ಮುನಿಸಿಕೊಂಡಿದ್ದಾನೆ ಎಂದು ಹಳ್ಳಿಗರು ಭಾವಿಸುತ್ತಿದ್ದರು. ಕಾಡಿನ ಅಂಚಿನಲ್ಲಿ, ಹುಲಿ ಓಡಾಡುವ ಜಾಗಗಳಲ್ಲಿ ಪೂಜೆ ಅರ್ಪಿಸಿದರು'. ಹುಲಿಯಪ್ಪ ನಮ್ಮನ್ನು ಕಾಪಾಡು' ಎಂದು ಕೈ ಮುಗಿದರು. ದೀಪಾವಳಿ, ಕಾರ್ತಿಕೋತ್ಸವ, ಹೊಸಕ್ಕಿ ಹಬ್ಬ, ಗಿಡಿ ಹಬ್ಬಗಳ ಸಂದರ್ಭದಲ್ಲಿ ವಿಶೇಷ ಪೂಜೆ ಅರ್ಪಿಸುವ ಪರಿಪಾಠ ಪರಂಪರೆಯಾಗಿ ಬೆಳೆಯಿತು. ಪೂಜಿಸುವ ಸ್ಥಳದಲ್ಲಿ ಕಲ್ಲು, ಹುಲಿಯ ವಿಗ್ರಹ ಪ್ರತಿಷ್ಠಾಪಿಸಿ ಅದನ್ನು ಶ್ರದ್ಧಾ ಕೇಂದ್ರವಾಗಿಸಿದರು. ಇಂದು ಮಲೆನಾಡಿನ ಬಹುತೇಕ ಹಳ್ಳಿಗಳಲ್ಲಿ ಹುಲಿ ವಿಗ್ರಹಗಳಿರುವ ಸ್ಥಳಗಳಿವೆ. ಅಲ್ಲಿ ವಿಶೇಷ ಸಂದರ್ಭಗಳಲ್ಲಿ ಪೂಜೆಗಳು ನಡೆಯುತ್ತವೆ. ಈ ಪ್ರದೇಶಗಳಲ್ಲಿ ಹಿಂದೆ ಹುಲಿ ಇತ್ತು ಎಂಬುದಕ್ಕೆ ಕಟ್ಟೆ ಕಲ್ಲುಗಳು ನಿಸರ್ಗ ಸಾಕ್ಷ್ಯ ನೀಡುತ್ತವೆ. ಕಟ್ಟೆಯಲ್ಲಿನ ಮರಗಳನ್ನು ದೈವ ನಂಬಿಕೆಯಿಂದ ಯಾರೂ ಕಡಿಯುವದಿಲ್ಲ.

# ಕಾಡು ಫಲದಲ್ಲಿ ಕೃಷಿ ಶಕುನಗಳು !

ಉಷ್ಣತೆ, ಆದ್ರತೆ, ಗಾಳಿಯ ವೇಗ, ಮೋಡದ ಚಲನೆ ಗಮನಿಸುತ್ತ ಸೈಟಲೈಟ್ ಕಣ್ಣಿನಲ್ಲಿ ವಿಜ್ಞಾನ ಹವಾಮಾನದ ಗತಿ ಅಳೆಯಲು ಗಗನ ಮುಖೀ ಚಿಂತನೆ ಬೆಳೆಸಿದೆ. ಹೊಲದಲ್ಲಿ ನಿಂತ ನಮ್ಮ ರೈತರು ಮಾತ್ರ ಎಕ್ಕೆ ಹೂವು ಬರಗಾಲದ ಸೂಚನೆಯೊಂದೂ, ಹಿಪ್ಪೆಯ ಹೂವು ಗೋಧಿ ಬೆಳೆ ನಿರ್ಧರಿಸುತ್ತದೆಂದು ಕಾಡು ಮರದಲ್ಲಿ ಕೃಷಿ ಭವಿಷ್ಯದ ದೇಸೀ ದಾರಿ ಹುಡುಕುತ್ತಾರೆ. ಮಣ್ಣಿನ ಮಕ್ಕಳ ನೆಲದ ಮಾತು ಇಲ್ಲಿದೆ.

'ಎಕ್ಕ ಹುಟ್ಹೋಗ್ಲಿ !' ಬೈಗುಳ ಮೈಸೂರು ಸೀಮೆಯಲ್ಲಿದೆ. 'ಕುಟುಂಬ ಸರ್ವನಾಶವಾಗಲಿ' ಎಂಬುದನ್ನು ಎಕ್ಕೆ ಗಿಡ ಹುಟ್ಟಲಿ ಎನ್ನಲಾಗುತ್ತದೆ. ಚಿತ್ರದುರ್ಗ ಬಾಂಡ್ರಾವಿಯ ರೈತರು ಹೊಲದಲ್ಲಿ ಎಕ್ಕೆ ಗಿಡ ನೋಡಿ 'ಇಲ್ಲಿ ಬಾವಿ ತೋಡಿಸಿದ್ರ.. .... ನೀರ್ ಸಿಗತೈತ್ರಿ...' ಎಂದು ಬೋರ್‌ವೆಲ್ ಕೊರೆಸಲು ಅಂತರ್ಜಲ ಅಂದಾಜು ಮಾಡುತ್ತಾರೆ. '........ ! ? ಎಕ್ಕೆ ಹೂವು ಈ ವರ್ಷ ಸಿಕ್ಕಾಪಟ್ಟೆ ಬಿಟ್ಟಾವ... .... ಗಿಡ ನೋಡಿದ್ರ.... ತೇಟ್ ಹೂವಿನ ತೇರು ನೋಡಿದಾಂಗ್ದ ಆಗ್‌ತೈತಿ' ಮಾತು ಕೇಳಿದರೆ ಮತ್ತಿಷ್ಟು ರೈತರು ಕಂಗಾಲು. ಎಕ್ಕೆ ಹೂ ಜಾಸ್ತಿ ಬಿಟ್ಟ ವರ್ಷ ಯಾವ ಕೃಷಿ ಬೆಳೆಯೂ ಕೈಗೂಡುವುವದಿಲ್ಲ ಎಂಬುದು ಈ ಪುಷ್ಪ ಭವಿಷ್ಯ !.



ಎಕ್ಕೆ ಹೂ ಜಾಸ್ತಿ ಬಿಟ್ಟರೆ ಬರಗಾಲ

ಬನ್ನಿ ಗಿಡದಲ್ಲಿ ಹೂ, ಕಾಯಿ ಬರ್ಜರಿಯಾದರೆ ದೇಶಕ್ಕೆ ಬರಗಾಲ, ಮಾವಿನ ಫಲ ಜಾಸ್ತಿಯಾದರೆ ಜಗತ್ತಿಗೆ ಸುಖ, ಅದರಲ್ಲಿಯೂ ನವಣೆ ಬೆಳೆ ಜಾಸ್ತಿ. ನೇರಳೆ ಹಣ್ಣು ಹೇರಳವಾಗಿದ್ದರೆ ಎಳ್ಳು ಸಮೃದ್ಧ. ಹುಣಸೆ ಹಣ್ಣು, ಎಳ್ಳು ಬಂಪರ್ ಬೆಳೆ ಬಂದ ವರ್ಷ ಭತ್ತದ ಫಸಲು ಹೆಚ್ಚು, ಅಶೋಕ ವೃಕ್ಷ ಹೂ ಜಾಸ್ತಿಯಾದರೆ ಭತ್ತಕ್ಕೆ ಶುಕ್ರದೆಸೆ. ಆಲದಲ್ಲಿ ಜಾಸ್ತಿ ಫಲ ಬಂದರೆ ಸಜ್ಜೆ ಜಾಸ್ತಿ. ಶಿರೀಷ(ಬಾಗೆ) ಗಿಡದಲ್ಲಿ ಹೂ ಕಾಯಿ ಇಮ್ಮಡಿಸಿದರೆ ಹೆಸರು ಉತ್ತಮ. ಇಪ್ಪೆಯ ಫಲ ಜಾಸ್ತಿಯಾದರೆ ಗೋಧಿ ಗೆಲುವು, ಮುತ್ತುಗದಿಂದ ಜೋಳ ಉತ್ತಮ, ಕೊಡಸದ ಫಲ ಜಾಸ್ತಿಯಾದರೆ ರೋಗ ರಹಿತ ವಾತಾವರಣ, ಗೇರು ಹೆಚ್ಚು ಫಲಿಸಿದರೆ ಭೀತಿ, ಮುತ್ತುಗದ ಕಾಯಿ ಸುಲಿದಾಗ ಅದರೊಳಗಿನ ಬೀಜ ಗಮನಿಸಿ ಮುಂಗಾರಿ, ಹಿಂಗಾರಿ ಫಲ ಅಂದಾಜು ! ಲಾಗಾಯ್ತಿನ ನಾಟಿ ಜಾಣ್ಮೆ ಸೋಜಿಗ.

ಎಕ್ಕೆ ಹೂವು ಬರಗಾಲದ ಭವಿಷ್ಯ ಹೇಳುವದು, ಹುಣಸೆಯಲ್ಲಿ ಭತ್ತದ ಅಂದಾಜು ಮಾಡುವದು, ಹಿಪ್ಪೆಯ ಹೂವು ಗೋದಿ ಬೆಳೆ ನಿರ್ಧರಿಸುತ್ತದೆಂದು ನಂಬಿದ ರೈತ ಮಾತುಗಳು ಅಚ್ಚರಿ ಹುಟ್ಟಿಸಬಹುದು. ಹುಲ್ಲು ಕಡ್ಡಿಯಂತಹ ಕೃಷಿ ಬೆಳೆಯ ಗಿಡ ಗುಣ ಸ್ವಭಾವವನ್ನು ಮರದೆದುರು ಮಾತಾಡಿಸುವ 'ಕೃಷಿ ಶಕುನ' ಇದು. ಹುಣಸೆ ಫಲ ಚೆನ್ನಾಗಿ ಬಿಟ್ಟ ಹೆಚ್ಚಿನ ಸಂದರ್ಭಗಳಲ್ಲಿ ಭತ್ತದ ಫಸಲು ಅತ್ಯುತ್ತಮವಾಗಿ ಕಂಡಿದ್ದೇ ಈ ಜನಪದ ವಿಜ್ಞಾನದ ಕಾರ್ಯ - ಕಾರಣ ಸಂಬಂಧ. ನಿತ್ಯ ಕಾಡು - ಕೃಷಿ ನೋಡುತ್ತ ಬೆಳೆದ ಈ ಜ್ಞಾನಕ್ಕೆ ಕಣ್ಣೋಟವೇ ಪಾಠ, ಅನುಭವವೇ ಮೇಷ್ಟ್ರು ! ಇಲ್ಲಿ ನಿತ್ಯ ಗಮನಿಸುವ ಹೊಲದ ಗಿಡ ಮರಗಳ ಫಲಗಳು ಭವಿಷ್ಯ ಹೇಳುವ ಕನ್ನಡಿಯಾದವು.

ಉತ್ತರ ಕನ್ನಡದ ಕಾಡುಗಳಲ್ಲಿ ಸಿದ್ದಿ ವನವಾಸಿಗರು ಕಾಡಿನ ಕಲ್ಲು ಬಾಳೆಯ ಎಲೆ ನೋಡಿ ಮಧುವೆ ಮುಹೂರ್ತ ನಿರ್ಧರಿಸುತ್ತಿದ್ದರು. ಮಳೆಗಾಲ ಆರಂಭವಾದ ಬಳಿಕ ಮಧುವೆ ಮಾಡುವದು ಇವರ ಲಾಗಾಯ್ತಿನ ಕ್ರಮ. ಹಾಗಂತ ನಾಲ್ಕಾರು ದಿನ ಮಳೆ ಸುರಿದದ್ದೇ ಮಳೆಗಾಲ ಆರಂಭವೆಂದು ಕಣ್ಮುಚ್ಚಿ ಲೆಕ್ಕ ಹಾಕಲಾಗದು !. ಕಾಡಿನ ಕಲ್ಲು ಬಂಡೆಯಲ್ಲಿ ಬೆಳೆಯುವ ಕಲ್‌ಬಾಳೆ ಗಿಡದಲ್ಲಿ ಐದು ಎಲೆ ಚಿಗುರಿದರೆ ಮಾತ್ರ ಮಳೆಗಾಲ ನಿಕ್ಕೀಯಾಗಿ ಆರಂಭವಾಯಿತು ಎಂಬುದು ಇವರ ಎಣಿಕೆ. ಜೂನ್


ತಿಂಗಳಿನಲ್ಲಿ ಮಮೂಲಿಯಾಗಿ ಮಳೆಗಾಲದ ವಾಡಿಕೆಯಾಗಿರುವಾಗ ಇಲ್ಲಿ ಗಿಡ ನೋಡುವ ಪ್ರಮೇಯ ಏಕೆ? ಪ್ರಶ್ನೆ ಉದ್ಭವಿಸಬಹುದು. ಕಾಡಲ್ಲಿ ವಾಸವಾಗಿರುವವರಿಗೆ ಶತಮಾನಗಳ ಹಿಂದೆ ತಿಂಗಳು, ಮಾಸದ ಲೆಕ್ಕ ಯಾರು ಹೇಳಬೇಕು ! ಮರ ಗಿಡ ನೋಡಿ ಕಾಲದ ಅಂದಾಜಿಗೆ ಸಿದ್ಧಿ ಸೂತ್ರ, ಮಧುವೆ ಮನೆಗೆ ಬಾಳೆ ಎಲೆ ಬೇಕು, ವನವಾಸಿಗಳಲ್ಲಿ ಕೃಷಿಯಿಲ್ಲ. ಕಾಡಿನ ಕಲ್‌ಬಾಳೆ ಎಲೆ ನಂಬಿದ್ದರಿಂದ ಅದು ಚಿಗುರುವ ಕಾಲ ಮಹತ್ವದ್ದು. ಬೇಸಿಗೆಯಲ್ಲಿ ಒಣಗಿರುವ ಬಾಳೆ ಗಿಡಗಳು ಮಳೆ ಆರಂಭವಾಗುತ್ತಲೆ ಚಿಗುರುತ್ತವೆ, ಇನ್ನೇನು ಮಳೆಗಾಲ ಆರಂಭವಾಯಿತು ಎನ್ನುವಾಗ ಆರೇಳು ಎಲೆಗಳು ಬೆಳೆಯುತ್ತಿದ್ದವು. ನಿರಂತರ ಬಳಕೆ ತಿಳುವಳಿಕೆ ಜ್ಞಾನವೇ ಮಳೆ ಅಂದಾಜಿಗೆ ಸಹಾಯಕವಾಯಿತು, ಮಧುವೆ ನಿಶ್ಚಿತಾರ್ಥಕ್ಕೆ ನೆರವಾಯಿತು !



ಕಾಡು ಬಾಳೆ ಏಳು ಎಲೆಯಾದರೆ ಮಳೆಗಾಲ

'ಬಿದಿರು ಹೂವರಳಿಸಿದರೆ ಬರಗಾಲ ಬರುತ್ತದೆ' ಮಲೆನಾಡಿನ ಜನ ಬಲವಾಗಿ ಈಗಲೂ ನಂಬುತ್ತಾರೆ. ಹೂವರಳಿದಾಗ ಕಾಡಿನಲ್ಲಿ ಬಿದಿರಕ್ಕಿ ಹೇರಳ ದೊರೆಯುತ್ತದೆ, ಇವನ್ನು ತಿಂದು ಇಲಿ ಸಂತತಿ ಜಾಸ್ತಿಯಾಗುತ್ತದೆ, ಇಲಿಗಳಿಂದ ಪ್ಲೇಗ್ ಬರುತ್ತದೆ ಎಂಬ ಸರಣಿ ಚಿಂತನೆ ಬರಗಾಲದ ಮುನ್ಸೂಚನೆ. ಕ್ರಿ. ಶ ೧೮೬೫-೬೭ರಲ್ಲಿ ಉತ್ತರ ಕನ್ನಡದಲ್ಲಿ ಬಿದಿರು ಹೂವು ಅರಳಿಸಿತು. ಬಿದಿರು ಭತ್ತ ಬಡವರ ಬರಗಾಲದ ಅಹಾರ, ಬಯಲು


ಸೀಮೆಗಳಲ್ಲಿ ಆಗ ಬರಗಾಲ ತಾಂಡವವಾಡುತ್ತಿತ್ತು. ಆಹಾರ ಸಮಸ್ಯೆ ಅನುಭವಿಸಿದ ಜನ ಗುಳೆ ಹೊರಟರು. ಅಡವಿ ಆಹಾರ, ನೀರು ಲಭ್ಯವಿರುವ ಪ್ರದೇಶಕ್ಕೆ ಸಹಜವಾಗಿ ವಲಸೆ ಬಂದರು. ಆಗ ಸುಮಾರು ೫೦,೦೦೦ ಬಯಲು ನಾಡಿನ ಜನ ಕೆನರಾ ಕಾಡು ಸೇರಿ ಬಿದಿರಕ್ಕಿ ತಿಂದು ಬದುಕಿದರು ! ಕತೆ ಇಷ್ಟಕ್ಕೆ ಮುಗಿಯಲಿಲ್ಲ, ಜನರ ವಲಸೆ ಜಿಲ್ಲೆಯ ಆರೋಗ್ಯದ ಮೇಲೆ ಆಘಾತ ಮೂಡಿಸಿತು. ಬಯಲು ನಾಡಿನ ಜನ ಮಲೆನಾಡಿಗೆ ಬಂದ ಸಂದರ್ಭಗಳಲ್ಲಿ ಕಾಲರಾ, ಪ್ಲೇಗ್, ಮೈಲಿ ಬೇನೆಗಳು ಅವರ ಜತೆ ಬಂದವು. ಆಹಾರದ ಕೊರತೆ, ಕಾಯಿಲೆಗಳಿಂದ ಅಪಾರ ಸಾವು ನೋವು ಸಂಭವಿಸುತ್ತಿದ್ದವು. ಬಿದಿರು ಹೂವರಳಿಸಿದ ವರ್ಷಗಳಲ್ಲಿ ಇದೆಲ್ಲ ನಡೆಯುತ್ತಿರುವದನ್ನು ಗಮನಿಸಿದವರು 'ಬಿದಿರು ಹೂವರಳಿಸಿದರೆ ಬರಗಾಲ' ಎಂಬ ಸರಳ ಅನುಭವ ಹಂಚಿದರು. ನಂಬಿಕೆ ಬೆಳೆಯಿತು.



ಬಿದಿರಿಗೆ ತೆನೆ ಹಬ್ಬ

ಕಾಡು ನೋಟದಲ್ಲಿ ಕಾಲದ ಭವಿಷ್ಯ ಹೇಳುವ ಈ ಕೌತುಕದ ವಿದ್ಯೆ ದಾಖಲಾಗಿರುವದು ತೀರ ಕಡಿಮೆ. ನಂಬಿದ ಸಂಗತಿಗಳು ಜಾನಪದ ಮಾತು, ಹಾಡುಗಳಲ್ಲಿ ಉಲ್ಲೇಖವಾದವು. 'ರಟ್ಟ ಮತ ಶಾಸ್ತ್ರ' ಎಂಬ ಕನ್ನಡದ ಗ್ರಂಥ ಇಂತಹ ಕೆಲವು ಅಪುರೂಪದ ಜ್ಞಾನ ಹಿಡಿದಿಟ್ಟಿದೆ. ಇಡೀ ನಮ್ಮ ದೇಶದ ಗ್ರಂಥಾಲಯಗಳಲ್ಲಿ ಈ ಶಾಸ್ತ್ರದ ತಾಡ ಓಲೆಯ ಮೂಲ ಐದು ಪ್ರತಿಗಳು

ಮಾತ್ರವಿದೆಯಂತೆ ! ಇವುಗಳಲ್ಲಿ ಮೂರು ಪ್ರತಿಗಳು ಮದ್ರಾಸ್ ಸರಕಾರದ ಓರಿಯಂಟಲ್ ಗ್ರಂಥಾಲಯದಲ್ಲೂ, ಇನ್ನೊಂದು ಉತ್ತರ ಪ್ರದೇಶದ ಅರಾಜೈನ್ ಗ್ರಂಥಾಲಯದಲ್ಲೂ ಇದ್ದವು ! ಮೈಸೂರು ಸರಕಾರದ ಗ್ರಂಥಾಲಯದಲ್ಲಿ ಒಂದು ಪ್ರತಿ ಸಂರಕ್ಷಿತವಾಗಿತ್ತು, ಮೂಲತಃ ಮೈಸೂರು ತಲಕಾಡಿನ ಜಿನ ನಗರ ಗ್ರಾಮದ ಒಡೆಯನಾದ ನಾಗಕುಮಾರನ ಮಗ ಮಾಚಿಮಯ್ಯ ದೇವರು ಇದನ್ನು ಬರೆದವರು. ಐದನೇ ಶತಮಾನದಲ್ಲಿ ಗಂಗರಾಜರ ಆಶ್ರಯದಲ್ಲಿದ್ದ ಈ ಕುಟುಂಬ ಅರಣ್ಯ ದೇಸೀ ಜ್ಞಾನ ದಾಖಲಾತಿಯ ಅನುಪಮ ಕಾಯಕ ಮಾಡಿತು !. ಈ ಪ್ರತಿಗಳಲ್ಲಿ ವಚನಗಳನ್ನು ಅಧ್ಯಯನ ಮಾಡಿದ ಗದಗದ ಸಿ. ಬಸವಲಿಂಗಶಾಸ್ತ್ರಿಗಳು ೬೦ ವರ್ಷಗಳ 'ರಟ್ಟ ಮತ ಶಾಸ್ತ್ರ' ಗ್ರಂಥ ಸಂಪಾದಿಸಿದ್ದು ಸಂವತ್ಸರ ಫಲಗಳು ಇದರಲ್ಲಿವೆ. ಮಹಾ ಮರಗಳ ಫಲದಲ್ಲಿ ನೆಲದ ಆಹಾರ ಬೆಳೆ ಅಳೆಯುವ ವಿಶಿಷ್ಟ ವಿದ್ಯೆಗೆ ಬೆಳಕು ಚೆಲ್ಲಲಾಗಿದೆ. ಕುರುಬರು, ದನಗಾಹಿಗಳು, ವನವಾಸಿಗರಲ್ಲಿ ಪ್ರಕೃತಿಯನ್ನು ಅರ್ಥಮಾಡಿಕೊಂಡ ಈ ಕ್ರಮ ಅಕ್ಷರಕ್ಕಿಂತ ಅಡವಿ ಓದಿನಲ್ಲಿ ಬೆಳೆದು ಬಂದಿದೆ.



ಕುರಿಗಾಹಿಗಳ ಅಡವಿ ಅರಿವು ಮಹತ್ವದ್ದು

ಜೀಯೋರ್ಜಿಯಸ್ ಅಗ್ರಿಕೊಲ ಎಂಬ ವಿದ್ವಾಸ ೧೭ ನೇ ಶತಮಾನದಲ್ಲಿ ಭೂಮಿಯಲ್ಲಿ ಬೆಳೆದ ಸಸ್ಯಗಳನ್ನು ಗಮನಿಸಿ ನೆಲದೊಳಗೆ

ಇಂತಹ ಖನಿಜ ಇದೆ ಎಂಬುದನ್ನು ಗುರುತಿಸುವ ವಿಧಾನ ಪ್ರಸ್ತಾಪಿಸಿದ್ದರು. ಮುಂದೆ ೧೯೩೮ರಲ್ಲಿ ಕಲಿಬ್ಸ್‌ರ ಸಂಶೋಧನೆ ಜೇಯೋರ್ಜಿಯಸ್‌ನ ಸಸ್ಯ – ಖನಿಜ ಸುಳಿವನ್ನು ಸತ್ಯವೆಂದು ಸಾರಿತು. ಎಕ್ಕೆ ಗಿಡ ಜಾಸ್ತಿಯಿದ್ದರೆ ಜಿಪ್ಸಮ್ ಇದೆಯೆಂದೂ, ಎಲೆ ಕಳ್ಳಿಯಿದ್ದರೆ ಬೆಣಚು ಕಲ್ಲು, ಸಾಂಬಾರಬೇವು ಇದ್ದರೆ ಮ್ಯಾಂಗನೀಸ್ ಅಂಶ ಜಾಸ್ತಿ ಹೀಗೆ ಗಿಡ ನೋಡಿ ಖನಿಜ ಹೇಳಲು ಸಾಧ್ಯವಾಯಿತು. ಈ ಜ್ಞಾನದ ಮೂಲ ಕೆದಕಿದರೆ ಅಡವಿ ಅಲೆದ ಅನಾಮಿಕ ವನವಾಸಿಗರು ಕಾಣುತ್ತಾರೆ. ನಮ್ಮ ಕೃಷಿ ಈ ವರ್ಷ ಏನಾಗುತ್ತದೆ ಎಂಬುದನ್ನು ಮರದ ಕನ್ನಡಿಯಲ್ಲಿ ಕಂಡವರು ಬದುಕಿನ ಮಿತಿಯಲ್ಲಿ ಪರಾಮರ್ಶೆಗೆ ಒಡ್ಡಿದರು, ಅರಿತ ಸತ್ಯಗಳನ್ನು ತಲೆಮಾರಿನಿಂದ ತಲೆಮಾರಿಗೆ ಹಂಚಿದರು. ಇಂತಹ ನಂಬಿಕೆಗಳು ಇಂದು ಜನಪದರ ಬಾಯಲ್ಲಿ ನೆಲೆ ನಿಂತಿವೆ.

ಒಂದು ಕಾಲಕ್ಕೆ ಹಿರಿಯರು ತಮ್ಮ ಅರಣ್ಯ ಜ್ಞಾನ ಹಂಚಲು ವಿಶೇಷ ಹಬ್ಬ, ಆಚರಣೆಗಳ ಮೂಲಕ ಪ್ರಕೃತಿ ಪಾಠ ಹೇಳುತ್ತಿದ್ದರು. ಮಲೆನಾಡಿನ ಗಣೇಶ ಚೌತಿ ಸಂದರ್ಭದ್ದಲಿ ಗೌರಿ ಪೂಜೆಗೆ ಗುಡ್ಡ ಬೆಟ್ಟ ತಿರುಗಿ ವಿವಿಧ ಸಸ್ಯ ಫಲ ಸಂಗ್ರಹಿಸುವ ಸಂಪ್ರದಾಯವಿದೆ. ಗೌರಿ ಹೂವು, ಗಂಗಮ್ಮನ ಹರಳು, ಗೌರಿ ಮುತ್ತು, ಬೊನಗರೆ ಕಾಯಿ, ಗೋಣಗಲಕಾಯಿ, ಬಿಕ್ಕೆಕಾಯಿ, ಅಜ್ಜನ ಗಡ್ಡ, ಕುರಿ ತೊರಡು, ಮಾಡಹಾಗಲ, ಗವಟ್ಲೆಕಾಯಿ, ಮಂಗನ ತೊರಡು, ಅಣಲೆ, ನೆಲ್ಲಿ, ಕಾರೆ ಮುಂತಾದ ಅಪರೂಪದ ಕಾಡಿನ ಫಲಗಳನ್ನು ದೇವರ ಮಂಟಪದ 'ಫಲಾವಳಿ' ಎಂದು ಅಲಂಕಾರಕ್ಕೆ ಕಟ್ಟಲಾಗುತ್ತದೆ. ಇಲ್ಲಿ ಕಾಡು ಕಾಯಿ ತಂದ ಮಾತ್ರಕ್ಕೆ ದೇವರು ನಮಗೆಂತಹ ಭಕ್ತಿ ಫಲ ನೀಡಬಹುದು ಎಂಬ ತರ್ಕಕ್ಕಿಂತ ಹಬ್ಬಕ್ಕೆಂದು ವನದ ಫಲ ಹುಡುಕಿ ತರುವದನ್ನು ಗಮನಿಸಬೇಕು. ಹಿರಿಯರ ಬಾಲದಂತೆ ಕಾಡು ಸುತ್ತುವ ಮಕ್ಕಳಿಗೆ ಸಸ್ಯ, ಫಲ ಜ್ಞಾನ ಪ್ರಾಪ್ತಿಯಾಗುತ್ತದೆ. ಗಿಡದ ಪರಿಚಯ ಪರಿಣಾಮಕಾರಿಯಾಗಿ ನಾಟುತ್ತಿವೆ. ಇಲ್ಲಿ ಕಾಡು, ಕೃಷಿ ಸಂಬಂಧಗಳು ಅರ್ಥವಾಗತೊಡಗುತ್ತವೆ.

ಬಳ್ಳಿ ಕುಡಿಗಳು ಆಕಾಶದ ಕಡೆ ಮುಖಮಾಡಿ ಚಿಗುರಿದರೆ ಮಳೆ ಸುರಿಯುವ ಕಾಲ, ಕಾಗೆ ಮರಿಗಳು ಹಾರಾಡಲು ಕಲಿತರೆ ಮಳೆ, ಮನುಷ್ಯರಿಗೆ ಮೂತ್ರ ಜಾಸ್ತಿಯಾದರೆ ಮಳೆ ಜಾಸ್ತಿ, ಬಾವಿ ನೀರಿನ ರುಚಿ

ಬದಲಾದರೆ, ಮೀನು ನದಿ ದಂಡೆಗೆ ಬಂದರೆ, ಬೇಲಿ ಗೂಟದಲ್ಲಿ ಕುಳಿತ ಓತಿಕ್ಯಾತದ ತಲೆ ಬಣ್ಣ ಬದಲಾದರೆ ಹೀಗೆ ಹವಾಮಾನದ ಭವಿಷ್ಯ ಲೆಕ್ಕಕ್ಕೆ ಎಷ್ಟೊಂದು ಮುಖಗಳು ! ನಮ್ಮ ಕೃಷಿ ಪರಂಪರೆಯ ದಾರಿ ಉದ್ದಕ್ಕೂ ಇಂತಹ ಜ್ಞಾನತೊರೆ ಹರಿದಿದೆ. ಆದರೆ ಉಷ್ಣತೆ, ಆದ್ರತೆ, ಗಾಳಿಯ ವೇಗ, ಮೋಡದ ಚಲನೆ ಗಮನಿಸುತ್ತ ಸ್ಯಾಟಲೈಟ್ ಕಣ್ಣು ಬಿಟ್ಟು ವಿಜ್ಞಾನ ನಮ್ಮಲ್ಲಿ ಗಗನ ಮುಖೀ ಚಿಂತನೆ ಬೆಳೆಸಿದೆ. ಬೆಳೆ ಭವಿಷ್ಯ ಕೇಳಲು ಕೃಷಿ ವಿಜ್ಞಾನದ ಶಾಖೆ ತೆರೆದಿದೆ. ವಿಚಿತ್ರವೆಂದರೆ ಹೊಲದಲ್ಲಿ ನಿಂತವರು ಪಕ್ಕದ ಬದುವಿನಲ್ಲಿ ನಿಂತ ಮರಗಳಲ್ಲಿ, ಕಾಡಿನಲ್ಲಿ ಕೃಷಿ ಶಕುನ ಕಂಡಿದ್ದರು. ರೈತ ಇಷ್ಟು ಕಾಲದಿಂದ ಸಾಗಿದ ದಾರಿಯ ಸತ್ಯಾಸತ್ಯತೆಯ ತುಲನೆಗೆ ನಿಲ್ಲದೇ ಇವೆಲ್ಲ ತಲೆ ಬುಡವಿಲ್ಲದ ಬುಡುಬುಡಿಕೆ ವಿಚಾರಗಳೆಂದು ಈಗ ಸಾರಾಸಗಟಾಗಿ ಪಕ್ಕಕ್ಕೆ ತಳ್ಳಿದ್ದೇವೆ.

**ಕಾಡು ಹೇಳುವ ಕೃಷಿಪಾಠ !**



ಬಳ್ಳಿ, ಮರ, ಮೂಲಿಕೆಗಳು ಕಾಡಲ್ಲಿರುತ್ತವೆ. ಕಾಡು ನೋಡಿ ಕೃಷಿ ಮಾಡುವದಕ್ಕೆ ಇದೇ ಮಾದರಿ

'ಕಾಡು ನೋಡಿ, ಕೃಷಿ ಮಾಡಿ' ಎನ್ನುತ್ತಾರೆ ಕೃಷಿ ತಜ್ಞ ಡಾ । ಎಲ್. ಸಿ. ಸೋನ್ಸ್, ದಕ್ಷಿಣ ಕನ್ನಡದ ಮೂಡಬಿದರೆಯ ಅವರ ತೋಟ ಅಡ್ಡಾಡುವಾದ ಸೋನ್ಸ್ ಹೇಳಿದ ಮಾತು ಇದು !. ನಮ್ಮ ಭೂಮಿಯಲ್ಲಿ

ನಿಂತು ಸುತ್ತಲಿನ ಅರಣ್ಯ ಭೂಮಿ ಸೂಕ್ಷ್ಮವಾಗಿ ನೋಡಬೇಕು. ಅಲ್ಲಿರುವ ನೈಸರ್ಗಿಕ ಮರ, ಗಿಡ, ಬಳ್ಳಿ, ಪೊದೆ ಸ್ವರೂಪಗಳು ನಮಗೆ ನೆಲದ ಕೃಷಿಪಾಠ ಹೇಳುತ್ತವೆ. ಕಾಡಿನಿಂದ ಕೃಷಿ ಪಾಠ ಕಲಿಯಬೇಕೆ ? ಹಲವರಿಗೆ ಅನುಮಾನ ಹುಟ್ಟಬಹುದು. ಆದರೆ ಮಣ್ಣಿನ ಶಾಕತ್ತಿನ ನಿಜ ಕತೆ ಅರಿಯಲು ಕಾಡು ನಮಗಿರುವ ಜೀವಂತ ಸಾಕ್ಷಿ.

ಕಾಡಿನ ಸಸ್ಯ ವೈವಿಧ್ಯ, ದೊಡ್ಡ ಮರ, ಗಿಡ, ಬಳ್ಳಿ, ಪೊದೆ, ಹುಲ್ಲುಗಳೆಲ್ಲ ಗಿಡ ಬೆಳವಣಿಗೆಯ ಸ್ಥಳೀಯ ಸಾಧ್ಯತೆ ಬಿಂಬಿಸುತ್ತವೆ. ನಮ್ಮಲ್ಲಿನ ಮಳೆ, ಬಿಸಿಲು, ಮಣ್ಣು, ಗುಣಕ್ಕೆ ತಕ್ಕಂತೆ, ಹೇಗೆ ಮರದಟ್ಟನೆಯಿದೆ ಎಂಬ ಸಂಗತಿ ಅಲ್ಲಿ ಖಾತ್ರಿಯಾಗುತ್ತದೆ. ನೈಸರ್ಗಿಕ ಕಾಡಿನ ಸ್ವರೂಪ ನೋಡಿ ಕೃಷಿ ಭೂಮಿಯತ್ತ ಕಣ್ಣು ಹಾಯಿಸಬೇಕು. ಕಾಡಿನ ಸಂಕೀರ್ಣ ರೂಪವನ್ನು ಅರ್ಥ ಮಾಡಿಕೊಳ್ಳಬೇಕು. ಕಾಡಿನಲ್ಲಿ ಮಹಾ ಮಹಾ ಮರಗಳು ಬೆಳೆಯುತ್ತವೆ. ಅದರ ಪಕ್ಕದಲ್ಲಿ ಹತ್ತಾರು ಎಕರೆ ಭತ್ತದ ಕೃಷಿ ಮಾಡುತ್ತೇವೆ. ನಮ್ಮಲ್ಲಿನ ಮಳೆ ಹಾಗೂ ನೆಲ ಸತ್ವ ಮಹಾ ಮರಗಳನ್ನು ಬೆಳೆಯಲು ಸಾಧ್ಯವೆನ್ನುವಾಗ ನಾವು ಮೂರಡಿ ಉದ್ದದ ಹುಲ್ಲು ಬೆಳೆಯುತ್ತೇವೆ! ೮೦-೯೦ ಲಕ್ಷ ಲೀಟರ್ ನೀರು ಒಂದು ವರ್ಷದಲ್ಲಿ ಒಂದು ಎಕರೆಯಲ್ಲಿ ಸುರಿಯುವಾಗ ನಮ್ಮ ಕೃಷಿ ಬೆಳೆ ಫಲವತ್ತಾದ ಮಣ್ಣನ್ನು ಹಿಡಿದಿಡಬಲ್ಲ ಬೆಳೆ ಮಾದರಿಯನ್ನು ಹೊಂದಿರಬೇಕು.

ವಿಚಿತ್ರ ನೋಡಿ, ಕಾಡಿನ ಜತೆ ಬದುಕಿದ ನಾವು ಅದನ್ನು ಅರ್ಥಮಾಡಿಕೊಳ್ಳದೇ ಹಲವು ಸಂದರ್ಭಗಳಲ್ಲಿ ಕೇವಲ ಭತ್ತ, ತೆಂಗು, ಅಡಿಕೆ ಎಂಬ ಏಕಜಾತಿ ಬೆಳೆಯಲು ಹೋಗುತ್ತೇವೆ. ದೊಡ್ಡ ಮರ ಬೆಳೆಯುವಲ್ಲಿ ಪುಟ್ಟ ಹುಲ್ಲು ಬೆಳೆಸಲು ಹೊರಡುತ್ತೇವೆ. ಅದರ ಬದಲು ಸಮ್ಮಿಶ್ರ ಬೆಳೆಗಳನ್ನು ಬೆಳೆಯುವ ದಾರಿ ಹುಡುಕಲು ಕಾಡು ಮಾದರಿ ಪಾಠ ಹೇಳುತ್ತದೆ. ಮಲೆನಾಡಿನಲ್ಲಿ ಸಾಂಪ್ರದಾಯಿಕ ಅಡಿಕೆ ಕೃಷಿ ಅರಣ್ಯ ಜ್ಞಾನದಿಂದಲೇ ಬೆಳೆದಿದೆ. ಕಾಡಿನ ಎತ್ತರದ ಮರ, ಬಳ್ಳಿ, ಪೊದೆಗಳ ರೂಪವನ್ನು ತೋಟದ ಬೆಳೆ ರೂಪದಲ್ಲಿಯೂ ಕಾಣಬಹುದು. ಅಡಿಕೆ, ಬಾಳೆ, ಕಾಳುಮೆಣಸು, ಏಲಕ್ಕಿ, ತೆಂಗಿನ ತೋಟದ ನಡುವೆ ಕಾಫಿ, ಅನಾನಸ್, ಕಾಳು ಮೆಣಸು, ಕಾಫಿ ಹೀಗೆ ಬೆಳೆ ವೈವಿಧ್ಯತೆಯಿದೆ, ಕೃಷಿ ಸುಸ್ಥಿರತೆಯಲ್ಲಿ ಕಾಡು ಹೇಳುವ ಪಾಠ ಕೃಷಿ ಕಲಿತಿದೆ.

# ಕಡಲ ಮಕ್ಕಳ ಜ್ಞಾನ ಪಾತ್ರೆ

ಕಡಲಿನ ಯಾವ ತೀರದಲ್ಲಿ ನಿಂತರೂ ನಮಗೆ ಮೇಲ್ನೋಟಕ್ಕೆ ಅದೇ ಉಪ್ಪು ನೀರು, ಮರಳು, ತೆರೆಗಳು ಕಾಣುತ್ತವೆ. ಆದರೆ ಕಡಲು ಓದಿದ ಬೆಸ್ತರಿಗೆ ಪ್ರತಿ ತೀರವೂ ಬೇರೆ ಬೇರೆ ಗುಣ ವಿಶೇಷಸಾರುತ್ತದೆ ! ಓದಿದ ನಾವು ನೆಲ ನೋಡಿ ಓದುವಲ್ಲಿ ಸೋತಿದ್ದೇವೆ.

ಕಡಲ ಮೀನುಗಾರಿಕೆಗೆ ಹೊರಟ ಬೆಸ್ತರಿಗೆ ತಿಮಿಂಗಲು ಕಂಡರೆ ಯಾವತ್ತೂ ದೈವ ದರ್ಶನದ ಸುಯೋಗ. ಇದು ತಮ್ಮ ಒಳಿತಿಗೆ ನೆರವಾಗುತ್ತದೆಂಬ ನಂಬಿಕೆ. ಮೀನಿನ ತೆಪ್ಪ (ಮೀನಿನ ದೊಡ್ಡ ಸಮೂಹ) ತಿಮಿಂಗಲ ಎದುರಿರುತ್ತದೆಂದು ನಿಶ್ಚಿತ ಲೆಕ್ಕ, ಹೀಗಾಗಿ ತಿಮಿಂಗಲು ಕಂಡ ಸ್ಥಳದಲ್ಲಿ ಕಡಲ ರಾಜನಿಗೆ ಪೂಜೆ ಅರ್ಪಣೆ. ಬಲೆಗೆ ಹೆಚ್ಚಿನ ಮೀನು ದೊರೆಯಲೆಂದು ಭಕ್ತಿಯ ಪ್ರಾರ್ಥನೆ. ದೂರದಲ್ಲಿ ನಿಂತ ನಮಗೆ ಕಡಲಿನ ಮೀನು, ಮರಳು, ಉಪ್ಪು ವಿಜ್ಞಾನದ ಬೆಳಕಿನಲ್ಲಿ ಅರ್ಥವಾಗಿರಬಹುದು. ಆದರೆ ಕಡಲಿನ ನಿಜವಾದ ಭಾಷೆ ಬಲ್ಲವರು ಯಾರು?. ತುಫಾನು, ಭಯಂಕರ ಬಿರುಗಾಳಿ, ಪ್ರವಾಹ ಹೀಗೆ ಆಘಾತಗಳ ಆಡಂಬೋಲವಾದಲ್ಲಿ ಬದುಕಿ ಗೆದ್ದ ಬೆಸ್ತರಿಗೆ ಕಷ್ಟ ಕಲಿಸಿದ ಪಾಠ ಅದು, ಅನುಭವ ಜ್ಞಾನ ನಿತ್ಯದ ಬಾಳಿನ ಊಟ ನೀಡಿದೆ.



ನೀರಿನ ಬಣ್ಣ ನೋಡಿ ಸಾಗರದ ಮೀನು ಲೆಕ್ಕ ಹಾಕುವದು ಅನುಭವ ಕಲಿಸಿದ ವಿದ್ಯೆ

ಕರಾವಳಿಯ ಅಂಕೋಲೆಯ ಭಾವಿಕೇರಿ ಹಳ್ಳಿಯ 'ಕಾನ್‌ಬೀರ' ದೇವರು ಅಲ್ಲಿನ ಮೀನುಗಾರರಿಗೆ 'ಭೇಟೆ ದೇವರು', ಮೀನು ಹಿಡಿಯಲು ಹೊರಡುವ ಮುನ್ನ ಅಲ್ಲಿ ಪ್ರಾರ್ಥನೆ. ಕಡಲಂಚಿನ ಪ್ರಸಿದ್ಧ ಸಿದ್ಧಿಕ್ಷೇತ್ರ, ತೀರ್ಥ ಕ್ಷೇತ್ರಗಳಿಗಿಂತ ಊರೂರಿನ ತುಂಬ ಭೂತ, ಬೀರ್ಲು, ಚೌಡಿ. ಮಾಸ್ತಿಕಟ್ಟೆಗಳಲ್ಲಿ ಬಲವಾದ ವಿಶ್ವಾಸ, ಅವುಗಳ ಸುತ್ತ ಹಬ್ಬ, ಉತ್ಸವ, ಜಾತ್ರೆಗಳಿವೆ. ಇವುಗಳ ಮೂಲ ಕೆದಕಿದರೆ ಕಡಲ ಮಕ್ಕಳ ನಂಬಿಗೆ, ನಡಾವಳಿಗಳ ವಿಶಿಷ್ಟ ಜಾನಪದ ಜ್ಞಾನ ಪರಂಪರೆಯ ತೇರು ಸಾಗಿದ ರೀತಿ ಕಾಣುತ್ತದೆ.

ನಮ್ಮ ಕರಾವಳಿಯ ಬೆಸ್ತರ ಸುಖಕ್ಕೆ ಸಮುದ್ರದ ಪ್ರಭಾವಳಿ ಇದ್ದ ಹಾಗೇ ಅಲ್ಲಿ ಬೀಸುವ ಗಾಳಿಯ ಪ್ರಭಾವವೂ ಇದೆ. ವಾಯುವ್ಯ ಗಾಳಿ ಮೀನುಗಾರಿಕೆ ಪ್ರಾಶಸ್ತ್ಯ. ಅದು ಬೀಸಿದರೆ ಎಲ್ಲ ಜಾತಿಯ ಮೀನುಗಳೂ ಹೆಚ್ಚು ಸಿಗುತ್ತವೆ. ಪೂರ್ವ ದಿಕ್ಕಿನಿಂದ ಬರುವ 'ಕರೆಗಾಳಿ' ಯೂ ಮೀನುಗಾರಿಕೆಗೆ ಖುಷಿ. ತೆಂಕಿನಗಾಳಿ ಮೀನು ಹಿಡಿಯಲು ಯೋಗ್ಯವಲ್ಲ, ಕಟ್ಟಿಕೊಟ್ಟ ಅರಿವು ಅಗಾಧ. ಕೆಲವೊಮ್ಮೆ ಸಮುದ್ರದ ನೀರಿನ ಬಣ್ಣ, ವಾಸನೆ ಬದಲಾಗುತ್ತದೆ. ಅದರ ಆಧಾರದಲ್ಲಿ ಮೀನು ದೊರೆಯುವ ಸಾಧ್ಯತೆಯ ಲೆಕ್ಕಾಚಾರ. ಸಮುದ್ರದ ನೀರು ಹಾಂಜಿ ನೀರಾದರೆ (ಹಾವಸೆ ಗೆಟ್ಟಿದ್ದರೆ) ಮೀನುಗಳಿಲ್ಲ, ಕಡು ಹಸಿರಾಗಿದ್ದರೆ ಮೀನುಗಳು ಸಿಗುವದಿಲ್ಲ ಎಂಬ ಅನುಭವ. ಕಡಲಿನ ತೆರೆ, ದಡಸೇರುವ ಪಟ್ಟು, ಗಾಳಿಯ ಸ್ವರೂಪಗಳನ್ನು ಸೂಕ್ಷ್ಮವಾಗಿ ಗುರುತಿಸುವ ಮೀನುಗಾರರು ನೆಲದ ಫಲವತ್ತೆಗಿಂತ ನೆರೆಯ ನೀರಿನ ಗುಣ ಅರಿತು ಬದುಕಿನ ನೆಲೆ ರೂಪಸಿಕೊಂಡ ತಜ್ಞರು. ಸರಳ ಕಣ್ನೋಟದಲ್ಲಿ ಸಾಗರದ ಗರ್ಭ ಸ್ಕ್ಯಾನ್ ಮಾಡಬಲ್ಲವರು.

ಯಾಂತ್ರೀಕೃತ ಮೀನುಗಾರಿಕೆಗಿಂತ ಮುಂಚೆ ಬಲೆಗಳಿದ್ದವು. ನೂರಾರು ಜನ ಸೇರಿ ಕಿಲೋ ಮೀಟರ್ ಉದ್ದದ ಬಲೆ ಹಾಕಿ ಸಮೂದಾಯ ಶಕ್ತಿಯಲ್ಲಿ ವೃತ್ತಿ ನಡೆಸಿದ ಪರಂಪರೆಯಿತ್ತು. ಆಗ ವಿಶಾಲ ಕಡಲಿನಲ್ಲಿ ಎಲ್ಲಿ ರಂಪಣಿ ಬಲೆ ಹಾಕಬೇಕು ? ಗಡಚಿನ ಪ್ರಶ್ನೆ. ಮೀನುಗಳಿರುವಲ್ಲಿ ಬಲೆ ಹಾಕಿದರೆ ಮಾತ್ರ ಲಾಭ. ಹಾಗಾಗಿ ಸಾಗರ ಗರ್ಭದ ಮೀನಿನ ಗಣತಿಯ ಕಾರ್ಯವನ್ನು ಪರಿಣಿತರು ಮಾಡುತ್ತಿದ್ದರು ! ಶೋಧಕಿ ದೋಣಿಯಲ್ಲಿ ಸಮುದ್ರ ಯಾನ ನಡೆಸಿ ಅವರು ಕಡಲಿನ ಮುಖ ನೋಡಿ ರಂಪಣಿ ಬಲೆ ಹಾಕುವ ಜಾಗ ತೋರಿಸಿ ಮೀನುಗಾರರ ಪರಿಶ್ರಮಕ್ಕೆ ಯಶಸ್ವಿ

ಮಾರ್ಗದರ್ಶನ ನೀಡುತ್ತಿದ್ದರು. ಶೈತ್ಯಾಗಾರಗಳಿಲ್ಲದ ಆ ಕಾಲದಲ್ಲಿ ಸಾಗರದ ಮೀನುಗಳನ್ನು ಜಾಚಿತಂದು ಬಲೆಯಲ್ಲಿಯೇ ಕಡಲಂಚಿನಲ್ಲಿ ಬಿಡುತ್ತಿದ್ದರು. ಮೀನುಗಳು ಕಡಲ ದಂಡೆಯ ಅಂಚಿನಲ್ಲಿ ಸಾಗರದ ನೀರಿನಲ್ಲಿ ಬಲೆಯ ಬಂಧಿಯಾಗಿರುತ್ತಿದ್ದವು. ಹೀಗೆ ಬಲೆಯಲ್ಲಿ ಬಚ್ಚಿಟ್ಟ ಮೀನುಗಳು ಇದ್ದಕಿದ್ದಂತೆಯೇ ಒಮ್ಮೊಮ್ಮೆ ನಾಪತ್ತೆಯಾಗುತ್ತಿದ್ದವು. ಯಾವುದೋ ಮೀನುಗಾರ ಮೀನು ಹಿಡಿದಿರಬಹುದು, ಮತ್ಯಾರೋ ಬಲೆ ಹರಿದು ಸಮುದ್ರಕ್ಕೆ ಮೀನು ಹೋಗಲು ಅವಕಾಶ ಮಾಡಿರಬಹುದು ಎಂದು ಬೆಸ್ತರ ಹುಡುಗರು ಆತಂಕಗೊಳ್ಳುತ್ತಿದ್ದರು. ಆಗ ಹಿರಿಯರು ಕಡಲ ಜೀವ ಜಗತ್ತಿನ ಪಾಠ ಮಾಡುತ್ತಿದ್ದರು. ಇದು ತೂಂಜಿ, ಕುಂಬರಿ ಮೀನುಗಳ ಕೆಲಸ, ಇವು ಇಲಿಯ ಹಾಗೆಯೇ ಬಲೆಯ ದಾರಗಳನ್ನು ಕತ್ತರಿಸುತ್ತವೆ, ಹಿಡಿದ ಮೀನುಗಳು ಸಮುದ್ರಕ್ಕೆ ತಪ್ಪಿಸಿಕೊಂಡು ಹೋಗಲು ಕಳ್ಳಕಿಂಡಿ ಕೊರೆಯುತ್ತವೆಂದು ವಿವರಿಸುತ್ತಿದ್ದರು. ಜೀವ ವೈವಿಧ್ಯ ವಿಶೇಷ, ಮೀನುಗಾರಿಕೆ ತಂತ್ರಗಳ ಪ್ರಾತ್ಯಕ್ಷಿಕೆ ಪಾಠ ಮಾಡುವ ಕಡಲ ಮೇಷ್ಟ್ರುಗಳಾಗಿದ್ದರು.

ಕಡಲಿನ ಯಾವುದೇ ತೀರದಲ್ಲಿ ನಿಂತರೂ ನಮಗೆ ಮೇಲ್ನೋಟಕ್ಕೆ ಅದೇ ಉಪ್ಪು ನೀರು, ಮರಳು, ತೆರೆಗಳು ಕಾಣುತ್ತವೆ. ಆದರೆ ಕಡಲು ಓದಿದ ಬೆಸ್ತರಿಗೆ ಪ್ರತಿ ತೀರವೂ ಬೇರೆ ಬೇರೆ ಗುಣ ವಿಶೇಷ ಸಾರುತ್ತದೆ ! ಓದಿದ ನಾವು ನೆಲ ನೋಡಿ ಓದುವಲ್ಲಿ ಸೋತಿದ್ದೇವೆ. ವಿಚಿತ್ರ ನೋಡಿ ನಮಗೆ ಹೊಸದು ಬಂದಿದ್ದು ಸಮುದ್ರದಿಂದ ! ಶತಮಾನಗಳ ಹಿಂದೆ ಗ್ರೀಕ್, ಅರಬ್, ಪೋರ್ಚುಗೀಸ್, ಇಂಗ್ಲೀಷ್ ಮುಂತಾಗಿ ವಿದೇಶಿ ಪ್ರವಾಸಿಗರು ಹೊಸ ಹೊಸ ಸಂಗತಿ ತಂದರು ಎನ್ನುತ್ತೇವೆ. ಧರ್ಮಪ್ರಚಾರಕರು, ವ್ಯಾಪಾರಿಗಳು, ಸೈನಿಕರು, ಕಡಲುಗಳ್ಳರು ಈ ನೀರುದಾರಿ ಬಳಸಿ ಬಂದವರು. ಆಗಮನದ ಹೊಸ ಹೊಸ ಸಂಗತಿಗಳಿಗೆ ನೆಲ, ಜನ ತೆರೆದುಕೊಂಡಿನ. ಭಾಷೆ, ವಿದ್ಯೆಯ ಪರಿಣಿತಿ ದೊರಕಿದೆ.

ಎಲ್ಲ ಸರಿ, ಹೊಸ ಹೊಸತು ಬಂದ ಮಾತ್ರಕ್ಕೆ ಹಳೆಯದನ್ನು ಮರೆಯಲಾದೀತೆ ? ಅತ್ಯಂತ ಕಡಿಮೆ ಬಂಡವಾಳ ಬಯಸುವ ಮೀನುಗಾರಿಕಾ ವೃತ್ತಿಯಲ್ಲಿ ಇಷ್ಟು ಕಾಲ ಪರಂಪರೆಯ ಜ್ಞಾನವೇ ಬದುಕು. ಆದರೆ ಈಗ ಪ್ರವಾಸೋದ್ಯಮ, ಯಾಂತ್ರೀಕರಣದ ಬಿರುಗಾಳಿ ತುಫಾನು ಮೀರಿದ ದುಃಸ್ವಪ್ನವಾಗಿದೆ. ವಿವಿಧ ಯೋಜನೆಗಳ ಅಬ್ಬರ ಸಮುದ್ರ ಮಥನದ

ಹುಚ್ಚೇರುತ್ತಿದೆ. ಜೈವಿಕ ಸಂಪನ್ಮೂಲಗಳ ಸತತ ಹುಡುಕಾಟದಲ್ಲಿ ಬಾಚಿಕೊಳ್ಳಲು ಬಲೆಗಳಿವೆ, ಚಿಕ್ಕ ಮೀನೂ ತಪ್ಪಿ ಹೋಗದ ಹಾಗೇ ಬಲೆಗಳು ನೀರು ಸೋಸುವ ಸಾಧನವಾಗಿದೆ !. ಮತ್ಸ್ಯ ಕ್ಷಾಮದಲ್ಲಿ ಸಾಗರ ಬಾಣಂತಿಯಂತೆ ಬಳಲಿದೆ.

**ಜೇನಿನ ರುಚಿಯಲ್ಲಿ ಸಸ್ಯ ಜ್ಞಾನ**

ಜೇನು ತುಪ್ಪ ಎಂದರೆ ಇಂದಿನ ಮಕ್ಕಳು 'ಡಾಬರ್ ಹನಿ' ಎಂದು ಹೇಳಬಹುದು. ಹಳ್ಳಿಗಾಡಿನ ಹಿರಿಯರು ಹೆಜ್ಜೇನು ತುಪ್ಪ, ತುಡವಿ, ವಟ್ಟೆರುಮ್ಮ, ಕೋಲುಜೇನು, ಬಳ್ಳಿಜೇನು, ಮಿಸರಿ ಎಂದು ವಿಭಾಗಿಸುತ್ತಾರೆ. ಜೇನು ನಾಲಿಗೆ ಸೇರಿದ ತಕ್ಷಣ ಇದು ಸಿಂಗಾರ ಹೂವು, ಮತ್ತಿ ಹೂವು, ಸೀಗೆ ಹೂವು, ನೇರಲ ಹೂವು, ಗುರಿಗೆ ಹೂ, ಹುಲ್ಲು ಹೂವಿನ ತುಪ್ಪವೆಂದು ತಟ್ಟನೆ ಹೇಳಬಲ್ಲರು. ಇಲ್ಲಿ ಬಳಸಿ ಬಲ್ಲವರಿಗೆ ಜೇನಿನ ರುಚಿಯಲ್ಲಿ ಗಿಡ ಮರದ ಹೂವಿನ ಸುಳಿವು ಕಾಣುತ್ತಿದೆ. ಇನ್ನು, ಆಳಕ್ಕೆ ಹೋದರೆ ಕಾಡು ಮರದಲ್ಲಿ ಯಾವಾಗ ಹೂ ಅರಳುತ್ತದೆ, ಎಂತಹ ವಾತಾವರಣವಿದ್ದರೆ ಹೂ ಜಾಸ್ತಿ ಎಂಬ ಜ್ಞಾನವೂ ಇದೆ. ಉತ್ತರ ಕನ್ನಡದ ಯಲ್ಲಾಪುರದ ಪ್ರದೇಶದಲ್ಲಿ ಫೆಬ್ರುವರಿ – ಮಾರ್ಚ್‌ದಲ್ಲಿ ಒಂದೆರಡು ಮಳೆ ಸುರಿದರೆ ಮತ್ತಿ ಹೂವು ಜಾಸ್ತಿ ಅರಳುತ್ತದೆ ಎನ್ನುತ್ತಾರೆ. ಇಲ್ಲಿನ ಮರ್ಲನೆಯ ಶೀನಾ ಸಿದ್ಧಿ ಎಂಬವರು ಕಾಡಿನ ಜೇನು ಬೇಸಿಗೆಯ ಯಾವ ತಿಂಗಳಲ್ಲಿ ಎಲ್ಲಿ ಎಲ್ಲಿ ವಲಸೆ ಹೋಗುತ್ತದೆ, ಯಾವಜಾತಿಯ ಹೂವು ಆ ಕಾಡಿನಲ್ಲಿ ಆಗ ಸಿಗುತ್ತದೆ ಎಂಬುದನ್ನು ಅರಿತವರು. ಇದರ ಆಧಾರದಲ್ಲಿ ಯಾವಾಗ ಜೇನು ತೆಗೆದರೆ ತುಪ್ಪ ಜಾಸ್ತಿ ದೊರೆಯುತ್ತದೆ ಎಂದು ಹೇಳಬಲ್ಲರು.

# ಹಸುರು ನೋಟ್‌ಬುಕ್‌ನ ಹಳೆಯ ಪುಟಗಳು

ಆಡುವ ಮಕ್ಕಳು ಕಾಡು ತಿರುಗಿದ್ದು ಹಳೆಯ ಕತೆ. ಆಗ ಮರ, ಗಿಡ, ಹೂ, ಹಣ್ಣುಗಳು ಮಾತಾಡುತ್ತ ಅನುಭವ ಪಾಠ ಹೇಳುತ್ತಿದ್ದವು. ದೇಸೀ ಜ್ಞಾನದ ದಿವ್ಯದರ್ಶನ. ಈಗ ಮರ, ಗಿಡಗಳ ಮಾತು ಕೇಳುವ ಪುರಸೊತ್ತ ಯಾರಿಗೂ ಇಲ್ಲ. ಓದುವವರಿಲ್ಲದೇ ಹಳ್ಳಿಗಾಡಿನ ಹಸರು ಪುಟಗಳು ಹರಿದು ಹೋಗುತ್ತಿವೆ.


ಹಳ್ಳಿಗಾಡಿನ ಮಣ್ಣಿನ ಅನುಭವದಲ್ಲಿ ಬೆಳೆದ ಮನಸ್ಸನ್ನೊಮ್ಮೆ ಅಕ್ಕರ ಯಲ್ಲಿ ನೇವರಿಸಿ ಮಾತಾಡಿಸಬೇಕು, ಇವತ್ತಿಗೂ ತಾಜಾ ಚೆಂದದ ನೆನಪು ಗಳ ಬುತ್ತಿಯಿದೆ. ಕಾಲದ ಮಕ್ಕಳು ಹೈಯರ್‌ಪ್ರೈಮರಿ ಸ್ಕೂಲ್‌ಗೆ ಹೋದ ದಿನಗಳಲ್ಲಿ ಮನೆಯಿಂದ ಶಾಲೆಗೆಂದು ನೇರ ಮಾರ್ಗ ಬಳಸಿದ್ದು ಅನುಮಾನ. ಅಡ್ಡಾದಿಡ್ಡಿ ಹೋಗುವದೇ ಹುಟ್ಟುಗುಣ. ಗುಡ್ಡ ಬೆಟ್ಟ, ಹೊಳೆಹಳ್ಳ, ತೋಟ ಗದ್ದೆ ಸುತ್ತಿ ಸಾಗುವ ಅಸಡಾಬಸಡಾ ಕಾಲುದಾರಿ, ಅದು ಊರಿನ ನೆಲ, ಮಳೆ, ಕಾಡು, ಕೃಷಿ ಓದುವ ಪಾಠ್ಯ. ಹಿರಿಯಣ್ಣಂದಿರು ಕಾಡು ಅಲೆದಾಡಿಸಿ ಹಣ್ಣು ಹಂಪಲು ಹುಡುಕಿ ರುಚಿ ಹತ್ತಿಸುವ ದಿಗ್‌ದರ್ಶಕರು.

ಬಿಳೆಮುಳ್ಳೆ ಹಣ್ಣು, ಪರಿಗೆ ಹಣ್ಣು, ಸಂಪಿಗೆ ಹಣ್ಣು, ಹಲಗೆ ಹಣ್ಣು, ನೇರಳೆ, ಹುಳಿ ಮಜ್ಜಿಗೆ, ಬಿಕ್ಕೆ, ತೂಬರು, ನುರುಕಲು, ಈಚಲು, ಗಿಳ್ಳಾಗಡ್ಡೆ, ನೆಲ್ಲಿ ಕಾಯಿ, ಗುಡ್ಡೇಗೇರು, ಹೊಳೆದಾಸವಾಳ, ಚೆಳ್ಳೆ, ಮುರುಗಲು, ಕೌಳಿ, ಅಂಡಿ, ಮಾವಿನ ಕಾಯಿ ಹೀಗೆ ಕಾಡು ಮಕ್ಕಳ ಪಾಲಿಗೆ 'ಸಹಜ ಹಣ್ಣಿನ ತೋಟ' !. ಎಳೆಯ ನಾಲಗೆ ರುಚಿ ಹತ್ತಿಸಿದ ಫಲಗಳು ಹಲವಾರು. ಮನೆಯಿಂದ ಹೊರಟರೆ ಉದ್ದಕ್ಕೂ ಮೇಷ್ಟ್ರು ಪಾಠಕ್ಕೆ ಮಿಗಿಲಾದ ಪ್ರಯೋಗಶಾಲೆ. ಎಲ್ಲ ಮಕ್ಕಳದೂ ಒಂದೇ ಸೂತ್ರ, ಕಾಡು ನಂಬಿದ ಕೋತಿ ಪಾತ್ರ.



ಕಾಡು ತೊಂಡೆ– ಎಳೆ ಮಕ್ಕಳ ಅಕ್ಕರೆಯ ಫಲ


ಹಣ್ಣು ಬಿಡುವ ಪ್ರಾಯಕ್ಕೆ ತಕ್ಕಂತೆ ಅಷ್ಟಷ್ಟು ದಿನಕ್ಕೆ ಪಕ್ಕನೆ ನಮ್ಮ ದಾರಿ ಬದಲು. ಇಂದು ಶಾಲೆಗೆ ಹೋಗಬೇಕು ಎಂಬ ಸಂಕಲ್ಪಕ್ಕಿಂತ ನೆಲ್ಲಿ ಮರಕ್ಕೆ ಹೋಗಿ ಹೋಗಬೇಕೋ ? ಗುಡ್ಡೆಗೇರು ಮರಕ್ಕೆ ಹೋಗಿ ಶಾಲೆಗೆ ಹೋಗಬೇಕೋ ? ಎಂಬ ಆಯ್ಕೆಗೆ ಅಷ್ಟೇ ಗಮನ. ಪರೀಕ್ಷೆ, ಹಿರಿಯರ ಬೈಗುಳ, ಮೇಷ್ಟ್ರು ಬೆತ್ತದ ರುಚಿ ಅನುಭವಿಸಿಯೂ ಮರಗಳತ್ತ ಓಡಲು ಫಲ ರುಚಿಯ ಮಾಂತ್ರಿಕ ಶಕ್ತಿ ಮಹತ್ತದ್ದು. ಕಾಡು ಫಲದ ಸುತ್ತ ಬಾಲ್ಯದ ಪರಿಕ್ರಮಣ. ರಜಾ ದಿನಗಳಲ್ಲಿ ಬಹುತೇಕ ಮಕ್ಕಳ್ಳು ಪಾರ್ಟ್ ಟೈಮ್ ದನಗಾಹಿಗಳು. ಮೋಟು ಕತ್ತಿ ಹಿಡಿದು ಗಿಡ ಟೊಂಗೆ ಕಡಿಯುವ ಉಮೇದಿ, ಮರವೇರುವ ಸಾಹಸ, ಬರಿಗಾಲ ಪಯಣಿಗರ ಕಾಲು ಸದಾ ಕೀವು, ಕಜ್ಜಿಯ ಅಕ್ಷಯ ಪಾತ್ರೆ, ಕಾಲಿಗೆ ಗಾಯವಾದರೆ ಹುನಾಲು (ಕಿಂದಳ) ಎಲೆಯ ಹಿಂಭಾಗದ ಅಂಟಿನಂತಹ ಹರಿತ್ತಿನ ಮೇಲ್ಪದರ ತೆಗೆದು ಅಂಟಿಸುವದು, ರಕ್ತ ಒಸರಿದರೆ ಉರಾಳ ಸೊಪ್ಪಿನ ರಸ ಹಚ್ಚುವದು, ತೆಂಗಿನ ಗಿಡದ ಹಡೆಯ ಹಿಂಭಾಗದ ಬೂದು ಚುಂಗು ತೆಗೆದು ಗಾಯಕ್ಕೆ ಒತ್ತುವದೇ ಬೆಸ್ಟ್‌ಬ್ಯಾಂಡ್ ಏಯ್ಡ್ ! ಕೊಬ್ಬಿದ ಹೋರಿಗಳನ್ನು ಲಡಾಯಿಗೆ ಬಿಟ್ಟು ಕಾದಾಟದಲ್ಲಿ ಚೆಂದ ನೋಡುವದು, ನದಿ ದಂಡೆಯಲ್ಲಿ ಜಾನುವಾರುಗಳನ್ನು ಜಮಾಯಿಸಿ ಈಜು ಸ್ಪರ್ಧೆಯಲ್ಲಿ ಮೈಮರೆಯುವದು ಮಾಮೂಲಿ ದಿನಚರಿ. ಈ ಸಂದರ್ಭಕ್ಕೆ ಕಳ್ಳದನಗಳು ದಿಕ್ಪಾಪಾಲು. ಯಾವ ದನಕರು ಯಾರ ತೋಟ, ಹಲ್ಲುಗಾವಲಿಗೆ ನುಗ್ಗಿರಬಹುದೆಂದು ದನಕರುಗಳ ಗುಣಸ್ವಭಾವದಲ್ಲಿ ಅಂದಾಜು ಗ್ರಹಿಸಿ ಹುಡುಕಾಟ. ಖುಷಿ, ಒತ್ತಡ, ಜಗಳ, ಸುಳ್ಳು, ಮೋಸ, ಬೈಗುಳ, ಕಾದಾಟ, ಕುಸ್ತಿ, ಅಳು, ಕುಣಿತ, ಹಾಡುಗಳ ವಿಭಿನ್ನ ಅನುಭವಗಳ ಮಿಶ್ರಣದಲ್ಲಿ ಬಾಲ್ಯದ ಬೆರಗು. ಇವುಗಳ ಮಧ್ಯೆ ಅಕ್ಷರದ ಕಲಿಕೆ. ಶಾಲೆ ಓದು, ನೋಟ್ ಬುಕ್‌ನ ಕಂಠಪಾಠಕ್ಕಿಂತ ಹಳ್ಳಿ ಬದುಕಿನಲ್ಲಿ ನೋಡಿ ಕಲಿತ ಪರಿಸರ ಪಾಠ ದೊಡ್ಡದು.



ನದಿ, ಕಾಡು ನೋಡಿ ಕಲಿತ ಪಾಠ ಸದಾ ನೆನಪಿರುತ್ತದೆ

ನೇರಳೆ ಹಣ್ಣು ತಿಂದರೆ ಬಾಯೆಲ್ಲ ನೀಲಿ, ಹಣ್ಣು ತಿಂದು ಶಾಲೆಗೆ ಹೋದರೆ ಮೇಷ್ಟ್ರ ಕೆಂಗಣ್ಣು, ಬಾಯಿ ತೊಳೆಯಲು ಕಾಡಲ್ಲಿ ನೀರಿಲ್ಲ. ನೇರಳೆ ತಿಂದು ಮುರುಗಲು ಎಲೆ ತಿಂದರೆ ತಕ್ಷಣ ನಾಲಗೆ ಸ್ವಚ್ಛ ಎಂಬ ಸರಳ ನಾಟಿ ಜ್ಞಾನ್ಕ !. ಸಂಪಿಗೆ ಮರವೇರುವಾಗ ಮುಳ್ಳಿನ ಸೂಜಿ ಚಿಕಿತ್ಸೆ, ಗುಡ್ಡೇಗೇರು ಮರವೇರುವಾಗ ಅದರಲ್ಲಿನ ವಿಚಿತ್ರ ಕೀಟ ಮೈತಾಗಿಸಿಕೊಂಡರೆ ಕ್ಷಣಾರ್ಧದಲ್ಲಿ ಮೈಯಲ್ಲಿ ಗುಳ್ಳೆ ಏಳುವ ಭಯ, ಬಿಕ್ಕೆಕಾಯಿ ಕೊಯ್ದು ಕುಮುಸಲು ಹಿಂಡಿನಲ್ಲಿ ಅಡಗಿಸಿಟ್ಟು ಹಣ್ಣಾದಂತೆ ಆಗಾಗ ಹುಡುಕಿ ತಿನ್ನುವ ಕುತೋಹಲ. ನೆಲ್ಲಿಕಾಯಿ ತಿಂದು ನೀರು ಕುಡಿದರೆ ಸವಿ ಸವಿ. ಯಾವ ಮರದ ಕಾಯಿ ಒಗರು, ಯಾವುದು ಕೆಟ್ಟ ಒಗರು, ಯಾವುದು ಸಿಹಿಹುಳಿ ಮಿಶ್ರಿತ ವಿಶಿಷ್ಟ ರುಚಿ ಇರುತ್ತದೆಂಬುದು ವಾರಿಗೆ ಗೆಳೆಯರ ಉಪದೇಶ. ಸವಿದ ನಾಲಿಗೆಗೆ ನೆನಪಿನ ಗಂಟು. ನೀರಿಗೆ ಸೂಜಿ ಮೆಣಸು, ಉಪ್ಪು ಹಾಕಿ ಗಡಿಗೆಯಲ್ಲಿ ವಾರಗಟ್ಟಲೆ ನೆನೆಹಾಕಿದ ನೆಲ್ಲಿ ಕಾಯಿಗೆ ವಿಶೇಷ ರುಚಿ, ಆಡುವ ಮಕ್ಕಳ ಕೈಯಲ್ಲಿ ಕಾಡು ಫಲದ ಮೌಲ್ಯವರ್ಧನೆ. ಮಳೆಗಾಲದಲ್ಲಿ ಇಂಬಳ ಕಾಲಿಗೆ ಕಚ್ಚಿ ರಕ್ತ ಸುರಿಯುತ್ತಿದ್ದರೆ ತಂಬಾಕು, ಸುಣ್ಣ ಲೇಪನ, ಬಟ್ಟೆಯಲ್ಲಿ ಗಂಟು ಕಟ್ಟಿದ ಉಪ್ಪಿನ ಚುಟ್ಟಿ ಹಿಡಿದು ಇಂಬಳ ಓಡಿಸುವ ವಿದ್ಯೆ ಸಲೀಸು.

ಉರಿ ಬಿಸಿಲಲ್ಲಿ ಶಾಲೆಗೆ ಹೋಗುತ್ತಿದ್ದವರ ಕಿಸೆಯಲ್ಲಿ ನೆಲ್ಲಿಕಾಯಿ ಕಾಯಂ ಸರಕು. ಒಮ್ಮೆ ಟೇಬಲ್ ಕೆಳಗೆ ಬಿದ್ದ ಪೆನ್ನು ಎತ್ತಿ ಕೊಡಲು ಮೇಷ್ಟ್ರು ಆದೇಶ, ತಟ್ಟನೆ ಎದ್ದು ಪೆನ್ನು ಹೆಕ್ಕಲು ಬಾಗಿಯೇ ಬಿಟ್ಟೆ ! ಕಿಸೆಯೊಳಗೆ ಬಚ್ಚಿಟ್ಟು ಹತ್ತಾರು ನೆಲ್ಲಿಕಾಯಿಗಳೆಲ್ಲ ಮೇಷ್ಟ್ರು ಎದುರು ಗೋಲಿಗಳಾಗಿ ಉರುಳಿದವು. ಅಸ್ತ್ರಗಳನ್ನೆಲ್ಲ ಎದುರಿಟ್ಟು ಶರಣಾದ ಕೈದಿಯ ಹಾಗೇ ತಲೆ ತಗ್ಗಿಸಿದೆ. ಮಕ್ಕಳೆಲ್ಲ ನಕ್ಕರು, ಸಂದರ್ಭ ಬಳಸಿ ಬೇಕಾದವರು ನೆಲ್ಲಿಕಾಯಿಗಳನ್ನು ಲಪಟಾಯಿಸಿದರು ! 'ನೆಲ್ಲಿ ಕಾಯಿ ತಿಂದು ನಿಮಗೆ ಈಗ ಪಿತ್ತ ನೆತ್ತಿಗೇರಿದೆ' ಇಂಚು ಪಟ್ಟಿ ಎತ್ತಿ ಗದರಿಸುವ ಮೇಷ್ಟ್ರು.. ಹೋಗಿ ಹೋಗಿ 'ನೆಲ್ಲಿ ಕಾಯಿ ವಿಚಾರದಲ್ಲಿ ಮೇಷ್ಟ್ರಿಗೆ ಏಕೆ ಇಷ್ಟು ಸಿಟ್ಟು ?' ಯೋಚಿಸುತ್ತಿದ್ದೆ. ಸದಾ ಕವಳ ಹಾಕುವ ಬಾಯಿಗೆ ನೆಲ್ಲಿ ವರ್ಜ್ಯ, ಹಲ್ಲುಹುಳಿ ಏರಿ ಅಡಿಕೆ ಹೋಳು ಕತ್ತರಿಸಲಾಗದು ಎಂಬ ಸ್ವಾನುಭವವೇ ಮೇಷ್ಟ್ರ ಸಿಟ್ಟಿನ ಮೂಲ ಎಂದು ಕೊನೆಗೊಮ್ಮೆ ಪತ್ತೆಯಾಯ್ತು. 'ನೆಲ್ಲಿ ಮೇಷ್ಟ್ರಿಗೆ ಇಷ್ಟ, ಕವಳದ ಬಾಯಿಗೆ ಕಷ್ಟ' ಎಂಬ ಪ್ರಯೋಗ ಪಾಠವಿಲ್ಲದೇ ಸಾಬೀತು.



ಬೆಟ್ಟದ ನೆಲ್ಲಿ

ಬಾಯಾರಿಕೆ, ಹನಿ ನೀರೂ ಇಲ್ಲ, ಮಕ್ಕಳ ದಾಹಕ್ಕೆ ಎಲ್ಲಿ ಪರಿಹಾರ ? ಕುಮುಸಲು ಬಳ್ಳಿ ಕಡಿದು ನೀರು ಕುಡಿಯಬಹುದು, ಮತ್ತಿಮರದ ಗಂಟು ಕೆತ್ತಿ ಮರ ಶೇಖರಿಸಿದ ನೀರು ಹೀರಬಹುದು. ಆದರೆ ಕೈಯಲ್ಲಿ ಕತ್ತಿ ಇಲ್ಲ. ಕಾಡಿಗೆ ಬೆಂಕಿ ತಗಲಿದ ಬಳಿಕ ಚಿಗುರಿದ ನುರುಕಲು ಗಿಡದ ಚಿಗುರು ದಂಟು ಮುರಿದು ಸಿಪ್ಪೆ ಸುಲಿದು ತಿಂದರೆ ಬಾಯಾರಿಕೆ ಮಂಗಮಾಯ, ಮಕ್ಕಳಿಗಾಗಿ ಪರ್ಯಾಯ ಉಪಾಯ !. ಈಚಲು, ಬಿಕ್ಕೆ, ಕೌಳಿ, ಮುಳ್ಳೆ ಹಣ್ಣು ಅರಣ್ಯ ದಟ್ಟನೆ ಇಲ್ಲದ ಗುಡ್ಡಗಳಲ್ಲಿ ದೊರೆಯುತ್ತದೆ. ಸಂಪಿಗೆ, ಉಪ್ಪಾಗೆ, ಹಲಗೆ ಹಣ್ಣು, ರಂಜಲು ಹಣ್ಣ ನಿತ್ಯಹರಿದ್ವರ್ಣ ಕಾಡಿನಲ್ಲಿರುತ್ತದೆ. ಹೊಳೆ ದಂಡೆಯಲ್ಲಿ ದಾಸವಾಳದ ಹಣ್ಣು, ಕುಂಟು ನೇರಳ, ಅಪ್ಪೆಮಾವು ದೊರೆಯುತ್ತದೆ ಎಂಬುದು ಎರಡನೇ ಕ್ಲಾಸಿನ ಪಾಠ ಓದಿಗಿಂತ ಮುಂಚೆಯೇ ಕಲಿತ ಸಂಗತಿಗಳು. ಯಾವ ಕಾಲಕ್ಕೆ ಯಾವ ಹಣ್ಣು ಬಿಡುತ್ತದೆಂಬ ನಿಖರ ಲೆಕ್ಕದಲ್ಲಿ ಶಾಲೆಗೆ ದಾರಿ ನಿರ್ಧಾರ.

ಊರಿನ ಕಾಡಿನ ಹಸುರು ಪುಟ ಓದಿ ಬೆಳೆದವರಿಗೆಲ್ಲ ಬಾಳಿನ ಸಿಹಿ – ಕಹಿ ಗ್ರಹಿಸಿ ಬೆಳೆವ ಅದ್ಭುತ ಶಕ್ತಿ. ಒತ್ತಡಗಳಿಗೆ ಅಂಜದ ಜೀವ. ನೆಲದ ಸತ್ವ ಹೀರಿ ಮಾಗಿದ ಮನಸ್ಸು. ಈಗ ಶಾಲೆಗೆ ನೇರ ಸರಕಾರಿ ದಾರಿ. ಸೀದಾ ಹೋಗಿ ಬರೋದು ಈಗಿನ ಮಕ್ಕಳ ಕಾಲುಗುಣ. ಕಾಲು ದಾರಿಯ

ಪರಿಕಲ್ಪನೆಯೇ ನಂಬದ ಹಾಗೇ ಅಡ್ಡಡ್ಡ ಅಗಳ, ಬೇಲಿ. ಕಾಡು ನೆಲದ ತುಂಬ ನೆಡುತೋಪಿನ ಮೊನೋಕಲ್ಚರ್ ಅಸ್ತ್ರ, ಶಾಲಾ ಮಕ್ಕಳ ಸಮವಸ್ತ್ರದ ಹಾಗೇ ನೆಲಕ್ಕೆ ಅಕೇಸಿಯಾ, ಗಾಳಿ, ಸಿಲ್ವರ್ ಓಕ್, ನೀಲಗಿರಿಯ ಹಸುರು ಉಡುಗೆ !. ಎ' ಗ್ರೇಡ್, ಬಿ' ಗ್ರೇಡ್ ಎಂದು ಪರೀಕ್ಷೆ ಪೈಪೋಟಿಗೆ ಓಡುವ ಮಕ್ಕಳಿಗೆ ಮಣ್ಣು ತಾಗದ ಹಾಗೇ ಶೂ !. ಚಾಕಲೇಟ್, ಬಿಸ್ಕಿಟ್‌ಗಳ ಫ್ಯಾಕ್ಟರಿ ರುಚಿಯ ಹೈಬ್ರೀಡ್ ಬೆಳೆ, ಕಲಿಯುವ ಹುಡುಗರು ಕಾಡು ಸುತ್ತುವ ಕಾಲ ಈಗಿಲ್ಲ, ಕಾಡಲ್ಲಿ ಕಲಿಯುವದಿದೆ ಎಂಬುದನ್ನು ಮರೆತವರು ಜಾಸ್ತಿ. ಈಗ ಓದುವವರಿಲ್ಲದೇ ಹಳ್ಳಿಗಾಡಿನ ಹಸುರು ಪುಟಗಳು ಹರಿದು ಹೋಗುತ್ತಿವೆ. ನಾಟಿ ಜ್ಞಾನದ ಅರ್ಥ ಹುಡುಕಲು ನೆರವಾಗುತ್ತಿದ್ದ ಊರಿನ ಡಿಕ್ಷನರಿಗಳೂ ಕಾಣೆಯಾಗುತ್ತಿವೆ.

### ನೆಲ್ಲಿ ದಂಟಿನಲ್ಲಿ ಭ್ರೂಣ ಪರೀಕ್ಷೆ !

ಈಗ ಮೂರು ದಶಕದ ಹಿಂದೆ ಗರ್ಭಿಣಿಯರೆದುರು ಲಿಂಗ ಪತ್ತೆಯ ಆಟ ಮನೆ ಮನೆಯಲ್ಲಿ ನಡೆಯುತ್ತಿತ್ತು. ಬೆಟ್ಟದ ನೆಲ್ಲಿ ಗೆಲ್ಲುಗಳಲ್ಲಿ ಕಾಣುವ ಪುಟ್ಟ ಗಂಟು ಹಳ್ಳಿ ಮಕ್ಕಳ ಸ್ಕ್ಯಾನಿಂಗ್ ಯಂತ್ರ ! ನೆಲ್ಲಿ ಟೊಂಗೆ ಮುರಿದು ಅದರ ಗಂಟಿನ ಭಾಗ ಒಡೆಯುತ್ತಿದ್ದರು, ಅದರ ಒಳಗಡೆ ಹುಳು ಇರುತ್ತಿತ್ತು. ಹುಳುವಿನ ಬಣ್ಣ ಕಪ್ಪಾಗಿದ್ದರೆ ಹೆಣ್ಣು, ಬಿಳಿಯಿದ್ದರೆ ಗಂಡು ಮಗುರು ಜನನವೆದೆಂದು ಲೆಕ್ಕ ಹಾಕುತ್ತಿದ್ದರು. ಎಳೆ ಚಿಗುರಿನಲ್ಲಿ ತತ್ತಿ ಇಟ್ಟು ಟೊಂಗೆ ಬಲಿಯುತ್ತಿದ್ದಂತೆ ಗಿಡ ಕ್ಯಾನ್ಸರ್ ಗಂಟು ಮೂಡುವದು, ಲಾರ್ವಾಗಳಿಗೆ ತಿರುಳು ಆಹಾರ', ರಕ್ಷಣೆಗೆ ಗಂಟು ಸಹಾಯಕ, ಇದು ಕೀಟ ವಿಸ್ಮಯ. ನೆಲ್ಲಿ ದಂಟಿನ ಗಂಟೊಳಗಿನ ಹುಳು ಗಮನಿಸಿ ಗರ್ಭ ರಹಸ್ಯ ಹೇಳುವ ಲಾಗಾಯ್ತಿನ ವಿಧಾನದಲ್ಲಿ ಭವಿಷ್ಯ ಹೇಳುವ ವಿಶ್ವಾಸಕ್ಕಿಂತ ತವರಿಗೆ ಬಂದ ಬಸುರಿಯರನ್ನು ಗೋಳು ಹೊಯ್ದುಕೊಳ್ಳುವ ತಮಾಷೆಯಿತ್ತು.

# ಮಣ್ಣಿನ ವಿದ್ಯೆಯ ಬೀಜ ಮಾತು

ಕ್ರಿ. ಶ, ೧೯೨೮ರಲ್ಲಿ ಮಾವಿನ ಒರಟೆ, ಹಲಸಿನ ಬೀಜಗಳನ್ನು ಕಾಡಿನಲ್ಲಿ ನೆಡುತ್ತಿದ್ದ ದಾಖಲೆ ಕರಾವಳಿಯಲ್ಲಿದೆ. ಜೂನ್ – ಜುಲೈದಲ್ಲಿ ಕಾಡಿನ ಭೂಮಿಯಲ್ಲಿ ಬೀಜ ನೆಡುವ ಕಾಯಕದಲ್ಲಿ ಊರವರೆಲ್ಲ ಭಾಗವಹಿಸುತ್ತಿದ್ದರು. ಕುಮಸಲು, ನೆಲ ಗೊಣಗಲು ಹಿಂಡಿನಲ್ಲಿ ಮಾವು, ಹಲಸಿನ ಬೀಜ ಹಾಕುವದು, ಸುಟ್ಟ ಮರದ ಬುಡ, ಮಣ್ಣಿನ ಏರಿ, ಹೊಳೆ ದಂಡೆಗಳಲ್ಲಿ ಇತ್ತು. ಸಸಿಗಳನ್ನು ಸಾಲಿನ ಶಿಸ್ತಿನಲ್ಲಿ ಬೆಳೆಸಬೇಕು ಎನ್ನುವದಕ್ಕಿಂತ ಸಸಿ ಬದುಕುವ ಜಾಗದಲ್ಲಿ ನೆಡಬೇಕು ಎಂಬುದು ಆಗಿನ ಮುಖ್ಯ ತತ್ವವಾಗಿತ್ತು.

ಮಾವಿನ ಒ(ಗೊ)ರಟೆ ಸಸಿ ಎಷ್ಟು ವರ್ಷಕ್ಕೆ ಫಲ ಬಿಡ್ತದೆ? 'ಈಗ ನಾಟಿ ಮಾಡಿದ್ರೆ ಅಂತೂ ನಾವು ಸಾಯೋದ್ರೆಳಗೆ ಫಲ ಸಿಗಬಹುದು .... ! ೧೦ – ೧೫ ವರ್ಷವಾದ್ರೂ ಬೇಕು' ಮಾಮೂಲಿ ಉತ್ತರ. 'ಕಸಿಗಿಡದಲ್ಲಿ ೨-೩ ವರ್ಷಕ್ಕೆ ಫಲ ಸಿಗ್ತದೆ!' ಎಂದು ದಿಢೀರ್ ಫಸಲಿನ ಹಿಂದೆ ನಾವು ಓಡಿದ್ದೇವೆ. ಹೆಚ್ಚುಕಡಿಮೆ ೩ ದಶಕಗಳಿಂದ ಕಸಿಯನ್ನು ಕೃಷಿಯಲ್ಲಿ ಅಪ್ಪಿಕೊಂಡು ಗೆದ್ದಿದ್ದೇವೆ. ಮರದ ತದ್ರೂಪಿ ಫಲಗುಣ ಬೇಕು, ಬೇಗ ಹಣ್ಣು ದೊರೆಯಬೆಕು, ಇದಕ್ಕೆ ಕಸಿ ಗಿಡಕ್ಕಿಂತ ಪರ್ಯಾಯ ದಾರಿಯಿಲ್ಲ. ಸಾರಾ ಸಗಟಾಗಿ ಈಗ ಮಾವು, ಹಲಸುಗಳಲ್ಲಿ 'ಕಸಿ' ಮಾತ್ರ ನೆಡುತ್ತಿದ್ದೇವೆ. 'ಅಪ್ಪೆ ಮಾವಿನ ತಳಿ ಸಂರಕ್ಷಣೆಯೆಂದು ಕಸಿ ಗಿಡ ನಾಟಿಗೆ ಹೊರಟರೆ ವೈವಿಧ್ಯಕ್ಕೆ ಧಕ್ಕೆ ಆಗ್ತದೆ, ಕಾಡು ಮಾವಿನ ಬೀಜದಿಂದ ಹೊಳೆ ದಂಡೆಯಲ್ಲಿ ನೈಸರ್ಗಿಕ ಪುನರುತ್ಪತ್ತಿಯಾಗಿ ಇಷ್ಟೊಂದು ತಳಿಗಳು ಬೆಳೆದಿವೆ. ಕಸಿ ಗಿಡ ಮಾತ್ರ ಬೆಳೆಸುತ್ತ ಹೋದರೆ ಕೆಲವು ಆಯ್ದ ಉತ್ತಮ ತಳಿಗಳ ಮೊನೋಕಲ್ಚರ್ ತೋಟಗಳು ಮಾತ್ರ ಉಳಿಯುತ್ತವೆ ! ಒರಟೆ ಸಸಿ ನೆಡಬೇಕು, ವೈವಿಧ್ಯತೆಗೆ ಅವಕಾಶ ನೀಡಬೇಕು' ಶಿವಮೊಗ್ಗ ಸಾಗರದಲ್ಲಿ ಮಿಡಿ ಮಾವು ಉತ್ಸವ ಸಂಘಟಿಸಿದ ಸಂದರ್ಭದಲ್ಲಿ ಹಲವರಲ್ಲಿ ಒರಟೆ ಗಿಡಗಳ ಪ್ರೀತಿ ಕಂಡಿದ್ದೇನೆ.

ಗುಂಡು ಕೆರಿಯಾ(೮೦) ನಮ್ಮ ಊರಿನ ಸನಿಹದ ಕೃಷಿಕ. ಇವರ ಮನೆ ಸುತ್ತ ನೂರಾರು ಮಾವು ಹಸಿರಾಡುತ್ತಿದ. ಮಳೆ ಆರಂಭಕ್ಕೆ ಹತ್ತಾರು ಮಾವಿನ ಒರಟೆ ಸಸಿ ಕಿತ್ತು ತಂದು 'ಇದು ತುಂಬಾ ಒಳ್ಳೆ ಜಾತಿ' ಎಂದು



ಒರಟೆ ಸಸಿಯ ಸುಲಭ ಫಲ

ಈ ವೃದ್ಧ ಸಸಿ ನೆಡಲು ಶಿಪಾರಸ್ಸು ಮಾಡುವದನ್ನು ಲಾಗಾಯ್ತಿನಿಂದ ಕೇಳುತ್ತಿದ್ದೇನೆ. ನರ್ಸರಿಗಳಲ್ಲಿ ೨೫–೩೦ ರೂಪಾಯಿಗೆ ಚೆಂದದ ಕಸಿ ಗಿಡ ಸಿಗುವ ಈ ಕಾಲದಲ್ಲಿ ಒ(ಗೊ)ರಟೆ ಸಸಿ ನೆಡುವವರಾರು? ನೆಲದಿಂದ ಕೀಳುವಾಗಲೇ ಬೇರಿಗೆ ಪೆಟ್ಟು ತಗಲಿದ ಅವು ಬದುಕುವದೂ ಗ್ಯಾರಂಟಿಯಿಲ್ಲ ! ಖುದ್ದು ಸಾಯುತ್ತೇನೆಂದು ಮಣ್ಣಿನ ಸಂಬಂಧ ಕಳಕೊಂಡ ಬೆತ್ತಲೆ ಬೇರಿನ ಗಿಡದ ಚಹರೆಯೇ ಹೇಳುವಾಗ ನೆಡುವ ಹುಮ್ಮಸ್ಸು ಬರುವದಿಲ್ಲ. ಇಷ್ಟೆಲ್ಲ ಒರಟೆ ಸಸಿ ನೀಡಿದ ಮಾವಿನ ನೆಂಟಿ ಗುಂಡು ಕೆರಿಯನಿಗೆ ಒಳ್ಳೆ ಕಸಿ ಗಿಡ ನೀಡೋಣವೆಂದು ಒಮ್ಮೆ ಮನೆಗೆ ಕರೆದಿದ್ದೆ. ಕಸಿ ಗಿಡ ನೆಡಲು ಆತ ಸುತಾರಾಂ ಒಪ್ಪಲಿಲ್ಲ, ಮತ್ತದೇ ಒರಟೆ ಸಸಿಗಳ ಗುಣಗಾನ ! ಮೊನ್ನೇ ಮೇ ಹೊತ್ತಿಗೆ ಗುಂಡಜ್ಜನ ಮಾವು ನೋಡಿದೆ. ಫಲ ತುಂಬಿ ನಗು, ನೂರಾರು ಗಿಡಗಳಲ್ಲಿ ಬಂದೇ ಒಂದು ಕಸಿ ಗಿಡಕ್ಕೆ ಜಾಗವಿಲ್ಲ. ಹಣ್ಣು ತಿಂದು ಜೋಪಾನ ವಾಗಿ ಒರಟೆಗಳನ್ನು ಗೊಬ್ಬರದ ಗುಂಡಿ, ಅಡಿಕೆ ಸೋಗೆ ತ್ಯಾಜ್ಯದಲ್ಲಿ ಅಡಗಿಸಿಡುವದು, ಮಳೆಯಲ್ಲಿ ಸಸಿ ನಾಟಿ ಮಾಡುವದು ಕೃಷಿ ಹವ್ಯಾಸ.

'ಮಳೆ ಬಿದ್ದಾಕ್ಷಣ ಹೊಸ ಮಣ್ಣಿನ ಅಗಳ, ಸುಟ್ಟ ಮರದ ಬುಡಗಳಲ್ಲಿ ಒರಟೆ ಹಾಕಬೇಕು ಮನೆಯಲ್ಲಿ ಸಸಿ ಬೆಳೆಸಿ ನೆಡುವುದಾದರೆ ಮೃಗಶಿರಾ ಮಳೆಯಲ್ಲಿ ನೆಡಬೇಕು, ಯಾವತ್ತೂ ಭೂಮಿಯಲ್ಲಿ ಎರೆ ಹುಳು ಮಣ್ಣು

ಒತ್ತುವುದರೊಳಗೆ ಸಸಿ ನಾಟಿ ಮಾಡುವದು ಕ್ಷೇಮ' ಗುಂಡಜ್ಜನ ಬೀಜ ಮಾತು. ಸೂಕ್ತ ಜಾಗ ಕಂಡಲ್ಲೆಲ್ಲ ೪೦ ವರ್ಷಗಳಿಂದ ಗಿಡ ನಾಟಿ, ಪ್ರತಿಫಲವಾಗಿ ೧೫ ವರ್ಷಗಳಿಂದ ಸಾಕಷ್ಟು ಹಣ್ಣು ದೊರೆಯುತ್ತಿದೆ. ಇರುವ ಜಾಗವನ್ನೆಲ್ಲ ಮಾವು ಆಕ್ರಮಿಸಿದೆ. ತೆರಕು, ಅಡಿಕೆ ಸೋಗೆ ಚೂರು ಬಿಟ್ಟರೆ ಬೇರೆ ಗೊಬ್ಬರವಿಲ್ಲ. ಗಿಡ ನಾಟಿಗೆ ಹೆಚ್ಚಿನ ಸಂದರ್ಭಗಳಲ್ಲಿ ಗುದ್ದಲಿ (ಸಲಿಕೆ) ಸಹ ಬಳಸಿಲ್ಲ ! ಚೂಪಾದ ಕೋಲಿನಿಂದ ಭೂಮಿಯಲ್ಲಿ ಬೇರು ಇಳಿಯುವಷ್ಟು ರಂಧ್ರ ಮಾಡಿ ಸಸಿ ಊರಿ ಕಾಲಿನಿಂದ ಮಣ್ಣು ಒತ್ತಲಾಗಿದೆ. ಸಸಿಗಳನ್ನು ಸಾಲಿನ ಶಿಸ್ತಿನಲ್ಲಿ ಬೆಳೆಸಬೇಕು ಎನ್ನುವದಕ್ಕಿಂತ ಸಸಿ ಬದುಕುವ ಜಾಗದಲ್ಲಿ ನೆಡಬೇಕು ಎಂಬುದು ಮುಖ್ಯ ತತ್ವ. ಮಳೆ ನೀರು ಬಿಟ್ಟರೆ ಬೇರೆ ನೀರಾವರಿ ವ್ಯವಸ್ಥೆ ಇಲ್ಲ. ೮೦ರ ಈ ಅಜ್ಜ ಹೇಳಿದ ಹಾಗೆ ಮಾವಿನ ಒರಟೆ ಮಾತು ಕೇಳುತ್ತಿರುವಂತಿದೆ.....ಇವರ ಮನೆ ಹಿತ್ತಲಿನ ಸೇವಂತಿಗೆ ಸಸಿಗಳ ನಡುವೆ ಬಿದ್ದು ಹುಟ್ಟಿದ ಒರಟೆ ಗಿಡ ಸಹ ಈ ವರ್ಷ ತನ್ನ ಎರಡನೇ ಬರ್ತ್‌ಡೇ ಹೊತ್ತಿಗೆ ಮೂರು ನಾಲ್ಕು ಕಾಯಿ ಬಿಟ್ಟಿದೆ !.

ಉತ್ತರ ಕನ್ನಡದ ಕುಮಟಾದ ಹಳಕಾರಿನಲ್ಲಿ ಅರಣ್ಯ ಪಂಚಾಯತ್ ವ್ಯವಸ್ಥೆ ಜಾರಿಯಲ್ಲಿದೆ. ಇಲ್ಲಿನ ಅರಣ್ಯ ಸಂರಕ್ಷಣೆ ೭೫ ವರ್ಷಗಳಿಂದ ಹಳ್ಳಿಗರ ನೇತ್ರತ್ವದಲ್ಲಿ ನಡೆಯುತ್ತಿದೆ. ೧೯೨೮ರಿಂದಲೂ ಇಲ್ಲಿ ಮಾವಿನ ಒರಟೆ, ಹಲಸಿನ ಬೀಜಗಳನ್ನು ಕಾಡಿನಲ್ಲಿ ನೆಡುತ್ತಿದ್ದ ದಾಖಲೆಯಿದೆ. ಜೂನ್-ಜುಲೈದಲ್ಲಿ ಕಾಡಿನ ಭೂಮಿಯಲ್ಲಿ ಬೀಜ ನೆಡುವ ಕಾಯಕದಲ್ಲಿ ಊರವರೆಲ್ಲ ಭಾಗವಹಿಸುತ್ತಿದ್ದರು. ಕುಮಸಲು (ಅಂಜೀರು, calycopteris floribinda lam)ನೆಲ ಗೊಣಗಲು ಹಿಂಡಿನಲ್ಲಿ ಗೇರು ಬೀಜ ಹಾಕುವದು, ಸುಟ್ಟ ಮರದ ಬುಡ, ಮಣ್ಣಿನ ಏರಿ, ಹೊಳೆ ದಂಡೆಗಳಲ್ಲಿ ಮಾವು, ಹಲಸಿನ ಬೀಜ ನಾಟಿಯಂತೂ ಮಲೆನಾಡಿನ ಹಳ್ಳಿಗಳಲ್ಲಿ ತೀರ ಈಚಿನವರೆಗೂ ಇತ್ತು, ಫಾಲಿಥೀನ್ ಚೀಲದಲ್ಲಿ ಮಣ್ಣು ಗೊಬ್ಬರ ಹಾಕಿ ನೀರುಣಿಸಿದರೆ ಸಸಿ ಸಮೃದ್ಧವಾಗಿ ಬೆಳೆಯುತ್ತದೆಂದು ಅರಣ್ಯ ಕೃಷಿ ಕಲಿಸಿತು. ಬೇರಿಗೆ ಪೆಟ್ಟು ತಗಲದಂತೆ ಫಾಲಥೀನ್ ಚೀಲದ ಸಸಿಗಳನ್ನು ಬಿದ್ದ ಮಳೆಗೆ ಶಿಸ್ತಿನ ಸಾಲಿನಲ್ಲಿ ನಾಟಿ ಮಾಡುವ ಅರಣ್ಯೀಕರಣ ಜ್ಞಾನ ಬೆಳೆಯಿತು. ಮಣ್ಣು ಗುಣ ನೋಡಿ ಬೀಜ ಹಾಕುವ ಪದ್ಧತಿ ಹಳತಾಗಿ ಹಿಂದೆ ಸರಿಯಿತು.

ಸಸಿ ನೆಟ್ಟ ಬಳಿಕ ಬೇಸಿಗೆಯಲ್ಲಿ ೨-೩ ವರ್ಷ ನೀರಾವರಿ ಮಾಡಿದರೆ ಮಾತ್ರ ಚೆನ್ನಾಗಿ ಬೆಳೆಯುತ್ತವೆ. ಮಳೆಗಾಲದಲ್ಲಿ ಸಸಿ ನೆಡಲು ನೆನಪಾಗುವ ನಮಗೆ ಬೇಸಿಗೆಯಲ್ಲಿ ನೀರು ಹಾಕಲು ಸಾಧ್ಯವಾಗುವದಿಲ್ಲ, ಹೀಗಾಗಿ ಗಿಡ

ಬದುಕಿ ಬೆಳೆಯುವದು ಕಷ್ಟ. ಒರಟೆಯನ್ನೇ ನೇರ ನಾಟಿ ಮಾಡಿ ಗಿಡದ ಸುತ್ತ ಗೊಬ್ಬರದಂತೆ, ತೇವಾಂಶ ಆರದಂತೆ ತರಗೆಲೆ, ಅಡಿಕೆ ಸೋಗೆಯ ಚೂರು ಹಾಕಿದರೆ ಫಲವತ್ತಾದ ಮಣ್ಣಿನಲ್ಲಿ ಗಿಡ ಬದುಕಿ ಬೆಳೆಯುತ್ತದೆ. ಆಳಕ್ಕೆ ಬೇರು ಇಳಿಸುವ ಗುಣದಲ್ಲಿ ಕಡು ಬೇಸಿಗೆಯಲ್ಲೂ ಬದುಕುವ ಬರ ನಿರೋಧಕ ಶಕ್ತಿ, ಎತ್ತರದ ನೇರ ಕಾಂಡಗಳನ್ನು ಒರಟೆ ಸಸಿಗಳಲ್ಲಿ ಗಮನಿಸ ಬಹುದು. ಶತಮಾನ ಬಾಳುವ ಮರಗಳಿವು. ನೀರಾವರಿ ಅಸಾಧ್ಯವಾದಲ್ಲೂ ಮಾವು, ಹಲಸನ್ನು ಬೀಜ ನಾಟಿ ಮೂಲಕ ಬೆಳೆಸಬಹುದು. 'ಒರಟೆ ಗಿಡದಲ್ಲಿ ನಿರೀಕ್ಷಿತ ಫಲ ರುಚಿ ಸಿಗದಿದ್ದರೆ?' ಚಿಂತಿಸಬೇಡಿ....ಕಸಿ ಮಾಡಬಹುದು....ಗಿಡದಲ್ಲಿ ಇಷ್ಟದ ಫಲ ಪಡೆಯಬಹುದು!.

### ಚಿಗುರು ಗೂಟ


ಮಲೆನಾಡಿನ ಅಡಿಕೆ ತೋಟಕ್ಕೆ ಪಶ್ಚಿಮದ ಬಿಸಿಲು ತಾಗದಂತೆ ಕೃಷಿಕರು ಗಿಡ ಬೆಳೆಸುತ್ತಾರೆ. ಬೇಲಿ ಸಂಪಿಗೆ (ಬಕುಲ) ಎಂಬ ಕಾಡು ಗಿಡದ ಗೂಟವನ್ನು ಬೇಲಿಯಂಚಿನಲ್ಲಿ ಮಳೆಗಾಲದ ಮುನ್ನ ನೆಡುತ್ತಾರೆ. ಇದು ಮುಂದಿನ ೪ – ೫ ವರ್ಷಗಳಲ್ಲಿ ಚಿಗುರಿ ಮರವಾಗಿ ಬೆಳೆಯುತ್ತದೆ. ನರ್ಸರಿ, ನೀರಾವರಿ, ರಕ್ಷಣೆ ವೆಚ್ಚವಿಲ್ಲದೇ ಸುಲಭದಲ್ಲಿ ಗಿಡ ಬೆಳೆಸುವ ದಾರಿ ಇದು.


ಕರಾವಳಿಯ ಗದ್ದೆಯಂಚಿನ ಮಣ್ಣನ್ನು ಪ್ರವಾಹದ ನೀರಿನಿಂದ ರಕ್ಷಿಸಲು ಲಕ್ಕಿ, ಮುಂಡಿಗೆ ಗಿಡಗಳ ಗೂಟ ನೆಡುವ ಕ್ರಮವಿದೆ. ಮದ್ದೂರಿನ ಪ್ರದೇಶದ ಹೊಲದಲ್ಲಿ ರೈತರು ಬಿಳಿ ಬಸರಿ ಗೂಟ ಬೆಳೆಸುತ್ತಾರೆ. ಇದರ ಎಲೆಗಳು ಬೇಸಿಗೆಯಲ್ಲಿ ಜಾನುವಾರು ಮೇವಿಗಾಗಿ ಬಳಕೆಯಾಗುತ್ತವೆ. ನೀರವಂಜಿ (ಪೌಸೆ ಮರ) ಗೂಟ ನಾಟಿ ಮಾಡಿದರೂ ಚಿಗುರುತ್ತದೆ. ನೀರಿರುವಲ್ಲಿ ಮಾತ್ರ ಬೆಳೆಯುತ್ತದೆ. ಇದು ನೊಗಕ್ಕೆ ಬಳಕೆಯಾಗುತ್ತದೆ. ಇದು ಕೆ. ಆರ್. ಪೇಟೆ ಪ್ರದೇಶದಲ್ಲಿ ವಿಶೇಷವಾಗಿದೆ. ಆಡು ಮುಟ್ಟದ ಸೊಪ್ಪು, ಕಳ್ಳಿ ಗಿಡ, ಗ್ಲಿರಿಸಿಡಿಯಾ, ಅಶ್ವತ್ಥ, ಅತ್ತಿ ಹೀಗೆ ಹಲವು ಸಸ್ಯಗಳನ್ನು ಗೂಟ ನಾಟಿಯ ಮುಖೇನ ಸುಲಭದಲ್ಲಿ ಬೆಳೆಸಬಹುದು. ಯಾವ ಸಸ್ಯದ ಗೂಟವನ್ನು ಯಾವ ಗಾತ್ರದಲ್ಲಿ, ಯಾವ ಕಾಲದಲ್ಲಿ ಹೇಗೆ ಕಡಿದು ನೆಡಬೇಕು ಎಂಬುದಕ್ಕೆ ಪರಂಪರೆ ಕಲಿಸಿದ ಪಾಠಗಳಿವೆ. ಕಾಸರಗೋಡಿನ ಮಿಯಪವು ಕಲ್ಲುಗುಡ್ಡದ ದಾರಿಯ ಪಕ್ಕ ಕೃಷಿಕ ಚಂದ್ರಶೇಖರ ಚೌಟ ೬೦ ಆಲದ ಗೂಟ ನೆಟ್ಟಿದ್ದಾರೆ. ಮಳೆಗಾಲಕ್ಕೆ ೧೫ ದಿನ ಮುಂಚಿತವಾಗಿ ೧೫–೧೮ ಸೆಂಟಿ ಮೀಟರ್ ಸುತ್ತಳತೆ, ೪ ಅಡಿ ಎತ್ತರದ ಆಲದ ಟೊಂಗೆಗಳನ್ನು ದಾರಿಯಂಚಿನಲ್ಲಿ ಹುಗಿದು ನಿಲ್ಲಿಸಿದ್ದಾರೆ. ಅವು ಈಗ ಚಿಗುರಿ ಬೆಳೆಯುತ್ತಿವೆ.

# ಮುರುಗಲು ನೆರಳಲ್ಲಿ ಬೇರಿನ ಮಕ್ಕಳು

**ಮೇವಿಗೆ ಹೋದ ಜಾನುವಾರುಗಳ ಕಾಲ್ಗೊರಸಿನ ಹೊಡೆತ ಬಿದ್ದಲ್ಲೆಲ್ಲ ಮುರುಗಲು ಬೇರಿನ ತೊಗಟೆಗೆ ಗಾಯವಾಯಿತು, ಹಳದಿ ಅಂಟು ಜಿನುಗಿತು, ಗಾಯದ ಗುರುತು ಮೂಡಿದಲ್ಲಿ ಮಳೆಗಾಲದಲ್ಲಿ ಹೊಸ ಹೊಸ ಚಿಗುರು ಗಿಡ ಬೆಳೆದವು. ಮುರುಗಲು ಗಿಡ ಪ್ರೀತಿಸುವ ಕೃಷಿಕರ ಸಂರಕ್ಷಣಾ ನೀತಿಯಿಂದ ಗುಡ್ಡದಲ್ಲಿ ಬಚ್ಚಿಟ್ಟ ಹಸುರು ಠೇವಣಿ ವರ್ಷದಿಂದ ವರ್ಷಕ್ಕೆ ದ್ವಿಗುಣವಾಗುತ್ತ ಹುಲ್ಲು ಬೇಣ ಕಾಡು ಮುರುಗಲ ತೋಟವಾಗಿ ರೂಪಾಂತರವಾಯ್ತು !**

ಅಂಕೋಲೆಯ ಕಡಕಾರಿನ ತೋಕು ನಾಯ್ಕರದು ನಾಲ್ಕು ಎಕರೆ ಬತ್ತದ ಬೇಸಾಯ. ಕಾಡಿನ ಸೊಪ್ಪು, ದೊಡ್ಡಿ ಗೊಬ್ಬರದಲ್ಲಿ ಮಳೆ ಆಶ್ರಿತ ವ್ಯವಸಾಯ. ಕೃಷಿ ಬಿಡುವು ಸಿಕ್ಕಾಗಲ್ಲ ನಾಯ್ಕರು ಯಾವತ್ತೂ ಕತ್ತಿ ಹಿಡಿದು ಮನೆ ಸುತ್ತಲಿನ ಕಾಡು ಗುಡ್ಡ ಏರುತ್ತಿದ್ದರು, ಮುಳ್ಳುಕಂಟಿ ಕಡಿಯುತ್ತಿದ್ದರು, ಜಾನುವಾರು ಮೇವಿಗೆ ಅನುಕೂಲವಾಗುವಂತೆ ಹುಲ್ಲಿನ ಬೇಣ ಮಾಡಲು ಬಯಲು ಮಾಡುವ ಪಣ ಅವರದು. ನಾಲ್ಕಾರು ಎಕರೆ ಆ ಜಾಗದಲ್ಲಿ ಮಳೆಗಾಲವಿಡೀ ದನಕರು ಮೇಯಿಸುತ್ತಿದ್ದರು. ಅಲ್ಲಿ ೪-೫ ಹಳೆಯ ಮುರುಗಲು ಮರ. ದೈನಂದಿನ ಅಡುಗೆ ಆಹಾರದಲ್ಲಿ ಹಣ್ಣು ಬಳಸಿಬಲ್ಲ ಪ್ರೀತಿಯಲ್ಲಿ ಜೋಪಾನ, ಹೀಗಾಗಿ ಈ ಮರಗಳಿಗೆ ಜೀವದಾನ. ೪೫ ವರ್ಷಗಳ ಹಿಂದೆ ಬೆರಳೆಣಿಕೆ ಮರವಿದ್ದ ಜಾಗದಲ್ಲಿ ಈಗ ನೋಡಿದರೆ ಎಲ್ಲೆಂದರಲ್ಲಿ ಮರಗಳು !. ಅರಣ್ಯ ಇಲಾಖೆ ಅಕೇಸಿಯಾ ಬೆಳೆಸಿದ ಹಾಗೇ ಈ ತೋಕು ನಾಯ್ಕರೇನು ಕೋಕಂ ಬೆಳೆಸಿದ್ದಾರಾ? ಎನ್ನುವ ಹಾಗೇ ಮರಗಳ ನೋಟ, ಚೆಂದದ ಮುರುಗಲು ತೋಟ.


ಕಡಕಾರಿನ ಮುರುಗಲು ಮರಗಳು


ಮುರುಗಲು ಹಣ್ಣು

ಸಾವಿರ ಸಂಖ್ಯೆಯಲ್ಲಿ ಇಲ್ಲಿ ಮರಗಳು ಹೇಗೆ ಬೆಳೆದವು ? 'ನಾವು ಇವನ್ನೆಲ್ಲ ಬೆಳೆಸಿದವರು' ಕಾಡು ಮೇಯುವ ದನಕರುಗಳು ಹೇಳುತ್ತವೆ. ಇವು ಮರಗಳೆಡೆಯಲ್ಲಿ ಹುಲ್ಲು ಅರಸಿ ನಡೆದಾಡುವಾಗ ನೆಲದ ಮೇಲು ಹಾಸಿನ ಬೇರುಗಳಿಗೆ ಗಾಯವಾಯಿತು. ಬೇರಿನ ತೊಗಟೆಗೆ ಕಾಲ್ಗೊರಸಿನ ಹೊಡೆತ ಬಿದ್ದಲ್ಲೆಲ್ಲ ಹಳದಿ ಅಂಟು ಜಿನುಗಿತು, ಗಾಯದ ಗುರುತು ಮೂಡಿದಲ್ಲಿ ಬಿದ್ದ ಮಳೆಗೆ ಹೊಸ ಹೊಸ ಚಿಗುರು ಗಿಡ ಬೆಳೆದವು. ಮುರುಗಲು ಗಿಡ ಪ್ರೀತಿಸುವ ತೋಕು ನಾಯ್ಕರ ನೀತಿಯಿಂದ ಗುಡ್ಡದಲ್ಲಿ ಬಚ್ಚಿಟ್ಟ ಹಸುರು ಠೇವಣಿ ವರ್ಷದಿಂದ ವರ್ಷಕ್ಕೆ ದ್ವಿಗುಣ ಕ್ರಮ, ಹುಲ್ಲು ಬೇಣದಲ್ಲಿ ಮರ ಬೆಳೆದ ವಿಕ್ರಮ !. 'ಕೃಷಿ ಭೂಮಿಗೆ ಹಾಕಿದ ಗೊಬ್ಬರ ಮಳೆ ರಭಸಕ್ಕೆ ಕೊಚ್ಚಿ ಹೋಗುತ್ತಿದೆ. ಮಣ್ಣಿಗೆ ಶಕ್ತಿಯೇ ಇಲ್ಲ, ನಾಲ್ಕು ಎಕರೆಯಲ್ಲಿ ಬೆವರಿಳಿಸಿ ದುಡಿದಿದ್ದಕ್ಕೆ ೨೮ ಚೀಲ ಭತ್ತ ದೊರೆಯುತ್ತದೆ. ಭತ್ತದ ಬೆಳೆಯಲ್ಲಿ ನಿಕ್ಕೀ ನಷ್ಟ ! ಬೆಟ್ಟದ ಮುರುಗಲು ಸಿಪ್ಪೆ ಸಂಗ್ರಹಿಸಿ ಮಾರಿದರೆ ೧೫-೧೮ ಸಾವಿರ ಆಧಾಯ, ಬೇಸಿಗೆಯ ಮೂರು ತಿಂಗಳು ನಾಲ್ಕು ಜನಕ್ಕೆ ಕೈತುಂಬ ಕೆಲಸ' ಕಾಡು ಮುರುಗಲಲ್ಲಿ ಬದುಕು ಕಂಡ ತೋಕು ಮರದ ಕತೆ ಹಂಚಿಕೊಂಡಿದ್ದರು. ಕಡಕಾರಿನ ಕಾಡು ಗುಡ್ಡವನ್ನು ಹತ್ತಿರ ಹತ್ತಿರ ೫೦ ವರ್ಷಗಳಿಂದ ಓದಿ ಬಲ್ಲವರು ಈಗ ಇಹಲೋಕ ತ್ಯಜಿಸಿದ್ದಾರೆ, ಇವರ ಕಲ್ಲು ಗುಡ್ಡದ ಹಸುರು ಲೋಕ ಬೇರಿನಲ್ಲಿ ಬೆಳೆದ ಬೆರಗು ಹೇಳುತ್ತಿದೆ.

ಉತ್ತರ ಕನ್ನಡದ ಅಂಕೋಲದ ಅಚವೆ, ಹಿಲ್ಲೂರು ಪ್ರಾಂತ್ಯದ ಕರಿಕಲ್ಲು, ಕುಂಟಗಣಿ, ಕಡಕಾರ್, ಮಾಣಿಕಾರು, ಸುಂಕಸಾಳ, ಗುತ್ಲೆ, ಮೋತಿಗುಡ್ಡ ಪ್ರದೇಶ ನಿಜಕ್ಕೂ ರಾಜ್ಯದ ಕೋಕಂ ಕಾಡಿದ ರಾಜದಾನಿ. ಕಾಡು ಗುಡ್ಡಗಳ ಮುರಕಲ್ಲಿನ(ಕೆಂಪು ಕಲ್ಲಿನ) ನೆಲಗಳಲ್ಲಿ ಎಲ್ಲೆಂದರಲ್ಲಿ ಮುರುಗಲು ಸಾಮ್ರಾಜ್ಯ. ಇಲ್ಲಿನ ಮನೆ ಮನೆಗಳಿಗೆ ಕಾಡು ಮರ ಮೂರು ತಿಂಗಳ ಕೆಲಸ ನೀಡುತ್ತದೆ. ಶೂನ್ಯ ಕೃಷಿಯ ಆಧಾಯ ಪಾಠ ಹೇಳುತ್ತದೆ. ಕರಿಕಲ್ಲಿನ ವೆಂಕಟ್ರಮಣ ಭಟ್, ಗೋವಿಂದ ಭಟ್, ತೊಗಸೆ ನಾಗಪ್ಪ ಹೆಗಡೆ, ಮಾಣಿಕಾರಿನ ಗಣಪು ಬಾಂದೇಕರ, ಹಿಲ್ಲೂರು ಅಶೋಕ ನಾಯ್ಕ ಹೀಗೆ ಈ ಪ್ರದೇಶಗಳಲ್ಲಿ ನೈಸರ್ಗಿಕ ಮರ ಸೃಷ್ಠಿ, ಸಂರಕ್ಷಣೆಯ ಅನುಭವ ಪಾಠ ಹಲವರಲ್ಲಿದೆ.



ಬೇರಿಗೆ ಗಾಯವಾದಲ್ಲಿ ಚಿಗುರುವ ಮುರುಗಲು

ಹೊಳೆ ದಂಡೆಯ ಹಳೆಯ ಮುರುಗಲು ಮರ ನೋಡಿದ್ದೆ, ಕಳೆದ ವರ್ಷ ಅದು ಮುರಿದು ಬಿತ್ತು. ಜೀವಮಾನದ ಕಟ್ಟಕಡೆ ಪ್ರದರ್ಶನ ಎನ್ನುವ ಹಾಗೇ ಎಲೆಗೊಂದರಂತೆ ಕಾಯಿಗಳಿದ್ದವು. ಬಹುಶಃ ಆ ಭಾರಕ್ಕೆ ಮುರಿದಿರಬಹುದು. ಲಾಗಾಯ್ತಿನಿಂದ ಫಲ ಬಳಸಿ ಬಲ್ಲವರಲ್ಲಿ ಮರ ಇನ್ನಿಲ್ಲದ ನೋವು. ಮಳೆಗಾಲ ಮುಗಿದು ಈಗ ವರ್ಷದ ಬಳಿಕ ಮಾರ್ಚ್ ಕೊನೆಗೆ ಮತ್ತೆ ಸತ್ತ ನರದ ಸುತ್ತ ತಿರುಗಾಡಿದ್ದೇನೆ. ನೆಲದ ತುಂಬ ಅರೆ..ರೇ.... ಮರಿ ಮಕ್ಕಳು ಭೂಮಿ ಈಚೆಗೆ ಬಾಯಿ ಅಗಲಿಸಿ ಮಾತಾಡುತ್ತಿವೆ. ಮೂಲ ಮರದ ೨೦-೨೫ ಅಡಿ ಸುತ್ತಳತೆಯಲ್ಲಿ ಹಳೆ ಮರದ ಬೇರಿಗೆ ಹೊಸ ಚಿಗುರು ಗಿಡವಾಗಿ ಬೆಳೆಯುತ್ತಿವೆ. ಎರಡಡಿ ಎತ್ತರದ ಗಿಡದಿಂದ ಆರಂಭಿಸಿ ಪಕ್ಕನೆ ಕಣ್ಣಿಗೆ ಕಾಣುವ ಚಿಳ್ಳೆಪಿಳ್ಳೆ ಎಲ್ಲಸೇರಿ ಲೆಕ್ಕಕ್ಕೆ ಸಿಕ್ಕವು ಬರೋಬ್ಬರಿ ೮೫ ಗಿಡಗಳು ! 'ಬೀಜ' ವೃಕ್ಷದ ಮಾರ್ಗ ಬಿಟ್ಟು ಬೇರಿನ ಬಲದಲ್ಲಿ ವಂಶ ಸೃಷ್ಟಿ ಸೊಬಗು. ಬೇರು ನೆಲಕ್ಕೆ ಹಬ್ಬಿ ಬೆಳೆದಲ್ಲೆಲ್ಲ ಈಗ ನಿಸರ್ಗದ ಉಚಿತ ಉಡುಗೊರೆ, ಮೂಲ ಮರದ ನೆರಳು ಪ್ರತಿ. ಅವಕಾಶ ಸಿಕ್ಕರೆ ಹೇಗೆ ಬೆಳೆಯಬಹುದು ಎಂಬುದನ್ನು ಮರ ಹೇಳುತ್ತಿದೆ. ನಾವು ಕಾಡು ನೋಡುವದು ಬಿಟ್ಟು ಪುಸ್ತಕ ಹಿಡಿದು ಕ್ಲಾಸ್ ರೂಮಿನಲ್ಲಿ ಕೂತಿದ್ದೇವೆ. ಮಾಗಿದ ಹಣ್ಣಿನ ಬೀಜ ಸಂಗ್ರಹಿಸಬೇಕು, ಮರಳಿನಲ್ಲಿ ಹುಗಿದಿಡಬೇಕು, ನೀರು ಹಾಕಬೇಕು, ಬೀಜಕ್ಕಂಟಿದ ಹುಳಿ ಕಳೆದು ತಿಂಗಳ

ಬಳಿಕ ಮೊಳಕೆ ಮೂಡುತ್ತದೆ. ಮೊಳಕೆ ಸಸಿಗಳನ್ನು ಪಾಲಿಥೀನ್ ಬ್ಯಾಗ್‌ಗಳಲ್ಲಿ ಹಾಕಿ ಗಿಡ ಬೆಳೆಸಬೇಕು, ಗ್ರೀನ್ ಹೌಸ್ ಬೇಕು ಎಂದು ಅರಣ್ಯ ವಿಜ್ಞಾನದಲ್ಲಿ ಕಲಿತ ನರ್ಸರಿ ತಂತ್ರ ಬಾಯಿಪಾಠ ಮಾಡಿದ್ದೇವೆ.

ಗಿಡ ಬೆಳೆಸುವ ಕ್ರಮದಲ್ಲಿ ಈಗ ಮರ ಹೇಳುವನ್ನೂ ಕೊಂಚ ಕೇಳಬೇಕು. ಮರದ ಮೂಲ ನೆಲೆಗಳಲ್ಲಿ ಬೇರಿನ ಬಲದಲ್ಲಿ ಬೆಳೆದು ನಿಂತ ಗಿಡ ಲಾಭ ಹುಡುಕಬೇಕು. ಒಮ್ಮೆಗೆ ನೆಡುವದು, ಹತ್ತಾರು ವರ್ಷಕ್ಕೆ ಕಡಿಯುವದು ನಮ್ಮ ಅರಣ್ಯೀಕರಣ ನೆಡುತೋಪು ಮಾದರಿಯಾಗಿದೆ. ತೋಕು ನಾಯ್ಕರ ಮುರುಗಲು ತೋಟದ ಜೀ-ವನ ಪಾಠ ಇರುವಲ್ಲೇ ತೇಗ, ಅಕೇಸಿಯಾ ಬೆಳೆಯಲು ಅರಣ್ಯ ಇಲಾಖೆ ಕಣ್ಮುಚ್ಚಿ ಸಾಗಿದೆ. ನೆಲದ ಮರದ ಲಾಭ ಗಮನಿಸಿ ಸುಲಭದಲ್ಲಿ ಬೆಳೆಸುವ ಸಾಧ್ಯತೆಯಿರುವಲ್ಲಿ ಈ ದಿಸೆಯಲ್ಲಿ ಇನ್ನೂ ಹಜ್ಜೆ ಇಟ್ಟಿಲ್ಲ. ಬೀಜ, ಬೇರಿನಲ್ಲಿ ಫಲಶ್ರುತಿ ಹಂಚುವ ಕಾಡು ಮರದ ಕೃಷಿ ಪಾಠಗಳು ಬೇರಿನ ಮಕ್ಕಳಲ್ಲಿದೆ. ಅದು ಊರೂರಿನ ಮಕ್ಕಳತ್ತ ಹೋಗಿ ಬೆಳೆಯಬೇಕು.

**ಕಾಡು ಬೆಳೆಸಲು 'ಬಾಯ್ಚೀಲಿ'**

ಹಳ್ಳಿಯಲ್ಲಿ ಕೃಷಿಕ ಕುಟುಂಬಗಳಿಗೆ ಕಾಡಿನ ಬಳಕೆ ಸರಹದ್ದುಗಳಿರುತ್ತವೆ. ಎಲ್ಲರೂ ಎಲ್ಲ ಪ್ರದೇಶದ ಸೊಪ್ಪು, ಹುಲ್ಲು, ಹಣ್ಣು ಹಂಪಲುಗಳನ್ನು ಪಡೆಯುವದಿಲ್ಲ. ಹಲವು ವರ್ಷಗಳ ಬಳಕೆಯ ಕಾರಣದಿಂದಾಗಿ 'ಇದು ಇವರದ್ದು' ಎಂಬ ಅಲಿಖಿತ ಹಕ್ಕು ಊರಿನಲ್ಲಿ ಸ್ಥಾಪಿತವಾಗುತ್ತದೆ. ಇದಕ್ಕಾಗಿ ಯಾವ ಗಡಿ ಬೇಲಿಯ ಅಗತ್ಯವೂ ಇಲ್ಲ. ಮಲೆನಾಡಿನಲ್ಲಿ ೧೯೮೦ರ ಸುಮಾರಿಗೆ ಜಾನುವಾರುಗಳ ಮೇವಿಗೆ ಸಮಸ್ಯೆಗಳು ಆರಂಭವಾದವು. ಗೋಮಾಳಗಳು ಇರಲಿಲ್ಲ. ಜಾನುವಾರು ಗಳಿಗೆ ಹುಲ್ಲಿಗಾಗಿ ಬೇಣಗಳನ್ನು ಕೃಷಿಕರು ಅಭಿವೃದ್ಧಿಗೊಳಿಸಿದರು. ಅರಣ್ಯ ನಶಿಸಿದ ಸರಕಾರಿ ಭೂಮಿಯ ಮುಳ್ಳುಕಂಟಿ ಕಡಿದು ಸುತ್ತ ಮುಳ್ಳಿನ ಬೇಲಿ ಹಾಕಿ ಹುಲ್ಲು ಬೆಳೆಯಲು ಮಳೆಗಾಲದಲ್ಲಿ ಅಗತ್ಯ ರಕ್ಷಣೆ ನೀಡಿದರು. ಮುಖ್ಯವಾಗಿ ಇಂತಹ ಬೇಣ ಭೂಮಿ ಅರಣ್ಯ ಇಲಾಖೆಯದು, ಆದರೆ

ಊರಿನ ಕೃಷಿಕರ ವೈಯುಕ್ತಿಕ ಬಳಕೆಗಾಗಿ ರೂಪಿಸಲ್ಪಟ್ಟವು. ಇಲ್ಲಿ ಕಾಡಿನ ಸೊಪ್ಪು ಕಡಿಯುವಾಗ ಗಿಡದ ಬುಡದಲ್ಲಿ ಕೆಳಮುಖವಾಗಿ ಚಾಚಿದ ಟೊಂಗೆ ಕಡಿಯುವದು, ನೇರಕ್ಕೆ ಗಿಡ ಬೆಳೆಯುವ ಅನುಕೂಲವಾಗಿ ಕೆಲವು ಟೊಂಗೆಗಳನ್ನು ಉಳಿಸುವ ಪರಿಪಾಠ ಬಂದಿತು. ಮತ್ತಿ, ಹುನಾಲು, ಹೊನ್ನೆ, ಕವಲು, ಇಪ್ಪೆ, ನೇರಲೆ, ಚಳ್ಳೆ, ಬನಾಟೆ, ಜಂಬೆ, ಬೀಟೆ, ನೆಲ್ಲಿ ಮುಂತಾದ ಸಸಿಗಳು ನೈಸರ್ಗಿಕವಾಗಿ ಬೆಳೆದವು. ಸಸಿ ಬೆಳೆದಂತೆ ಕ್ರಮೇಣ ಹುಲ್ಲು ಬೆಳೆಯುವುದು ನಿಂತಿತು. ಈಗ ಬೇಣ ಪ್ರದೇಶದಲ್ಲಿ ತೆರಕು ಮಾತ್ರ ದೊರೆಯುತ್ತದೆ. ಇವು ನೈಸರ್ಗಿಕ ಸಸ್ಯಗಳ ಬೀಡಾಗಿವೆ. ಎಕರೆಯಲ್ಲಿ ೨೫೦–೩೦೦ ಗಿಡ ಮರಗಳಿವೆ. ಉದಾಹರಣೆಗೆ ಶಿರಸಿ ತಾಲೂಕಿನ ಕಳವೆ, ಯಚಡಿ, ಕಲ್ಮನೆ, ಹೆಗ್ಗಾರ ಪ್ರದೇಶಗಳಲ್ಲಿ ಸುಮಾರು ೧೦೦೦ ಎಕರೆ ಪ್ರದೇಶದಲ್ಲಿ ರೈತರ ಬೇಣ ಸಮೃದ್ಧವಾಗಿ ಬೆಳೆದಿದೆ.

ಅರಣ್ಯ ಇಲಾಖೆ ಬೇಣಗಳ ಪಕ್ಕದಲ್ಲಿ ಕೆಲವೆಡೆ ಅಕೇಸಿಯಾ ನೆಡುತೋಪು ಬೆಳೆಸಿದೆ. ಅಲ್ಲಿನ ಗಿಡಗಳನ್ನು ರೈತರು ಕಡಿದು ಬಳಸುತ್ತಾರೆ. ಆದರೆ ರೈತರ ಬೇಣ ಭೂಮಿ ಕೂಡಾ ಸರಕಾರದ್ದಾದರೂ ಯಾರೂ ಕಡಿಯುವದಿಲ್ಲ. ಹಳ್ಳಿಯಲ್ಲಿನ ಆಂತರಕ ಆಡಳಿತ ವ್ಯವಸ್ಥೆ ಇಲ್ಲಿ ಕೆಲಸ ಮಾಡುತ್ತದೆ. ಯಾರೂ ವಿನಾಕಾರನ ಇನ್ನೊಬ್ಬರ ಸಂಪತ್ತು ದೋಚುವದಿಲ್ಲ. ಬೇಣದಲ್ಲಿ ಬೆಳೆಸಿದ ಗಿಡವನ್ನು ಅಕ್ರಮವಾಗಿ ಕಡಿಯುವದಿಲ್ಲ. ಹೀಗಾಗಿ ನೆಲದ ಸಸ್ಯಗಳು ಬೇಣದಲ್ಲಿ ತುಂಬಿವೆ. ಯಾವ ದುಬಾರಿ ಬೇಲಿಯಿಲ್ಲದ್ದಿರೂ ಕಣ್ಣಿಗೆ ಕಾಣದ ಬಾಯ್ಬೇಲಿಯಲ್ಲಿ ಯಾವ ಖರ್ಚಿಲ್ಲದೇ ಕಾಡು ಬೆಳೆದಿದೆ. ನಾಳೆ ನಮ್ಮ ಕೃಷಿಗಾಗಿ ಇವು ಅತ್ಯಗತ್ಯ ಎಂಬ ಕಾರಣದಿಂದ ರೈತರಿಂದಲೇ ಸಂರಕ್ಷಿತವಾಗಿದೆ.

# ಹಣ್ಣೆಲೆ ಬೀಳುವಾಗ ಹಸಿರಲೆ ನಗಬೇಕು !

ಫಲವತ್ತಾದ ಮಣ್ಣು, ಹ್ಯೂಮಸ್ ಮಳೆ ನೀರನ್ನು ಭೂಮಿಗೆ ಇಂಗಿಸಲು ಆಧಾರ. ಒಮ್ಮೆಗೆ ಚಿಗುರಿ, ಇದ್ದಕಿದ್ದಂತೆಯೇ ಎಲೆ ಉದುರಿಸುವ ತೇಗ, ರಬ್ಬರ್ ತೋಟಗಳ ಅತಿಯಾದ ಮೊನೋಕಲ್ಚರ್ ಶಿಸ್ತಿನಲ್ಲಿ ನೆಲಕ್ಕೆ ಅಪಾಯ. ಒಂದಾದ ನಂತರ ಒಂದು ಮರ ಜಾತಿ ಎಲೆ ಉದುರಿಸುತ್ತ ಹೋಗುವಲ್ಲಿ ನಮ್ಮ ದೇಸೀ ಕಾಡಿನ ಜಾಣ್ಮೆಯಿದೆ.

ಯೂನಿಫಾರ್ಮ ತೊಟ್ಟ ನಮ್ಮ ಮೊನೋಕಲ್ಚರ್ ನೆಡುತೋಪುಗಳು ಶಿಸ್ತು ಪಾಲನೆಗೆ ಎತ್ತಿದ ಕೈ. ಸಾಲನಲ್ಲಿ ನಿಲ್ಲೋದು, ನೇರಕ್ಕೆ ಬೆಳೆಯೋದು, ಒಮ್ಮೆಗೆ ಚಿಗುರೋದು, ಹೂವರಳಿಸೋದು, ಬೇಸಿಗೆ ಬಂತೆಂದರೆ ನೆಡುತೋಪಿಗೆ ನೆಡುತೋಪೇ ಎಲ ಉದುರಿಸಿ ಖಾಲಿ ಖಾಲಿಯಾಗೋದು !. ಮನೆ ಮಕ್ಕಳು ಹೇಳಿದ ಮಾತು ಕೇಳದ ಹೊತ್ತಿನಲ್ಲಿ ಅಸಡಾಬಸಡಾ ಬದುಕುವ ಕಾಡು ಗಿಡ ಇಷ್ಟೆಲ್ಲ ಆಜ್ಞೆ ನೀಟಾಗಿ ಪಾಲಿಸೋದು ಹೇಗೆ?. ಕಾಡನ್ನು ಕೈಗೆ ತಗೊಂಡು ನಾವು ಹಿಗ್ಗಾಮುಗ್ಗಾ ತಿದ್ದಿ ಒಂದೇ ಜಾತಿ ಸಸ್ಯ ನಾಟಿಮಾಡಿ ಶಿಸ್ತಿನ ಪಾಠ ಕಲಿಸಿದ ಮೇಲೆ ಅಗಾಧ ಪರಿವರ್ತನೆ, ಮರಕ್ಕೂ ಮಾತು ಕೇಳದೆ ಅನ್ಯ ಮಾರ್ಗವಿಲ್ಲ.

ಶಿಸ್ತಿನ ಮಾತು ಹಾಗಿರಲಿ, ವೈವಿಧ್ಯಮಯ ಸಸ್ಯ ಕಳಕೊಂಡು ಹೆಣಗಾಡುವ ನೆಡುತೋಪಿನ ನೆಲದ ನಿಜ ಮುಖ ಚಿತ್ರ ವಿಚಿತ್ರ. ಮಾರ್ಚ್ ಕೊನೆಯಲ್ಲಿ ಸಾಗವಾನಿ ತೋಪು ನೋಡಿ. ಸಾಲದ ಕಂತು ತೀರಿಸಲು ಹೆಂಡತಿ ಸರ ಸಹ ಗಿರವಿಗಿಟ್ಟು ಮರ್ಯಾದೆ ಬದುಕಿಗೆ ಹೆಣಗಾಡುವ ಗುಮಾಸ್ತನ ಮುಖದ ಹಾಗೇ ಕಾಣುತ್ತದೆ. ಎತ್ತ ನೋಡಿದರೂ ಬೆತ್ತಲು. ಸಾವಿರ ಎಕರೆ ಕ್ಷೇತ್ರ ಅಡ್ಡಾದಿದರೂ ಹಸಿರಲೆ ಹೊತ್ತು ಚೆಂದಾಗಿ ನಗುವ ಒಂದೇ ಒಂದು ಗಿಡ ಕಾಣುವದಿಲ್ಲ. ಕಾಳ್ಗಿಚ್ಚು ಆರಿಸಲು ಹೆಣಗಾಡುವ ವಾಚಮನ್‌ಗಳಿಗೆ ಒಂದು ಪುಟ್ಟ ಹಸಿಟೊಂಗೆ ಕೂಡಾ ಬೆಂಕಿ ಆರಿಸೋದಕ್ಕೆ ಸಿಗೋದಿಲ್ಲ, ದೂರದ ಅಕೇಸಿಯಾ, ಮಾವು, ಹೊಂಗೆ ಗಿಡದ ಟೊಂಗೆ ಕಡಿದು ತರಬೇಕು. ಜೂನ್ ಕೊನೆಗೆ ದಕ್ಷಿಣ ಕನ್ನಡದ ಸಂಪಾಜೆ ರಬ್ಬರ್ ತೋಟ ನೋಡಿದರೂ ಇದೇ ಕತೆ, ಮರಗಳ ಕೈ ಖಾಲಿ !. ಒಂದು ಎಲೆ ಕೂಡಾ ತುಟ್ಟಿ, ಹಣ್ಣಾದ ಎಲೆಗಳೆಲ್ಲವೂ ಮರಳಿ ಮಣ್ಣಿಗೆ.

ಹಣ್ಣಾದ ಮೇಲೆ ಮಣ್ಣು ಸೇರಬೇಕಾದ್ದು ಸರಿಯೇ. ಆದರೆ ಇಡೀ ಕಾಡಿಗೆ ಕಾಡೇ ಹಸಿರಿಲ್ಲದೇ ಖಾಲಿ ಖಾಲಿಯಾಗುವ ಪರಿಸ್ಥಿತಿ ಪರಿಣಾಮಕ್ಕೆ ನೆಲ ಬೆಲೆ ತೆರಬೇಕು. ಮರದ ಎಲೆ ಮಣ್ಣಿನ ಫಲವತ್ತತೆ ಹೆಚ್ಚಿಸಿ ಪುನಃ ಮರ ಬೆಳವಣಿಗೆಗೆ ನೆರವಾಗುತ್ತವೆಂದು ಪಾಠ ಓದುತ್ತೇವೆ. ಕಾಡಿನ ಮರದೆಲೆ ಹಣ್ಣಾಗಿ ನೆಲಕ್ಕುರುಳಿದಾಗ ಮಣ್ಣಿಗೆ ಮೆತ್ತನೆ ಹಾಸಿಗೆ, ಅಬ್ಬರದ ಮಳೆ ಹನಿ ಬಿದ್ದಾಗ ಮಣ್ಣು ಕರಗಿ ಓಡದ ಹಾಗೇ ನಿಸರ್ಗ ಸಹಜ ತಡೆ. ಎಲೆ ಕೊಳೆತು ಫಲವತ್ತಾದ ಗೊಬ್ಬರ, ಮಣ್ಣಿನ ಸತ್ವ ವೃದ್ಧಿ. ಹಸಿರೆಲೆ ಹಣ್ಣಾಗಿ ಮಣ್ಣಾಗಿ ಮರಳಿ ಮರಕ್ಕೆ ನೆರವಾಗುವ ನಿರಂತರ ನಿಸರ್ಗ ಚಕ್ರದ ಅರಣ್ಯ ನ್ಯಾಯ ನಮ್ಮ ಕಾಡಿನ ನೆಲಗುಣ.




ಒಂದಾದ ನಂತರ ಮತ್ತೊಂದು ಜಾತಿ ಎಲೆ ಉದುರಿಸಬೇಕು

ನೆಡುತೋಪಿಗೆ ನಿಸರ್ಗ ನಿಯಮ ಲಾಗೂ ಆಗುವದು ಕಮ್ಮಿ. ಒಮ್ಮೆಗೆ ಬುಗಿಲೆದ್ದ ಬೆಂಕಿ ಇಡೀ ಕಾಡನ್ನು ದಹಿಸುವ ಪ್ರಮೇಯ. ನೆಲಕ್ಕೆ ಹಾಸಿದ ಒಣ ಎಲೆ, ಹಸಿಗಿಡ, ಪಕ್ಷಿಗಳ ಮೊಟ್ಟೆ, ಮರಿ, ಕೀಟಗಳನ್ನು ಬೇಯಿಸುತ್ತದೆ. ಮೊದಲ ಮಳೆ ಸುರಿದಾಗ ನೀರಿನ ಜತೆ ಬೂದಿ, ಮೇಲ್ಮಣ್ಣೂ ಕೊಚ್ಚಿ ಇದ್ದಬಿದ್ದ ನೆಲಸತ್ವ ಕೂಡಾ ನಾಪತ್ತೆ. ಒಮ್ಮೆ ಬೆಂಕಿಯಿಂದ ನೆಡುತೋಪು ಬಚಾವಾದರೂ ಕೃಷಿಕರೂ ತಮ್ಮ ಭೂಮಿ ಫಲವತ್ತಾಗಲೆಂದು ಒಣ ಎಲೆಯನ್ನೆಲ್ಲ ಗೊಬ್ಬರಕ್ಕೆಂದು ಬಾಚಿ ಒಯ್ಯುತ್ತಾರೆ. ಒಂದು ಹೆಕ್ಟೇರ್ ಬತ್ತದ ಗದ್ದೆಗೆ ೪.೯೪ ಟನ್ ಹಾಗೂ ಒಂದು ಹೆಕ್ಟೇರ್ ಅಡಿಕೆ ತೋಟಕ್ಕೆ ೬.೫೮

ಟನ್ ತರಗೆಲೆ ಬೇಕು. ಕೃಷಿಗೆ ಕಾಡಿನ ಅವಲಂಬನೆ, ಎಲೆಯ ಸತ್ವ ಮಣ್ಣಿಗೆ ಒದಗುವಲ್ಲಿ ವಂಚನೆ. ಪರಿಣಾಮ ಹುಲ್ಲು ಬೆಳೆಯಲೂ ನೆರವಾಗದ ಕಲ್ಲು ಮಣ್ಣು ಮಾತ್ರ ಉಳಿಯುತ್ತದೆ. ವರ್ಷದಿಂದ ವರ್ಷಕ್ಕೆ ನೆಲದ ಆರೋಗ್ಯ ಹದಗೆಡುತ್ತದೆ.

ಶಿಸ್ತಿನ ನೆಡುತೋಪಿನಂತೆ ಎಲೆ ಉದುರಿಸುವ ನೈಸರ್ಗಿಕ ಕಾಡು ವರ್ತಿಸುವದಿಲ್ಲ. ಇಲ್ಲಿ ಒಂದಾದ ನಂತರ ಒಂದರಂತೆ ಮರ ಜಾತಿಗಳು ನವೆಂಬರ್‌ದಿಂದ ಮೇ ಕೊನೆತನಕ ಸರತಿಪ್ರಕಾರ ಎಲೆ ಉದುರಿಸುತ್ತವೆ. ಬೆಂಕಿ ದಹಿಸಿದಾಗ, ಕೃಷಿಕರು ಬೇಸಿಗೆಯಲ್ಲಿ ತರಗೆಲೆ ಹೊತ್ತೊಯ್ದ ನಂತರದಲ್ಲಿಯೂ ಮತ್ತಿಷ್ಟು ಜಾತಿ ಮಳೆಗಾಲಕ್ಕಾದರೂ ಎಲೆ ಉದುರಿಸಿ ಮಣ್ಣಿನ ಮಾನ ಕಾಪಾಡುತ್ತವೆ. ನೆಡುತೋಪಿನಲ್ಲಿ ಕಾಣಬರುವ ಪರಿಣಾಮ ಇಲ್ಲಿ ಕಡಿಮೆ. ಮಾನವ ಹಸ್ತಕ್ಷೇಪದ ನಡುವೆಯೂ ನೆಲಕ್ಕೆ ಒಂದಿಷ್ಟಾದರೂ ಸತ್ವ ಜಮಾ ಆಗುತ್ತದೆ. ಜನವರಿ ಹೊತ್ತಿಗೆ ಎಲೆ ಉದುರಿಸಿ ಮತ್ತೆ ಕೆಲವೇ ದಿನಗಳಲ್ಲಿ ಹಸಿರಾಗಿ ಮೆರೆಯುವ ಸಾಗಡೆ, ನೇರಲೆ, ಕಾಸರಕ ಮರಗಳು, ಉದುರೆಲೆ ಕಾಡಿನಲ್ಲೂ ನುಸುಳಿ ನಿತ್ಯ ಹರಿದ್ವರ್ಣೆಯಾಗಿ ನಗುವ ಚಳ್ಳೆ, ಗೇರು ಗಿಡಗಳು ನಿಂತ ನೆಲಕ್ಕೆ ಮೋಸ ಮಾಡುವದಿಲ್ಲ. ವರ್ಷವಿಡೀ ಹಣ್ಣೆಲೆ ನೆಲಕ್ಕೆ ಸರಬರಾಜು ವ್ಯವಸ್ಥೆ ಚಾಲೂ ಇಡುತ್ತವೆ.

ಫೆಬ್ರವರಿ ಕೊನೆಯಲ್ಲಿ ಚಿತ್ರದುರ್ಗದ ಜೋಗಿಮಟ್ಟಿ ಕಾಡಿಗೆ ಹೋಗಬೇಕು, ಮರಗಳೆಲ್ಲ ಎಲೆ ಉದುರಿಸಿ ಬೋಳಾದಂತೆ ದೂರದಿಂದ ಕಾಣುತ್ತವೆ. ಕಾಡು ಅಲೆಯುತ್ತ ಅಲ್ಲಿ ಹಸಿರಾಗಿ ನಗುವ ಗಿಡ ಜಾತಿ ಪಟ್ಟಿ ಮಾಡಿದರೆ ಶ್ರೀಗಂಧ, ಸೀಗೆ, ಗೊರವಿ, ಆಲ, ಪಚ್ಚಾಲ, ಸೀಮೆತಂಗಡಿ, ಕಾಡುಹಿಪ್ಪೆ, ರೇವಡಿ, ಪಾಸದ್, ಕಾಡು ಮೆಣಸು, ಗಂಟಿಪ್ಪೆ, ಕಾಡುಮಲ್ಲಿಗೆ ಹನಿ ನೀರಿಲ್ಲದ ಹೊತ್ತಿನಲ್ಲೂ ಹಸಿರಾಗಿರುತ್ತವೆ !. ಇವುಗಳಲ್ಲಿ ಕೆಲವು ಮುಂಚಿತವಾಗಿ ಎಲೆ ಉದುರಿಸಿ ಚಿಗುರಿದ್ದರೆ ಮತ್ತೆ ಕೆಲವು ಇನ್ನೂ ಕೊಂಚ ತಡೆ ತಡೆದು ಎಲೆ ಉದುರಿಸುವ ಗುಣ ತೋರುತ್ತವೆ. ಅಲ್ಲಿಂದ ೧೨೦ ಕಿಲೋ ಮಿಟರ್ ಆಚೆ ಸದಾ ಬರದ ಮೊಳಕಾಲ್ಮೂರಿನ ಕಲ್ಲುಗುಡ್ಡಗಳಲ್ಲಿ ಸಹ ಅಲ್ಲಲ್ಲಿ ಹಸಿರಾಗಿ ನಗುವ ಜಾತಿಗಳಿವೆ. ಹಸಿ ಗಿಡಕ್ಕೆ ಪಕ್ಕನೆ ಬೆಂಕಿ ಹೊತ್ತುವ ಗೊರವಿ ಗಿಡ ಕೂಡಾ ಇರುವಷ್ಟು ದಿನ ಹಸಿರಾಗಿರೋಣ ಎಂದು ಭಣಭಣ ಬೆಟ್ಟದಲ್ಲಿ ಹಸಿರು ಮೈಚೆಲ್ಲಿರುತ್ತದೆ. ರೈತ ಮಕ್ಕಳ ಕಸಬರಿಗೆ 'ಬಂದರಿಕೆ' ಸಸ್ಯ ಕೂಡಾ ನೆಲದ ಸತ್ವ ಓಡಿ ಹೋಗದ ಹಾಗೇ ಕಾಡಿನ ಬಾಗಿಲಲ್ಲಿ ಕಸಬರಿಗೆ ಹಿಡಿದು ನಿಲ್ಲುತ್ತದೆ. ಹನಿ ನೀರಿಲ್ಲದಲ್ಲಿ ನೆಲದ ಬಡತನ ಮುಚ್ಚಲು ಹೆಣಗಾಡುತ್ತದೆ.



ನೈಸರ್ಗಿಕ ಕಾಡು ನೆಲ, ಜಲ ಉಳಿಸುವ ಪಾಠ ಹೇಳುತ್ತದೆ

ಚೆನ್ನೈನ ಗಿಂಡಿ ಪ್ರದೇಶದಲ್ಲಿ 'ಡ್ರೈ ಎವರಗ್ರೀನ್ ಫಾರೆಸ್ಟ್' ಇದೆ. ಅರಣ್ಯದ ವಿಶೇಷವೆಂದರೆ ಇಲ್ಲಿನ ಮರಜಾತಿಗಳು ಅತ್ಯಂತ ಕಡಿಮೆ ನೀರು ಬಳಸಿ ಹಸಿರಾಗಿರುವವು, ಒಮ್ಮೆಗೆ ಎಲೆ ಉದುರಿಸಿ ಖಾಲಿಯಾಗದ ಸ್ವರೂಪ ಇವುಗಳ ವಿಶೇಷ. ಪ್ರಸ್ತುತ ನಮ್ಮ ಕಾಡು ನೆಲದಲ್ಲಿ ನೆಲ ನೀರಿಗೆ ಹಿತವಾದ ದಾರಿ ಇದು. ಫಲವತ್ತಾದ ಮಣ್ಣು, ಹ್ಯೂಮಸ್ ಮಳೆ ನೀರನ್ನು ಭೂಮಿಗೆ ಕುಡಿಸುವ ಆಧಾರ. ಕಾಡಿಗೆ ಅತಿಯಾದ ಮೊನೋಕಲ್ಚರ್ ಶಿಸ್ತು, ಮಾನವ ಹಸ್ತಕ್ಷೇಪದ ಭಾರ ತಡೆಯಲು ಮರಜಾತಿಗಳ ಇಂತಹ ದೇಸೀ ಜಾಣ್ಮೆಯಿಂದ ನಾವು ಪಾಠ ಕಲಿಯಬೇಕು. ಎಲೆ ಉದುರಿಸುವಲ್ಲಿ ಕಾಡಿಗೆ ಜಿಪುಣತನ ಬೇಕು. ಎಲೆ ಉದುರಿಸಿ ಬೋಳಾಗುವ ಮರಗಳ ನಡುವೆ ಅಲ್ಲಲ್ಲಿ ಆಗಾಗ ಹಸಿರಾಗಿ ನಗುವ ಸಸ್ಯಜಾತಿ ಕೂಡಿದ್ದರೆ ಮಣ್ಣು – ನೀರಿಗೆ ಹಿತವೆಂಬ ಗಮನಬೇಕು. ಲಕ್ಷಾಂತರ ಹೆಕ್ಟೇರ್ ಪ್ರದೇಶದ ಇಡೀ ಮೊನೋಕಲ್ಚರ್ ತೋಪನ್ನು ಹೀಗೆ ಪರಿವರ್ತಿಸುವದು ಅಸಾಧ್ಯವಾಗಿರಬಹುದು. ಆದರೆ ಎಲೆ ಉದುರಿಸುವ ನೆಡುತೋಪು, ನೈಸರ್ಗಿಕ ಕಾನನ ಅವಲಂಬಿತ ಕೃಷಿಕರಾದರೂ ಆಗಾಗ ಹಸಿರಾಗಿ ನಗುವ ಜಾತಿ ನೆಲದಲ್ಲಿ ಉಳಿವಂತೆ ಲಕ್ಷ್ಯಹರಿಸಬಹುದು.

ಚಿಗುರಿನ ಚೆಲುವಿನಲ್ಲಿ, ಹಸುರಿನ ವೈಭವದಲ್ಲಿ, ಹೂವಿನ ಸಂಭ್ರಮದಲ್ಲಿ ಮರಗಿಡಗಳು ನಗುತ್ತಿವೆ. 'ನಕ್ಕರದೇ ಸ್ವರ್ಗ' ಎಂದು ನಿಸರ್ಗ ಸಿರಿ ನಮಗೆ ಪಾಠ ಹೇಳುತ್ತದೆ. ಹಣ್ಣೆಲೆ ಬೀಳುವಾಗ ನಮ್ಮ ಕಾನನದ ಆರೋಗ್ಯದ ದೃಷ್ಟಿಯಿಂದ ಇನ್ನಷ್ಟು ಹಸಿರೆಲೆಗಳು ಸದಾ ಮರ ಮರಗಳಲ್ಲಿ ನಗ ಬೇಕು.

ಬುಲ್ಡೋಜರ್ ಹಚ್ಚಿ ಏಕಜಾತಿ ಗಿಡ ನೆಡಲು ಹೊರಟವರಿಗೆ ನೆಲದ ಸಸ್ಯಗಳು ಹೇಳುವ ಈ ಪಾಠ ಸದಾ ನೆನಪಿರಬೇಕು.

## ವನ ಸಂವರ್ಧನೆಯ ದೇಸೀ ಮಾರ್ಗ

ಧಾರ್ಮಿಕ ನಂಬಿಕೆಗಳನ್ನು ಹಸುರು ಬೆಳೆಸುವ ಮಾಧ್ಯಮವಾಗಿ ಬಳಸಿದ ವಿಶಿಷ್ಟ ಪ್ರಯತ್ನ ಕರ್ನಾಟಕದಲ್ಲಿ ವನಸಂವರ್ಧನ ಟ್ರಸ್ಟ್ ಮುಖೇನ ೨೦೦೧ರಲ್ಲಿ ಆರಂಭವಾಗಿದೆ. 'ರಾಜ್ಯದ ವ್ಯಕ್ತಿಗೊಂದು ಗಿಡ ನೆಡೋಣ, ೫ ಕೋಟಿ ಸಸಿಯನ್ನು ಉಚಿತವಾಗಿ ನೀಡೋಣ' ಮುಖ್ಯ ಮಂತ್ರಿ ಎಸ್. ಎಮ್. ಕೃಷ್ಣ ಧರ್ಮಗುರುಗಳಿಗೆ ಆಗ ಮಾತು ಕೊಟ್ಟರು. ಒಪ್ಪಂದಕ್ಕೆ ಸರಕಾರದ ಜವಾಬ್ದಾರಿಯುತ ರುಜು ಬಿತ್ತು. ಧಾರ್ಮಿಕ ಪೀಠದಲ್ಲಿ ಕೂತವರು ಅರಣ್ಯ ವಿನಾಶದ ಪರಿಣಾಮಗಳನ್ನು ಪ್ರವಚನದಲ್ಲಿ ಬಿಂಬಿಸಿದರು. ಫಲ ಮಂತ್ರಾಕ್ಷತೆ 'ಗಿಡ ಮಂತ್ರಾಕ್ಷತೆ' ಯಾಯಿತು, ಸತತ ಮೂರು ವರ್ಷಗಳ ಬರದಲ್ಲಿ ಬೆಂದವರು ಕಾಡು – ಮಳೆ ನಿರೀಕ್ಷೆಯಲ್ಲಿ ಉಚಿತ ಸಸಿ ಪಡೆದು ಹೊಲ, ಕಾಲುವೆ, ರಸ್ತೆ, ಬಯಲು ಹೀಗೆ ಎಲ್ಲೆಡೆ ಗಿಡ ಬೆಳೆಸ ತೊಡಗಿದರು.

ಪರಿಸರಕ್ಕೆ ಒದಗಿದ ಧುರ್ಗತಿಯನ್ನು ಧಾರ್ಮಿಕ ನಾಯಕತ್ವದಲ್ಲಿ ಪರಿಹರಿಸುವ ಯತ್ನ, ಇಡೀ ದೇಶದ ಗಮನ ಸೆಳೆದಿದೆ. ಸಸಿ ನೆಡುವ ಉತ್ಸಾಹಕ್ಕೆ ಭಕ್ತಿಯ ಲೇಪ, ಶ್ರದ್ಧೆಯ ಸೊಬಗು, ಹಬ್ಬದ ಮೆರಗು ದೊರಕಿದೆ. ಹಿಂದು, ಮುಸ್ಲಿಂ, ಕ್ರಿಸ್ತ, ಜೈನ ಮುಂತಾಗಿ ೨೯ ಧರ್ಮಗುರುಗಳು ವನಸಮುವರ್ಧನ ಟ್ರಸ್ಟನಲ್ಲಿ ಬಾಗಿಯಾಗಿ ನೆಲ – ಜಲ ಸಂರಕ್ಷಣೆ ಜನಜಾಗೃತಿಗೆ ಮುಂದಾದದ್ದು ವಿಶೇಷ.


ಗಿಡ ಬೆಳೆಸಲು ದಾನ, ದೇಣಿಗೆ ಸಾರ್ವಜನಿಕ ಸಹಕಾರ ಅಭೂತಪೂರ್ವ. ಆದಿಚುಂಚನಗಿರಿ ಮಠ ೨೯ ಟ್ರ್ಯಾಕ್ಟರ್, ಟ್ಯಾಂಕರ್ ಒದಗಿಸಿ ಬಯಲು ನಾಡಿನಲ್ಲಿ ನೆಟ್ಟ ಸಸಿಗಳಿಗೆ ಬೇಸಿಗೆಯಲ್ಲಿ ನೀರು ಒದಗಿಸಲು ನೆರವಾಗಿದೆ. ಭೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆ ಒಂದೊಂದು ಹಳ್ಳಿಯಲ್ಲಿ ೩ – ೪ ಸಾವಿರ ಜನರನ್ನು ಕೂಡಿಸಿ ಮೂರು ವರ್ಷಗಳಲ್ಲಿ ವನಸಂವರ್ಧನ ಟ್ರಸ್ಟ್ ಮುಖೆನ ೨.೫ ಕೋಟಿ ಸಸಿ ಉಚಿತವಾಗಿ ವಿತರಿಸಿದೆ. ಈವರೆಗೆ ೨.೫ ಕೋಟಿ ಸಸಿ ನೀಡಲು ಸರಕಾರ ೧೦ ಕೋಟಿ ಖರ್ಚು ಮಾಡಿರಬಹುದು. ಅದನ್ನು ನೆಟ್ಟು ಬೆಳೆಸಲು, ಸಂರಕ್ಷಿಸಲು ಜನ ೩೦ ಕೋಟಿ ವ್ಯಯಿಸಿದ್ದಾರೆ !. ಅರಣ್ಯೀಕರಣಕ್ಕೆ ವಿದೇಶಿ ಸಾಲಕ್ಕೆ ಹಲ್ಲುಗಿಂಜುವ ಸರಕಾರಕ್ಕೆ ಬಿಡುವು ಕೊಟ್ಟಿದ್ದಾರೆ, ದೇಸೀ ದಾರಿಯ ಪಾಠ ಹೇಳಿದ್ದಾರೆ.

# ಕಾಡು ಬೆಂಕಿ ತಡೆಗೆ ದೇಸೀ ದಾರಿ

ಗ್ರಾಮೀಣ ಜನಜೀವನದ ಅಗತ್ಯಗಳು, ಅಲ್ಲಿನ ಧಾರ್ಮಿಕ ನಂಬಿಕೆಗಳ ಆಧಾರದಲ್ಲಿ ಬೆಂಕಿ ಕಾವಲಿಗೆ ದೇಸೀ ದಾರಿಗಳೂ ತೆರೆದುಕೊಂಡಿವೆ. ರಾಜ್ಯದ ಅಣಶಿ ರಾಷ್ಟ್ರೀಯ ಉದ್ಯಾನ ಪ್ರದೇಶಗಳಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ ಈ ಕಾರ್ಯಗಳು ಫಲ ನೀಡುತ್ತಿವೆ. ಪೋಟೋಲಿಯಲ್ಲಿ ೧.೬೦ ಲಕ್ಷ ರೂಪಾಯಿ ವೆಚ್ಚ ಮಾಡಿ ಈಶ್ವರ ದೇವಾಲಯ ನಿರ್ಮಿಸಿದ ಬಳಿಕ ಹಳ್ಳಿಗರು ಕಾಡು ಕಾಯುವ ಹೊಣೆ ಹೊಣೆಹೊತ್ತಿದ್ದಾರೆ. ಅಲ್ಲೇ ಸನಿಹದ ಬಾಪೇಲಿಯಲ್ಲಿ ಸಮುದಾಯ ಭವನ ನಿರ್ಮಿಸಿದ್ದಕ್ಕೆ ಗ್ರಾಮ ಅರಣ್ಯ ಸಮಿತಿ ಬೆಂಕಿ ಕಾವಲಿಗೆ ಶ್ರಮಿಸುತ್ತಿವೆ.

ರಾಜ್ಯದ ಉದುರೆಲೆ ಅರಣ್ಯಗಳಲ್ಲಿ ಕಾಡಿನ ಬೆಂಕಿಗೆ ಸ್ವಾಗತ ಕಮಾನು ಹಾಕಲಾಗಿದೆ. ಎಲ್ಲೆಂದರಲ್ಲಿ ಪೆಟ್ರೋಲ್ ಚೆಲ್ಲಿದ ಹಾಗೇ ಒಣ ಎಲೆಗಳು ರಾಶಿ ಬಿದ್ದಿವೆ. ಒಂದು ಕಿಡಿ ಅರ್ಧ ತಾಸಿನಲ್ಲಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಅರಣ್ಯ ಸಂಪತ್ತನ್ನು ದಹಿಸಬಹುದು. ಲಂಕಾ ದಹನ ನೆನಪಿಸುವಂತೆ ನಿತ್ಯ ನೂರಾರು ಎಕರೆ ವಿಸ್ತಾರದ ಕಾಡು ಕಾಳ್ಗಿಚ್ಚಿಗೆ ಉರಿಯಬಹುದು. ಪಶು ಪಕ್ಷಿಗಳು, ಜಾನುವಾರು, ಕ್ರಿಮಿ ಕೀಟಗಳು ಬೆಂಕಿ ದಾಳಿಯ ನೇರ ಪರಿಣಾಮಕ್ಕೆ ಈಡಾಗುತ್ತಿವೆ. ಕಾಡಿನ ಬೆಂಕಿ ಕಾಯುವದು ಅರಣ್ಯ ಇಲಾಖೆ ಕೆಲಸ, ಗಾರ್ಡ್, ವಾಚಮನ್‌ಗಳ ಉದ್ಯೋಗ ಎಂಬ ಭಾವನೆ ಬೆಳೆದಿದ. ಒಂದು ಕಾಡು ಉರಿಯಿತು ಎಂದರೆ ಅದರಲ್ಲಿ ಅರಣ್ಯ ಇಲಾಖೆಯ ತಪ್ಪು ಹುಡುಕುವ ನಾವು ನಮ್ಮ ಜವಾಬ್ದಾರಿಯಿಂದ ನುಣಿಚಿಕೊಳ್ಳುತ್ತೇವೆ. ನೈಸರ್ಗಿಕ ಸಂಪನ್ಮೂಲಗಳು ಸರಕಾರದ ಆಸ್ತಿ ಎಂದು ಹೇಳುತ್ತ ಅಗತ್ಯ ಬಿದ್ದಾಗೆಲ್ಲ ಅದೇ ಕಾಡಿಗೆ ಹೋಗಿ ಸೊಪ್ಪು, ಉರುವಲು, ಮಣ್ಣು, ಹಣ್ಣು ಹಂಪಲು ಎಂದು ಕೃಷಿ ಅಗತ್ಯಗಳನ್ನು ಪಡೆಯುತ್ತೇವೆ. ಆದರೆ ಬೆಂಕಿ ಬಿದ್ದಾಗ ಮಾತ್ರ ಅದನ್ನು ಆರಿಸುವಲ್ಲಿ ದಿವ್ಯ ನಿರ್ಲಕ್ಷ್ಯ. ಉರಿವ ಮನೆ ಎದುರು ಚಳಿ ಕಾಯಿಸುವ ವೈಖರಿ.

ಮರಕ್ಕೆ ಮರ ತಿಕ್ಕಿ ಕಾಳ್ಗಿಚ್ಚು ಬೀಳುತ್ತದೆ ಎಂದು ಪುಸ್ತಕದಲ್ಲಿ ಓದಿದ ಪಾಠ ಬದಿಗಿಡಿ, ಈಗ ಕಾಡಿಗೆ ಬೆಂಕಿ ಬೀಳುವದಕ್ಕೆ ಕಾರಣ ಅದಲ್ಲ. ಬೇಟೆ, ಕೃಷಿ ವಿಸ್ತರಣೆ, ಮೇವು, ಅತಿಕ್ರಮಣ, ಸೇಡು ಇಂತಹ ಕಾರಣಗಳಿಂದ ಬೆಂಕಿ ನುಗ್ಗುತ್ತಿದೆ. ಮಂಗನ ಕಾಯಿಲೆ ಭೀತಿಯಿಂದ ಕಾಡಿನ ಉಣ್ಣೆಗಳ



ಪೋಟೋಲಿಯ ರಾಮಲಿಂಗೇಶ್ವರ ದೇವಸ್ಥಾನ– ಕಾಡಿನ ಬೆಂಕಿ ತಡೆದ ಹಳ್ಳಿಗರಿಗೆ ಅರಣ್ಯಾ ಇಲಾಖೆಯಿಂದ ನಿರ್ಮಾಣ ಸಹಾಯ

ನಿಯಂತ್ರಣಕ್ಕೆ ಕೂಡಾ ಬೆಂಕಿ ಹಾಕುವ ಪರಿಪಾಠವಿದೆ. ಅಂಟು ರಾಳ, ಬೀಡಿ ಎಲೆ ಬೆಳವಣಿಗೆಗೆ ನೆರವಾಗಲೆಂದು ಬೆಂಕಿ ಹಾಕುತ್ತಾರೆ. ಕತ್ತಿ, ಗರಗಸಗಳಿಂದ ಹಾನಿಯಾಗುವದಕ್ಕಿಂತ ಹೆಚ್ಚಿನ ಹಾನಿ ಇಂದು ಕಾಡಿನ ಬೆಂಕಿಯಿಂದ ಆಗುತ್ತಿದೆ. ಹಿಂದೆ ಕುಂಬ್ರಿ ಕೃಷಿ ನಡೆಯುತ್ತಿತ್ತು. ಕಾಡಿಗೆ ಬೆಂಕಿ ಹಾಕಿ ಸುಟ್ಟ ಮಣ್ಣಿನಲ್ಲಿ ಭತ್ತ, ರಾಗಿ, ಗಡ್ಡೆ ಗೆಣಸು ಬೆಳೆಯುವ ಪರಿಪಾಠ ಅರಣ್ಯ ಜಿಲ್ಲೆಗಳಲ್ಲಿ ೧೯೬೦ರವರೆಗೂ ನಡೆದಿತ್ತು. ದಾಳಿಕೋರರ ಭಯವೆಂದು ಹಳ್ಳಿ ಸುತ್ತಲಿನ ಅರಣ್ಯವನ್ನು ಸಂಪೂರ್ಣ ಸುಡುವ ಪದ್ಧತಿ ೧೭ನೇ ಶತಮಾನದಲ್ಲಿ ಇತ್ತು. ಕಾಡು ಕಣಿವೆಗಳಲ್ಲಿ ಇಂದು ಮೂಲ ಸೌಕರ್ಯ ಬೆಳೆಯುತ್ತ ಈಗ ಜನವಸತಿ ಅರಣ್ಯ ಪ್ರದೇಶದಲ್ಲಿ ಹೆಚ್ಚಿದೆ. ಇಂತಹ ಪರಿಸ್ಥಿತಿಯಲ್ಲಿ ಕಾಡು ಬೆಂಕಿಯ ಮೂಲ ಗುರುತಿಸಿದರೆ ನಮ್ಮ ಹಳ್ಳಿಗರೇ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ ! ದೂರದಿಂದ ಯಾರೋ ಬಂದು ಬೆಂಕಿ ಹಾಕುತ್ತಾರೆ ಎಂಬುದಕ್ಕಿಂತ ಹತ್ತಿರದಲ್ಲಿ ವಾಸಿಸಿದವರು ಕಾಡಿನ ಸಂರಕ್ಷಣೆಗೆ ಏನು ಮಾಡಿದರು ಎಂಬುದು ಮುಖ್ಯವಾಗುತ್ತದೆ.

ಸತ್ಯ ಕೊಂಚ ಕಹಿ ಎನಿಸಬಹುದು. ಕಾಡಿನ ಎಲ್ಲ ಲಾಭಗಳ ಫಲಾನುಭವಿಗಳಾದ ನಾವು ಸಂರಕ್ಷಣೆಯ ಮಹತ್ವವನ್ನು ಸರಕಾರ, ಅರಣ್ಯ ಇಲಾಖೆಗೆ ಹೇಳಬೇಕಾದ ಸ್ಥಾನದಲ್ಲಿರುವವರು. ಆಣೆಕಟ್ಟು, ಅರಣ್ಯ ನಾಶ ನಡೆದಾಗ ಚಳುವಳಿಯಲ್ಲಿ ಮುಂಚೂಣಿಗೆ ಬರುವವರು. ಆದರೆ ನಾವೇ ಪರಂಪರೆಯ

ರೂಢಿಯಂತೆ ಬೆಂಕಿ ಹಾಕಿದರೆ ಹೇಗೆ? ಇಂದು ಆಗುತ್ತಿರುವದು ಇದು. ಒಂದು ಹಳ್ಳಿಯ ಕಾಡಿಗೆ ನಿರಂತರವಾಗಿ ಬೆಂಕಿ ಬೀಳುತ್ತಿದ್ದರೆ ಅಲ್ಲಿನ ನದಿ, ಹಳ್ಳಗಳು ಬತ್ತಬಹುದು. ಮರದ ಒಣ ಎಲೆಗಳು ಭೂಮಿಗೆ ನೀರಿಂಗಿಸಲು ಸಹಾಯಕ. ಫಲವತ್ತಾದ ಮಣ್ಣು, ಹ್ಯೂಮಸ್ ನೆಲದಲ್ಲಿ ಇದ್ದರೆ ಮಳೆ ನೀರನ್ನು ಹಿಡಿದಿಡುವ ಸಾಮರ್ಥ್ಯ ಭೂಮಿಗೆ ಹೆಚ್ಚುತ್ತದೆ. ಓಡುವ ನೀರನ್ನು ನೆಲದಲ್ಲಿ ತಡೆಯುತ್ತದೆ, ಭೂಸವಳಿ ನಿಯಂತ್ರಣವಾಗುತ್ತದೆ. ಬೆಂಕಿ ಬಿದ್ದಾಕ್ಷಣ ಒಣ ಎಲೆಗಳೆಲ್ಲ ಉರಿದು ಬೂದಿಯಾಗುತ್ತದೆ. ನಂತರ ರಭಸದ ಮಳೆ ಬಂದಾಗ ಬೂದಿ, ಫಲವತ್ತಾದ ಮಣ್ಣು ಕೊಚ್ಚಿ ಹೋಗುತ್ತಿದೆ. ಹೀಗಾಗಿ ನಿರಂತರ ಬೆಂಕಿ ಬೀಳುತ್ತದ್ದಂತೆ ನೆಲ ಕಲ್ಲಾಗಲು ಆರಂಭವಾಗಿ ನಮ್ಮ ಟಾರ್ ರಸ್ತೆಯ ಹಾಗೇಬಿದ್ದ ಮಳೆ ನೀರೆಲ್ಲ ಓಡಿ ಹೋಗುವ ಪ್ರಮೇಯದಲ್ಲಿ ನದಿಗಳು ಒಣಗಲು ಕಾರಣವಾಗುತ್ತವೆ. ಒಂದು ಹಳ್ಳಿಯ ಅಂತರ್ಜಲವನ್ನು ಅಲ್ಲಿನ ಕೊಳವೆಬಾವಿ ಅತಿ ಬಳಕೆ ಹೇಗೆ ಕುಗ್ಗಿಸುತ್ತದೆಯೋ ಅದಕ್ಕಿಂತ ವೇಗದಲ್ಲಿ ಕಾಡಿನ ಬೆಂಕಿ ಮಾರಕ ಪರಿಣಾಮ ಬೀರುತ್ತದೆ.

ನಮ್ಮ ಕೃಷಿಯಲ್ಲಿ ವಿದ್ಯಾವಂತರ ಸಂಖ್ಯೆ ಬೆಳೆದಿದೆ. ಅವರಿಗೆ ಕಾಡಿನ ಬೆಂಕಿ ಬಗೆಗೆ ಜಾಗ್ರತಿಯ ಪಾಠ ಅಗತ್ಯವಿಲ್ಲ. ಆದರೆ ಸಾಮಾಜಿಕ ಚಟುವಟಿಕೆಯಲ್ಲಿ ಕ್ರಿಯಾಶೀಲತೆ ವ್ಯಕ್ತವಾಗುತ್ತಿಲ್ಲ. ನೈಸರ್ಗಿಕ ಸಂಪತ್ತು ಉರಿದು ಹೋಗುವಾಗ ಮನೆಯಲ್ಲಿ ಕೂತು ಒಣ ವಿಮರ್ಶೆ ಮಾಡುವದಕ್ಕಿಂತ ಕಾಡಿಗೆ ಹೋಗಿ ಬೆಂಕಿ ಆರಿಸುವದು ಅತ್ಯುತ್ತಮ ಕೆಲಸವಾಗುತ್ತದೆ. ಇಂದು ಗ್ರಾಮ ಅರಣ್ಯ ಸಮಿತಿಗಳು ರಚನೆಯಾಗಿದೆ. ಸಂಪನ್ಮೂಲ ರಕ್ಷಿಸಿದರೆ ಉತ್ಪನ್ನದಲ್ಲಿ ಪಾಲು ನೀಡುವ ಕ್ರಮ ಚಾಲ್ತಿಯಲ್ಲಿದೆ. ಬೆಂಕಿಯಿಂದ ಕಾಡು ರಕ್ಷಿಸಿದರೆ ನಿಸರ್ಗ ನಮ್ಮ ಕೃಷಿಯ ಸುಸ್ಥಿರತೆಯನ್ನು ಪ್ರೋತ್ಸಾಹಿಸುತ್ತದೆ. ನೈಸರ್ಗಿಕ ಅನುಕೂಲತೆಗಳು ಹೆಚ್ಚುತ್ತವೆ. ಪರಿಸರ ಸ್ನೇಹಿ ಸಾವಯವ ಕೃಷಿಯ ಅವಾಕಾಶಗಳು ತೆರೆದುಕೊಳ್ಳುತ್ತವೆ. ಬೆಂಕಿಯಿಂದ ಕಾಡು ಬಡವಾದರೆ ಅದರ ತಕ್ಷಣದ ಪರಿಣಾಮ ಅರಣ್ಯ ಇಲಾಖೆಯ ಮೇಲೆ ಆಗುವದಿಲ್ಲ, ನೆಲ ನಂಬಿದ ನಮ್ಮ ಮೇಲಾಗುತ್ತದೆ.

ಬೆಂಕಿ ರಕ್ಷಣೆಗೆ ಏನು ಮಾಡಬೇಕು? ವಾಚ್‌ಟವರ್, ವಾಕಿಟಾಕೀ, ವಾಚ್‌ಮೆನ್‌ಗಳನ್ನು ಹೆಚ್ಚಿಸುವುದರಿಂದ ಬೇರೆ ದಾರಿ ಯಾವುದಿದೆ? ಗ್ರಾಮೀಣ ಜನಜೀವನದ ಅಗತ್ಯಗಳು, ಅಲ್ಲಿನ ಧಾರ್ಮಿಕ ನಂಬಿಕೆಗಳ ಆಧಾರದಲ್ಲಿ ಬೆಂಕಿ ಕಾವಲಿಗೆ ದೇಸೀ ದಾರಿಗಳೂ ಈಗ ತೆರೆದುಕೊಂಡಿವೆ. ಕಾಡಿಗೆ ಬೆಂಕಿ ಬೀಳದಂತೆ ನಾವು ಎಚ್ಚರವಹಿಸುತ್ತೇವೆ, ನಮ್ಮ ಹಳ್ಳಿಯ ದೇವಾಲಯ

ಜೀರ್ಣೋದ್ಧಾರ ಮಾಡಬೇಕು, ಮಕ್ಕಳಿಗೆ ಆಡಲು ಕ್ರೀಡಾಂಗಣ ನಿರ್ಮಿಸಬೇಕು, ಸಭಾ ಭವನ ಕಟ್ಟಬೇಕು, ಕೆರೆ ನಿರ್ಮಿಸಬೇಕು ಎಂಬ ಬೇಡಿಕೆಗಳು ಹಳ್ಳಿಗಳಿಂದ ಬಂದಿವೆ. ರಾಜ್ಯದ ಅಣಶಿ ರಾಷ್ಟ್ರೀಯ ಉದ್ಯಾನ ಪ್ರದೇಶಗಳಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದ ಈ ಕಾರ್ಯಗಳು ಫಲ ನೀಡುತ್ತಿವೆ. ಪೋಟೋಲಿಯಲ್ಲಿ ೧.೬೦ ಲಕ್ಷ ರೂಪಾಯಿ ವೆಚ್ಚ ಮಾಡಿ ಈಶ್ವರ ದೇವಾಲಯ ನಿರ್ಮಿಸಿದ ಬಳಿಕ ಹಳ್ಳಿಗರು ಕಡಿ ಕಾಯುವ ಹೊಣೆ ಹೊತ್ತಿದ್ದಾರೆ. ಅಲ್ಲೇ ಸನಿಹದ ಬಾಪೇಲಿಯಲ್ಲಿ ಸಮುದಾಯ ಭವನ ನಿರ್ಮಿಸಿದ್ದಕ್ಕೆ ಗ್ರಾಮ ಅರಣ್ಯ ಸಮಿತಿ ಬೆಂಕಿ ಕಾವಲಿಗೆ ಶ್ರಮಿಸಿದೆ. ಕಾಡನ್ನು ಬೆಂಕಿಯಿಂದ ರಕ್ಷಿಸಿದರೆ ಪ್ರೋತ್ಸಾಹ ಧನ ನೀಡುವ ಪರಿಪಾಠ ಇಂದು ಅರಣ್ಯ ಇಲಾಖೆಯಲ್ಲಿದೆ. ಯುವಕ ಸಂಘ, ಗ್ರಾಮ ಅರಣ್ಯ ಸಮಿತಿ, ದೇವಾಲಯ ಸಮಿತಿಗಳು ಬೆಂಕಿ ತಡೆದ ಯಶೋಗಾಥೆಗಳಿವೆ.

ನಾಗರಹೊಳೆ, ದಾಂಡೇಲಿ, ಕಪ್ಪತಗುಡ್ಡ ಬೆಂಕಿಗೆ ಬಲಿಯಾದಾಗ ದೊಡ್ಡ ಸುದ್ದಿಯಾಗುತ್ತದೆ. ಇದಲ್ಲದೇ ಹಳ್ಳಿಯ ಹತ್ತಾರು ಎಕರೆ ನಿತ್ಯವೂ ಉರಿಯಲ್ಲಿ ಬೇಯುತ್ತಿದೆ. ನಮ್ಮ ಹಳ್ಳಿಗರು ದೂರದ ಅಭಯಾರಣ್ಯದ ಬೆಂಕಿ ಆರಿಸಲು ಹೋಗಬೇಕಾಗಿಲ್ಲ, ಊರಿನ ಕಾಡು ರಕ್ಷಣೆಗೆ ನಿಂತರೆ ಸಾಕು ! ಆಗ ನೀರು ಉಳಿಯುತ್ತದೆ, ಕೃಷಿ ಎಳ್ಗೆಯಾಗುತ್ತದೆ. ಕಾರ್ಯಕ್ಕೆ ಸಮುದಾಯವನ್ನು ಜೋಡಿಸುವದು ಮುಖ್ಯವಿದೆ.

**ನಾಟಾ ಸಂಸ್ಕರಣೆ**


ನಂದಿ ಮರ ಕಡಿದ ದಿನವೇ ಗರಗಸದಲ್ಲಿ ಕತ್ತಿರಿಸಿ ನಾಟಾ ತುಂಡುಗಳಾಗಿಸಿದರೆ ಕೆಲವು ದಿನಗಳಲ್ಲಿ ಬಿಸಿಲಿಗೆ ಒಡೆಯುತ್ತದೆ. ಮರದ ಬುಡ ಕಡಿದು ೮ – ೧೦ ದಿನಗಳ ಬಳಿಕ ಗರಗಸದಿಂದ ಮರವನ್ನು ತುಂಡು ತುಂಡಾಗಿದರೆ ಮಾತ್ರ ನಾಟಾದಿಂದ ತಯಾರಿಸಿದ ಹಲಗೆ, ಪಕಾಸುಗಳು ಒಡೆಯುವದಿಲ್ಲ. ಹಸಿ ಮಾವಿನ ಮರ ಕತ್ತರಿಸಿ ಕೊರೆದು ನೀರಿನಲ್ಲಿ ವಾರ ಕಾಲ ಮುಳುಗಿಸಿದರೆ ಹುಳಬಾಧೆ ನಿಯಂತ್ರಣವಾಗುತ್ತದೆ. ಶತಮಾನ ಕಾಲ ಈ ಮೃದು ಕಟ್ಟಿಗೆ ಬಾಳುತ್ತದೆ.

ಮರದಲ್ಲಿರುವ ನೀರಿನ ಅಂಶ ಆವಿಯಾಗುವಾಗ ಕಟ್ಟಿಗೆ ಒಡೆಯುವ ಗುಣ ತೋರುತ್ತದೆ. ಇದನ್ನು ತಡೆಯಲು ನೆರಳಿನಲ್ಲಿ ಒಣಗಿಸುವ ಕ್ರಮವಿದೆ. ನಾಟಾವನ್ನು ಎಳೆ, ತೊಲೆಗಳಾಗಿ ಕತ್ತರಿಸಿದಾಗ ಸೀಳುವದು, ಬಾಗುವದು, ಹುಳ ಹಿಡಿಯುವದನ್ನು ತಪ್ಪಿಸಲು ಸಂಸ್ಕರಿಸುವ ಈ ವಿದ್ಯೆ ಮರ ಬಳಕೆಯ ದೇಸೀ ಜ್ಞಾನವಾಗಿದೆ.

# ತುಂಗೆಯ ನೀರಲ್ಲಿ ಬೇವಿನ ಆತ್ಮಹತ್ಯೆ !

ರೈತ ಆತ್ಮಹತ್ಯೆ ನಡೆದಾಗೆಲ್ಲ ನೀರಾವರಿ ಯೋಜನೆ ಮುಖೇನ ಕೃಷಿಕರ ಬಾಳು ಸಮೃದ್ಧಗೊಳಿಸುವ ಮಾತಾಡುತ್ತೇವೆ. ನೀರಿದ್ದರೆ ಕೃಷಿ ನೆಮ್ಮದಿ ಎಂದು ಲೆಕ್ಕ ಹಾಕುತ್ತೇವೆ. ವಿಚಿತ್ರ ನೋಡಿ ಬರಗಾಲದಲ್ಲೂ ನೆಮ್ಮದಿಯಲ್ಲಿ ಹಸುರಾಗಿ ಬೆಳೆದು ಜಾನುವಾರು ಮೇವಾದ ಮರಗಳು ಈಗ ಬಯಲು ನಾಡಿಗೆ ನೀರು ಹರಿದ ಬಳಿಕ ಸಾಮೂಹಿಕ ಆತ್ಮಹತ್ಯೆಗೆ ಶರಣಾಗಿವೆ.

'ಪೋಸ್ಟ್‌ಮಾರ್ಟಂ' ಮಾಡಲು ಪೋಲಿಸರು ಬೇಡ, ಸಾಕ್ಷಿ, ವಕೀಲರು, ನ್ಯಾಯಾದೀಶರು ಬೇಕಾಗಿಲ್ಲ. ಖುದ್ದಾಗಿ ಸಾವಿನ ಸತ್ಯ ಸಾಬೀತಾದಂತೆ ಸಿಂಧನೂರಿನ ಹೊಲದಲ್ಲಿ ಮರ ಬರೆದಿಟ್ಟ ತೀರ್ಮಾನ ಕಾಣುತ್ತದೆ. 'ತುಂಗಾಪಾನ ಶ್ರೇಷ್ಠ' ಎಂದು ಎಲ್ಲರೂ ಹೇಳುತ್ತಾರೆ. ಬೇವಿನ ನೋವು ಕೇಳಿದರೆ ಅನುಮಾನ ಮೂಡುತ್ತದೆ. ಅಷ್ಟೇಕೆ ನದಿ ಕಣಿವೆಯ ತೀರ್ಥಹಳ್ಳಿಯಲ್ಲಿ ಮಳೆ ಸುರಿಯ ತೊಡಗಿದರೆ ಆಣೆಕಟ್ಟೆಗೆ ನೀರು ತುಂಬಿ ಬಯಲು ನಾಡಿನ ಭತ್ತದ ಗದ್ದೆಗೆ ಹರಿಯುತ್ತದೆ. ಗದ್ದೆಯ ನೀರು ಏರದಂತೆಲ್ಲ ಮರಗಳ ಆತ್ಮಹತ್ಯೆ ಸರಣಿ ಶುರುವಾಗುತ್ತದೆ.



ಟ್ರ್ಯಾಕ್ಟರ್ ಉಳುಮೆಯಿಂದ ಜಾಲಿನಾಶ, ನೀರಾವರಿಯಿಂದ ಬೇವಿನ ಸಾವು

ರಾಜ್ಯದ ಹೊಸಪೇಟೆ ತುಂಗಬದ್ರಾ ನದಿಗೆ ಆಣೆಕಟ್ಟು ಹಾಕಿ ಕ್ರಿ. ಶ. ೧೯೫೩ರಲ್ಲಿ ಮೊಟ್ಟ ಮೊದಲು ಸಾರಿ ಹೊಲಕ್ಕೆ ನೀರು ಹರಿಯಿತು.

ಬಯಲು ನೆಲದಲ್ಲಿ ಹಸಿರು ಕನಸು ಮೂಡಿತು. ಬಿಳಿಜೋಳ, ಸಜ್ಜೆ, ನವಣೆ, ಜೈದರ ಹತ್ತಿ ಬೆಳೆಯುತ್ತಿದ್ದ ಭೂಮಿಯಲ್ಲಿ ಭತ್ತ ಬೆಳೆಯುವ ಪ್ರಯತ್ನ ಆರಂಭ. ಕ್ರಿ. ಶ. ೧೯೬೦ ರಲ್ಲಿ ಆಂಧ್ರದ ರೈತರು ಇಲ್ಲಿನ ಭೂಮಿ ಖರೀದಿಸಿ ಕೃಷಿ ಆರಂಭಿಸಿದರು. ಗಂಗಾವತಿ, ಸಿಂಧನೂರು ಪ್ರದೇಶಗಳು ಬರದ ನಾಡು ಎಂಬ ಪಟ್ಟ ನಿಧಾನಕ್ಕೆ ಕಳಕೊಂಡು ಭತ್ತದ ಬೀಡಾದವು. 'ಸೋನಾಮಸೂರಿ ನೆಲ್ಲು' ದೇಶ ವಿದೇಶಗಳ ಗಮನ ಸೆಳೆಯಿತು. ನಾಲ್ಕು ದಶಕದ ಹಿಂದೆ ಎಕರೆ ಭೂಮಿ ೨-೩ ಸಾವಿರಕ್ಕೆ ವಿಕ್ರಯ, ಸಿಂಧನೂರಿನ ವಿರೂಪಾಪುರದ ಶಂಕರಪ್ಪ ಹೇಳುವಂತೆ ೨೫೦ – ೩೦೦ ರೂಪಾಯಿಗೆ ಅಗ್ಗದ ಬೆಲೆಗೆ ಭೂಮಿ ಮಾರಾಟವಾದ ಸಾಕಷ್ಟು ಉದಾಹರಣೆ ಇದೆ. ಆದರೆ ಈಗ ಇಲ್ಲಿನ ನೀರಾವರಿ ಭೂಮಿ ಬೆ ೨.೫ – ೩ ಲಕ್ಷ ರೂಪಾಯಿ !. ಕಾರಣ ಹೊಸಪೇಟೆ ಆಣೆಕಟ್ಟು, ತುಂಗಬದ್ರಾ ನೀರು ಬಂದಿದ್ದಕ್ಕೂ, ಕರಿಜಾಲಿ, ಬೇವಿನ ಮರಗಳ ಸಾವಿಗೂ ಎತ್ತಣದಿಂದ ಎತ್ತ ಸಂಬಂಧ?

ವಾರ್ಷಿಕ ಹೆಚ್ಚೆಂದರೆ ೨೫೦ – ೩೦೦ ಮಿಲಿ ಮೀಟರ್ ವಾಡಿಕೆ ಮಳೆ. ಸಕಾಲಕ್ಕೆ ಇಷ್ಟು ಮಳೆ ಬಂದರೆ ಜೋಳದ ಹಸಿರಿಗೆ ಸಾಕು. ಜೈದರ ಹತ್ತಿ ಹಸಿರಾಗಿ ಸಿಂಧನೂರಿನ ನೆಲದ 'ವೈಟ್ ಡೈಮಂಡ್' ಎಂಬ ಖ್ಯಾತಿ. ಆದರೆ ನೀರು ಬಂದ ಲಾಗಾಯ್ತಿನಿಂದ ನೆಲಕ್ಕೆ ಸಿರಿತನ ಬಂತು. ಕಪ್ಪು (ಬ್ಲ್ಯಾಕ್ ಕಾಟನ್) ಮಣ್ಣು ಹಿಗ್ಗಿತು. ಪ್ರತಿ ಎಕರೆಗೆ ನಾಲ್ಕಾರು ಬೇವು, ಕರಿಜಾಲಿ ಮರಗಳನ್ನು ಪೋಷಿಸಿಕೊಂಡ ರೈತರು ಭತ್ತ ಬೆಳೆಯಲು ಭೂಮಿಯಲ್ಲಿ ನೀರು ನಿಲ್ಲಿಸಿದರು. ಯಾವತ್ತೂ ನೀರು ಕಾಣದ ಮರದ ಬೇರುಗಳು ವರ್ಷದ ನಾಲ್ಕೈದು ತಿಂಗಳ ಕಾಲ ನೀರಲ್ಲಿ ನಿಂತವು. ಮರಗಳು ವಿಲಕ್ಷಣ ರೂಪ ಪಡೆದವು, ಮುರುಟಿದವು, ಒಣಗಿದವು. ಮೊಟ್ಟ ಮೊದಲು ನೀರಿಗೆ ಹೆದರಿ ಕರಿಜಾಲ ಮರಗಳು ಸಾಯತೊಡಗಿದವು. ಎಕರೆಗೆ ೫೦ – ೫೫ ಚೀಲ ಭತ್ತ ಬೆಳೆಯುವ ಲಾಭ ಕಂಡ ಮೇಲೆ ಹೊಲದ ಬದುವಿನ ಮರಗಳು ಸ್ವತಃ ಕೃಷಿಕರಿಗೆ ನಿರುಪಯೋಗಿ ಎನಿಸಿದವು !. ಮರದ ನೆರಳಲ್ಲಿ ಬೆಳೆ ಚೆನ್ನಾಗಿ ಬೆಳೆಯದೆಂದು ನೆರಳು ನೀಡುವ ಮರಗಳು ನಿರ್ದಾಕ್ಷಿಣ್ಯವಾಗಿ ಕೊಡಲಿ ಪ್ರಹಾರದಿಂದ ನೆಲಸಮವಾದವು.

ಎತ್ತುಗಳಿಂದ ಉಳುಮೆ ಓಬಿರಾಯನ ಪದ್ಧತಿಯೆಂದು ಆಧುನಿಕ ಟ್ರ್ಯಾಕ್ಟರ್‌ಗಳು ಬಂದವು. ಅವುಗಳ ಸರಾಗ ಓಡಾಟಕ್ಕೆ ಅಡ್ಡಿಯಾದಾಗ ಮರ ಕಡಿಯುವದು ಅದ್ಯತೆಯಾಯಿತು. ಹತ್ತಿ ಬೆಳೆಯುತ್ತಿದ್ದ ಕಾಲಕ್ಕೆ ಉರುವಲಿಗೆ

ಪತ್ತಿ ಕಟ್ಟಿಗೆ ಬಳಕೆ. ಭತ್ತ ಬಂದ ಮೇಲೆ ಪ್ರತಿ ಊರಲ್ಲಿ ಜನಸಂಖ್ಯೆ ಏರಿ ಉರುವಲು ಸಮಸ್ಯೆ ಹೆಚ್ಚಾಯಿತು. ಆಂಧ್ರದಿಂದ ಕೃಷಿ ಕೆಲಸಕ್ಕೆ ಬಂದವರು ನೀರಿನಂಚಿಗೆ ಬೆಳೆಯುವ 'ಆಪು' ಎಂಬ ಜೋಂಡು ಹುಲ್ಲಿನ ಗುಡಿಸಲು ಕಟ್ಟಿ ರಸ್ತೆ ಪಕ್ಕ ಕ್ಯಾಂಪ್ ಹಾಕಿದರು. ನೀರಾವರಿಯಿಂದ ಸತ್ತ, ಬೆಳೆಗೆ ಅಡ್ಡಿಯಾದ ಕರಿಜಾಲಿ, ಬೇವಿನ ಮರಗಳನ್ನು ಬೇರು ಸಹಿತ ಕಿತ್ತು ಇವರು ಉರುವಲಿಗೆ ಆಧಾರ ಮಾಡಿಕೊಂಡರು. ಕೃಷಿ ಅರಣ್ಯ ಪರಂಪರೆಯ ಮೇಲೆ ಸಮರ ಸಾರಲು ಇಲ್ಲಿ ನೀರು ಮೂಲವಾಯಿತು.



ಮರವಿಲ್ಲದ ಹೊಲದಲ್ಲಿ ಬರದ ಛಾಯೆ

ಪೂಜಾರ್ಹ ವೃಕ್ಷವಾಗಿ, ಮದುವೆ ಮಂಟಪದ ಸಾಂಪ್ರದಾಯಿಕ ಸೊಗಸಾಗಿ, ಔಷಧೀಯ ವೃಕ್ಷವಾಗಿ ಬಯಲು ನಾಡಿನಲ್ಲಿ ಬರದ ಬದುಕು ಮರೆತು ಬೇವು ಸದಾ ನಗುತ್ತಿತ್ತು. ನಡು ಮಧ್ಯಾಹ್ನ ಬುತ್ತಿ ಗಂಟು ತಂದ ಮನೆಯಾಕೆ ಬೇವಿನ ನೆರಳಲ್ಲಿ ಕೂಡ್ರಿಸಿ ಕೈತುತ್ತು ಕೊಡುವಾಗ ಬರದ ಸೀಮೇಯಲ್ಲಿ ಸ್ವರ್ಗ ಕಂಡಿದ್ದರು, ಎಳೆ ಶಿಶುಗಳನ್ನು ಬೇವಿನ ನೆರಳಲ್ಲಿ ಮಲಗಿಸಿ ಜೋಗುಳ ಪಾಡಿದವರು, ಇವುಗಳ ಸೊಪ್ಪನ್ನು ಮೇವಾಗಿ ಬಳಸಿ ಕುರಿ ಹಿಂಡು ಬೆಳೆಸಿದವರು, ಮನೆ ನಿರ್ಮಾಣ, ಕೃಷಿ ಉಪಕರಣಗಳಿಗೆ ಈ ಮರಗಳ ಕಟ್ಟಿಗೆ ಬಳಸಿದವರು ಈಗ ನೀರು ಬಂದ ಕಾಲಕ್ಕೆ ಬೇವು – ಜಾಲಿಗಳು ನಗು ನಿಲ್ಲಿಸಿದಾಗ ಪರಂಪರೆಯ ಪ್ರೀತಿ ಮರೆತರು. ಯಾವ ಕನಿಷ್ಟ ಆರೈಕೆಯೂ ಇಲ್ಲದೇ ಹೊಲದ ಹಸಿರಾದವು ಸಾವಿನ ದವಡೆ ಸೇರಿದವು. ನೀರಾವರಿ ನೆಲದ ಇಂದಿನ ತಲೆಮಾರು ಹೊಲದಲ್ಲಿ ಬೇವು – ಜಾಲಿ

ಬೆಳೆದರೆ ಹೇಗೆ ಕೃಷಿ ನಷ್ಟ ಎಂಬುದನ್ನು ಹೇಳಲು ಪಳಗುತ್ತಿದೆ !. ಜೋಳ ಇದ್ದಾಗ ಇದೇ ಮರದ ನೆರಳು ಸಹಿಸಿಕೊಂಡವರು ಭತ್ತ ಬಂದ ಮೇಲೆ ಬದಲಾದರು. ಮುಂಚಿನ ಕಾಲಕ್ಕೆ 'ಹೊಲಕ್ಕೆ ಹೋಗ್ ಊಟಾ ಮಾಡೋಣ್ರಿ...' ಎನ್ನುತ್ತಿದ್ದವರು, ಈಗ 'ಮನೆಯಾಗ.... ಊಟ ಮಾಡಿ ಹೊಲಕ್ಕೆ ಹೋಗೋಣು' ಎನ್ನುತ್ತಾರೆ. ಏಕೆಂದರೆ ಬುತ್ತಿಗಂಟು ಬಿಚ್ಚುತ್ತಿದ್ದ ನೆಲದಲ್ಲಿ ಬಿರು ಬಿಸಲು ನರ್ತಿಸುತ್ತಿದೆ. ಬೇವಿನ ಮರದ ಒಣ ಬೇರುಗಳು ಕೂಲಿಕಾರರ ಉರುವಲು ಬೇಡಿಕೆಗೆ ಖಾಲಿಯಾಗಿವೆ. ತುಂಗೆಯ ನೀರು ಬಯಲು ನಾಡಿನ ಸೀಮೆಗೆ ಭತ್ತದ ಸಿರಿ ತಂದಿದೆ, ಆದರೆ ಬರಗಾಲದಲ್ಲೂ ನಗುತ್ತಿದ್ದ ಬೇವು, ಕರಿಜಾಲಿಗಳು ನೀರು ಬಂದ ಬಳಿಕ ಬೇಜಾರಾಗಿ ಸಾಮೂಹಿಕ ಆತ್ಮಹತ್ಯೆಗೆ ಶರಣಾಗಿವೆ.


**ಭಂಡಾರದಿಂದ ಬೇವು ಜನನ**

ಯಲ್ಲಮ್ಮ ಮೈಲಾರಲಿಂಗನ ತಂಗಿ, ಸಹೋದರನಲ್ಲಿರುವ ಭಂಡಾರ ಕಣಜವನ್ನು ಯಲ್ಲಮ್ಮ ಕೇಳುತ್ತಾಳೆ. ಆದರೆ ಆತ ಕೊಡುವದಿಲ್ಲ. ಮುಂದೇನು? ಯೋಚಿಸಿದ ಯಲ್ಲಮ್ಮ ಸಂಪತ್ತಿನ ಕಣಜ ಕದ್ದು ಓಡಿದಳು. ಯಲ್ಲಮ್ಮ ಸಂಪತ್ತು ಹೊತ್ತು ಸಾಗಿದ ಸ್ಥಳಲ್ಲಿ ಕೆಲವು ನೆಲಕ್ಕೆ ಚೆಲ್ಲಿದವು. ತಕ್ಷಣ ಆ ಭೂಮಿಯಲ್ಲಿ ಬೇವಿನ ಮರದ ಜನನವಾಯಿತು. ಇದೇ ಬಯಲುನಾಡಿನ ಗುಡ್ಡದಲ್ಲಿ ಹಳದಿ ಹೂ ಬಿಡುವ ಹೊನ್ನರಿಕೆ ಸಸ್ಯವಿದೆ. ಇದು ಸಹ ಯಲ್ಲಮ್ಮನ ಉಡಿಯಿಂದ ಬಿದ್ದ ಭಂಡಾರದಿಂದ ಜನಿಸಿದೆ ಎಂಬ ನಂಬಿಕೆಯಿದೆ.

# ಹಸುರು ಜೀವಕ್ಕೆ ಹನಿ ಹನಿ ಕಣ್ಣೀರು

ಕಾಡಲ್ಲಿ ಗಿಡ ನಾಟಿ ಮಾಡಿ ನೀರಾವರಿ ಮುಖೇನ ಮರ ಬೆಳೆಸುವಷ್ಟು ಬಯಲುನಾಡು ಬಡವಾಗಿದೆ. ವಾರಕ್ಕೆ ೨೦ ಲೀಟರ್ ನೀರು ಹಾಕಿದರೆ ಮಾತ್ರ ಸಸಿ ಮರವಾಗಲು ಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ ನೀರಿಲ್ಲದೇ ಕಾಡು ಬೆಳೆಸಿದ ಪರ್ಯಾಯ ದಾರಿಗಳು ಕಾಣುತ್ತವೆ.

ಅದು ಮಳೆಯಿಲ್ಲದ ಮೊಳಕಾಲ್ಮೂರು, ಅಲ್ಲಿನ ರಾಮಪುರ - ಬಾಂಡ್ರಾವಿ ರಸ್ತೆಯಲ್ಲಿ ನಾಲ್ಕಾರು ಕಿಲೋ ಮೀಟರ್ ಸಾಗಿದರೂ ಒಂದು ಮರದ ನೆರಳು ಕಷ್ಟ. ದೊಡ್ಡ ಕಳ್ಳಿ, ಕಡ್ಡಿಕಳ್ಳಿಗಿಡದ್ದೇ ಜಾಳು ನೆರಳು. ಹತ್ತಡಿ ಎತ್ತರದ ಒಂದು ಆಲದ ಗಿಡವೇ ಕಿಲೋ ಮೀಟರ್ ಸೀಮೆ ದೊಡ್ಡ ಮರ !. ಇದಾದರೂ ಬೆಳದದ್ದು ಹೇಗೆ ? ಗಿಡ ಬೆಳೆದವರ ಬಾಯ್ತೆರೆಸಿದರೆ ಅದು ಗಿಡಕ್ಕಿಂತ ದೊಡ್ಡ ಕತೆ. ಗಿಡ ನಾಟಿ ಬಳಿಕ ಆಡು, ಕುರಿ ಬಾಯಿಗೆ ಹೋಗದಂತೆ ಮುನ್ನೆಚ್ಚರಿಕೆ, ರಕ್ಷಣೆ, ಪ್ರತಿ ವಾರ ತಪ್ಪದೇ ಎರಡು ಸಾರಿ ೨೫-೮೦ ಲೀಟರ್ ನೀರು. ವರ್ಷದ ಎಂಟು ತಿಂಗಳು ಅರಣ್ಯ ಸಸಿಗೆ ನೀರಾವರಿ ವ್ಯವಸ್ಥೆ, ಸತತ ಮೂರು ವರ್ಷ ನೀರು ನೀಡಿದ ಪರಿಣಾಮ ಎತ್ತರದ ಆಲ, ಈಗ ಅದು ಬಯಲಿಗೆ ಬಂದ ಚೆಂದದ ಹಸಿರು ರುಮಾಲು.



ಕಾಡು ಗಿಡ ಬೆಳೆಸಲು ಬಯಲು ನಾಡಿನಲ್ಲಿ ನೀರು ಹಾಕಬೇಕು

ಚಿತ್ರದುರ್ಗದ ನಗರದ ಆಚೆ ಜೋಗಿಮಟ್ಟಿ ಬೆಟ್ಟದ ದಾರಿ, ಅಲ್ಲಿ ಸಾಲು ಗಿಡ, ನೀರು ಹನಿ ಹನಿ ಬಳಿಕ ಬೆಳೆದ ಹಸುರು ಜೀವ. ಸಮುದ್ರ

ಮಟ್ಟದಿಂದ ೭೬೦೦ ಅಡಿಯೆತ್ತರದ ಗುಡ್ಡವೇರಲು ಟ್ಯಾಂಕರ್‌ನವರ ರಿಪಿರಿಪಿ, ಸದಾ ಹೆಚ್ಚು ಬಾಡಿಗೆ ಅಹವಾಲು, ನೀರಿಲ್ಲದೇ ಗಿಡ ಬೆಳೆಸೋದು ಹೇಗೆ? ಹಣ ನೀಡದೆ ಗತಿಯಿಲ್ಲ. ಬಿಂದಿಗೆ ಕುಡಿಯುವ ನೀರಿಗೆ ಪರದಾಡುವ ಬಡ ನೆಲದಲ್ಲಿ ಗಿಡ ಮರವಾಗೋದು ದೊಡ್ಡ ಸವಾಲು. ೨೦೦೦ ಲೀಟರ್ ಒಮ್ಮೆಗೆ ಸಾಗಿಸಲು ಕನಿಷ್ಟ ೬೦೦ ರೂಪಾಯಿ. ಮೂರು ವರ್ಷ ಪರ್ಯಂತ ದುಬಾರಿ ನೀರು ಕುಡಿದ ಬಳಿಕವೇ ಅಲ್ಲಿ ಸಾಲು ಸಸ್ಯಸಿರಿ, ಮರ ಸೊಗಸು.

ಬಯಲು ಸೀಮೆ ಅರಣ್ಯೀಕರಣ ಮುಳ್ಳಿನ ದಾರಿ, ಸಮೀಪ ದರ್ಶನಕ್ಕೆ ಸ್ಯಾಂಪಲ್ ಪ್ರವಾಸ ಚಿತ್ರದುರ್ಗದ ರಾಮಪುರ ವಲಯದ ರುದ್ರಮ್ಮನಹಳ್ಳಿ, ಮುತ್ಕಾರಹಳ್ಳಿ, ಬಿ.ಜಿ.ಕೆರೆ ಪ್ರದೇಶ ಅರಣ್ಯಾಭಿವೃದ್ಧಿ. ಕಳೆದ ೨೦೦೩ ಜುಲೈ ೨೩ರಂದು ನೆಲಕ್ಕೆ ಮಳೆ ಸುರಿದಿತ್ತು. ಆದರೂ ಭೂಮಿ ನೀರು ಕುಡಿದಿರಲಿಲ್ಲ, ಮುಂದೆ ಚೆನ್ನಾಗಿ ಸುರಿಯಬಹುದೆಂದು ಲೆಕ್ಕಾಚಾರ. ಕಮರಾ, ಹೊಂಗೆ, ಆಲ, ನೀಲಗಿರಿ ನಾಟಿ. ಅರಣ್ಯೀಕರಣದ ತರಾತುರಿ, ಎಣಿಕೆ ತಪ್ಪಿತು, ಮಳೆ ಕೈ ಕೊಟ್ಟಿತು. ಮೊಳಕಾಲ್ಮೂರಿನ ಮಳೆಯೆಂದರೆ ಒಂದರ್ಥದಲ್ಲಿ ಅಮೃತಬಿಂದು, ಕಾಲಕ್ಕೆ ನೇರ ಬಂದು ಗೊತ್ತಿಲ್ಲ. ರೈತ ಬದುಕನ್ನು ಕಾಡಿಸುವದೇ ಲಾಗಾಯ್ತಿನ ಪರಿಪಾಠ. ಕೃಷಿ ಕಾಡಿಸಿದ ಹಾಗೇ ಈಗ ಕಾಡು ಗಿಡಗಳ ಸರದಿ, ನೆಟ್ಟ ಗಿಡ ಒಣಗತೊಡಗಿದವು. ಸಸ್ಯಪಾಲನಾ ಕ್ಷೇತ್ರದಲ್ಲಿ ಶಿಶುವಿನ ಹಾಗೇ ಅಕ್ಕರೆಯಲ್ಲಿ ಬೆಳೆಸಿದ ಸಸಿಗಳು ಬೆಟ್ಟದ ಕಲ್ಲಿನ ಬಿಸಿ ತೊಟ್ಟಿಲಲ್ಲಿ ಬಾಡಿದವು, ಬಿಸಿಲಲ್ಲಿ ಅಡ್ಡಾಡಿ ಗಾರ್ಡ್, ಫಾರೆಸ್ಟ್‌ಗಳ ಯೂನಿಫಾರ್ಮ್ ಬೆವರಲ್ಲಿ ಒದ್ದೆ, ಗಂಟಲು ಒಣಗಿದವು. ಮಳೆ ಮೋಡ ನೋಡುತ್ತ ಸುಮ್ಮನೆ ಕೂಡ್ರುವಂತಿಲ್ಲ. ವಲಯ ಅರಣ್ಯಾಧಿಕಾರಿ ಕೆ. ಎಮ್. ಗಮನಘಟ್ಟಿ ಸಾಹೇಬರ ಕಳಕಳಿ, ತೀವ್ರ ಗಮನ, ಜಾಗ್ರತ ಸಿಬ್ಬಂದಿಗಳು ಗಿಡ ಬಚಾವು ಮಾಡಲು ಸಿದ್ಧರಾದರು. ಕಾಡುಗುಡ್ಡಕ್ಕೆ ಟ್ಯಾಂಕರ್ ಪಯಣ. ಟ್ಯಾಂಕರ್ ನೀರಿಗೆ ೧೦೦-೨೦೦ ರೂಪಾಯಿ, ಸತತ ಎರಡು ತಿಂಗಳು ೫೦ ಎಕರೆ ಕ್ಷೇತ್ರದ ೫೨ ಸಾವಿರ ಗಿಡಕ್ಕೆ ನೀರು ನೀಡಿಕೆ. ಇದ್ದಬಿದ್ದ ಕೆರೆಯಿಂದ ನೀರು ಬರುವಾಗ ಅರಣ್ಯ ಸಿಬ್ಬಂಧಿ ಕಣ್ಣಲ್ಲಿ ನೀರು. ಮುಂದೆ ಮಳೆ ಬಿತ್ತು, ಸಸಿಗಳಿಗೆ ಮರುಜೀವ ಬಂದಾಗ ನಿಟ್ಟುಸಿರು. ಅಲ್ಲಿನ ಗುಡ್ಡಕ್ಕೆ ಈಗ ವಾಟರ್‌ಕಲರ್, ನೀರು ಬರೆದ ಹಸುರು ಬಣ್ಣ.

ಬಯಲುಸೀಮೆ ಹೊಲ, ಹಾದಿ ಬದಿಯ ಪ್ರತಿ ಮರದ ಹಿಂದೆಯೂ ಸಾವು ಗೆದ್ದು ಬಂದ ಜೀವ ಕತೆ. ನಾಟಿ ಮಾಡಿ ಗಿಡ ಬೆಳೆಸಬೇಕೆಂದರೆ ಹಲವೆಡೆ ನೀರಿನ ವ್ಯವಸ್ಥೆ ಬೇಕೇ ಬೇಕು. ಮಲೆನಾಡಿನ ಅರಣ್ಯೀಕರಣ

ಎಷ್ಟೋ ಸುಲಭ, ಜೂನ್ ಮಳೆಗೆ ನಾಟಿ ಮಾಡಿದರೆ ಮುಂದೆ ಆಗಸ್ಟವರೆಗೂ ಮಳೆ ನೀರಾವರಿ. ಗುಂಡಿ ತೋಡಿ, ಗಿಡ ನೆಟ್ಟು, ಜಾನುವಾರು, ಬೆಂಕಿ ರಕ್ಷಣೆ ನೀಡಿದರೆ ಮರ ಬೆಳೆಯುತ್ತದೆ. ಒಂದು ಹೆಕ್ಟೇರ್‌ನಲ್ಲಿ ಎರಡು ಸಾವಿರ ಗಿಡ ಬೆಳೆಸಲು ಹತ್ತಾರು ಸಾವಿರ ಹಣ ಸಾಕು. ಬಯಲು ಸೀಮೆಯಲ್ಲಿ ಇದರ ಮೂರು ಪಟ್ಟು ಖರ್ಚು ಮಾಡಿದರೂ ಕೊನೆಗೆ ಮೂರು ಗಿಡ ಉಳಿಸುವದು ಕಷ್ಟ!.

ಜಪಾನ್ ನೆರವಿನಿಂದ ಬಯಲು ಸೀಮೆ ಅರಣ್ಯಾಭಿವೃದ್ಧಿಗೆ ಕ್ರಿ.ಶ, ೧೯೯೮ರಲ್ಲಿ ೫೩೬೫ ಕೋಟಿ ರೂಪಾಯಿ ಯೋಜನೆ. ಅದರಲ್ಲಿ ನೀರಾವರಿ ಮೂಲಕ ಸಸಿ ಬೆಳೆಸುವ ಪ್ರಸ್ತಾಪ ನೋಡಿ ಅಚ್ಚರಿ. ಕಾಯ್ದಿಟ್ಟ ಅರಣ್ಯ ನಶಿಸಿದ ಪ್ರದೇಶ, ಗೋಮಾಳ, ರಸ್ತೆ, ಕಾಲುವೆ, ರೇಲ್ವೆ ಹಳಿಯ ಪಕ್ಕ ೧೬.೦೦೦ ಹೆಕ್ಟೇರ್‌ದಲ್ಲಿ ೩೬ ಕೋಟಿ ರೂಪಾಯಿ ವೆಚ್ಚದಲ್ಲಿ ಬಿದಿರು, ತೇಗ, ಹಣ್ಣು ಹಂಪಲಿನ ತೋಟ ಬೆಳಸುವ ಕಾರ್ಯ. ಅಡಿಕೆ ತೋಟಕ್ಕೆ ನೀರು ನೀಡುವದು ಮಾತ್ರ ಗೊತ್ತಿದ್ದವರು ಅರಣ್ಯಕ್ಕೆ ನೀರಾವರಿ ಏಕೆಂದು ಹುಬ್ಬೇರಿಸಿದರು. ಕುಡಿಯಲು ನೀರಿಲ್ಲದ ಬಯಲುಸೀಮೆಯಲ್ಲಿ ಗಿಡ ಬೆಳೆಸಲು ನೀರಿನ ಅಪವ್ಯಯ ಸಲ್ಲದೆಂದೂ, ಇಲಾಖೆ ಹಣವನ್ನು ನೀರಿನ ಹಾಗೇ ಖರ್ಚು ಮಾಡಲು ರೂಪಿಸಿದ ತಂತ್ರ ನೀರಾವರಿ ಮಾದರಿ ನೆಡುತೋಪು ಎಂದು ಭಾಷಣದಲ್ಲಿ ಟೀಕಿಸಿದ್ದೇ ಟೀಕಿಸಿದ್ದು!. ಒಂದು ಗಿಡ ನಾಟಿ ಮಾಡಿ ಬೆಳೆಸುವ ನೆಲದ ಕಷ್ಟ ನೋಡಿದರೆ ಅರಣ್ಯೀಕರಣಕ್ಕೆ ನೀರಿನ ಆಧಾರ ಅರ್ಥವಾಗುತ್ತದೆ.

ನೀರನ್ನೆ ಆಧಾರವಾಗಿ ಅರಣ್ಯೀಕರಣ ನಡೆಸುವದೇ ಬಯಲುನಾಡಿನ ಏಕೈಕ ·ಮಾರ್ಗವೆಂದು ತೀರ್ಮಾನಕ್ಕೆ ಬರಬೇಕಾಗಿಲ್ಲ. ನೀರಿಲ್ಲದೆಯೂ ಗಿಡ ಬೆಳೆಸುವ ಜಾಣ್ಮೆಗೆ ನೆಲದ ಪ್ರಯೋಗ, ಪಾಠಗಳಿವೆ. ರಾಮಪುರ ಸನಿಹದ್ದೇ ಇನ್ನೊಂದು ಕತೆ, ಸ್ಥಳ ಸಂತೆಬಂಡೆ. ಹೆಸರಿಗೆ ತಕ್ಕಂತೆ ದೊಡ್ಡ ಕಲ್ಲುಬಂಡೆ, ದೊಡ್ಡ ಬಂಡೆಯಿಂದ ಬಂಡೆದ್ದು ಸಿಡಿದು ಅದರ ಆಚೆ ಹೊಸ ಪಕ್ಷ ಕಟ್ಟಿದ ಹಾಗೆ ಗಪ್ಪನೆ ಕೂತ ಮರಿಬಂಡೆ...ಸಣ್ಣ ಬಂಡೆ...ಪುಟ್ಟ ಬಂಡೆ...ಚಿಕ್ಕ ಬಂಡೆ. ನಡು ನಡುವೆ ಕೊಂಚ ಮಣ್ಣು, ಮಣ್ಣಿಗೆ 'ಕಲ್ಲು ಮುಚ್ಚಿಗೆ'!. ಕೃಷಿ ನೆಲದ ತೇವ ರಕ್ಷಣೆಗೆ ಬಯಲು ನೆಲದ ರೈತರ 'ಸ್ಟೋನ್ ಮಲ್ಚಿಂಗ್' ಸಾಂಪ್ರದಾಯಿಕ ವಿಧಾನದ ಹಾಗೇ ಕಲ್ಲುಬಂಡೆ ನೈಸರ್ಗಿಕ ವ್ಯವಸ್ಥೆ. ಅಂತಹ ಜಾಗದಲ್ಲಿ ೩ ಕಿಲೋ ಮೀಟರ್ ದೂರದವರೆಗೆ ಅರಣ್ಯ ಇಲಾಖೆಯಿಂದ ಕ್ರಿ.ಶ, ೧೯೯೦ರಲ್ಲಿ ಆಲ, ಅರಳಿ, ನೇರಳೆ ಮುಂತಾದ ಜಾತಿಯ ೬೦೦ ಸಾಲು ಗಿಡ ನಾಡಿ. ಪ್ರತಿ ಗಿಡದ ಬುಡದಲ್ಲಿ ಪಾತಿ ರಚನೆ, ರಸ್ತೆಗೆ ಬಿದ್ದ ಮಳೆ ನೀರು ಪ್ರತಿ ಹನಿಯೂ ಗಿಡದ ಬುಡಕ್ಕೆ ದೊರೆಯುವಂತೆ ಕಾಲುವೆ ವ್ಯವಸ್ಥೆ.

ಮೂರು ನಾಲ್ಕು ತಿಂಗಳಿಗೊಮ್ಮೆ ಗಿಡದ ಸುತ್ತಲಿನ ಮಣ್ಣನ್ನು ಗುದ್ದಲಿ, ಪಿಕಾಸಿಯಲ್ಲಿ ಸಡಿಲಗೊಳಿಸುವ ಕಾರ್ಯ, ಮಣ್ಣು ಸಡಿಲಾಗಿ ಮಳೆ ನೀರು ಸರಾಗವಾಗಿ ಇಂಗುತ್ತಿದ್ದಂತೆ ಗಿಡದ ಬೇರಿನ ಬೆಳವಣಿಗೆ ವೃದ್ಧಿ. ಕುರಿ, ಮೇಕೆಯಿಂದ ರಕ್ಷಣೆ, ಟ್ಯಾಂಕರ್ ನೀರಿಲ್ಲದೇ ಗಿಡ ಮರವಾದ ಹಸುರು ಬದುಕು.

ಬೋಳು ನೆಲ ಹಸಿರಾಗುವ ಕಷ್ಟ ವೀಕ್ಷಣೆ ಬಳಿಕ ಅವತ್ತು ರಾಮಪುರ ಬಳ್ಳಾರಿ ರಸ್ತೆಯಲ್ಲಿ ಸಾಗುವಾಗ ದೊಡ್ಡ ಏಕ್ಸಿಡೆಂಟ್!. ರಕ್ತ ಚಿಮ್ಮುವ ಹೆಣ ಮಲಗಿಸಿದ ಹಾಗೇ ಹುಣಸೆ, ಆಲ, ನೇರಲೆ ಮರಗಳ ಉರುಳಾಟ, ನರಳಾಟ. ವಾಹನ ದಟ್ಟನೆ ಹೆಚ್ಚಿ ಅಪಘಾತ ಜಾಸ್ತಿಯೆಂದು ರಸ್ತೆ ಅಗಲೀಕರಣ ಕಾಮಗಾರಿ, ಸಾವಿರ ಸಾಲು ಮರಗಳೆಲ್ಲ ಬಲಿ. ನೂರಾರು ವರ್ಷ ಹಿಂದೆ ಇವನ್ನು ಬೆಳೆಸಿದ ಬಗೆ ಹೇಗೆ ? ಹೇಗೆ ಹೆಮ್ಮರವಾದವು ? ಮರದ ಮಹಾಕತೆ ಕೇಳುವ ಕೌತುಕ. ಆದರೆ ಎಲ್ಲರ ಕೈಯಲ್ಲಿ ಗರಗಸ, ಗಸಗಸ ಸಪ್ಪಳ, ಮರಗಳ ಮೌನ. ಬೆಳ್ಳಕೆರೆ ಹೊಲದ ಎಕ್ಕೆ ಗಿಡಗಳನ್ನಾಗಲಿ, ಕೃಷ್ಣರಾಜಪುರ ಕಾಯ್ದಿಟ್ಟ ಅರಣ್ಯದ ಬಂಡೆಗಲ್ಲಿನ ಪಕ್ಕದ ದೊಡ್ಡ ಕಳ್ಳಿಗಿಡಗಳನ್ನಾಗಲಿ ಮಾತಾಡಿಸಿ ಮುಂದೆ ನೆಲದ ಮರದ ಕತೆ ತಿಳಿಯಬೇಕಾದ ಪರಿಸ್ಥಿತಿ.


### ದೇವರ ಭಯವೇ ಹಸುರಿಗೆ ಬೇಲಿ

ಬಯಲು ನಾಡಿನಲ್ಲಿ ಬನ್ನಿ ಮರ ಯಾರೂ ಕಡಿಯುವದಿಲ್ಲ, ಮೇಟಿ ಕಟ್ಟಿಗೆಗೆ ಕೆಲವೆಡೆ ಬಳಕೆಯಲ್ಲಿದೆ. ಎಕ್ಕೆಯನ್ನು ಗುಡ್ಡದಯ್ಯನ ಬಿಲ್ಲು ಎಂದು ರಾಣೆಬೆನ್ನೂರು ಪ್ರದೇಶದಲ್ಲಿ ಕರೆಯುತ್ತಾರೆ. ತಾರಿಮರದಲ್ಲಿ ಶನಿ ದೇವರವಾಸವಿದೆ, ಯಾರೂ ಇದನ್ನು ಕಡಿಯಬಾರದು ಎಂಬ ನಂಬಿಕೆ ಶಿವಮೊಗ್ಗ ಪ್ರಾಂತ್ಯಗಳಲ್ಲಿದೆ. ಬಿಲ್ವಪತ್ರೆ ಶಿವನ ಅರ್ಚನೆಗೆ ಶ್ರೇಷ್ಠವಾದ್ದರಿಂದ ಯಾರೂ ಮರ ಕಡಿಯುವದಿಲ್ಲ. ಕೂಡ್ಲಿಗೆ ತಾಲೂಕು ಅಮಲಾಪುರ, ಸಕ್ಕರೆ ಪಟ್ಟಣ ಹೀಗೆ ಹಲವೆಡೆ ಬಿಲ್ವ ವನ ಸಂರಕ್ಷಿತವಾಗಿದೆ. ಅಶ್ವತ್ಥ, ಅತ್ತಿ, ವಾಟೆ, ರಂಜಲು, ಆರಿಗಿಡ (ಆಸಿನ), ಜಗಳಗಂಟಿ ಗಿಡ, ಗೋಳಿ, ಜರ್ಬಂದಿ (ಟೆಟ್ರಾಮೆಲಸ್ ನ್ಯೂಡಿ ಪ್ಲೊರಾ), ಸಪ್ತಪರ್ಣಿ ಮುಂತಾದ ಕೆಲವು ವೃಕ್ಷಗಳನ್ನು ಕಡಿಯಲು ಜನ ಭಯ ಪಡುತ್ತಾರೆ. ಶಿರಸಿಯ ಮಿಸಗುಂಡ್ಲಿಯ ದೇವಸ್ಥಾನದ ಮರದ ಪಕ್ಕ ಬೆತ್ತ ಬೆಳೆದಿದೆ. ಅಲ್ಲಿನ ಕಾಡಿನಲ್ಲಿ ಇಲ್ಲದ ಬೆತ್ತ ದೇವಾಲಯ ಸನಿಹದಲ್ಲಿ ಮಾತ್ರ ಏಕೆ ಇದೆ?. 'ಇದು ಹುಲಿ ದೇವರ ಬೆತ್ತ, ಕಡಿದರೆ ಕೇಡಾಗುತ್ತದೆ' ಹಳ್ಳಿಗ ನಾರಾಯಣ ನಾಯ್ಕ ಹೇಳುತ್ತಾರೆ. ದೇವರ ಭಯದಿಂದ ಸಸ್ಯ ಹೀಗೆ ಸಂರಕ್ಷಿತವಾಗಿದೆ. ವಿಶೇಷವೆಂದರೆ ಇವುಗಳಲ್ಲಿ ಆಲ, ಅತ್ತಿಯಂತಹ ಸಸ್ಯಗಳಂತೂ ಪ್ರಾಣಿ, ಪಕ್ಷಿಗಳ ದೃಷ್ಟಿಯಲ್ಲಿ ಅತ್ಯಂತ ಉಪಯುಕ್ತವಾಗಿವೆ.

# ಊರಿನ ದುಃಖಕ್ಕೆ ಕಾಡೇ ಮೂಲ

**ಕಾಡು ನಾಶ ಮಾಡಿ ಯಾವ ಊರು ಉದ್ಧಾರವಾಗುವದಿಲ್ಲ, ಜನ ತಮ್ಮ ದೈನಂದಿನ ಅಗತ್ಯಗಳಿಗೆ ಕಣ್ಮುಚ್ಚಿ ಕಾಡಿಗೆ ನುಗ್ಗುವ ಪ್ರಮೇಯದಲ್ಲಿ ಕಾಡಿನೂರಲ್ಲಿ ಬಡತನ ಬೆಳೆಯುತ್ತಿದೆ. ಹಸುರು ಬೆಳೆಸಲು ಹಣ ಮಾತ್ರ ಸಾಲದು, ಹಳ್ಳಿಯಲ್ಲಿ ಹೃದಯ ಹೃದಯಗಳನ್ನು ಜೋಡಿಸುವ ಕೆಲಸ ಕೂಡಾ ಮುಖ್ಯವಾದುದು.**

ಗ್ರಾಮೀಣ ಅಭಿವೃದ್ಧಿ ಹೇಗೆ ? ಪ್ರಶ್ನೆ ಎದುರಾದಾಗ ದುಗಡಿಕೊಪ್ಪ ಎಂಬ ಹಳ್ಳಿ ನೆನಪಾಗುತ್ತಿದೆ. ಜೀವ ವೈವಿಧ್ಯದ ಸಿರಿ ಸೊಬಗಿನ ಶರಾವತಿ ಕಣಿವೆಯಿಂದ ಅಬ್ಬಬ್ಬಾ ಎಂದರೆ ೧೫ ಕಿಲೋ ಮೀಟರ್ ದೂರದ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಹಳ್ಳಿ ಇದು. ನಾಲ್ಕು ಮಜರೆಗಳಲ್ಲಿ ೮೦ ಮನೆಗಳ ಗ್ರಾಮ. ಭತ್ತ ಏಕೈಕ ಬೆಳೆ. ಕಿರಿದಾದ ಗುಡ್ಡದ ಸಾಲು ಊರಿನ ಸುತ್ತ ನಿಂತಿದೆ. ತಗ್ಗಿನಲ್ಲಿ ಚೆಂದಾಗಿಟ್ಟ ಬಟ್ಟಲಿನ ಹಾಗೇ ಭತ್ತದ ಭೂಮಿ. ಕೃಷಿ ಗೊಬ್ಬರ ತಯಾರಿಗೆ ಗಂಡಸರು ಸೊಪ್ಪು, ತರಗೆಲೆ ತರುತ್ತಾರೆ. ಉರವಲಿಗಾಗಿ ಮಕ್ಕಳು, ಮಹಿಳೆಯರು ಕಟ್ಟಿಗೆ ಹೊರುತ್ತಾರೆ. ಮಳೆ ಹನಿ ಬಿದ್ದರೆ ನೇಗಿಲ ಯೋಗಿಗಳ ಸಾಲು, ಗದ್ದೆಗಳಲ್ಲಿ ಗೊಬ್ಬರ ರಾಶಿ, ಶ್ರಮ ಜೀವನ ಬಡವರ ದಿನಚರಿ. ಈ ವರ್ಷ ಹೂಟಿ ಮುಗಿಸಿದ ಎತ್ತುಗಳು ಬೇಸಿಗೆ ಬರುತ್ತಲೆ ಮೇವಿಲ್ಲದೇ ಸಣಕಲಾಗಿ ಕೆಲಸಕ್ಕೆ ಬಾರದೇ ಮಾರಾಟ, ಮತ್ತೆ ಹೊಸ ಎತ್ತು ಖರೀದಿಗೆ ಹತ್ತಾರು ಸಾವಿರ ವಿನಿಯೋಗ. ದಿನವಿಡೀ ದುಡಿಯುತ್ತಾರೆ, ಬೆವರಿಳಿಸುತ್ತಾರೆ, ಆದರೂ ಬದುಕು ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲ. ಗುಡಿಸಲು ಸ್ವರೂಪ ಬದಲಾಗುವದಿಲ್ಲ.



ಅರಣ್ಯ ನಾಶ ಬಡತನಕ್ಕೆ ಮೂಲ

ಗ್ರಾಮೀಣ ಅಭಿವೃದ್ಧಿ ಯೋಜನೆಯ ಚಿತ್ರಗಳು ದುಗಡಿಕೊಪ್ಪದಲ್ಲಿ ಮೂಡುತ್ತಿವೆ. ಜಲ ನಿರ್ಮಲ ಯೋಜನೆ ಜಾರಿಯಾಗಿದೆ. ಕುಡಿವ ನೀರು, ಗಟಾರ ನಿರ್ಮಾಣವಾಗುತ್ತಿದೆ. ನೀರಿನ ಟ್ಯಾಂಕ್‌ಗಳು, ನಲ್ಲಿಗಳು ಊರು ಅಭಿವೃದ್ಧಿಯ ತುತ್ತ ತುದಿಯೇರಿ ನಿಂತಂತೆ ಕಾಣುತ್ತದೆ. ಆದರೆ ಊರಿನ ಆರೋಗ್ಯ ಪರೀಕ್ಷೆಗೆ ಸ್ಕ್ಯಾನ್ ಮಾಡಿದ ಹಾಗೇ ಅಲ್ಲಿನ ಗುಡ್ಡ ಓಡಾಡಿದರೆ ಮಲೆನಾಡಿನ ಹಳ್ಳಿಯ ಬಡತನದ ನಿಜ ಕಾರಣ ಪತ್ತೆಯಾಗುತ್ತದೆ. ತೆಂಗಿನ ಮರ ಗಾತ್ರದ ಹತ್ತು ಮರಗಳೂ ಅಲ್ಲಿನ ನೂರಾರು ಎಕರೆ ವಿಸ್ತೀರ್ಣದ ಗುಡ್ಡಗಳಲ್ಲಿ ಇಲ್ಲ. ಕುರುಚಲು ಗಿಡ, ಮುಳ್ಳುಕಂಟಿ ಮಾತ್ರ, ಕಾಡು ನೆಲ ಬಯಲು ಸೀಮೆಗೆ ಪ್ರತಿಸ್ಪರ್ಧಿ.

ಮನೆಯ ಸುತ್ತ ಬೆಳೆದಿದ್ದ ಮಾವು, ಹಲಸಿನ ಮರಗಳನ್ನು ಹಣದಾಸೆಗೆ ಮಾಲ್ಕಿ ಗುತ್ತಿಗೆದಾರರಿಗೆ ಒಂದು ಕಾಲದಲ್ಲಿ ಮಾರಿದ್ದಾರೆ, ಬಳಿಕ ಮತ್ತೆ ಅಂತಹ ಸಸಿ ನೆಡುವ ಪ್ರಯತ್ನ ಮಾಡಿಲ್ಲ. ನಿಸರ್ಗ ಸಂಪತ್ತನ್ನೆಲ್ಲ ಲೂಟಿಹೊಡೆದದ್ದು ಮಾತ್ರ ಅಲ್ಲಿ ಕಾಣುತ್ತದೆ. ಕಿಲೋ ಮೀಟರ್ ದೂರವೂ ಬೋಳು ಬಯಲು! ಹಾಗಂತ ನೈಸರ್ಗಿಕ ಗಿಡಗಳು ವಿಪುಲವಾಗಿವೆ. ಸೊಪ್ಪು, ಮೇವಿಗಾಗಿ ಸಂಪೂರ್ಣ ಕಡಿತಕ್ಕೆ ಒಳಗಾಗಿ ಮರವಿಲ್ಲದ ಬಡತನ ಬೆಳೆದಿದೆ. ಮಳೆ ಬಿದ್ದಾಕ್ಷಣ ಹದಿನೈದು ದಿನಕ್ಕೆ ನಾಲ್ಕೈದು ಅಡಿ ಬೆಳೆವ ಎಳೆ ಚಿಗುರು ಟೊಂಗೆಗಳು ಜಾನುವಾರು ದೊಡ್ಡಿಗೆಂದು ಕತ್ತಿ ಪ್ರಹಾರಕ್ಕೆ ತತ್ತರಿಸುತ್ತವೆ. ಇನ್ನು ಇವರೆಲ್ಲ ಶ್ರಮ ಪಟ್ಟು ತಯಾರಿಸಿದ ಸೊಪ್ಪಿನ ಗೊಬ್ಬರ ಭತ್ತದ ಭೂಮಿಗೆ ಬೀಳುತ್ತಿದ್ದಂತೆ ಅಬ್ಬರದ ಮಳೆನೀರು ಗದ್ದೆಗೆ ನುಗ್ಗಿ ಫಲವತ್ತಾದ ಗೊಬ್ಬರ, ಮಣ್ಣನ್ನು ಕೊಚ್ಚಿ ಒಯ್ಯುತ್ತದೆ. ಸತ್ವವಿಲ್ಲದ ಮಣ್ಣಿನಲ್ಲಿ ಎಕರೆಗೆ ೧೨ ಚೀಲ ಭತ್ತವಾದರೆ ಅದೃಷ್ಟ ! ವಿಚಿತ್ರವೆಂದರೆ ತಾವು ದುಡಿದದ್ದು ಹೀಗಾಗುತ್ತಿದೆ ಎಂಬ ಸತ್ಯ ಗೊತ್ತಿದ್ದವರೂ ಕಡಿಮೆ, ದುಡಿತ ಮಾತ್ರ ಪರಂಪರೆ ಬಳುವಳಿ.

ವರ್ಷಕ್ಕೆ ೩೦೦೦ಮಿಲಿ ಮೀಟರ್ ಮಳೆ ಬೀಳುತ್ತದೆ. ಇಲ್ಲಿನ ಪ್ರತಿ ಎಕರೆಯಲ್ಲಿ ೮೦-೯೦ ಲಕ್ಷ ಲೀಟರ್ ನೀರು ಸುರಿಯುತ್ತದೆ. ಆದರೆ ಅರಣ್ಯವಿಲ್ಲದ ಕಾರಣ ಭೂಮಿಗೆ ಇಂಗದೇ ಓಡಿಹೋಗುತ್ತದೆ, ಫೆಬ್ರುವರಿಗೆ ಬಾವಿಗಳಲ್ಲಿ ನೀರಿಲ್ಲ. ಉರವಲು ಕಟ್ಟಿಗೆ ಹಾಗೂ ಕುಡಿವ ನೀರಿಗಾಗಿ ದಿನದ ಹಲವು ತಾಸು ವ್ಯಯ. ಕೊಳವೆ ಬಾವಿಯಲ್ಲಿ ಜೀವನ. ಊರಿನ ಸಂಕಷ್ಟ ನಿವಾರಣೆಗೆ ಜಲನಿರ್ಮಲ ಯೋಜನೆ ಬಂದಿದೆ. ಅಂತರ್ಜಲ ಇನ್ನಷ್ಟು ಬಳಸಲು ಊರಿಗೆಲ್ಲ ನಲ್ಲಿ ಜೋಡಣೆಯಾಗಿದೆ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆದಂತೆ ಸರಕಾರಿ ಹಣ ವರ್ಷವೂ ಖರ್ಚಾಗುತ್ತದೆ.

ಸಮಸ್ಯೆಯ ಮೂಲಕ್ಕೆ ಚಿಕಿತ್ಸೆಯಾಗುವ ಬದಲು ಸಮಸ್ಯೆ ಹೆಚ್ಚಿಸುವ ಕೆಲಸ ನಡೆಯುತ್ತಿದೆ. ಈಗ ಜಪಾನ್ ನೆರವಿನ ಅರಣ್ಯ ಅಭಿವೃದ್ಧಿ ಯೋಜನೆಯಲ್ಲಿ ಕರ್ನಾಟಕ ಅರಣ್ಯ ಇಲಾಖೆ ಈ ಹಳ್ಳಿಯಲ್ಲಿ ಗ್ರಾಮ ಅರಣ್ಯ ಸಮಿತಿ ಮಾಡಿದೆ. ಊರಿನ ಗುಡ್ಡಗಳಲ್ಲಿ ಕರೆ, ಇಂಗು ಗುಂಡಿ ರಚನೆಯಾಗಿದೆ. ಓಡುವ ನೀರು ನಿಲ್ಲಿಸುವ ಪ್ರಯತ್ನ ಆರಂಭವಾಗಿದೆ. ಆದರೆ ಇದರ ಮಹತ್ವ ಹಳ್ಳಿಗರಿಗೆ ತಿಳಿದಿಲ್ಲ, ಅರಣ್ಯ ಇಲಾಖೆಯವರು ಗುಡ್ಡದಲ್ಲಿ ಗುಂಡಿ ತೋಡಿದ್ದಾರೆ ಎಂದಷ್ಟೇ ಅವರು ಹೇಳುತ್ತಾರೆ. ಈ ವರ್ಷ ೬೦ ಹೆಕ್ಟೇರ್ ಅಕೇಸಿಯಾ ನೆಡುತೋಪು ಬೆಳೆಸುವ ಸಿದ್ಧತೆ ನಡೆದಿದೆ. ಉರುವಲು ಸಮಸ್ಯೆ ಇರುವದರಿಂದ ಬೇಗ ಬೆಳೆಯುವ ಈ ವಿದೇಶಿ ಸಸ್ಯ ನಾಟಿ ಮಾಡಿರುವದಾಗಿ ಅಧಿಕಾರಿಗಳು ಹೇಳುತ್ತಾರೆ. ಗದ್ದೆ ಬಯಲಿನ ಸುತ್ತಲಿನ ಗುಡ್ಡಗಳಲ್ಲಿ ಸಸಿ ನೆಡುವ ಸಿದ್ಧತೆ ನಡೆದಿದೆ.

ಹಳ್ಳಿಗರಲ್ಲಿ ಜಾಗ್ರತಿ ಮೂಡಿಸಿ ಊರಿನ ಗುಡ್ಡದಲ್ಲಿ ಈಗಾಗಲೇ ಇರುವ ಸಸ್ಯಗಳಿಗೆ ಸಂರಕ್ಷಣೆ ನೀಡುವ ಪ್ರಯತ್ನ ಮಾಡಿದ್ದರೆ ನೈಸರ್ಗಿಕ ಕಾಡನ್ನು ಖರ್ಚಿಲ್ಲದೇ ಸುಲಭದಲ್ಲಿ ಬೆಳೆಸಬಹುದಿತ್ತು. ಗುಡ್ಡದ ಕಾಡನ್ನು ಮಿತವಾಗಿ ಬಳಸುತ್ತ ಸಂರಕ್ಷಣೆಯಿಂದ ಅರಣ್ಯ ಬೆಳೆಸುವ ಮಾದರಿ ರೂಪಿಸಬಹುದು. ಉರುವಲಿಗಾಗಿ ಕೃಷಿಕರ ಗದ್ದೆಯಂಚಿನಲ್ಲಿ ಬೇಗ ಬೆಳೆಯುವ ಸಸ್ಯ ಜಾತಿ ನಾಟಿ ಮಾಡಬಹುದಿತ್ತು, ಬೇಲಿಗೆಂದು ತೆಗೆದ ಮಣ್ಣಿನ ಅಗಳಗಳ ಮೇಲೆ ಅಕೇಸಿಯಾ ನಡೆಬಹುದಿತ್ತು. ಜನರನ್ನು ಸೇರಿಸಿ ಕೃಷಿ ಭೂಮಿಯಲ್ಲಿ ಮರ ಬೆಳೆಸಲು ಅವರ ಮನಸ್ಸು ಪರಿವರ್ತಿಸಲು ಸಾಧ್ಯವಾದರೆ ಊರಿಗೆ ಹೊಸ ಕಳೆ ಮೂಡುತ್ತದೆ. ಕಾಡಿನ ಕಟ್ಟಿಗೆ, ಸೊಪ್ಪು ಬಳಕೆಗೆ ಕಡಿವಾಣ ಹಾಕುವ ಕೆಲಸವಾಗುತ್ತದೆ. ಇದಕ್ಕೆ ಸಾಕಷ್ಟು ಸಮಯ ಹಿಡಿಯುತ್ತದೆಂದು ಸುಲಭದ ದಾರಿಯಾಗಿ ಅಕೇಸಿಯಾ ನಾಟಿಯಾಗಿದೆ. 'ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆಯ ಜ್ಞಾನ ಹಳ್ಳಿಗರಿಗಿದೆ' ಎಂದು ನಾವು ಎಷ್ಟೋ ವೇದಿಕೆಗಲ್ಲಿ ವಾದಿಸುತ್ತೇವೆ. ಇಂತಹ ಹಳ್ಳಿಯಲ್ಲಿ ಕತ್ತಿ ಪ್ರಹಾರ ನಡೆದ ಸ್ಥಿತಿಯನ್ನು ಏನೆಂದು ಕರೆಯೋಣ? ಭವಿಷ್ಯ ಏನಾದೀತು ? ಊಹೆ ಕಷ್ಟ. ಊರವರೆಲ್ಲ ಸೇರಿ ಬರ್ಜರಿ ಬಡತನಕ್ಕೆ ಆಮಂತ್ರಣ ನೀಡಿದಂತಾಗಿದೆ. ಮನೆ ಮನೆ ದ್ವೇಷ ಕುಟುಂಬ ಸೇಡು, ರಾಜಕೀಯ ಗುಂಪುಗಾರಿಕೆ ನಮ್ಮ ಹಳ್ಳಿಗಳ ಸಹಬಾಳ್ವೆಯ ವ್ಯವಸ್ಥೆಯನ್ನು ಮೀರಿ ಬೆಳೆಯುತ್ತಿದೆ. ಒಬ್ಬ ಮಾಡಿದ್ದು ಇನ್ನೊಬ್ಬನಿಗೆ ಆಗುತ್ತಿಲ್ಲ, ಸತ್ಯ, ಭವಿಷ್ಯ ಅರ್ಥಮಾಡಿಕೊಂಡು ಬೆಳೆಯುವದು ಸಾಧ್ಯವಾಗದೇ ಹಸುರು ಹಳ್ಳಿಗಳಲ್ಲಿ ಅದ್ವಾನಗಳು ತಲೆ ಎತ್ತುತ್ತವೆ.

ಜನರನ್ನು ಜಾಗ್ರತಗೊಳಿಸಿ ಊರಿಗೆ ತಕ್ಕುದಾದ ಒಂದು ನಿರ್ವಹಣಾ ವ್ಯವಸ್ಥೆ ಅಭಿವೃದ್ಧಿಪಡಿಸುವ ಕಾರ್ಯ ಮಹತ್ವದ್ದಾದರೂ ಯಾರಿಗೂ ಇಂತಹ

ಕೆಲಸಕ್ಕೆ ಸಮಯವಿಲ್ಲ. ಸರಕಾರಿ ಇಲಾಖೆಗಳಿಗೆ ಕೆಲಸ ಮುಗಿಸುವ ಪೈಪೋಟಿ. ಹಣವಿದ್ದರೆ ಮಾತ್ರ ಅಭಿವೃದ್ಧಿ ಸಾಧ್ಯವಿಲ್ಲ. ಒಡೆದು ಹೋದ ಹೃದಯ ಜೋಡಿಸುವ ಕಾರ್ಯಕರ್ತರು ಬೇಕು. ಒಂದು ವೇದಿಕೆಯಲ್ಲಿ ಎಲ್ಲರೂ ಸೇರಿದ ಬಳಿಕ ಅಭಿವೃದ್ಧಿಯ ಸೂತ್ರ ಸುಲಭ, ಸರಳ. ಸರಕಾರವೇ ಎಲ್ಲವನ್ನೂ ಮಾಡಬೇಕೆಂಬ ಸ್ಥಿತಿಯ ಮಧ್ಯೆ ಮನಸ್ಸು ಪರದೇಸಿಯಾಗಿದೆ. ಊರಿಗೆ ಜನರಲ್ಲಿರುವ ಸಮೂದಾಯ ಶಕ್ತಿಯ ಮಹತ್ವದ ಬಗೆಗೆ ಪಾಠ ಹೇಳಲು, ಜನರನ್ನು ಕೂಡಿಸಲು ಕಾರ್ಯಕರ್ತರು ಬೇಕು. ಅಭಿವೃದ್ಧಿಯ ಪ್ರಥಮ ಹೆಜ್ಜೆ ಹಣವೆಂದು ಅರ್ಥಮಾಡಿಕೊಂಡ ಈ ಸ್ಥಿತಿಯಲ್ಲಿ ಊರು ನರಳುತ್ತಿದೆ. ತಿಪಟೂರಿನ ಲಕ್ಕಿಹಳ್ಳಿಯ ಸುತ್ತಲಿನ ಪ್ರದೇಶದಲ್ಲಿ ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆ ಕೃಷಿ ಅರಣ್ಯದ ಮುಖೇನ ಮಾಡಿದ ಸಾಧನೆ ಇಲ್ಲಿಗೆ ಮಾದರಿಯಾಗುತ್ತದೆ. ಆದರೆ ಇಲ್ಲಿ ಬದಲಾವಣೆಯ ಗಾಳಿ ಬೀಸುವದು ಯಾವಾಗ ? ದುಗಡಿಕೊಪ್ಪ ಮಾತ್ರವಲ್ಲ ರಾಜ್ಯದ ಬಹುತೇಕ ಹಳ್ಳಿಗಳಲ್ಲೂ ಪ್ರಶ್ನೆ ಹೀಗೆ ಇದೆ.

### ಗುಂಡು ತೋಪು

'ಹೊಂಗೆ ಬೆಳೆಯಿರಿ, ಬಯೋಡಿಸೈಲ್ ಗಳಿಸಿರಿ' ಎಂದು ನಾಲ್ಕು ವರ್ಷದ ಹಿಂದೆ ರಾಜ್ಯದಲ್ಲಿ ಜಾಗೃತಿಯ ಮಾತು ಕೇಳಿ ಬಂದಿದೆ. ಅರಣ್ಯ ನರ್ಸರಿಗಳಲ್ಲಿ ಹೊಂಗೆ ವಿಶೇಷ ಮಾನ್ಯತೆ ಗಳಿಸಿದೆ. ಕಾರ್ಯಾಗಾರಗಳು ನಡೆದಿವೆ. ರೈತರಿಗೆ ಕೃಷಿ ಅರಣ್ಯದಲ್ಲಿ ಜೈವಿಕ ಇಂಧನ ನೀಡಬಲ್ಲ ಜಟ್ರೋಪಾ, ಸಿಮಾರೂಬಾ, ಹೊಂಗೆ, ಇಪ್ಪೆ ಬೆಳೆಯಲು ಅಧಿಕಾರಿಗಳು ಉಪದೇಶ ಮಾಡಿದ್ದಾರೆ. ಈ ಸಂದಭಧದಲ್ಲಿ ಕರ್ನಾಟಕದ ಕೋಲಾರದ ರೈತರು ಊರಿನ ಗುಂಡು ತೋಪಿನತ್ತ ಎಲ್ಲರ ಗಮನ ಸೆಳೆದು ಬಹುಪಯೋಗಿ ಹೊಂಗೆ ಉಳಿಸಿದ ವಿಧಾನ ವಿವರಿಸಿದ್ದಾರೆ.

ಊರಿನ ಬಳಕೆಗಾಗಿ ಮರ ಸಂರಕ್ಷಿಸುವ ವಿಶಿಷ್ಟ ಗುಂಡು ತೋಪು ಕೋಲಾರ ಪ್ರದೇಶದಲ್ಲಿದೆ. ನಿಗದಿತ ಜಾಗದಲ್ಲಿ ದೇವರ ಕಾಡು ಬೆಳೆಸುವ ಹಾಗೇ ಊರಿಗಾಗಿ ಮರ ಉಳಿಸುವ ಪರಂಪರೆ ಶತಮಾನಗಳಿಂದ ಇಲ್ಲಿ ಸಾಗಿ ಬಂದಿದೆ. ಮಾವು, ನೇರಲೆ, ಆಲ, ಅಂಕೋಲೆ ಮರ, ಹೊಂಗೆ ಇತ್ಯಾದಿ ವೃಕ್ಷಗಳು ಇಂತಹ ತೋಪುಗಳಲ್ಲಿರುತ್ತವೆ. ಯಾರೂ ಇಲ್ಲಿ ಮರ ಗಿಡದ ಟೊಂಗೆ ಸಹ ಕಡಿಯುವದಿಲ್ಲ. ಹೀಗಾಗಿ ಊರಿನ ನೆಲದ ಅಪರೂಪದ ವೃಕ್ಷಗಳು ಇಲ್ಲಿರುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಅಲ್ಲಿನ ಪರಿಸರದಲ್ಲಿ ಯಾವ ಯಾವ ಜಾತಿ ಗಿಡಗಳು ಚೆನ್ನಾಗಿ ಬೆಳೆಯುತ್ತವೆಂಬ ಪ್ರಾತ್ಯಕ್ಷಿಕೆ ಪಾಠ ಕೂಡಾ ಇಲ್ಲಿದೆ. ಇಲ್ಲಿನ ಮರಗಳು ಹೊಸ ಸಸ್ಯಾಭಿವೃದ್ಧಿಗೆ ಅಗತ್ಯ ಬೀಜ ನೀಡುವ ತಾಣವಾಗಿವೆ.

# ಬ್ರಿಟೀಷ್ ದಪ್ತರಿನಲ್ಲಿ ಅಡವಿ ಸೌಲಭ್ಯದ ಕಾಗದ

'ಅಡಿಕೆ ತೋಟವಿರುವ ಕಾನಡಾ ಜಿಲ್ಲೆ ದೊಡ್ಡ ಭಾಗದಲ್ಲಿ ವ್ಯಾಪಾರೀ ದೃಷ್ಟಿಯಿಂದ ಅಡವಿಗೆ ಏನೂ ಬೆಲೆಯಿಲ್ಲ. ಅಡವಿಯನ್ನು ರಕ್ಷಿಸುವದಕ್ಕಿಂತ ಅಡಿಕೆ ತೋಟಕ್ಕೆ ಯೋಗ್ಯವಾ ಪ್ರದೇಶಗಳಲ್ಲಿ ಅದರ ಬೆಳವಣಿಗೆ ಮಾಡುವದು ಹೆಚ್ಚಿನ ಮಹತ್ವವಿದೆ .... ಎಂದು ಒಮ್ಮೆ ಬ್ರಿಟೀಷ್ ಸರಕಾರ ಠರಾವು ಮಾಡಿತ್ತು !. ಅರಣ್ಯ ಜಿಲ್ಲೆಯ ಕೃಷಿ ಸೌಲಭ್ಯಗಳ ಹಿಂದೆ ಕುತೋಹಲಕರ ಇತಿಹಾಸವಿದೆ.

'ಕಾಡು ದೂರ ಕೃಷಿ ಭಾರ' ಎನ್ನುತ್ತಿದೆ ಕರಾವಳಿ ತೀರ. ಹೊನ್ನಾವರದ ಹಳಿದೀಪುರ ಗದ್ದೆಗೆ ೨೦ ಕಿಲೋ ಮೀಟರ್ ದೂರದ ಕಾಡು ತೆರಕು ನೀಡಬೇಕು. ೩೦ ಕಿಲೋ ತೂಕದ ತೆರಕಿನ ಕಲ್ಲಿಗೆ ೬೦ ರೂಪಾಯಿ ದರ !. ತೆಂಗಿನ ಮರದ ಬುಡಕ್ಕೆ ಹಾಕುವ ಒಂದು ಹೊರೆ ಕಾಸರಕನ ಸೊಪ್ಪಿಗೆ ೧೫೦ ರೂಪಾಯಿ ಕೊಟ್ಟರೂ ತರುವವರಿಲ್ಲ. ತಲೆಹೊರೆ ಹಸಿಸೊಪ್ಪು ಅಬ್ಬಬ್ಬಾ ಎಂದರೆ ೩೦–೩೫ ಕಿಲೋ ತೂಕ, ಇದಕ್ಕೆ ೫೦ ರೂಪಾಯಿ ತೆರಬೇಕು. ಕೃಷಿಗೆ ಅಗತ್ಯ ಸಾವಯುವ ವಸ್ತು ಕಾಡಿನಿಂದ ಪಡೆಯುವದಕ್ಕೆ ನಾವು ಹಣ ಕೊಡಬೇಕಾಗಿಲ್ಲ, ಆದರೆ ಕೃಷಿ ಭೂಮಿ ಸನಿಹದ ಅಡವಿ ನಾಶದ ಬಳಿಕ ಸಾಗಾಟ, ಕೂಲಿ ಖರ್ಚುಗಳು ಸೊಪ್ಪು, ತೆರಕು, ಉರುವಲು ಬೆಲೆ ವಿಪರೀತ ಏರಿಸಿವೆ. ಜಂಗಲ್ ಮಾಯವಾದ ಭಟ್ಕಳದಲ್ಲಿ ಒಂದು ಚಕ್ಕಡಿ ಕಟ್ಟಿಗೆಗೆ ಈಗ ೧.೧೦೦ ರೂಪಾಯಿ !. ತೂಕದ ಲೆಕ್ಕದಲ್ಲಿ ನೋಡಿದರೆ ಇಲ್ಲಿ ಕಿಲೋ ಕಟ್ಟಿಗೆಗೆ ೨.೫೦ ರೂಪಾಯಿ.



ಸೊಪ್ಪಿನ ಬೆಟ್ಟ ಬ್ರಟೀಷ್ ಕಾಲದ ಅರಣ್ಯ ಸೌಲಭ್ಯ

'ಅಡಿಕೆ ತೋಟವಿರುವ ಕಾನಡಾ ಜಿಲ್ಲೆ ದೊಡ್ಡ ಭಾಗದಲ್ಲಿ ವ್ಯಾಪಾರೀ ದೃಷ್ಟಿಯಿಂದ ಅಡವಿಗೆ ಏನೂ ಬೆಲೆಯಿಲ್ಲ. ಅಡವಿಯನ್ನು ರಕ್ಷಿಸುವದಕ್ಕಿಂತ ಅಡಿಕೆ ತೋಟಕ್ಕೆ ಯೋಗ್ಯವಾದ ಪ್ರದೇಶಗಳಲ್ಲಿ ಅದರ ಬೆಳವಣಿಗೆ ಮಾಡುವದು ಹೆಚ್ಚಿನ ಮಹತ್ವವಿದೆ ....' ಕ್ರಿಶ ೧೯೦೨ರ ಮೇ ೯ರ ಬ್ರಿಟೀಷ್ ಸರಕಾರದ ಠರಾವು ಸಾರುತ್ತದೆ. ಕಣಿವೆ ಕಾಡಿನಲ್ಲಿ ಕೃಷಿಗೆ ಉತ್ತೇಜನ, ಕಾಡಿನ ಮರ ಕಡಿಯಲು ಕೂಲಿಗೆ ಬಂದವರಿಗೆ ಪುಕ್ಕಟೆ ಕೃಷಿ ಭೂಮಿ ಹಂಚುವ 'ಜಂಗಲ್ ಮಹಲ್' ಯೋಜನೆ ಜಾರಿಗೊಳಿಸಿದೆ. ಹಳೆಯ ಬ್ರಿಟೀಷ್ ದಾಖಲೆಯ ದಪ್ತರ್ ತಗೆದರೆ ನಮ್ಮ ಕೃಷಿ ಅರಣ್ಯ ಸೌಲಭ್ಯದ ಕೌತುಕದ ಚರ್ಚೆಗಳಿವೆ. ಕ್ರಿಶ ೧೯೧೪ರ ಕಾಲಕ್ಕೆ ನಮ್ಮ ಅರಣ್ಯ ಬಳಕೆ ಗಮನಿಸಿ ಕೆನರಾ ಕಲೆಕ್ಟರ್ ಕಾಲಿನ್ಸ್ ದಂಗಾಗಿದ್ದರು. 'ಪ್ರಪಂಚದ ಯಾವ ದೇಶದಲ್ಲಿಯೂ ಕೃಷಿಗಾಗಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾಡು ಬಳಸುವದನ್ನು ತಾನು ನೋಡಿಯೇ ಇಲ್ಲ. ಒಂದು ಕಡೆ ಅಡವಿ ನಾಶ ಮಾಡಿದ ಬಳಿಕ ರೈತರು ಇನ್ನೊಂದು ಜಾಗದಲ್ಲಿ ಸರಿಕಾರೀ ಅರಣ್ಯ ಕೇಳುತ್ತಾರೆ. ಜಂಗಲ್‌ಕೊಡಿ ..... ಜಂಗಲ್ ಕೊಡಿ ಎಂದರೆ ನಾನೇನು ಆಕಾಶದಿಂದ ಜಂಗಲ್ ತರಬೇಕೆ? ಕೃಷಿಗಾಗಿ ಕಾಡು ಕೊಟ್ಟು ಕೊಟ್ಟು ಕಟ್ಟಕಡೆಗೆ ಇದು ಜನರ ಅನಿಷ್ಟಕ್ಕೆ ಕಾರಣವಾಗುತ್ತದೆ' ಎಚ್ಚರಿಸುತ್ತಾರೆ.

ಕ್ರಿಶ ೧೯೦೨-೦೪ರ ನಾಲ್ಕು ವರ್ಷಕಾಲ ಕೆನರಾದಲ್ಲಿ ಬೇಸಾಯಗಾರರಿಗೆ ಕಾಡಿನಿಂದ ತೆರಕು ತರುವ ಹಕ್ಕಿಲ್ಲವೆಂಬ ನಿಯಮ ಹೇರಿದ್ದರು !. ಘಟ್ಟದ ಮೇಲ್ಭಾಗದ ಅಡಿಕೆ ತೋಟಿಗರು ಕಾಡಿನ ಸೊಪ್ಪು ಕಡಿಯುವದನ್ನು ತಡೆಯುವದಕ್ಕಾಗಿ ಸರಕಾರೀ ಸೊಪ್ಪಿನ ಡಿಪೋ ಆರಂಭ !!. ಡಿಪೋಗಳಲ್ಲಿ ಹಣ ಕೊಟ್ಟು ಅಡವಿ ಸೊಪ್ಪು ಖರೀದಿಸಿ ಕೃಷಿ ನಡೆಸಬೇಕು. 'ಜಂಗಲು ಇಲ್ಲದ ಹಳ್ಳಿಗರಂತೆ ಜಂಗಲಿನಿಂದ ತರುವ ಸಾಮಗ್ರಿಗಳ ಬಗೆಗೆ ದುಡ್ಡು ಕೊಡಬೇಕಾಗುವದೆಂದು ಕೃಷಿಕರು ತಿಳಿಯಬೇಕು. ಚರ್ಚಿಸುವಾಗ ಪರಂಪರೆಯ ರಿವಾಜುಗಳೆಂದು ಗದ್ದಲವೆಬ್ಬಿಸುತ್ತಾರೆ. ಈ ಹಕ್ಕುಗಳು ಜನವಸತಿಯಿರುವ ಬೇರೆ ಜಿಲ್ಲೆಗಳಲ್ಲಿ ಕೇಳಿಬರುವದಿಲ್ಲ ಎಂಬುದು ಬ್ರಿಟೀಷರ ಪ್ರತಿಪಾದನೆ. ಶಿರಸಿಯ ಮಹಾಬಲೇಶ್ವರ ಭಟ್ (ಗೋಪಿ ವಕೀಲರು) ಸೇರಿದಂತೆ ರೈತ ಧುರೀಣರ ನೇತ್ರತ್ವದಲ್ಲಿ ಸೊಪ್ಪಿನ ಬೆಟ್ಟಗಳ ಬಗೆಗೆ ಬೃಹತ್ ಚಳುವಳಿ, ವನದುಃಖ ನಿವಾರಣಾ ಸಮಿತಿಯಿಂದ ನಿರಂತರ ಜನಜಾಗ್ರತಿ. ಕಾನಡಾ ಧುರೀಣ ಎಂಬ ಪತ್ರಿಕೆ ಆ ಕಾಲಕ್ಕೆ ರೈತ ಸೌಲಭ್ಯದ ಮಹತ್ವ

ಬಿಂಬಿಸುವ ಬರೆಹ ಪ್ರಕಟಿಸಿದೆ. ಅರಣ್ಯಕ್ಕೆ ಕಡಿವಾಣ ಹಾಕಿ ಜನ ವಿರೋಧ ಕಟ್ಟಿಕೊಳ್ಳಲು ಸಾಧ್ಯವಾಗದ ಬ್ರಿಟೀಷ್ ಸರಕಾರ ನಿಲುವು ಬದಲಾಯಿಸಿತು 'ಅರಣ್ಯಕ್ಕೂ ಬೇಸಾಯಕ್ಕೂ ಲಾಭವಾಗುವಂತೆ ಅರಣ್ಯದ ಧೋರಣೆಯಲ್ಲಿ ಬದಲಾವಣೆ ಮಾಡತಕ್ಕದ್ದು' ತತ್ವಪಾಲನೆ.

ನಮ್ಮ ಅರಣ್ಯಗಳನ್ನು ಕಾಯ್ದಿಟ್ಟ ಅರಣ್ಯ, ಸುರಕ್ಷಿತ ಅರಣ್ಯಗಳೆಂದು ಕ್ರಿ.ಶ ೧೮೭೮ರಲ್ಲಿ ವಿಂಗಡನೆಯಾಗಿದೆ. ಕ್ರಿ.ಶ ೧೮೯೧ರ ಜನವರಿ ೨೬ರಂದು ಮುಂಬೈ ಸರಕಾರ ತನ್ನ ಪ್ರಾಂತ್ಯದ ಅಡವಿ ಸನಿಹದ ಹಳ್ಳಿಗರಿಗೆ ಹುಲ್ಲು, ಉರುವಲು, ಸೊಪ್ಪು, ಸ್ವಂತ ಬಳಕೆಗೆ ಮರಗಳನ್ನು ನೀಡುವ ನಿರ್ಧಾರ ಪ್ರಕಟಿಸಿತು. ಇತ್ತ ಮೈಸೂರು ಸಂಸ್ಥಾನದಲ್ಲಿ ಕ್ರಿ.ಶ ೧೯೦೦ರಲ್ಲಿ ಜಾರಿಗೆ ಬಂದಿದ್ದ ಅರಣ್ಯ ಕಾಯ್ದೆ ಕೆಲವು ಕ್ಷೇತ್ರಗಳನ್ನು ಜಿಲ್ಲಾ ಕಾಡುಗಳೆಂದು ಗುರುತಿಸಿತು. ಮಲೆನಾಡಿನ ಶಿವಮೊಗ್ಗ, ಚಿಕ್ಕಮಂಗಳೂರು, ಹಾಸನ, ಮೈಸೂರು ಭಾಗಗಳಲ್ಲಿ ರೈತರಿಗೆ 'ಮಲೆನಾಡ ರೈತರ ವಿಶೇಷ ಸೌಲಭ್ಯ' ದಕ್ಕಿತು. ಕೊಡಗಿನ ಅರಸರು ಬಾಣೆ, ಪೈಸಗಿ, ಗೇಣಿಮಲೆ, ಏಲಕ್ಕಿಮಲೆ, ದೇವರಕಾಡು, ಉರಡ್ವೆಗಳಲ್ಲಿ ಕೃಷಿಗಾಗಿ ಅರಣ್ಯ ಬಳಕೆಗೆ ಅವಕಾಶ ಒದಗಿಸಿದ್ದರು. ದಕ್ಷಿಣ ಕನ್ನಡದಲ್ಲಿ 'ಕುಮಕಿ' ರೈತರ ಬೆಂಗಾವಲಾಗಿ ನಿಂತಿತು, ರಾಜ್ಯದ ಎಲ್ಲ ಜಿಲ್ಲೆಗಳಿಗೆ ಅನ್ವಯಿಸುವ ಸಾಮಾನ್ಯ ಸೌಲಭ್ಯ, ಪ್ರತಿಜಿಲ್ಲೆಗೆ ಪ್ರತ್ಯೇಕವಾದ ವಿಶೇಷ ಸೌಲಭ್ಯ, ಅರಣ್ಯ ಆಡಳಿತವನ್ನು ಪ್ರಾಂತವಾರು ವಿಂಗಡನೆ ಹೀಗೆ ಪರಿವರ್ತನೆ ಸಾಗಿದವು. ಖಾತೆಕಾನು, ಸೊಪ್ಪಿನ ಬೆಟ್ಟ, ಹಾಡಿ, ಗೋಮಾಳ ಮುಂತಾದ ಸಾಮಾನ್ಯ ಸೌಲಭ್ಯ ಬೆಳೆದವು. ಸೈಮನ್ ಕಮೀಶನ್‌ನಿಂದ ತೋಟಿಗರ ಅರಣ್ಯ ಸೌಲಭ್ಯಗಳ ವಿಶೇಷ ಅಭ್ಯಾಸವೂ ನಡೆಯಿತು. ಉತ್ತರ ಕನ್ನಡದ ಕರಾವಳಿಯ ಒಂದು ಎಕರೆ ಅಡಿಕೆ ತೋಟಕ್ಕೆ ೪ ಎಕರೆ ಸೊಪ್ಪಿನ ಬೆಟ್ಟ, ಘಟ್ಟದ ಎಕರೆ ತೋಟಕ್ಕೆ ೯ ಎಕರೆ ಸೊಪ್ಪಿನ ಬೆಟ್ಟ ನೀಡಿಕೆ ಕಾಡು ನಂಬಿದ ಕೃಷಿಕರಿಗೆ ವರವಾಯಿತು.

ಮುಂಬೈ ಸರಕಾರದ ರೆವಿನ್ಯೂ ಡಿಪಾರ್ಟಮೆಂಟನ ಅಧೀನ ಕಾರ್ಯದರ್ಶಿ ಎಚ್. ಎಫ್. ಬಾಲ್ ಕ್ರಿ.ಶ ೧೯೦೨ರ ಸಪ್ಟೆಂಬರ್ ೨ರಂದು ಕಾನಡಾ ಜಿಲ್ಲೆಯ ಅರಣ್ಯ ಸಂರಕ್ಷಣೆ ಬಗೆಗೆ ೧೦ ಪುಟಗಳ ಐತಿಹಾಸಿಕ ಪತ್ರಿಕಾ ಪ್ರಕಟಣೆ ನೀಡಿದ್ದಾರೆ !. ಒಕ್ಕಲಿಗರ ಸ್ಥಿತಿಯನ್ನು ಸುರಕ್ಷಿತ ಕಾಯುವದಕ್ಕಾಗಿ ಸರಕಾರದವರು ಯಾವಾಗಲೂ ಪ್ರಯತ್ನ ಮಾಡಿದ್ದಾರೆ. ಜಂಗಲಿನ ಸಂಬಂಧೀ ಹಕ್ಕುಗಳನ್ನು ನಡಿಸುವದಕ್ಕಾಗಿಯೂ, ಸೊಪ್ಪಿನ

ಅಂದರೆ ಹಸಿರೆಲೆ ಗೊಬ್ಬರದ ದಿಶೆಯಿಂದ ಕಾದಿಡದಿದ್ದ ಗಿಡಗಳ ಟೊಂಗೆಗಳನ್ನು ಕಡಿಯುವದಕ್ಕಾಗಿಯೂ ಸಣ್ಣ ಜಂಗಲಿನ ಒಂದು ಪ್ರದೇಶವು ಮುದ್ಧಾಂ ಬೇರೆ ಇಡಲ್ಪಟ್ಟಿದೆ. ಮತ್ತು ಎಲ್ಲ ಜಂಗಲಿನಲ್ಲಿ (ಅದು ಕಾದಿಟ್ಟಿದ್ದಿರಲ್ಲಿ ಅಥವಾ ಇಲ್ಲದಿರಲಿ) ಭತ್ತದ ಮತ್ತು ತೋಟದ ಭೂಮಿಯ ಭೋಗವಟೆ ಮಾಡುವವರಿಗೆ, ತಾವು ಸಾಗುಮಾಡುವ ಭೂಮಿಯ ನೆರೆಯಲ್ಲಿದ್ದ ಜಂಗಲಿನ ಭೂಮಿಯ ಒಂದು ಪಟ್ಟಿಯೊಳಗೆ ಗಿಡ ಗಂಟಿಗಳನ್ನು ಕೊಯ್ದು ಹಸನ ಮಾಡುವ ಪರವಾನಗಿ ಅದೆ' ಎಂದು ಹೇಳಿಕೆ ನೀಡುತ್ತಾರೆ. ಜಂಗಲಿನ ಸಂರಕ್ಷಣೆಗೆ ಅವಶ್ಯವಾದ ಉಪಾಯಗಳಿಗೂ, ಭೂಮಿಯ ಸಾಗುವಳಿ ಮಾಡುವ ಜನರ ಹಿತಸಂಬಂಧಗಳಿಗೂ, ತಾಳೆ ಕೂಡಿಸುವದೇ ಸರಕಾರದ ಧೋರಣೆಯಿದೆ ಎಂದು ಸಾರಲಾಗಿದೆ. ಇದೇ ಸಂದರ್ಭದಲ್ಲಿ ಭತ್ತದ ಕೃಷಿಯನ್ನು ಕಾಡಿನ ಸೊಪ್ಪನ್ನು ಬಳಸದೇ ಹೇಗೆ ಬೇಸಾಯ ಮಾಡ ಬಹುದು ಎಂದು ತಿಳಿಯವದಕ್ಕಾಗಿ ಕುಮಟಾದಲ್ಲಿ ಒಂದು ಪ್ರಾಯೋಗಿಕ ಯತ್ನ ನಡೆದಿತ್ತು !. 'ತೋಟಿಗರು ತಮ್ಮ ಬೆಟ್ಟಗಳನ್ನು ಚೆನ್ನಾಗಿ ಪೋಷಿಸಿ, ಸಂರಕ್ಷಿಸಿ, ಅವುಗಳ ಯೋಗ್ಯ ಉಪಯೋಗವನ್ನು ಮಾಡಿಕೊಳ್ಳುವರೆಂದು ನಂಬುತ್ತೇವೆ' ೧೯೨೪ರಲ್ಲಿ ಮುಂಬೈ ದಕ್ಷಿಣ ಭಾಗದ ಕಮೀಶನರ್ ಮಿ। ಮೌಂಟ್‌ಫರ್ಡ್ ಮುಂಬೈ ಕಾಯ್ದೆ ಕೌನ್ಸಿಲ್‌ನಲ್ಲಿ ಭಾಷಣ ಮಾಡುತ್ತಾರೆ.

'ನಮಗೆ ಅರಣ್ಯ ಸೌಲಭ್ಯವಿದೆ' ಎಂದು ಇಂದು ಕಣ್ಮುಚ್ಚಿ ಕಾಡಿಗೆ ಹೋಗುವ ನಮಗೆ ಹೋರಾಟದ ಅರಿವಿಲ್ಲ, ಇತಿಹಾಸ ಗೊತ್ತಿಲ್ಲ, ಕೃಷಿ ಏಳ್ಗೆಗೆ ಒದಗಿದ ಸೌಲಭ್ಯದ ಮಹತ್ವ ಅರ್ಥವಾಗಿಲ್ಲ. ಮಲೆನಾಡಿನ ಜನ ಬಯಲು ಸೀಮೆ ಅಡಿಕೆ ತೋಟ ನೋಡಿದಾಗ ಅಡವಿಯಿಲ್ಲದೇ ಇವರು ಹೇಗೆ ಕೃಷಿ ಮಾಡುತ್ತಾರೆ ? ಎಂದು ಅಚ್ಚರಿ ಪಡುತ್ತಾರೆ. ಧಾರಾಳವಾಗಿ ಸೊಪ್ಪು, ದೊಡ್ಡಿ ಗೊಬ್ಬರ ಬಳಸಿ ಅಡಿಕೆ ಮತ್ತು ಅಡವಿ ಸಂಬಂಧವನ್ನು ಬೆಸೆದಿದ್ದೇವೆ. ಗೊಬ್ಬರ ತಯಾರಿಗೆ ಹಸುರು ಸೊಪ್ಪು ಬೇಕು, ತೆರಕು ಬೇಕು, ತೋಟಕ್ಕೆ ಪಶ್ಚಿಮದ ಬಿಸಿಲುತಾಗದಂತೆ ನೆರಳು ಬೇಕು, ಮಳೆ ರಭಸಕ್ಕೆ ಫಲತ್ತಾದ ಮಣ್ಣು, ಗೊಬ್ಬರ ಕೊಚ್ಚಿಹೋಗದಂತೆ ಕರಡ, ಸೊಪ್ಪು, ತೆರಕಿನ ಮುಚ್ಚಿಗೆ ಬೇಕು. ಒಂದು ಕಾರ್ಖಾನೆ ವಾರ್ಷಿಕ ಎಷ್ಟು ಕ್ಯುಬಿಕ್ ಮೀಟರ್ ನಾಟಾ ಬಳಸುತ್ತದೆಂಬ ಲೆಕ್ಕ ಸಿಗುತ್ತದೆ. ಅಡವಿ ಪಕ್ಕದ ನಾವು ಎಷ್ಟು ಬಳಸುತ್ತಿದ್ದೇವೆ ?. ವರ್ಷದಿಂದ ವರ್ಷಕ್ಕೆ ನೈಸರ್ಗಿಕ ಸಂಪತ್ತು ಏಕೆ ಕ್ಷೀಣಿಸುತ್ತಿದೆ ? ಯೋಚಿಸಬೇಕಾಗಿದೆ. ಸೊಪ್ಪು ಕಡಿತ, ತೆರಕು ಗುಡಿಸುವದು,

ಹುಲ್ಲು ಕಡಿಯುವದು, ಚೆನ್ನಾಗಿ ಹುಲ್ಲು ಬೆಳೆಯಲೆಂದು ಬೆಂಕಿ ಹಾಕುವದು, ಬೆಟ್ಟದಲ್ಲಿನ ಮುಳ್ಳು ಕೀಳುವದು, ಜಾನುವಾರು ಮೇಯಿಸುವದು ಹೀಗೆ ಬಳಕೆ ಒತ್ತಡ ಹೆಚ್ಚಿಸಿದ ಪರಿಣಾಮ ಕೃಷಿ ಕಾಡು ಖಾಲಿಯಾಗುತ್ತಿದೆ. ಮಣ್ಣಿನ ತಾಕತ್ತು ಕ್ಷೀಣಿಸುತ್ತಿದೆ.

ಶಿರಸಿಯಲ್ಲಿ ಜಿ.ಜಿ. ಹೆಗಡೆ ಹುಲೇಮಳಗಿ ಎಂಬ ಕೃಷಿಕರಿದ್ದರು. ಇವರು ಯಾವುದೇ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಷಣ ಮಾತನಾಡುತ್ತಾರೆ ಎಂದರೆ ಕೆನರಾ ಜಿಲ್ಲೆಯ ಸೊಪ್ಪಿನ ಬೆಟ್ಟಗಳ ವಿಚಾರ ಮುದ್ಧಾಂಪ್ರಸ್ತಾಪಿಸುತ್ತಾರೆ ಎನ್ನಬಹುದಿತ್ತು. ಅರಣ್ಯ ಸೌಲಭ್ಯಗಳ ಇತಿಹಾಸ ಅರ್ಥಮಾಡಿಕೊಂಡು ರೈತರು ಸೊಪ್ಪಿನ ಬೆಟ್ಟ ರಕ್ಷಣೆಗೆ ಕಾಳಜಿವಹಿಸಬೇಕು, ಮರಗಿಡ ಬೆಳಸಬೇಕು ಎಂಬ ಕಳಕಳಿ ಅವರದು. ಅರಣ್ಯ ಸೌಲಭ್ಯದ ಇತಿಹಾಸ ಓದಿ ನಮಗೆ ತಿಳುವಳಿಕೆ ನೀಡಿದ ಹಿರಿಯರನ್ನು ನೆಲ ಬಹುಬೇಗ ಮರೆಯುತ್ತಿದೆ. ಅನ್ನ, ಅಡಿಕೆಯ ಹಿತದ ಬೆಂಗಾವಲಿಗೆ ಬಂದ ಅಡವಿ ರಕ್ಷಣೆ ಕಾಳಜಿ ಕೂಡಾ ಕಡಿಮೆಯಾಗುತ್ತಿದೆ. ಮುಂಗಾರಿನ ಹನಿ ಸೂಸುವ ಅರಂಭಕ್ಕೆ ಹಸುರು ಹಚ್ಚುವ ಉತ್ಸಾಹ ನಮ್ಮ ಭವಿಷ್ಯ ಬದಲಿಸಬಹುದು. ಕೃಷಿ ನೆಲದಿಂದ ದೂರ ಓಡಿದ ಕಾಡನ್ನು ಮತ್ತೆ ಅಕ್ಕರೆಯಲ್ಲಿ ಕರೆತರಬೇಕು, ಕೃಷಿನಾಡಿನ ನೆಮ್ಮದಿಗೆ ಚೆಂದದ ಕಾಡು ಬೆಳೆಸಬೇಕು.


**ಕೌಲು ಬೆಟ್ಟದಲ್ಲಿ ಬೆಂಕಿ ಇತಿಹಾಸ**

ಕಾಡಿನ ಸಸ್ಯ ಜಾತಿ ನೋಡಿ ನೆಲದ ಇತಿಹಾಸ ಹೇಳಲು ಸಾಧ್ಯವಿದೆ. ನೆಲದ ಪರಿಸರ ಅವಲಂಬಿಸಿ ಸಸ್ಯಗಳನ್ನು ಹೇಗೆ ಬೆಳೆಸುತ್ತವೆ ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ. ಶಿರಸಿಯ ಹುಲೇಕಲ್‌ನಲ್ಲಿ ಕೌಲು ಬೆಟ್ಟವೆಂಬ ಪ್ರದೇಶವಿದೆ. ಅಲ್ಲಿನ ಹತ್ತಾರು ಎಕರೆ ಪ್ರದೇಶದ ತುಂಬ ಕವಲು ಮರಗಳು ತುಂಬಿವೆ..ಏಕೆ ಇಲ್ಲಿ ಇಷ್ಟು ಪ್ರಮಾಣದಲ್ಲಿ ಈ ಮರ ನೈಸರ್ಗಿಕವಾಗಿ ಬೆಳೆದಿದೆ ? ಮರಗಳ ಕತೆ ಕುತೋಹಲಕರವಾಗಿದೆ. ರೈತರು ಬೆಟ್ಟ ಭೂಮಿಯಲ್ಲಿ ಮಳೆಗಾಲದಲ್ಲಿ ಚೆನ್ನಾಗಿ ಹುಲ್ಲು ಬೆಳೆಯಲೆಂದು ಬೇಸಿಗೆಯಲ್ಲಿ ಪ್ರತಿ ವರ್ಷ ಬೆಂಕಿ ಹಾಕುತ್ತಾರೆ. ತೆಳ್ಳನೆಯ ತೊಗಟೆಯ ವೃಕ್ಷ ಜಾತಿಗಳೆಲ್ಲ ಬೆಂಕಿ ಕೆನ್ನಾಲಗೆಯಲ್ಲಿ ಬೆಂದು ಸಾವನ್ನಪ್ಪುತ್ತವೆ. ದಪ್ಪ ತೊಗಟೆ ಕವಲು ಮರಕ್ಕೆ ಬೆಂಕಿ ಸಹಿಷ್ಣು ಗುಣವಿದೆ. ಹೀಗಾಗಿ ಅಗ್ನಿಗೆ ಅಂಜದೇ ಬೆಳೆಯುತ್ತ ಈ ಮರ ಜಾತಿ ನೆಲದಲ್ಲಿ ಏಕಸ್ವಾಮ್ಯ ಸಾಧಿಸಿದೆ !.

# ಕಂಗಾಲು ಬೇಂಚಿನಲ್ಲಿ ಕಮರಾ ಕಾಡು

ಸ್ವಾತಂತ್ರ್ಯಾನಂತರದಲ್ಲಿ ಬಯಲು ಸೀಮೆಯ ಅರಣ್ಯೀಕರಣದ ಪ್ರಯತ್ನ ನಡೆದಾಗೆಲ್ಲ ಆಸ್ಟ್ರೇಲಿಯಾದ ನೀಲಗಿರಿಗೆ ಆದ್ಯತೆ ನೀಡಿದೆವು. ಆದರೆ ಅಲ್ಲಿಯೇ ಪೈಸಾ ಖರ್ಚಿಲ್ಲದೇ ಹೆಮ್ಮರವಾದ ದೇಸೀ ಜಾತಿಗಳನ್ನು ಕಣ್ಣೆತ್ತಿಯೂ ನೋಡಲಿಲ್ಲ. ಬಯಲು ಸೀಮೆಯ ದುಃಖ ಜಂಜಡಗಳನ್ನು ಎದೆಯೊಳಗಿಟ್ಟು **ನಗುತ್ತದೆ ಕಷ್ಟ ಸಹಿಷ್ಣು ಮರ ಕಮರ. ಸತತ ಎರಡು ಮೂರು ವರ್ಷ ಹನಿ ನೀರು ಸಿಗದ ಬರದಲ್ಲೂ ಗೆಲ್ಲುವ ಛಲ, ಭೀಮ ಬಲ ಇದರದು !**

ಬೀಳದ ಮಳೆ ಹನಿ, ಬಿರುಸು ನೆಲ, ಕ್ಷಾಮದ ಕಾಯಂ ಠಿಕಾಣಿ. ಬಯಲು ಸೀಮೆಯ ದುಃಖ ಜಂಜಡಗಳನ್ನೆಲ್ಲ ದಡೆಯೊಳಗಿಟ್ಟು ನಗುತ್ತದೆ ಕಷ್ಟ ಸಹಿಷ್ಣು ಮರ ಕಮರ. ಸತತ ಎರಡು ಮೂರು ವರ್ಷ ಹನಿ ನೀರು ಸಿಗದ ಬರದಲ್ಲೂ ಗೆಲ್ಲುವ ಛಲ, ಭೀಮ ಬಲ. ಕಮ್ಮಾರರ ಕುಲುಮೆಗೆ ಇದ್ದಲಿಯಾದರೂ ಶಾಖಕ್ಕೆ ಬಿರುಸು ಕಬ್ಬಿಣವೂ ನೀರು. ಆದರೇನು ಈಗ ಸ್ವತಃ ಕಮರಾ ಬದುಕು ಕಣ್ಣೀರು !.




ಕಡಿತಕ್ಕೆ ಹೆಮ್ಮರ ಬಲಿ!

ಬಳ್ಳಾರಿ, ಚಿತ್ರದುರ್ಗ ಸೀಮೆ ಬೆಟ್ಟ ನೋಡಬೇಕು, ಭೂಗತದ ಅದಿರು ಕಬ್ಬಿಣ, ನೆಲ ಸತ್ವ ಹೀರಿ ಅಲ್ಲೇ ನಿಂತ ಅಷ್ಟೇ ಕಠಿಣ ಕಮರ !. ಅಂಚಿನ, ಅಸೀನ, ಕರಾಚಿ (Hardwickia Bammata) ಇತ್ಯಾದಿ ಹೆಸರು. ಭಾರತದಲ್ಲೇ ಗಟ್ಟಿ ಜಾತಿ ಎನ್ನುತ್ತದೆ ಸಸ್ಯ

ಶಾಸ್ತ್ರಗ್ರಂಥ. ರಾಣಿಬೆನ್ನೂರು, ಬೆಳಗಾವಿ, ಬಳ್ಳಾರಿ, ಹರಪನಹಳ್ಳಿ ಚಿತ್ರದುರ್ಗ, ಕೋಲಾರದ ಅಪ್ಪಟ ಕಾಡು ಮರ. ವಿಜಯನಗರ ಕಾಲದಲ್ಲಿ ಹಂಪಿ ಸುತ್ತ ಉಂಡೆ ಕಮ್ಮಾರರು ಎಂಬ ವಿಶಿಷ್ಟ ಜನಾಂಗವಿತ್ತು. ನೆಲದ ಅದಿರಿನ ಉಂಡೆ ಎತ್ತಿ ಕಾಸಿ ಕಬ್ಬಿಣವಾಗಿಸಿ ತರಹೇವಾರಿ ಉಪಕರಣ ಸಿದ್ದಗೊಳಿಸುವದು ಅವರ ಕುಲ ಕಸುಬು. ಇದ್ದಿಲಿಗೆ ಕಮರ, ಅದಿರು ಕಬ್ಬಿಣ ಎಂದು ನಿಂತ ನೆಲದಲ್ಲೇ ಕಮ್ಮಾರಿಕೆ ಸಲೀಸು. ಇದಲ್ಲದೇ ಮನೆಯ ಕಂಬ, ಕಿರೋಪಕರಣ, ನೇಗಿಲು, ಎತ್ತಿನ ಗಾಡಿ ಗಡ್ಡೆ, ರೇಲ್ವೆ ಸ್ಲೀಪರ್, ಇದ್ದಲಿ, ಹಗ್ಗ ಹೀಗೆ ನಾಡಿನುದ್ದಕ್ಕೂ ಬಳಕೆ ಬಹುವಿಧ ವಿಸ್ತಾರ. ಕಟ್ಟಿಗೆಗೆ ಹುಳ ತಿನ್ನದಂತೆ ಕಮರಾ ಎಣ್ಣೆ ಬಳಕೆ, ಬೆಳೆದ ಮರಕ್ಕೆ ಒಳ ತಿರುಳಿನ ತನಕ ಬೈರಿಗೆಯಲ್ಲಿ ರಂದ್ರ ಮಾಡಿದರೆ ಈ ವಿಶಿಷ್ಟ ಮರದೆಣ್ಣೆ ಉತ್ಪನ್ನ. ಬರಗಾಲದ ಬೇಗೆಯಲ್ಲಿ ಕಮರಾ ಜಾನುವಾರುಗಳ ಪ್ರಾಣ ಉಳಿಸುವ ಅಮೃತ. ಎಲೆ ಚಿಗುರು ಆಡಿಗೆ ಇಷ್ಟ, ಬೆಳೆದ ಎಲೆ ಮೇಕೆಗೆ ಮೃಷ್ಟಾನ್ನ. ಸೊಪ್ಪಿಗೆ ಉಪ್ಪು ಸೇರಿಸಿದರಂತೂ ದನ, ಮೇಕೆಗಳಿಗೆಲ್ಲ ಸದಾ ಕಾಲ ಉತ್ತಮ ಮೇವು. ತೊಗಟೆ ತೆಗೆದು ನೀರಲ್ಲಿ ನೆನೆಸಿ ಹದ ಮಾಡಿದ ನಾರು ಭಾರೀ ಗಟ್ಟಿ, ಮಳೆಗಾಲದಲ್ಲಿ ಗಿಡದ ತೊಗಟೆಯಲ್ಲಿ ಜಾಸ್ತಿ ನಾರು ಸಿಗುತ್ತದೆಂಬ ಲೆಕ್ಕಾಚಾರ. ಬಳಕೆ ಬೆನ್ನತ್ತಿ ಹಳ್ಳಿಗರಿಗೆಲ್ಲ ಇದ್ದಬಿದ್ದದ್ದನ್ನೆಲ್ಲ ಮುಗಿಸುವ ಧಾವಂತ, ಈಗಷ್ಟೇ ನಗುವ ಚೋಟುದ್ದದ ಎಳೆ ಗಿಡಕ್ಕೂ ಕಟುಕರ ನೆರಳು, ಸಾವಿನ ಎದೆ ಬಡಿತ.

ಭಾರತದ ಪ್ರಪ್ರಥಮ ಉಚ್ಚ ಅರಣ್ಯ ಸಂರಕ್ಷಣಾಧಿಕಾರಿ (ಇನ್ಸಪೆಕ್ಟರ್ ಜನರಲ್ ಆಫ್ ಫಾರೆಸ್ಟ್) ಬ್ರಾಂಡಿಸ್ ಕ್ರಿ.ಶ, ೧೮೮೧ರಲ್ಲಿ ಬಳ್ಳಾರಿ ಅರಣ್ಯಕ್ಕೆ ಭೇಟಿ ನೀಡಿದರು. ಗುಡ್ಡದ ಉಪಯುಕ್ತ ಜಾತಿ ಅಂದಾಜು ಮಾಡಬೇಕು, ಮೂಲ ಕಾಡಿಗೆ ಧಕ್ಕೆಯಾಗದಂತೆ ಮರ ಕಡಿಯಬೇಕು ಎಂದು ಅರಣ್ಯ ನಿರ್ವಹಣೆ ಬಗೆಗೆ ಅತ್ಯುತ್ತಮ ಸಲಹೆ ನೀಡಿದರು. ಮುಂದೆ ಕ್ರಿ.ಶ, ೧೯೫೦ರಲ್ಲಿ ಅರಣ್ಯ ಕಾರ್ಯ ಯೋಜನೆ ರೂಪುಗೊಂಡಿತು. ಆಗ ಅರಣ್ಯಕ್ಕೆ ವಿಶೇಷ ಮಾದರಿ ಮಾನ್ಯತೆ. ನೆಲದ ಕುಲ ಎಂಬ ಘನತೆ. ಹಿರಿಯೂರು, ಮಾರಿಕಣಿವೆ ಹಾಗೂ ಬಿ.ಜಿ.ಕೆರೆ ಪ್ರದೇಶದ ೪೦೦೦ ಹೆಕ್ಟೇರ್ 'ಕಮರಾ ಕಾಡು' ಎಂದು ನಾಮಕರಣ. ಆಗ ಎಕರೆಗೆ ನೂರಾರು ಹೆಮ್ಮರಗಳಿದ್ದವು. ಇಡೀ ಪ್ರದೇಶದಲ್ಲಿ ನಿಸರ್ಗವೇ ಕಮರಾ ತೋಪು ಬೆಳೆಸಿತ್ತು.



ಕಮರಾ ನೆಡುತೋಪು– ಬಯಲು ನೆಲದ ಹೊಸ ಆಸೆ

ಈಗ 'ಕಮರಾ ಕಾವಲ್' ಕಂಗಾಲೆದ್ದು ಹೋಗಿದೆ. ನೆಲದ ಸ್ಮಾರಕದ ಹಾಗೇ ೧೫೦-೨೦೦ ವರ್ಷದ ಕೆಲ ಮರಗಳು ಹತ್ತಾರು ಎಕರೆಗೆ ಒಂದೊಂದು ಅಲ್ಲಲ್ಲಿ ನಿಂತಿವೆ. ಬಿ.ಜಿ.ಕೆರೆಯ ಕಮರಾ ಕಾವಲ್‌ನ ಮತ್ಕಾರಹಳ್ಳಿಯಲ್ಲಿ ೩೫೦ ವರ್ಷ ಪ್ರಾಯದ ಒಂದು ಮರ ಇತ್ತು. ಅದರಲ್ಲಿ ಹದ್ದು ವಾಸವಾಗಿದ್ದವು, ಅದನ್ನು ಹದ್ದಿನ ಮರವೆಂದೇ ಜನ ಹಿಂದಿನಿಂದ ಗುರುತಿಸಿದ್ದರು. ಹತ್ತಡಿಗೂ ಮೀರಿದ ಸುತ್ತಳತೆಯ ಇದ್ದೊಂದು ಹೆಮ್ಮರದ ಬದುಕೂ ಕೊನೆಯಾಗಿದೆ. ಹದ್ದು ಮೀರಿದ ಕಡಿತಕ್ಕೆ ಸ್ವತಃ ಕಮರಾ ಕಾವಲ್‌ಗೆ ಮರದ ನೆನಪು ಮಾಸುತ್ತಿದೆ. ಅಬ್ಬಬ್ಬಾ ಎಂದರೆ ೬೦೦ ಮಿಲಿ ಮೀಟರ್ ಮಳೆ, ಹರಳು ಮಣ್ಣಿಗೆ ಹಸುರು ಹೇರುವ ಫಲವಂತಿಕೆಯಿಲ್ಲ, ಅಲ್ಲಿ ಕುರುಚಲು ಬಂದರಿಕೆ, ಡಬ್ಬಗಳ್ಳಿ ಬಿಟ್ಟರೆ ಬೇರೆ ಯಾವುದೂ ಬದುಕದು, ಧರೆಯ ಅನಭಿಷಿಕ್ತ ದೊರೆ ಕಮರ. ಆದರೆ ನೆಲದ ದೊರೆಯನ್ನೇ ದೋಚಲು ಬೆಟ್ಟದ ತುಂಬ ಕತ್ತಿಕಾಳಗ.

ಬಯಲು ಸೀಮೆಯ ಅರಣ್ಯೀಕರಣದ ಪ್ರಯತ್ನ ಸ್ವಾತಂತ್ರ್ಯಾನಂತರದಲ್ಲಿ ೧೯೫೬–೮೮ರವರೆ ನಡೆದಾಗೆಲ್ಲ ಆಸ್ಟ್ರೇಲಿಯಾದ ನೀಲಗಿರಿಗೆ ಆದ್ಯತೆ, ಅಲ್ಲಿಯೇ ಪೈಸಾ ಖರ್ಚಿಲ್ಲದೇ ಹೆಮ್ಮರವಾದ ದೇಸಿ ನೆಲದ ಕಮರಾವನ್ನು ಕಣ್ಣೆತ್ತಿಯೂ ನೋಡಲಿಲ್ಲ. ೧೯೮೮ರಲ್ಲಿ ಚಿತ್ರದುರ್ಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರವೀಣ ಚಂದ್ರಪಾಂಡೆ ಮೊಳಕಲ್ಮೂರು ತಾಲೂಕಿನ ಬಿ.ಜಿ.ಕೆರೆಯ

ಕಮರಾ ಕಾವಲ್ ಪ್ರದೇಶದಲ್ಲಿ ಕಮರಾ ನಾಟಿಗೆ ಶ್ರೀಗಣ ಹಾಕಿದರು. ನೆಲದ ಗಿಡಕ್ಕೆ ನೆಡುತೋಪಿನ ಸುಯೋಗ. ಅಲ್ಲಿಂದ ಈವರೆಗೆ ೧೫೦೦ ಹೆಕ್ಟೇರ್ ಪ್ರದೇಶದಲ್ಲಿ ಕಮರಾ ಬೆಳೆಸುವ ಪ್ರಯತ್ನ ನಡೆದಿದೆ. ಕಮರಾಕ್ಕೆ ಬಿಸಿಲಿನ ಕಾವು, ಬರದ ಬವಣೆ ಗೆಲ್ಲುವ ತಾಕತ್ತು, ವಿಪತ್ತಿನ ರಕ್ಷಣೆಗೆ ನೀರು ಬಚ್ಚಿಡುವ ಜಾಣತನ ಗಿಡದ ದಪ್ಪ ತೊಗಟೆಗಿದೆ, ಬಹು ಬಳಕೆಯ ಜನಪ್ರೀಯತೆ ಇದೆ, ಮುಖ್ಯವಾಗಿ ಗಿಡ ಗುಣ ಗುರುತಿಸಿ ಬೆಳೆಸಬೇಕು. 'ಬುಲ್ಡೋಜರ್ ಮುಖೇನ ಗುಡ್ಡದ ನೆಲವನ್ನು ೭೦ ಸೆಂಟಿ ಮೀಟರ್ ಆಳ, ಒಂದೂವರೆ ಮೀಟರ್ ಅಗಲದಲ್ಲಿ ಊಳಬೇಕು. ಗಿಡದ ಬೇರಿನ ಬೆಳವಣಿಗೆಗೆ ಮಣ್ಣು ಸಡಿಲಾಗಬೇಕು. ಮೀಟರ್ ಅಂತರದಲ್ಲಿ ಸಸಿ ನಾಟಿ. ಜಾನುವಾರು ನಿಶೇಧ, ಕಳೆ ಕೆತ್ತುವದು, ಬುಡಕ್ಕೆ ಮಣ್ಣೇರಿಸುವ ಕಾರ್ಯ ಮಾಡಿದರಂತೂ ಮೂರು ವರ್ಷಕ್ಕೆ ೧–೨ ಮೀಟರ್ ಎತ್ತರ ಬೆಳೆಯುತ್ತಿದೆ' ಬಿ.ಜಿ.ಕೆರೆ ವಲಯ ಅರಣ್ಯಾಧಿಕಾರಿ ಕೆ.ಎಮ್. ಗಮನಗಟ್ಟಿ ಅನುಭವ ಹೇಳುತ್ತಾರೆ. ಕೂಡಗಿಯಲ್ಲಿ ೩ ವರ್ಷಕ್ಕೆ ೪ ಮೀಟರ್ ಬೆಳೆದ ಉದಾಹರಣೆಯೂ ಇದೆ. ನೆಡುತೋಪು ನಿರ್ಮಾಣದ ಬಳಿಕ ೩ ವರ್ಷ ಸತತ ವಿಶೇಷ ಗಮನ ನೀಡಬೇಕು. ಬೋಳುಗುಡ್ಡಕ್ಕೆ ಚೆಂದದ ಕಮರಾ ತುಂಬಲು ಸಾಧ್ಯವಿದೆ.


ಸರಿ, ಸಸಿ ನೆಡಲು ನಾವು ಸಿದ್ಧ ಎನ್ನುತ್ತದೆ ಅರಣ್ಯ ಇಲಾಖೆ, ನೆಲ ಗೆದ್ದು ತಾನು ಬೆಳೆಯುತ್ತೇನೆ ಎನ್ನುತ್ತದೆ ಕಮರಾ. ಹಾಗಾದರೆ ಬಯಲು ನಾಡೆಲ್ಲ ಬಹುಪಯೋಗಿ ಕಮರಾ ನೆಡುತೋಪಾಗಬಹುದು ಎಂದು ನಾವು ಲೆಕ್ಕಹಾಕ್ತೇವೆ. ಆದರೆ ಕಮರಾ ಬದುಕಿನ ಸೂತ್ರವೆಲ್ಲ ಯಕಶ್ಚಿತ ಮೇಕೆಯ ಬಾಯಿ ಸೇರಿಕೊಂಡಿದೆ!. ಮೇಕೆ ಆಹಾರಕ್ಕೆಂದು ಕತ್ತಿಯ ಅಲಗು ಗಿಡದ ಹಸುರು ಇರಿಯುತ್ತ ನುಗ್ಗಿದೆ, ಬೆಳೆಸಿದ್ದೆಲ್ಲ ಮುಗಿಸುವ ಕೃತ್ಯವೇ ಸೀಮೆಯ ಕಾಯಂ ಕ್ಷಾಮಕ್ಕೆ ಬರ್ಜರಿ ಆಮಂತ್ರಣ !. ಸಾಲು ಮರ, ನೆಡುತೋಪು ಏನೇ ಮಾಡಿದರೂ ಸುತ್ತಲಿನ ಜನಕ್ಕೆ ಕನಿಷ್ಠ ಹಸಿರು ಪ್ರೀತಿ ಇದ್ದರೆ ಚಿತ್ರ ಹೀಗಿರುತ್ತಿರಲಿಲ್ಲ. ಸರಕಾರ ಯಾರಿಗಾಗಿ ಗಿಡ ನೆಡುತ್ತಿದೆ ? ಅರಿವು ಮೂಡದ ಇಲ್ಲಿ ಹಸಿದ ಮೇಕೆಗಳೆಲ್ಲ ಕಣ್ಣುಚ್ಚಿ ಕಮರಾ ಹಿಂದೆ ಓಡುತ್ತಿವೆ. ಕಾನೂನು ಭಯವಿಲ್ಲದೇ ಕಟುಕರ ಸಂತೆ ನೆರೆದಿದೆ. ೧೯೯೨ರಲ್ಲಿ ಬಿ.ಜಿ.ಕೆರೆಯ ಅರಿವಿನ ದಿಡ್ಡೆ ಬೈಲಿನಲ್ಲಿ ನಾಟಿ ಮಾಡಿದ ೫೦ ಎಕರೆ ನೆಡತೋಪು ಈಗ ಮೇಲೇಳುತ್ತಿದೆ. ಮುಂಜಾನೆ ಳಿಕ್ಕೆ ಗಾರ್ಡಗಳ ಹಾದಿ ತಪ್ಪಿಸಿ ನೆಡುತೋಪು

ನುಗ್ಗಿ ಮೇಕೆಗಳೆಲ್ಲ ಮುಗಿಸುತ್ತಿವೆ. ಅರಣ್ಯ ಇಲಾಖೆ ಶ್ರಮ ಹೇಳ ಹೆಸರಿಲ್ಲದಂತಾಗಿದೆ. ರಕ್ಷಣೆಗೆ ವಾಚ್‌ಮನ್ ಬೇಕು, ಸಾವಿರಾರು ಹೆಕ್ಟೇರ್ ಉಸ್ತುವಾರಿ ಹೊಣೆ ನಿರ್ವಹಣೆಗೆ ವಾಹನ ಬೇಕು. ಅರಣ್ಯೀಕರಣಕ್ಕೆ ಹಣ ಖರ್ಚು ಮಾಡಿ ಬೋರ್ಡು ತಗಲಿಸಿದರೆ ಪ್ರೊಜೆಕ್ಟ್ ಮುಗಿಯಬಹುದು, ದಪ್ತರಿಗೆ ದಾಖಲೆ ಸಿಗಬಹುದು, ಆದರೆ ಫಾರೆಸ್ಟ್ ಬೆಳೆಯುವದಿಲ್ಲ. ಮಣ್ಣಿನಲ್ಲೂ ಸತ್ವವಿಲ್ಲ, ಪರಿಸರ ಅನುಕೂಲವಿಲ್ಲ, ಜನಕ್ಕೆ ಮರ ಪ್ರೀತಿ ಇಲ್ಲದ ಇಂತಹ ಪ್ರದೇಶದಲ್ಲಿ ಗುಂಡಿ ತೋಡಿ ಗಿಡ ನೆಡುವದು ಅರಣ್ಯೀಕರಣವಾಗುವದಿಲ್ಲ ಎಂದು ಇಷ್ಟು ವರ್ಷಗಳ ಅನುಭವದ ಮುಖೇನ ಪಾಠಕಲಿಯಬೇಕಿತ್ತು. ಕಾನೂನಿನ ಭಯ, ಕಾಡಿನ ಪ್ರೀತಿ ಮೂಡಿಸಲು ಚುರುಕಿನ ಮದ್ದು ಹುಡುಕುವದು ಈಗ ಕಮರಾ ಕಾವಲ್‌ನ ಪರಿಸರ ಚಿತ್ರ ಬದಲಿಸಲು ಇರುವ ಎಕೈಕ ಉಪಾಯ.

ಬಯಲು ನಾಡಿನಲ್ಲಿ ಈಗ ಎಷ್ಟೇ ಕೂಗಿದರೂ ಮಾತು ಯಾರಿಗೂ ಕೇಳುತ್ತಿಲ್ಲ, ಸಂಡೂರಿನ ಅದಿರಿನ ಬೆಟ್ಟದ ಸದ್ದು ಮಾತ್ರ ಊರೆಲ್ಲ ಮೊಳಗುತ್ತಿದೆ. ಬಳ್ಳಾರಿ, ಚಿತ್ರದುರ್ಗದ ಅದಿರಿನ ಬೆಟ್ಟಕ್ಕೆ ಬೆಟ್ಟವೇ ಡೈನಾಮೈಟ್ ಇಟ್ಟು ಪುಡಿ ಪುಡಿಯಾಗುತ್ತಿದೆ. ಲಾರಿಯ ಬೆನ್ನೇರಿ ಅದಿರು ಹೆದ್ದಾರಿ ಹಿಡಿದು ವಿದೇಶ ಮುಖಿ ಸಾಗಿದೆ, ಬೆಟ್ಟದಲ್ಲಿ ಬೆಳೆದ ದೇಸಿ ಹಸಿರು ನೆಲದ ಕಮರ ಎಲ್ಲಿ ? ಅಯ್ಯೋ ! ಆಕ್ರಂದನ !. ಈಚೆ ಗಣಿಗಾರಿಕೆ, ಆಚೆ ಮೇಕೆಯ ಬಾಯಿ, ತಪ್ಪಿದರೆ ಉರುವಲು ಇದ್ದಲಿ ... ಸಾವಿನ ಮನೆಗೆ ಕಮರಾಕ್ಕೆ ಸದಾ ಕರೆಯೋಲೆ, ನೀನೇನಾ ಕಬ್ಬಿಣದಂತ ಕಮರಾ ! ? ಕರಗುವ ಬೆಟ್ಟದಲ್ಲಿ ಹಸಿರಿನ ಪ್ರಶ್ನೆಯಿದೆ.

### ಮುಳ್ಳು ಕಂಟಿಯ ಮಹಾತ್ಮೆ

ಹಳ್ಳಿ ಸನಿಹದ ಕಾಡಲ್ಲಿ ಮುಳ್ಳಿಲ್ಲದ ಸಸ್ಯಗಳು ಕೃಷಿ, ಮೇವು, ಗೃಹ ಬಳಕೆಗಳಿಗಾಗಿ ಪದೇ ಪದೇ ನಾಶವಾಗುತ್ತವೆ. ಊರಿನ ಸನಿಹದಲ್ಲಿ ಮುಳ್ಳಕಂಟಿಗಳು ಮಾತ್ರ ಬೆಳೆಯುವದನ್ನು ಕಾಣಬಹುದು. ಅದರಲ್ಲಿಯೂ ಬಯಲು ಸೀಮೆ ಒಣ ಪ್ರದೇಶಗಳಲ್ಲಂತೂ ಇವುಗಳದೇ ಸಾಮ್ರಾಜ್ಯ. ಮುಳ್ಳುಕಂಟಿಗಳು ಬೇರೆ ಪ್ರದೇಶದಲ್ಲಿ ಬೆಳೆಯುತ್ತವಾದರೂ ನೀರಿಲ್ಲದ ಶುಷ್ಕ ನೆಲೆಯಲ್ಲಿ ಈ ಸಸ್ಯಗಳಿಗೆ ಬದುಕುವ ತಾಕತ್ತಿದೆ. ಇದಕ್ಕೆ ಮುಳ್ಳು ಪ್ರಮುಖ ಕಾರಣವಾಗಿದೆ. ಭೂಮಿಯಲ್ಲಿನ ನೀರನ್ನು ಬೇರಿನ ಮುಖೇನ ಹೀರಿಕೊಂಡು




ಮುಳ್ಳು ಗಿಡಗಳು ಬೆಳೆಯುತ್ತಿರುವಂತೆ ನಿಧಾನಕ್ಕೆ ಭೂಮಿಯ ಸತ್ವ ಹೆಚ್ಚುತ್ತದೆ

ಬೆಳೆಯುವದು ಸಸ್ಯಗುಣ. ಹೀರಿದ ನೀರು ಸ್ವಲ್ಪ ಪ್ರಮಾಣದಲ್ಲಿ ಸಸ್ಯ ಜೀವನಕ್ಕೆ ನೆರವಾಗಿ ಹೆಚ್ಚಿನ ಭಾಗ ಎಲೆಗಳ ಭಾಷ್ಪ ವಿಸರ್ಜನೆಯಿಂದ ಆವಿಯಾಗಿ ವಾತಾವರಣ ಸೇರುತ್ತದೆ. ಬಯಲು ನೆಲದಲ್ಲಿ ಬೀಳುವ ಅತ್ಯಂತ ಕಡಿಮೆ ನೀರನ್ನು ಸಸ್ಯ ಹೀರಿಕೊಂಡು ಎಲೆಗಳ ಮುಖೇನ ಹೀಗೆ ಆವಿಯಾಗಿಸುತ್ತ ಹೋದರೆ ಗಿಡ ಬೆಳೆವಣಿಗೆ ಕಷ್ಟ. ಸಸ್ಯದ ಜಾಣ್ಮೆ ಕೆಲಸ ಮಾಡುತ್ತದೆ. ಎಲೆಗಳನ್ನು ಮುಳ್ಳುಗಳಾಗಿ ರೂಪಾಂತರಿಸಿ ಅದು ಆವಿಯಾಗುವ ನೀರಿನ ಪ್ರಮಾಣವನ್ನು ಹಿಡಿತದಲ್ಲಿಡುತ್ತವೆ. ತನ್ನ ಜೀವಜಲ ಉಳಿಸಿಕೊಳ್ಳುತ್ತದೆ !. ಕಾಡಿನ ದಟ್ಟನೆ ಬದಲಾದಂತೆ ಮುಳ್ಳು ಕಂಟಿಗಳು ಕ್ರಮೇಣ ಕಡಿಮೆಯಾಗುತ್ತವೆ. ಜಮಖಂಡಿಯ ಕಲ್ಲಹಳ್ಳಿಯಲ್ಲಿ ಕಳ್ಳಿಗಿಡಗಳು ೩೫ ವರ್ಷದ ಹಿಂದೆ ತುಂಬಿದ್ದವು. ಸಂರಕ್ಷಣೆ ದೊರಕಿದ ಆರಂಭದಲ್ಲಿ ಕೆಲವು ಮುಳ್ಳಿನ ಗಿಡ ಬಳ್ಳಿಗಳು ಬೆಳೆದವು. ಪ್ರಾಣಿ, ಪಕ್ಷಿಗಳ ಆವಾಸಸ್ಥಾನವಾಗಿ ಕಾಡು ಬೆಳೆಯಿತು. ನಂತರದಲ್ಲಿ ಮುಳ್ಳಿಲ್ಲದ ಸಸ್ಯಗಳು ಬೆಳೆದು ಬಂದವು. ಕಾಡು ದಟ್ಟವಾದ ಜಾಗದಲ್ಲಿದ್ದ ಕಳ್ಳಿ ಗಿಡಗಳು ಈಗ ಸಾಯುತ್ತಿವೆ. ! ಆ ಜಾಗವನ್ನು ಮುಳ್ಳಿಲ್ಲದ ಸಸ್ಯಗಳು ಆವರಿಸುತ್ತಿವೆ.

# ಸೀಗೆ ಬಳ್ಳಿಯಲ್ಲಿ ಶೂನ್ಯ ಕೃಷಿಯ ಮಾಯಾಪಾಠ!

ವೆನಿಲ್ಲಾ ಬಳ್ಳಿ ಹಿಂದೆ ಓಡಿ ಓಡಿ ಬೇಸ್ತು ಬಿದ್ದ ಮಲೆನಾಡಿನಲ್ಲಿ ಅಲ್ಲೇ ಇದ್ದ ಕಾಡಿನ ಬಳ್ಳಿ ಈಗ ಹೊಸ ಕೃಷಿಪಾಠ ಹೇಳುತ್ತಿದೆ. ಕನಿಷ್ಠ ಕೃಷಿ ಆರೈಕೆಯೂ ಇಲ್ಲದೇ ಒಂದೇ ಬಳ್ಳಿ ೧೦.೦೦೦ ರೂಪಾಯಿ ಆಧಾಯ ನೀಡಿ ನಮ್ಮ ಕಿರು ಅರಣ್ಯ ಉತ್ಪನ್ನ ನಿರ್ವಹಣೆಯ ಸುಸ್ಥಿರ ದಾರಿ ತೋರಿಸುತ್ತಿದೆ. ಅಷ್ಟೇಕೆ ಈವರೆಗೆ ವಿಶ್ವಬ್ಯಾಂಕ್, ಬ್ರಿಟನ್, ಜಪಾನ್‌ದಿಂದ ಅರಣ್ಯ ಸಂರಕ್ಷಣೆಯ ಪಾಠ ಕೇಳಿದ ಕರ್ನಾಟಕ ಅರಣ್ಯ ಇಲಾಖೆಯನ್ನು ಈ ಸೀಗೆ ಬಳ್ಳಿ ಸೆಮಿನಾರಿಗೆ ಆಮಂತ್ರಿಸುತ್ತಿದೆ.

ಮುಳ್ಳು ಮುಖದ ಸೀಗೆ ಅಸಡಾಬಸಡಾ ಬೆಳೆದು ಹತ್ತಿರ ಹೋದವರಿಗೆ ತರಚು ಗಾಯ ಮಾತ್ರ ನೀಡುತ್ತದೆ ಎಂದು ತಿಳಿದಿದ್ದೆವು. ಶಿರಸಿ ಹುಲೇಕಲ್‌ನ ಬೆಳ್ಳದ್ದ ಹಳ್ಳಿಯ ರಾಮಚಂದ್ರ ಹೆಗಡೆ ಮನೆ ಸನಿಹದ ಭಾರೀ ಗಾತ್ರದ ಬಳ್ಳಿ ಅರಣ್ಯ ಉತ್ಪನ್ನದ ಅನೂಹ್ಯ ದಾಖಲೆ ಸಾರುತ್ತ ಶೂನ್ಯ ಕೃಷಿಯ ಮಾಯಾಪಾಠ ಹೇಳುತ್ತಿದೆ. ಹಬ್ಬುತ್ತ, ತಬ್ಬುತ್ತ ಸುತ್ತಲಿನ ಮರಗಳನ್ನೆಲ್ಲ ಅಕ್ಟೋಪಸ್ ಹಿಡಿತಕ್ಕೆ ಬಾಚಿ ಮುಳ್ಳಿನ ಕೋಟೆ ಎಬ್ಬಿಸಿದೆ, ಅದರಲ್ಲಿ ಬಳ್ಳಿ ಭರ್ತಿ ಸೀಗೆಕಾಯಿ, ಆರು ಕ್ವಿಂಟಾಲ್ ಫಸಲು, ೧೦.೦೦೦ ರೂಪಾಯಿ ಆಧಾಯ ಎಂದು ಲೆಕ್ಕ ಒಪ್ಪಿಸಿದೆ.




ಸೀಗೆ– ಶೂನ್ಯ ಕೃಷಿಯ ಸಂಪಾದನೆ

'ಒಂದು ವೆನಿಲ್ಲಾ ಬಳ್ಳಿಯಲ್ಲಿ ಆರೇಳು ಸಾವಿರ ಸಿಗುತ್ತದೆ 'ಬಳ್ಳಿ ತಬ್ಬಿಕೊಂಡ ಮಲೆನಾಡಿಗರು ಕಳೆದ ವರ್ಷ ಹೇಳುತ್ತಿದ್ದರು. ಲಾಭ ಹೋಗಲಿ ಉತ್ಪನ್ನ ಖರೀದಿಸುವವರೇ ಇಲ್ಲದಷ್ಟು ಕೃಷಿ ದೈನೇಸಿಯಾದ ಕತೆ ಗೊತ್ತೇ ಇದೆ. ಸ್ವತಃ ವೆನಿಲ್ಲಾ ನೆಟ್ಟ ರಾಮಚಂದ್ರ ಹೆಗಡೆ ನಮ್ಮನ್ನು ತೋಟದ ಬದಲು ಸೀಗೆಯತ್ತ ಸೆಳೆಯುತ್ತಾರೆ. ನೀರು ಗೊಬ್ಬರದ ಆರೈಕೆ ಬೇಡ, ಜೇನಿನಿಂದ ಪರಾಗ ಸ್ಪರ್ಶ, ಕ್ರಿಮಿನಾಶಕ, ಕೀಟನಾಶಕ ಅಗತ್ಯವಿಲ್ಲ, ಕೊಯ್ಲಿನ ಚಿಂತೆಯಿಲ್ಲ, ಗಾಳಿ ಬಂದಾಗ ಪಟಪಟನೆ ನೆಲಕ್ಕೆ ಬೀಳುವ ಸೋಡಿಗೆ ಆರಿಸಿ ಮಾರುವದಷ್ಟೇ ಕೆಲಸ. ಶೂನ್ಯ ಕೃಷಿ, ಬಳ್ಳಿ ಬೆಳೆದ ೫೦-೬೦ ವರ್ಷ ಪರ್ಯಂತವೂ ನಿರಂತರ ಸಂಪಾದನೆ !. ನೈಸರ್ಗಿಕವಾಗಿ ಬೆಳೆದ ಅದು ನೆಲದ ತಾಕತ್ತು ತೋರಿಸುತ್ತ ಪರಿಸರ ಸ್ನೇಹಿ ಕೃಷಿ ಪಾಠ ಹೇಳುತ್ತಿದೆ.

ಮನೆ ಸನಿಹದ ಬೇಲಿಯಂಚಿಗೆ ಅನಾಯಾಸವಾಗಿ ಒಂದು ಸೀಗೆ ಬಳ್ಳಿ ಅಂಕುರಿಸಿತು. ಸ್ನಾನಕ್ಕಾಗಿ ಸೀಗೆಕಾಯಿ ಬಳಸಿ ಬಲ್ಲ ಈ ಬೆಳ್ಳದ್ದದ ಮನೆಯವರು ಸಹಜ ಪ್ರೀತಿಯಿಂದ ಸಂರಕ್ಷಿಸಿದರು. ಬೆಳೆಯುತ್ತ ಬೆಳೆಯುತ್ತ ಸರಿ ಸುಮಾರು ೧೫-೨೦ ವರ್ಷ ಪ್ರಾಯಕ್ಕೆ ಅದು ನಾಲ್ಕಾರು ಮರಗಳ ತುದಿಯೇರಿತು. ಕಾಂಡ, ಎಲೆ ದಂಟಿನ ತುಂಬ ಚಿಕ್ಕ ಚಿಕ್ಕ ಮುಳ್ಳು ಹೊದ್ದು ತನ್ನ ಕಾವಲಿಗೆ ತಾನೇ ಪರಿಪೂರ್ಣ ಬೇಲಿ ಬಂಧನ ರೂಪಿಸಿತು. ಈಗ ಮನೆ ಸನಿಹದ ಮಾವಿನಮರಕ್ಕೂ ಲಗ್ಗೆ ಹಾಕುವ ಹವಣಿಕೆಯಲ್ಲಿದೆ. ಮುಳ್ಳುದಂಟು ಒಣಗಿ ಮುರಿದು ನೆಲಕ್ಕೆ ಬೀಳುತ್ತದೆ, ಅಲ್ಲಿ ನಡೆದಾಟ ಕಷ್ಟ. ಹೆಜ್ಜೆ ಹೆಜ್ಜೆಗೆ ಚುಚ್ಚುತ್ತ ಶರಶಯ್ಯೆ ರೂಪ. ಮೈಚುಚ್ಚುವ ಕಿರಿಕಿರಿ ಸಹಿಸಿ ಕತ್ತರಿಸದೇ ಸಲಹಿದ ಕಳಕಳಿಗೆ ಬಳುವಳಿಯಾಗಿ ಬಳ್ಳಿ ಚಿನ್ನದ ತತ್ತಿಯಿಡುವ ಕೋಳಿಯಾಗಿದೆ. ಹತ್ತಾರು ವರ್ಷಗಳಿಂದ ಫಸಲು ನೀಡುತ್ತಿದೆ. ಸಂಗ್ರಹಿಸಿ ಮನೆ ಬಳಕೆಗೆ ಮಿಕ್ಕದ್ದು ಮಾರಾಟ. 'ವರ್ಷ ಬಿಟ್ಟು ವರ್ಷಕ್ಕೆ ಫಲ ಜಾಸ್ತಿ, ಕಡಿಮೆಯೆಂದರೂ ನಾಲ್ಕು ಕ್ವಿಂಟಾಲ್ ಸಿಕ್ಕೇ ಸಿಗುತ್ತದೆ. ಈ ವರ್ಷ ೧೮-೨೦ ರೂಪಾಯಿ ಒಂದು ಕಿಲೋ ಬೆಲೆ. ಮಾರುಕಟ್ಟೆ ವ್ಯತ್ಯಾಸದಲ್ಲಿ ಸಾಮಾನ್ಯವಾಗಿ ೧೨ ರಿಂದ ೧೮ ರೂಪಾಯಿ ಯಾವುತ್ತೂ ದರವಿದೆ' ಕೃಷಿಕ ರಾಮಚಂದ್ರ ಹೆಗಡೆ ಹೇಳುತ್ತಾರೆ. ಇಂದಿನ ಯಾವ ಕೃಷಿ ಬೆಳೆಯಲ್ಲಿ ಇಲ್ಲದ ಅನುಕೂಲ, ಆದಾಯ ಇದರಲ್ಲಿದೆ. ನೈಸರ್ಗಿಕವಾಗಿ ಬೆಳೆವ ಇಂತಹುದೇ ಸೀಗೆಯಿಂದ ಇಲ್ಲಿನ ಕಳವೆಯ ಕೃಷಿಕ ಮಹೇಶ ಕೃಷ್ಣ ಗೌಡ ವರ್ಷಕ್ಕೆ ೪,೦೦೦ ರೂಪಾಯಿ ಆದಾಯ ಪಡೆಯುತ್ತಿದ್ದಾರೆ. ಸಲಹಿದವರ ಕೈ ಹಿಡಿದು ಅದು ಹಸುರು ನಿಧಿಯಾಗಿದೆ.

ಸೀಗೆ (Acacia rugata)ಯನ್ನು 'ಸೋಪ್‌ನಟ್' ಎನ್ನುತ್ತೇವೆ. ಬಲಿತ ಸೋಡಿಗೆ ಕೊಯ್ದು ಒಣಗಿಸಿ ತಯಾರಿಸಿದ ಸೀಗೆಹಿಟ್ಟು ನಮ್ಮ ಬಾತರೂಮ್‌ನಲ್ಲಿ ಸೋಪಿನೆದುರು ಪೈಪೋಟಿಗೆ ನಿಂತ ಕಲಮು, ಕಾಡುತ್ಪನ್ನ. ನಮ್ಮ ಹಳ್ಳದ ದಂಡೆಗಳು ಹಿಂದೆ ಸ್ನಾನದ ಸರಕು ಒದಗಿಸುವ ಉಚಿತ ಡಿಪಾರ್ಟ್‌ಮೆಂಟಲ್ ಸ್ಟೋರ್ ಆಗಿತ್ತು. ಹಳ್ಳದಂಚಿನ ಮರದಲ್ಲಿ ತೂನೆದಾಡುವ ಸೀಗೆ ಸ್ನಾನದ ಸೋಪಾಗುತ್ತಿತ್ತು, ಹೊಳೆ ಸಾಲಿನ ಮಾವಿನ ಮರದ ಎಲೆ ಹಲ್ಲುಜ್ಜಲು 'ಬ್ರಷ್ ಕಂ ಪೇಸ್ಟ್'. ನದಿ ನೀರು ಈಜಲು ಪುಟಾಣಿಗಳನ್ನು ಆಕರ್ಷಿಸಿ ಅರೋಗ್ಯದ ಪಾಠ ಕಲಿಸುತ್ತಿತ್ತು. ಬೇಸಿಗೆಯಲ್ಲಿ ಕೈ ಬೀಸಿಕೊಂಡು ಹೊಳೆ, ಹಳ್ಳಗಳಿಗೆ ಹೋದರೆ ಸ್ವಾವಲಂಬಿ ಸುಲಭ ಸ್ನಾನ, ಶುಭ್ರ ದೇಹ ಸಾಧ್ಯವಿತ್ತು.



ಸೀಗೆಕಾಯಿ

ಸೀಗೆ ಬಳ್ಳಿ ಲಾಭ ಕೇವಲ ಮನುಷ್ಯ ಕುಲಕ್ಕೆ ಮಾತ್ರ ಸೀಮಿತವಲ್ಲ. ಬಳ್ಳಿ ಬೆಳೆಯುತ್ತಿದ್ದಂತೆ ಅದರ ನೆರಳಲ್ಲಿ ಸೂಕ್ಷ್ಮ ಜೀವ ಪರಿಸರ ಜನ್ಮತಾಳುತ್ತದೆ. ನೆಲಕ್ಕೆ ಬಿದ್ದ ಒಣ ಎಲೆಗಳ ಜತೆ ಬಳ್ಳಿಯ ಮುಳ್ಳು ದಂಟುಗಳು ಕೂಡಿರುವದರಿಂದ ಯಾರೂ ತರಗೆಲೆ ಒಯ್ಯುವ ಉಸಾಪರಿ ಮಾಡುವದಿಲ್ಲ. ಬಿದ್ದ ನೆಲದಲ್ಲಿ ಕೊಳೆತು ಫಲವತ್ತಾದ ಮಣ್ಣು ಸಂರಕ್ಷಣೆ. ಇರುವೆ, ಜೇಡ, ಚಿಟ್ಟೆ, ಓತಿ, ಅಳಿಲು, ಸಂಧಿಪದಿ, ವೈವಿಧ್ಯಮಯ ಪಕ್ಷಿಗಳಿಗೆ ಸುರಕ್ಷಿತ ಆವಾಸ. ಮಾರ್ಚ್‌ದಲ್ಲಿ ಹೂರವಳಿಸಿದ ಬಳ್ಳಿ ಸುವಾಸನೆ ಬೀರಿ ಸೀಮೆಯ ಜೇನಿಗೆ ಆಹ್ವಾನ. 'ಸ್ಮಾಲ್ ಗ್ರೀನ್ ಬೀ ಈಟರ್' ಪಕ್ಷಿ ಅಲ್ಲಿ ಜೇನು

ಭೇಟಿಗೆ ಹೊಂಚು ಹಾಕುತ್ತದೆ. ಕಾಗೆ, ಗಿಡುಗಗಳು ಸಣ್ಣ, ಪುಟ್ಟ ಪಕ್ಷಿಗಳನ್ನು ಅಟ್ಟಿಸಿ ಕದನ ಶುರುವಾಗಿ ಕೊನೆಗೆ ಅದು ಸೀಗೆ ಬಳ್ಳಿಯಲ್ಲಿ ಸಮಾಪ್ತಿಯಾಗುತ್ತದೆ !. ಬಳ್ಳಿಯೊಳಕ್ಕೆ ಸರಾಗವಾಗಿ ಪುಟ್ಟ ಪಕ್ಷಿಗಳು ನುಸುಳಿ ದೊಡ್ಡ ಶತ್ರುಗಳ ದಾರಿ ತಪ್ಪಿಸಿ ಬಚಾವಾಗುತ್ತವೆ. ಸೀಗೆ ಸೋಡಿಗೆಗಳನ್ನು ಜಾನುವಾರುಗಲು ತಿನ್ನುತ್ತವೆ. ಬಳ್ಳಿಯ ಸೊಪ್ಪನ್ನು ಆನೆ ಇಷ್ಟಪಡುತ್ತದೆ, ಮುಳ್ಳು ಬಳ್ಳಿ ಹೀಗೆ ಬಹುಬಳಕೆಗೆ ಹಬ್ಬಿದೆ.

ಕಿರು ಅರಣ್ಯ ಉತ್ಪನ್ನವೆಂದು ಸೀಗೆಯನ್ನು ಗುರುತಿಸಲಾಗಿದೆ. ಸಂಗ್ರಹಕ್ಕೆ ಗುತ್ತಿಗೆ ನೀಡಲಾಗುತ್ತಿದೆ. ಒಂದು ಬಳ್ಳಿಯಿಂದ ಎಷ್ಟು ಆಧಾಯ ? ವಾರ್ಷಿಕ ವಿವಿಧ ಅರಣ್ಯ ವಿಭಾಗದಿಂದ ಎಷ್ಟು ಕ್ವಿಂಟಾಲ್ ದೊರೆಯುತ್ತದೆ ? ನಮ್ಮ ಅರಣ್ಯ ಇಲಾಖೆಯ ದಪ್ತರ್‌ನಲ್ಲಿ ಲೆಕ್ಕ ಸಿಗುವದಿಲ್ಲ !. ಪಕ್ಕಾ ಲಾಭದ ರುಚಿ ಗುತ್ತಿಗೆದಾರರಿಗೆ ಮಾತ್ರ ಗೊತ್ತಿದೆ. ಹೆಚ್ಚು ಲಾಭ ದೋಚುವ ಹವಣಿಕೆಯಲ್ಲಿ ಕತ್ತಿ ಕಡಿತಕ್ಕೆ ಕಾಡಿನ ಸೀಗೆ ಬಳ್ಳಿಗಳು ಕಂಗಾಲಾಗಿವೆ. ಕಾಡು, ಹಳ್ಳದ ದಂಡೆಯಲ್ಲಿ ಹೇಳ ಹೆಸರಿಲ್ಲದಂತಾಗಿದೆ. 'ಕಡಿಯುವ ಕತ್ತಿ ಬದಿಗಿಡಿ, ಸಂರಕ್ಷಣೆಗೆ ಗಮನ ಕೊಡಿ, ಅಚ್ಚರಿಯ ಆಧಾಯ ಸೀಗೆಯಲ್ಲಿದೆ'. ಮುಳ್ಳು ಬಳ್ಳಿ ಬಾಯಲ್ಲಿ ಸಂರಕ್ಷಣೆಯ ಅಮರವಾಣಿ ಕೇಳುತ್ತಿದೆ.

### 'ಗೂಣಗಲು ಬೆಳೆಸಿ – ರಕ್ತಹೊನ್ನೆ ಗಳಿಸಿ'

'ಗೂಣಗಲು ಮುಳ್ಳು ಬೆಳೆಸಿ ರಕ್ತಹೊನ್ನೆ ಗಳಿಸಿ' ಒಂದು ಕೊಂಡರೆ ಇನ್ನೊಂದು ಫ್ರೀ ಕೊಡುವ ಚಾಳಿ ಕಾಡು ಗುಡ್ಡದಲ್ಲೂ ಇದೆಯೇ? ಅನುಮಾನ ಬೇಡ ! ಮಲೆನಾಡಿನ ಕಾಡಿನಲ್ಲಿ ಗೂಣಗಲು ಎಂಬ ಮುಳ್ಳು ಗಿಡ ಬೆಳೆಯುತ್ತದೆ. ಕಾಂಡದ ತುಂಬೆಲ್ಲ ಮುಳ್ಳು ತುಂಬಿರುವ ಇದು ಬಯಲು ಭೂಮಿ, ಬಂಜರು ನೆಲ, ಮರದ ನೆರಳು, ಬೇಲಿ ಎಂದು ಸಿಕ್ಕಿದ ಜಾಗದಲ್ಲಿ ಬೆಳೆಯುತ್ತದೆ. ಈ ಮುಳ್ಳಿನ ಕಂಟಿಯಲ್ಲಿ ಚಿನ್ನದ ತತ್ತಿ ಇಟ್ಟ ಹಾಗೇ ರಕ್ತ ಹೊನ್ನೆ ಗೊಣಗಲ ನಡುವೆ ಬೆಳೆಯುತ್ತಿದೆ. ಮುಳ್ಳುಗಿಡ ಹೊನ್ನೆಯ ಅಡಗುದಾಣವಾಗುತ್ತದೆ.

ಜನವರಿ – ಫೆಬ್ರುವರಿ ಹೊತ್ತಿಗೆ ಫಲಗಳನ್ನು ಹೊನ್ನೆಮರ ಗಾಳಿಯಲ್ಲಿ ತೇಲಿ ಬಿಡುತ್ತದೆ. ಜುನ್ ಮಳೆಗೆ ಬೀಜೋಪಚಾರ ಸಿಕ್ಕು, ಸಸಿ ಉತ್ಪಾದನೆ. ಬಿದ್ದ ಬೀಜವೆಲ್ಲ ಮೊಳಕೆ, ಸಸಿಯಾದರೆ ನೆಲದಲ್ಲಿ ಹುಲ್ಲಿಗಿಂತ ಹೊನ್ನೆಯೇ ತುಂಬಿರಬೇಕಿತು. ಕೆಲ ಬೀಜಗಳು ಕೀಟದಾಳಿಗೆ ತುತ್ತಾಗುತ್ತವೆ.

ಇನ್ನು ಕೆಲವು ಸಸಿಯಾಗುತ್ತಿದ್ದಂತೆ ದನ, ಕಾಡು ಪ್ರಾಣಿಗಳು ಇವನ್ನು ಹುಡುಕಿ ಹುಡುಕಿ ತಿನ್ನುತ್ತವೆ. ಜಾನುವಾರುಗಳ ಇಷ್ಟದ ಆಹಾರವಾದ ಕಾರಣ ಬಯಲಲ್ಲಿನ ಸಸಿಗಳೆಲ್ಲ ಮಂಗಮಾಯವಾಗುತ್ತವೆ. ಆದರೆ ಗೊಣಗಲು ಮುಳ್ಳುಕಂಟಿಯಲ್ಲಿ ಅಚಾನಕ್ ಬಿದ್ದರೆ ಬೀಜಕ್ಕೆ ಸಂಪೂರ್ಣ ಸುರಕ್ಷೆ. ಮುಳ್ಳುಗಿಡ ಹೊನ್ನೆ ಸಸಿಯನ್ನು ಕಾಯುತ್ತದೆ. ಮುಳ್ಳಿನ ಮಧ್ಯೆ ಬಾಯಿ ಹಾಕಲು ಯಾವ ಪ್ರಾಣಿಗೂ ಸಾಧ್ಯವಾಗುವದಿಲ್ಲ. ಹೀಗಾಗಿ ಗೊಣಗಲ ಬುಡದ ಫಲವತ್ತಾದ ಮಣ್ಣಿನಲ್ಲಿ ಬೇರಿಳಿಸಿ ಗಿಡ ದಷ್ಟಪುಷ್ಟವಾಗಿ ಬೆಳೆಯುತ್ತದೆ. ಹೀಗಾಗಿ ಮಲೆನಾಡಿನಲ್ಲಿ ಬೆಳೆಯುವ ಪ್ರತಿ ಹೊನ್ನೆ ಮರದ ಹಿಂದೆ ಈ ಮುಳ್ಳು ಗಿಡದ ಅಮೂಲ್ಯ ನೆರವಿದೆ.



ಗೊಣಗಲು ಗಿಡದ ಬುಡದಲ್ಲಿ ರಕ್ತಹೊನ್ನೆ ಬೆಳೆಯುತ್ತದೆ

ರಕ್ತ ಹೊನ್ನೆ ಗಿಡ ಬೆಳೆಸುವಾಗ ನಾವು ಅರಣ್ಯ ಶಾಸ್ತ್ರ ಪುಸ್ತಕ ತೆಗೆದು 'ಟೆರೋಕಾರ್ಪಸ್ ನಾರ್‍ಸೂಪಿಯಂ' ಸಸ್ಯ ವಿವರ ಪತ್ತೆ ಹಚ್ಚುತ್ತೇವೆ. ಮರದಡಿ ಬಿದ್ದ ಫಲಿತ ಬೀಜ ಸಂಗ್ರಹಿಸುತ್ತೇವೆ. ೪೮ ತಾಸು ಬೀಜ ತಣ್ಣೀರಲ್ಲಿ ನೆನಸಿ ಬಿತ್ತಿದರೆ ಬೀಜ ಮೊಳಕೆ. ಪಾತಿಗಳಲ್ಲಿ, ಪೊಲಿಥೀನ್ ಚೀಲಗಳಲ್ಲಿ ಬೆಳೆಸಿ ನಾಟಿ ಮಾಡುವ ಅರಣ್ಯ ಕೃಷಿ ವಿಧಾನ ಅನುಸರಿಸುತ್ತೇವೆ. ನರ್ಸರಿಯಲ್ಲಿ ಗಿಡ ಬೆಳೆಸಿ ಗುಡ್ಡದಲ್ಲಿ ನೆಡುವ ಮಾಮೂಲಿಕ್ರಮ ಅನುಸರಿಸುತ್ತೇವೆ. ನಟ್ಟ ಸಸಿಗಳನ್ನು ಪ್ರಾಣಿಗಳು ತಿನ್ನುವಾಗ ದುಬಾರಿ ಬೇಲಿ ಟ್ರೀಗಾರ್ಡ್‌ಗೆ ಮೊರೆ ಹೋಗುತ್ತೇವೆ. ಆದರೆ ನಿಸರ್ಗ ಗೊಣಗಲು ಮೂಲಕ ಹೊನ್ನೆಗೆ ನೀಡಿದ ಸಹಜ ಸೇವೆ ನೋಡಲು ಮರೆಯುತ್ತೇವೆ.

# ದೇಸಿ ನೆಲದ ಹಸುರು ಭೀಮ ಹೆಬ್ಬೇವು

'ಮ್ಯಾಂಜಿಯಂ' ಎಂಬ ಸಸ್ಯ ಅದ್ಭುತವಾಗಿ ಬೆಳೆಯುತ್ತದೆಂದು ನರ್ಸರಿ ಜಾಹಿತಾರು ಮೆರೆದು ನಂತರ ಗಿಡ ಮೂಲೆಗುಂಪಾದದ್ದು ನೆನೆಪಿರಬಹುದು. ಪ್ರಚಾರದ ಅಬ್ಬರಕ್ಕೆ ನೆಲದ ಮರ ಮರೆತಿದ್ದೆವು. ಎಂಟು ವರ್ಷದ ಹಿಂದೆ ಹೆಬ್ಬೇವು ಎಂಬ ನಮ್ಮ ಕಾಡು ಮರ ತಿಪಟೂರಿನಲ್ಲಿ ಹುಬ್ಬೇರಿಸುವ ಗಾತ್ರದಲ್ಲಿ ಬೆಳೆದಿತ್ತು. ಎಳೆ ಪ್ರಾಯಕ್ಕೆ ಎದೆಯುಬ್ಬಿಸಿ ಬೆಳೆದ ಬೆರಗಿನ ದಾಖಲೆ ಹುಡುಕುತ್ತ ಹೊರಟಂತೆ ದೇಸೀ ಕುಲದ ದೈತ್ಯ ದರ್ಶನ. ಹಳ್ಳಿ ಮೂಲೆಯ ಹಸಿರು ಶಕ್ತಿಯ ಬೇರು ಮೂಲದ ಕತೆ ಇಲ್ಲಿದೆ.

'ಗಿಡ ಹ್ಯಾಗುಂಟ್ರಿ...! ?' ಎಂದು ಕಾಂತರಾಜು ಹುಬ್ಬೇರಿಸಿದರು. ಹೆಬ್ಬೇವು ಎಂಬ ಹಸುರು ದುಮ್ಮಿಯತ್ತ ಕಣ್ ಸೆಳೆದರು. ತಿಪಟೂರಿನ ಎಸ್. ಲಕ್ಕಿಹಳ್ಳಿಯ ಭೈಫ್ ಸಂಸ್ಥೆ ನರ್ಸರಿಯಲ್ಲಿ ನಿಂತ ಮರ ಚಹರೆ, ತೊಗಟೆ ಬಣ್ಣ ನೋಡಿದರೆ ವಯಸ್ಸಿಗೆ ಮೀರಿದ ದೇಹ ಸಂಪತ್ತು. ಇದೇನೋ ಹಸಿರು ಸೃಷ್ಟಿಯ ಮ್ಯಾಜಿಕ್ ಇರಬೇಕೆಂಬ ಊಹೆ. ಫಾರ್ಮ್ ಮ್ಯಾನೇಜರ್ ಕಾಂತರಾಜು ಮರ ಅಪ್ಪಿಕೊಂಡರು. ೧೯೯೩ರಲ್ಲಿ ನಾಟಿ ಮಾಡಿದ್ದು ಐದೇ ವರ್ಷಕ್ಕೆ ಮರವಾಗಿ ಬೆಳೆದ ವಿಶೇಷ ತೋರಿಸಿದರು.



ಹಾಸನದ ಮಾರ್‌ಶೆಟ್ಟಿ ಹಳ್ಳಿಯಲ್ಲಿ ೫ ವರ್ಷದ ಹೆಬ್ಬೇವು


ನಮ್ಮ ಕಾಡು ಕುಲ, ಕಹಿ ಬೇವಿನ ಸಂಬಂಧಿ, ಹಸಿರು ಸಿರಿ ಅರಿವ ಅವಕಾಶ ಧಾರಾಳ ಎಂದು ಗಮ್ಮತ್ತಿನ ಮರದ ಮಾಹಿತಿ ಕೆದಕತೊಡಗಿದೆ. ಕಾಡು ಅಲೆಯುವಾಗ, ನರ್ಸರಿ ತಿರುಗುವಾಗ, ಬಯಲು ಸೀಮೆ, ಮಲೆನಾಡು ಕೃಷಿ ಮಿತ್ರರ ಜತೆ ಸೇರಿದಾಗ ಹೆಬ್ಬೇವು ಹುಡುಕಾಟ. ಮರದ ನಿಜ ಬೆಳೆವಣಿಗೆ ಬಗೆಗೆ ಅಪ್ಪಟ ಸಾಕ್ಷ್ಯಗಳು ಹಳ್ಳಿ ಮೂಲೆಗಳಲ್ಲಿ ತೆಪ್ಪಗಿದ್ದವು. ಬರದ ಭೂಮಿ ಹೊಲದ ಬದ್ಲು, ಕೆರೆ ದಂಡೆ, ಮಲೆನಾಡು ಕಾಡುಗಳಲ್ಲಿ ಅವಿತಿದ್ದ ಮರ ಶೋಧ ಸಡೆಸಿದಂತೆ ಅಲ್ಲಿ ಸಸ್ಯ ಲೋಕದ ಕೌತುಕ ಕಂಡು ಬಂತು.

## ಮರದ ಸುತ್ತ ಪರಿಕ್ರಮಣ

ಬೆತ್ತದ ಕೃಷಿ ವೀಕ್ಷಣೆಗೆಂದು ಎ.ಸಿ. ಲಕ್ಷ್ಮಣರ ಬೆಂಗಳೂರಿನ ಅವರ ತೋಟ ಓಡಾಡುತ್ತಿದ್ದೆ. ಕೊಬ್ಬಿ ಉಬ್ಬಿದ ಮರ ನೋಡಿ ಹೆಬ್ಬೇವು ಎನ್ನುವಷ್ಟರಲ್ಲಿ 'ಇವ್ನಿಗೆ ಇನ್ನೂ ನಾಲ್ಕು ವರ್ಷ ಆಗಿಲ್ಲ ಕಣ್ರಿ..' ಎಂದು ಹಸಿರು ಎತ್ತಿಟ್ಟರು. ಕರ್ನಾಟಕ ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಎ.ಸಿ.ಲಕ್ಷ್ಮಣ್ 'ಮಿಲಿಯ ಡುಬಿಯಾ' ಎಂಬ ಈ ಸಸಿಯ ಶೀಘ್ರ ಬೆಳವಣಿಗೆ ವೈಖರಿ ಹೇಳಿದರು. ಬಯಲು ಸೀಮೆ, ಅರೆ ಮಲೆನಾಡಿಯಲ್ಲಿ ಮಾತ್ರ ಹೆಬ್ಬೇವು ಬೆಳೆಯಬಹುದೆಂಬ ಮಾತಿತ್ತು. ಕಹಿ ಬೇವು ಅಲ್ಲಿ ಧಾರಾಳವಾಗಿ ಕಾಣುತ್ತಿದ್ದರಿಂದ ಇದೂ ಅಲ್ಲಿ ಮಾತ್ರ ಸಿಗಬಹುದೆಂದು ಅನೇಕರು ಹೇಳುತ್ತಿದ್ದರು. ಈ ಮಧ್ಯೆ ಉತ್ತರ ಕನ್ನಡ ಸಿದ್ದಾಪುರದ ಕುಂಬಾರಕುಳಿಯಲ್ಲಿ ಮರ ಬೆಳೆದ ಮಾಹಿತಿ ದೊರೆಯಿತು. ಅಲ್ಲಿನ ರಾಮಚಂದ್ರ ಹೆಗಡೆ ೩೦ ವರ್ಷದ ಹಿಂದೆ ಶಿವಮೊಗ್ಗದ ರಸ್ತೆ ಬದಿಯಲ್ಲಿ ಹುಟ್ಟಿದ ಎಳೆ ಸಸಿಯನ್ನು ಕಹಿ ಬೇವಿನ ಗಿಡವೆಂದು ಕಿತ್ತು ತಂದಿದ್ದರು. ಔಷಧಕ್ಕೆ ಅನುಕೂಲವೆಂದು ಅಕ್ಕರೆಯಲ್ಲಿ ಮನೆಯ ತೋಟದ ಬದಿಯಲ್ಲಿ ನಾಟಿ ಮಾಡಿದರು. ಗಿಡ ಬೆಳವಣಿಗೆ ನೆಟ್ಟವರನ್ನೇ ಆವಾಕ್ಕಾಗಿಸಿತು. ಅದು ಹೆಬ್ಬೇವು, ಈಗ ಮರ ಸುತ್ತು ಬಳಸಲು ಮೂರು ಜನ ಬೇಕು !.

ಯಲ್ಲಾಪುರ ಚಿನ್ನಾಪುರ ನರ್ಸರಿಯಲ್ಲಿ ಹೆಬ್ಬೇವಿನ ಮಾತಾಡುತ್ತ ನಿಂತಿದ್ದೆ. ಮಾತು ಕೇಳಿದ ವಾಚ್‌ಮೆನ್ ಅಲ್ಲಿನ ತೇಗದ ನೆಡುತೋಪಿಗೆ ಹೋಗೋಣವೆಂದು ದುಂಬಾಲು ಬಿದ್ದರು. ಅಲ್ಲೊಂದು ಗಿಡ ಭಾರೀ

ಗಾತ್ರದಲ್ಲಿ ಬೆಳೆಯುತ್ತಿರುವದನ್ನು ಗಮನಿಸಿದ ವಾಚ್‌ಮೆನ್‌ಗೆ ಅದು ಹೆಬ್ಬೇವಿನ ಮರವಾಗಿರಬಹುದೆ ಎಂಬ ಅನುಮಾನವಿತ್ತು. ಮರ ಜಾತಿ ಗೊತ್ತಿಲ್ಲದ ಆತ ಸ್ಥಳಕ್ಕೆಕರೆದೊಯ್ದು. ಅಲ್ಲಿದ್ದ ದೈತ್ಯ ಮರಕ್ಕೆ ಪರಿಚಯದ ನಗು, ಸ್ವಾರಸ್ಯಕರ ಕತೆ ಹೊರಬಿತ್ತು. ಕ್ರಿ.ಶ, ೧೯೪೯ರಲ್ಲಿ ಯಲ್ಲಾಪುರದ ಚಿನ್ನಾಪುರದಲ್ಲಿ ಅರಣ್ಯ ಇಲಾಖೆ ಸಾಗವಾನಿ ನರ್ಸರಿ ತಯಾರಿ ನಡೆಸಿತ್ತು. ಒಂದೆರಡು ಗುಂಟೆ ಕ್ಷೇತ್ರದ ಕಾಡು ಗಿಡಗಳನ್ನು ಸಂಪೂರ್ಣ ಕತ್ತರಿಸಿ ಮಣ್ಣು ಹದಗೊಳಿಸಿ ತೇಗದ ಬೇರಿನ ತುಂಡುಗಳನ್ನು ನಾಟಿ ಮಾಡುವ ತಯಾರಿ. ಬೇರು ಮೊಳಕೆಯೊಡೆದು ಸಸಿ ಬೆಳೆಯಲು ಚೆನ್ನಾಗಿ ಬಿಸಿಲು ಅಗತ್ಯ, ಹೀಗಾಗಿ ಸುತ್ತಲಿನ ಗಿಡಗಳನ್ನು ಕಡಿದರು. 'ಟೀಕ್ ಬೆಡ್' ತಯಾರಿಸಿದ ಆ ಜಾಗದಲ್ಲಿ ಒನಕೆ ಗಾತ್ರದ ಒಂದು ಗಿಡವಿತ್ತು. 'ಗಿಡ ಚೆನ್ನಾಗಿದೆ, ಜಾತಿ ಯಾವುದೋ ಗೊತ್ತಿಲ್ಲ' ಎಂದು ವಾಚ್‌ಮೆನ್ ಗಿಡ ಕತ್ತರಿಸದೇ ಉಳಿಸಿದರು. ೧೬ ವರ್ಷದ ಹಿಂದೆ ಗಿಡ ಉಳಿಸಿದ ಅದೇ ವಾಚ್‌ಮೆನ್ ಈಗ ತೋರಿಸಿದ್ದು ಹೆಬ್ಬೇವಿನ ಹೆಮ್ಮರ. ಮರದ ಗಾತ್ರ ಅಳೆಯಲು ಗಾರ್ಡ್ - ವಾಚಮನ್‌ರಿಬ್ಬರ ಕೈಗಳು ಬೇಕಾದವು !. ಧಾರವಾಡದ ಅರಣ್ಯ ಸಂಶೋಧನಾ ವಿಭಾಗ ಬದಾಮಿಯ ಯರಗಲ್‌ನಲ್ಲಿ ೨೦೦೧ರಲ್ಲಿ ಪ್ರಾಯೋಗಿಕವಾಗಿ ಹೆಬ್ಬೇವು ನಾಟಿ ಮಾಡಿತು. ಈಗ ಅವುಗಳ ಕಾಂಡದ ಸುತ್ತಳತೆ ೫೦ ಸೆಂಟಿ ಮೀಟರ್ ಬೆಳೆದಿದೆ. ಜಮಖಂಡಿಯ ಕಲ್ಲಹಳ್ಳಿ ಸದಾ ಬರಗಾಲದಲ್ಲಿ ಬೇಯುತ್ತದೆ. ಇಲ್ಲಿನ ಹೊಲದ ಬದಿಯಲ್ಲ ಯಾವ ಬರಗಾಲಕ್ಕೂ ಅಂಜದ ಹೆಬ್ಬೇವು ಬೆಳೆಯುವದನ್ನು ಕೃಷಿಕ ಸಂಗಪ್ಪ ಉಪ್ಪಲದಿನ್ನಿ ಗುರುತಿಸುತ್ತಾರೆ. ಕಳೆದ ೮ ವರ್ಷಗಳಿಂದ ೫೦೦ ಮಿಲಿ ಮೀಟರ್ ಮಳೆ ಸುರಿಯುವ ಬಯಲು ಸೀಮೆಯಿಂದ ೨೫೦೦ ಮಿಲಿ ಮೀಟರ್ ಮಳೆ ಸುರಿಯುವ



ಯಲ್ಲಾಪುರ ಇಡಗುಂದಿಯಲ್ಲಿ ೧೮ ವರ್ಷಕ್ಕೆ ಹೆಬ್ಬೇವು ಹೆಮ್ಮರ

ಮಲೆನಾಡಿನ ಹತ್ತಾರು ಕಡೆಗಳಲ್ಲಿ ಹೆಬ್ಬೇವಿನ ಚಿತ್ರ ತೆಗೆಯುತ್ತ ಈಗ ಚಿತ್ರ ಸಂಪುಟವೇ ಬೆಳೆದಿದೆ. ಎಲ್ಲಿದ್ದರೂ ಗೆಲ್ಲುತ್ತೇನೆಂದು ಜಿದ್ದು ಕಟ್ಟಿ ಎದೆಯುಬ್ಬಿಸಿ ಎಲ್ಲೆಡೆ ಗಿಡ ಮೆರೆದಿದೆ.

## ಜನಪದರ ಮರ ಪ್ರೀತಿ


ಮಲೆನಾಡಿನ ಬಹುತೇಕ ಜನಕ್ಕೆ ಹೆಬ್ಬೇವು ಅಪರಿಚಿತ, ಕಾಡಲ್ಲಿದ್ದರೂ ಬಳಕೆ ಗೊತ್ತಿಲ್ಲದ ಕುಲ. ಬಯಲು ನಾಡಿನಲ್ಲಿ ಎತ್ತಿನ ಗಾಡಿಯ ನೊಗ, ನೇಗಿಲುಗಳಿಗೆ ಇದರ ಬಳಕೆ. ಸೊಪ್ಪು ಅತ್ಯುತ್ತಮ ಗೊಬ್ಬರ. ಟೊಂಗೆ ಕತ್ತರಿಸಿದರೆ ಮತ್ತೆ ಮತ್ತೆ ಚಿಗುರಿ ಬೆಳೆಯುವದರಿಂದ ಹೊಲದ ಬದುವಿನಲ್ಲಿ ಗೊಬ್ಬರ – ನಾಟಾ – ಉರುವಲಕ್ಕಾಗಿ ಪೋಷಣೆ. ಇತ್ತೀಚಿನ ವರ್ಷಗಳಲ್ಲಿ ಮನೆ ನಿರ್ಮಾಣಕ್ಕೆ ಹೆಬ್ಬೇವಿನ ಕಟ್ಟಿಗೆ ಬಳಕೆ. ತಿಪಟೂರಿನ ಲಕ್ಕಿಹಳ್ಳಿಯ ಸಿದ್ದಪ್ಪ ೨೦ ವರ್ಷದ ಹಿಂದೆ ನಾಟಿ ಮಾಡಿದ ಹೆಬ್ಬೇವು ಈಗ ಅವರ ತೋಟದ ಮನೆ ನಿರ್ಮಾಣಕ್ಕೆ ಬಳಕೆಯಾಗಿದೆ. 'ಪ್ಲೈವುಡ್' ಆಗಿಯೂ ಬೇಡಿಕೆ. ಮರ ಕತ್ತರಿಸಿದಾಗ ಬಿರುಕು ಬರುತ್ತದೆ, ಹಲಗೆ ಒಡೆಯುತ್ತದೆ ಎಂಬುದು ಬಡಗಿಗಳ ಕೊರಗು. ಆದರೆ ಸುಧಾರಿತ ತಂತ್ರಜ್ಞಾನದ ಮುಖೇನ ಕಟ್ಟಿಗೆಯನ್ನೂ ಸಂಸ್ಕರಿಸಿ ಬಳಸಿದರೆ ಶತಮಾನ ಕಾಲ ಬಾಳಬಹುದು. ನಾಟಾಕ್ಕೆ ಬಳಸುವ ಉತ್ಕೃಷ್ಟ ಮರ ಜಾತಿಗಳು ಕಡಿಮೆಯಾಗಿರುವಾಗ ಸುಲಭಕ್ಕೆ ಬೆಳೆವ ಇದಕ್ಕೆ ಬೇಡಿಕೆ ಏರುತ್ತಿದೆ. ಮರ ಬಳಕೆಯ ಜನಪದರ ಪ್ರೀತಿ ಗಮನಿಸಿ ಕರ್ನಾಟಕ ಅರಣ್ಯ ಇಲಾಖೆ ೧೯೯೬ರಲ್ಲಿ 'ಪ್ಲಸ್ ಟ್ರೀ' ಕಾರ್ಯಕ್ರಮದಲ್ಲಿ ರಾಜ್ಯದ ಭಾಗಮಂಡಲ, ಮಡಕೇರಿ, ವಿರಾಜಪೇಟೆ, ನಂಜನಗೂಡು, ಮೈಸೂರು, ಯಳಂದೂರುಗಳಲ್ಲಿ ೩೦ ಮರಗಳನ್ನು ಗುರುತಿಸಿದೆ. ೮–೧೦ ಮೀಟರ್ ಎತ್ತರದ ನೇರ ಕಾಂಡ, ೨೦–೩೦ಮೀಟರ್ ಎತ್ತರದ ಹೆಮ್ಮರಗಳವು. ನರ್ಸರಿಯಲ್ಲಿ ಸಸ್ಯೋತ್ಪಾದನೆಗೆ ಬೀಜ ಸಂಗ್ರಹಕ್ಕೆ ನೆರವಾಗಲೆಂದು ಮರ ಗುರುತಿಸಲಾಗಿದೆ.

ಡಿಸೆಂಬರ್ – ಜನವರಿಯಲ್ಲಿ ಅಮಟೆ ಕಾಯಿ ಗಾತ್ರ ಫಲಗಳು, ಫೆಬ್ರುವರಿಯಲ್ಲಿ ಚಿಗುರಿದ ಟೊಂಗೆಗೆ ಹಸಿರು ಛಾವಣಿ ಚೆಂದ. ಕಾಡು ಕುರಿ, ಜಿಂಕೆಗಳಿಗೆ ಹೆಬ್ಬೇವಿನ ಕಾಯಿ ಇಷ್ಟವೆಂಬುದು ಮಲೆನಾಡಿನಲ್ಲಿ ಪತ್ತೆಯಾಯ್ತು. ಮರಜಾತಿ ಗೊತ್ತಿಲ್ಲದ ಕಬ್ಬಗುಳಿಯ ಶಂಕರ ನಾಯ್ಕ್ 'ಜಿಂಕೆ ಕಾಯಿ ಮರ' ಎಂದೇ ಇದನ್ನು ನನಗೆ ಪರಿಚಯಿಸಿದ್ದರು. ವನ್ಯಜೀವಿಗಳು ಹೆಬ್ಬೇವಿನ ಬೀಜ ಸಂಸ್ಕರಣೆಯಲ್ಲಿ ನೆರವಾಗಿ ಸಸಿ ಬೆಳೆಯುವ ಅಂದಾಜಿದೆ.

'ನರ್ಸರಿಯಲ್ಲಿ ಸಸಿ ಮಾಡುವದೇ ಕಷ್ಟ, ಸಾವಿರ ಬೀಜ ಹಾಕಿದರೆ ನೂರು ಸಸಿಯಾಗುತ್ತವೆ. ಬೀಜದ ಗಟ್ಟಿ ಕವಚ ಬಿಸಿಲಿಗೆ ಒಡೆಯಬೇಕು, ಸಂಸ್ಕರಣೆ ಮುಖೇನ ಸಸ್ಯೋತ್ಪಾದನೆಯಾಗಬೇಕು ' ಬೈಫ್ ಸಂಸ್ಥೆಯ ಡಾ । ಜಿ.ವಿ. ಹೆಗಡೆ ಹೇಳುತ್ತಾರೆ. ಸಾವಿರಾರು ಸಸಿ ಬೆಳೆಸಿ ರೈತರಿಗೆ ವಿತರಿಸಿ ಹೆಬ್ಬೇವಿನತ್ತ ಕೃಷಿಕರ ಗಮನ ಸೆಳೆಯಲು ಭೈಫ್ ಶ್ಲಾಘನೀಯ ಕಾರ್ಯ ಮಾಡಿದೆ.

ಎಂಟು ವರ್ಷದ ಹಿಂದೆ ಮರ ತೋರಿಸಿ 'ಗಿಡ ಹ್ಯಾಂಗುಂಟ್ರಿ...!' ಎಂದು ಗಮನ ಸೆಳೆದ ಕಾಂತರಾಜು ಮತ್ತೆ ಭೇಟಿಯಾದಾಗೆಲ್ಲ ಮಾತು ಹೆಬ್ಬೇವಿನಿಂದಲೇ ಆರಂಭವಾಗುತ್ತದೆ. ಕಳೆದ ಫೆಬ್ರುವರಿಯಲ್ಲಿ ತಿಪಟೂರಿನ ಮಾರಶೆಟ್ಟಿಹಳ್ಳಿ ಗೇಟ್‌ಗೆ ಕರೆದೊಯ್ದು ಅಲ್ಲಿನ ಚಲುವೇ ಗೌಡರ ೧೨ ಎಕರೆ ತೆಂಗು, ಮಾವಿನ ತೋಟ ತೋರಿಸಿದರು. ಅದರ ಸುತ್ತ ೪೦೦ ಹೆಬ್ಬೇವಿನ ನಾಟಿ ಮಾಡಲಾಗಿತ್ತು. ಗಿಡಗಳು ಹೆಮ್ಮರವಾಗಲು ಪೈಪೋಟಿ ನಡೆಸಿದ್ದವು. ಬೇಸಿಗೆಯಲ್ಲಿ ಒಂದು ವರ್ಷ ಸ್ವಲ್ಪ ನೀರು ನೀಡಿದ್ದು ಬಿಟ್ಟರೆ ಶೂನ್ಯ ಕೃಷಿಪವಾಡ. ೨-೩ ಅಡಿ ಸುತ್ತಳತೆ, ಶಿಸ್ತಿನ ಸಾಲು, ನಾಲ್ಕು ವರ್ಷದ ಸಸ್ಯ ಸಂಪತ್ತು. ಮರ ತಬ್ಬಿ ಇಬ್ಬರೂ ಖುಷಿ ಪಟ್ಟೆವು. ನೆಲ ಬೇಧವಿಲ್ಲದೇ ನಗುವ ಹಸಿರು ಭೀಮ ಹೆಬ್ಬೇವಿನ ಸಾಲು ಸಾಲು ಚಿತ್ರಗಳು ಕಣ್ತುಂಬಿದವು.

**ಪಗಾರಿಲ್ಲದ ಫಾರೆಸ್ಟ್ ಗಾರ್ಡ್ ಬಳ್ಳಾರಿ 'ಜಾಲಿ' !**



ಪೈಸೆ ಪಗಾರಿಲ್ಲದೇ ಬಯಲುಸೀಮೆಗೆ ಹಸುರು ತಂದ ಬಳ್ಳಾರಿ ಜಾಲಿ

ಬಯಲು ಸೀಮೆಯಲ್ಲಿ ಅಸಲು ಉಳಿದಿರುವ ಹಸುರಿನಲ್ಲಿ ಬಳ್ಳಾರಿ ಜಾಲಿ ಸಾಮ್ರಾಜ್ಯ ಇಲ್ಲದಿದ್ದರೆ ಎಲ್ಲವೂ ಖಾಲಿ ಖಾಲಿ. ಇಲ್ಲಿನ ಶೇಕಡಾ ೩೦ ಮನೆಗಳಲ್ಲಿ ಅಡುಗೆ ಒಲೆ ಉರಿಯುತ್ತಿರಲಿಲ್ಲ, ಕುರಿಮಂದೆಗೆ ಗಿಡದ ಸೋಡಿಗೆ ಆಹಾರವಿರಲಿಲ್ಲ, ಮಣ್ಣಿನ ರಕ್ಷಣೆಗೆ ಅಗ್ಗದ ಮಾರ್ಗವಿರಲಿಲ್ಲ, ಅಪುರೂಪಕ್ಕೆ ಬೀಳುವ ಮಳೆ ಹನಿ ಭೂಮಿಗೆ ಇಂಗಿಸಲು ಗಿಡದ ನೆರವು ಸಿಗುತ್ತಿರಲಿಲ್ಲ, ನೀರಾವರಿ ಕಾಲುವೆಯಂಚಿನ ಮಣ್ಣು ತಡೆಯುತ್ತದೆ. ಮೈತುಂಬ ಮೊನಚಾದ ಮುಳ್ಳು ಹೊತ್ತ ಇದು ಕಾಡಿಗೆ ಬಂದವರಿಗೆ ಸೂಜಿ ಚಿಕಿತ್ಸೆಯಲ್ಲೆ ಹಿಮ್ಮೆಟ್ಟಿಸಿ ಭೂಮಿಯಲ್ಲಿ ಅಳಿದುಳಿದ ಸಸ್ಯ, ಪ್ರಾಣಿ ರಕ್ಷಣೆ ಮಾಡುತ್ತದೆ. ಒಟ್ಟಿನಲ್ಲಿ ಕಾಡಿನ ಬೇಲಿಗೆ ಜಾಲಿಗಿಂತ ಬೇರೆ ಬಂಧುವಿಲ್ಲ. ಬರಗಾಲದಲ್ಲಿ ಜಾಲಿ ಗಿಡ ಕಡಿದು ಇದ್ದಲಿ ತಯಾರಿಸಿ ಬದುಕುವ ಸಾವಿರಾರು ಹಳ್ಳಿಗರಿದ್ದಾರೆ. ಹುಬ್ಬಳ್ಳಿ, ದಾವಣಗೆರೆ, ಬೆಳಗಾವಿ ಹೋಟೆಲುಗಳಿಗೆ ಇದು ಇದ್ದಿಲಿ ಒದಗಿಸುತ್ತಿದೆ. ಕರ್ನಾಟಕಲ್ಲಿ ಪ್ರಥಮ ಬಾರಿಗೆ ಇದನ್ನು ಬಳ್ಳಾರಿ ಹಗರಿ ಹಳ್ಳಿಯಲ್ಲಿ ನಾಟಿ ಮಾಡಿದರೆಂದೂ, ಬಳ್ಳಾರಿ ನಾಗನ ಗೌಡರು ಸಚಿವರಾಗಿದ್ದ ಕಾಲಕ್ಕೆ ಉರುವಲು ಸಮಸ್ಯೆ ಬಗೆಹರಿಸಲು ಪ್ರದೇಶದಲ್ಲಿ ಬೆಳೆಸಲು ಚಾಲನೆ ನೀಡಿದರೆಂಬ ಮಾತಿದೆ. ಗಿಡಕ್ಕೆ ರಾಜ್ಯದಲ್ಲಿ ಬಳ್ಳಾರಿ ಜಲಿಯೆಂದು ಹೆಸರು ಬರುವದಕ್ಕೆ ಬಳ್ಳಾರಿಯಲ್ಲಿ ಮೊದಲು ಬೆಳೆದಿದ್ದು ಕಾರಣ. ವಿದೇಶಿ ಸಸ್ಯ ಕ್ರಿ.ಶ, ೧೮೭೮ರಲ್ಲಿ ಹೈದರಾಬಾದ್‌ನಲ್ಲಿ ಮರಳು ಭೂಮಿಯಲ್ಲಿ ನಾಟಿ ಮಾಡುವ ಮುಖೇನ ಭಾರತ ದರ್ಶನ ಯಾತ್ರೆ, ಆರಂಭಿಸಿತು. ಗಿಡ ಬೆಳೆದು ಸೋಡಿಗೆ ಬಲಿತಾಗ ಹಾದಿ ಬದಿ ಮೇಯುತ್ತಿದ್ದ ಕತ್ತೆ ಬಾಯಲ್ಲಿ ನೀರೂರಿತು. ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ ಎಂಬ ಮಾತು ಸುಳ್ಳಾಯಿತು. ಕತ್ತೆ ಬಾಯಿಗೆ ಹೋದ ಬೀಜ ಲಧ್ಧಿ ಜತೆ ಈಚೆ ಬಂದಾಗ ಬೀಜೋಪಚಾರ ಯೋಗ. ಗಿಡದ ಸೋಡಿಗೆ ಕತ್ತೆಗಳ ಆಪ್ತ ಮೇವಾಗಿ ಸಸ್ಯಾಭಿವೃದ್ಧಿಯ ಪ್ರಚೋದನೆಯಾಯ್ತು. ಮುಂದೆ ಆಡು, ಕುರಿಗಳು ಕತ್ತೆ ಕೆಲಸ ಮುಂದುವರಿಸಿವೆ. ಬೀಜ ಬಿದ್ದಲ್ಲಿ, ಬೇರಿಗೆ ಗಾಯವಾದಲ್ಲಿ ಮೊಳಕೆ ಮೂಡುತ್ತ ಕ್ಷೇತ್ರ ವಿಸ್ತರಣೆ ವರ್ಷ ಹೆಚ್ಚಿದೆ. ಜಾಲಿ ಕಟ್ಟಿಗೆ ಸುಟ್ಟಾಗ ಎಣ್ಣೆ ಸ್ರವಿಸುತ್ತದೆ. ಎಣ್ಣೆಯನ್ನು ತಲೆಗೆ ಹಾಕಿದರೆ ಕೂದಲು ಹುಟ್ಟುತ್ತದೆಂದು ಗಿಡ ಮಾಹಿತಿ ಸಂಗ್ರಹಿಸುತ್ತಿರುವಾಗ ನನ್ನ ತಲೆ ನೋಡಿ ನಾಟಿ ವೈದ್ಯರೊಬ್ಬರು ಪದೇ ಪದೇ ಹೇಳುತ್ತಿದ್ದರು. ತಲೆಯಲ್ಲಿ ಕೂದಲು ಹುಟ್ಟಿಸುತ್ತದೆಂಬುದನ್ನು ಎಣ್ಣೆಗೆ ತಲೆಕೊಟ್ಟು ಪರೀಕ್ಷಿಸಿಯೇ ತಿಳಿದುಕೊಳ್ಳಬೇಕು. ಆದರೆ ರಾಜಸ್ಥಾನದಿಂದ ಆರಂಭಿಸಿ ನಮ್ಮ ಕರ್ನಾಟಕದ ಬೋಳು ಬೋಳು ಗುಡ್ಡಗಳಲ್ಲಿ ಹಸಿರು ಮೂಡಿಸಿದ ಶಕ್ತಿಯಂತೂ ಬಳ್ಳಾರಿ ಜಾಲಿ (ಪ್ರೊಸೊಪಿಸ್ ಜ್ಯುಲಿಫ್ಲೋರಾ) ಎಂಬ ವಿಲಾಯತಿ ಬೆಡಗಿಗೆ ಇದೆಯೆಂಬುದು ಸಾಬೀತಾಗಿದೆ.

# ಕಾಡು ಕಣಗಿಲು

# ಅಲೆಮಾರಿ ಜಾನುವಾರುಗಳ ಅಮೃತಫಲ

ಇದು ತನ್ನ ಫಲದಲ್ಲಿ ಪ್ರಾಣಿಗಳಿಗೆ ಕುಡಿಯಲು ನೀರು ಹಾಗೂ ಹೊಟ್ಟೆ ತುಂಬುವ ಹಸುರು ಮೇವು ನೀಡಿ ಸಂತೃಸುತ್ತದೆ. ಕೆಂಪು ಕೆಂಪು ಹಣ್ಣು ಗೊಂಚಲಲ್ಲಿ ಪ್ರಾಣಿ ಸಂಕುಲ ಸಲಹುವ ಕಣಗಿಲಿಗೆ ಬೆಂಕಿ ಸಹಿಷ್ಣು ಗುಣ. ಕಾಳ್ಗಿಚ್ಚಿನ ಪ್ರಹಾರಕ್ಕೆ ಅಂಜದೇ ಬೆಳೆಯಲು ಮರಕ್ಕೆ ದಪ್ಪ ತೊಗಟೆಯ ಜೀವ ರಕ್ಷಕ ಕವಚವಿದೆ.

ಕಾಡಿನಲ್ಲಿ ಕಣಗಿಲು (**Dillenia Pentagyna Roxb**) ಹಣ್ಣು ಜಾಸ್ತಿ ಬಿಟ್ಟರೆ ಉಳುಮೆ ಎತ್ತುಗಳಿಗೆ ನೇಗಿಲು ಎಳೆಯುವ ಶಕ್ತಿ ಹೆಚ್ಚುತ್ತದೆಂದು ಮುಂಡಗೋಡದ ಜೇನುಮುರಿ ಹಳ್ಳಿಯ ಗೌಳಿಗರು ಹೇಳಿದ್ದರು. ಯಲ್ಲಾಪುರ ಕಾಡಿನ ಒಕ್ಕಲ ಮಕ್ಕಳು ಇದೇ ಹಿನ್ನಲೆಯಲ್ಲಿ ಕಣಗಿಲನ್ನು ಕೊಂಡಾಡ್ಡಿದು. ಕುಡಿಯುವ ನೀರಿಗೆ ತತ್ವಾರ, ಜಾನುವಾರು ಮೇವಿಗೆ ಹಾಹಾಕಾರವಿರುವಲ್ಲಿ ಉಳುಮೆ ಎತ್ತುಗಳ ಆರೋಗ್ಯ ಹದಗೆಡುತ್ತದೆ. ಒಣಮೇವು ಶೇಖರಣೆಯಿಲ್ಲ, ಹಸುರು ಮೇವು ಬೆಳೆಸಲಿಲ್ಲ ಎನ್ನುವ ಬಡವರಿಗೆ ತಮ್ಮ ತುತ್ತಿನ ಚೀಲ ತುಂಬಲು ಶ್ರಮಿಸುವ ಎತ್ತಿನ ಜೀವ ಬಚಾವು ಮಾಡುವದು ಹರಸಾಹಸ. ಮಳೆಗಾಲ, ಬೇಸಿಗೆ ಬೇಧವಿಲ್ಲದೇ ಕಣ್ಣುಚ್ಚಿ ದನಕರುಗಳೆಲ್ಲ ಕಾಡು ಪಾಲು. ಆದರೆ ಎಲೆ ಉದುರಿಸುವ ಈ ಕಾಡುಗಳಲ್ಲಿ ಇದ್ದಬಿದ್ದ ಹುಲ್ಲುಕಡ್ಡಿ, ಹಸುರು ಗಿಡಗಳನ್ನು ವಾರ್ಷಿಕ ವ್ಯವಹಾರದಂತೆ ಕಾಳ್ಗಿಚ್ಚು ಆಹುತಿ ತೆಗೆದುಕೊಳ್ಳುತ್ತದೆ. ಮೇವು ಹುಡುಕಿ ಹತ್ತಾರು ಕಿಲೋ ಮೀಟರ್ ಸುತ್ತಿದರೂ ಅವುಗಳ ಹೊಟ್ಟೆ ತುಂಬುವದಿಲ್ಲ, ಆಗ ಅಲೆಮಾರಿ ದನಕರುಗಳ ಆಹಾರ ಪಟ್ಟಿಯಲ್ಲಿ ತಟ್ಟನೆ ದೊರೆಯುವ ಅಮೃತಫಲ 'ಕಣಗಿಲ ಹಣ್ಣು'! ಮಲೆನಾಡಿನ ಭಾಗದಲ್ಲಿ ದೊಡ್ಡಿಯಿಂದ ಹೊರಟ ಜಾನುವಾರುಗಳು ಕಡು ಬೇಸಿಗೆಯಲ್ಲಿ ತಮ್ಮ ಕಟ್ಟಕಡೆಯ ಆಸರೆಯಾಗಿ ಸೀದಾ ಕಣಗಿಲ ಮರದಡಿ ಜಮಾಯಿಸುವದನ್ನು ಕಾಣಬಹುದು.



ವನ್ಯಜೀವಿಗಳಿಗೆ ನೀರು ನೀಡುವ ಕಣಗಿಲ ಹಣ್ಣು

ಒಂದು ಮರ ಏಕಕಾಲಕ್ಕೆ ತನ್ನ ಫಲದಲ್ಲಿ ಪ್ರಾಣಿಗಳಿಗೆ ಕುಡಿಯಲು ನೀರು ಹಾಗೂ ಹೊಟ್ಟೆ ತುಂಬುವ ಹಸುರು ಮೇವು ನೀಡಿ ಸಂತೈಸುತ್ತದೆ. ಕೆಂಪು ಕೆಂಪು ಹಣ್ಣು ಗೊಂಚಲಲ್ಲಿ ಪ್ರಾಣಿ ಸಂಕುಲ ಸಲಹುವ ಕಣಗಿಲೆಗೆ ಬೆಂಕಿ ಸಹಿಷ್ಣು ಗುಣ. ಕಾಳ್ಗಿಚ್ಚಿನ ಪ್ರಹಾರಕ್ಕೆ ಅಂಜದೇ ಬೆಳೆಯಲು ಮರಕ್ಕೆ ದಪ್ಪ ತೊಗಟೆಯ ಜೀವ ರಕ್ಷಕ ಕವಚವಿದೆ. ಉತ್ತರ ಕನ್ನಡದ ಕಾಳಿ–ಬೇಡ್ತಿ ಕಣಿವೆಯಲ್ಲಿ ಬಹುತೇಕ ಹಳ್ಳಕೊಳ್ಳಗಳು ಬೇಸಿಗೆಯಲ್ಲಿ ಮಾಮೂಲಿಯಾಗಿ ಬತ್ತುತ್ತವೆ. ಆದರೆ ಇಲ್ಲಿ ಪ್ರಾಣಿ ಸಂಕುಲ ನೀರಿನ ದಾಹದಿಂದ ಸಂಕಟ ಅನುಭವಿಸಿದ್ದು ಕಾಣುವದಿಲ್ಲ. ಕಡು ಬೇಸಿಗೆಯಲ್ಲಿ ಇವುಗಳ ತೀರಿಸುವ ಆಧಾರವಾಗಿ ಕಾಡು ಈ ಮರ ಬೆಳೆಸಿದೆ. ಜನವರಿ ಹೊತ್ತಿಗೆ ಹೂವು, ಮುಂಜಾನೆ ನಾಲ್ಕಕ್ಕೆ ಜೇನಿನ ಝೇಂಕಾರ ಪರ್ಲಾಂಗ್ ಆಚೆಗೂ ಕೇಳುತ್ತದೆ. ಜೇನ್ನೊಣಗಳ ಪರಾಗಸ್ಪರ್ಶದ ಲಾಭದಲ್ಲಿ ಏಪ್ರಿಲ್ –ಮೇ ಹೊತ್ತಿಗೆ ಮರತುಂಬ ಹಣ್ಣು, ಹಸಿದ ಜಾನುವಾರುಗಳಿಗೆ ಹಣ್ಣಿನ ಭಾಗ್ಯ.

ಅರೆರೆ...! ಹತ್ತಿಪ್ಪತ್ತು ಅಡಿಯತ್ತರದ ಮರದ ಫಲ ಜಾನುವಾರುಗಳಿಗೆ ಹೇಗೆ ದೊರೆಯುತ್ತದೆ? ... ಅವೇನು ಮರವೇರುತ್ತವಾ !? ಅವಸರಬೇಡ ....! ಮರದ ಟೊಂಗೆಯಿಂದ ಟೊಂಗೆಗೆ ಜಿಗಿಯುವ ಕೋತಿಗಳ ಆರ್ಭಟಕ್ಕೆ ಎತ್ತರದ ಮರಗಳ ಹಣ್ಣುಗಳು ಸರಾಗವಾಗಿ ನೆಲಕ್ಕೆ ಬೀಳುತ್ತವೆ, ಬಾಯಾರಿದ ಜಿಂಕೆ ಹಾಗೂ ಜಾನುವಾರುಗಳಿಗೆ ಈ ಹಣ್ಣು ಅನಾಯಾಸವಾಗಿ

ದೊರೆಯುತ್ತದೆ ! ಕಾಡಿನಲ್ಲಿ ಜಲಕ್ಷಾಮ ಎರುವದಕ್ಕೂ, ಮರಗಳಲ್ಲಿ ಕಣಗಿಲ ಹಣ್ಣು ಮಾಗುವದಕ್ಕೂ ಪ್ರಕೃತಿ ಪಂಚಾಂಗ. ಕಾಡು ಗುಡ್ಡದಲ್ಲೆಲ್ಲ ನೈಸರ್ಗಿಕವಾಗಿ ಬೆಳೆದ ಹೆಮ್ಮರ ಪ್ರಾಣಿಗಳಿಗೆ ಉಚಿತ ಕುಡಿಯುವ ನೀರಿನ ನೈಸರ್ಗಿಕ ವ್ಯವಸ್ಥೆಯಾಗಿ ಕರಾರುವಕ್ಕಾಗಿ ಕಾರ್ಯನಿರ್ವಹಿಸುತ್ತದೆ. ಬೆಂಕಿ ಸಹಿಷ್ಣು ಗುಣ, ಜೇನಿನ ಸಹಾಯ, ಹಣ್ಣಿನಲ್ಲಿ ನೀರು, ಮೇವಿನ ಪರಿಹಾರ, ಹಣ್ಣು ಕೆಡವಲು ಕೋತಿಗಳ ಉಪಕಾರ, ಎತ್ತುಗಳ ನೇಗಿಲು ಎಳೆಯುವ ಶಕ್ತಿಗೆ ಹಣ್ಣಿನ ನೆರವು, ಉಳುಮೆಗೆ ತಕ್ಕ ಸಮೃದ್ಧ ಪೈರು ಹೀಗೆ ಪ್ರತಿಕೊಂಡಿಯನ್ನು ಗುರುತಿಸಿ, ಗಮನಿಸುತ್ತ ಹೋದರೆ ಕಾಡು ಮರದಲ್ಲಿ ಕೃಷಿಯ ಸಂಕೀರ್ಣ ಸಂಬಂಧಗಳ ಅರಿವಾಗುತ್ತವೆ.

ನಮ್ಮ ಹವಾಮಾನ ಇಲಾಖೆ ಮಳೆ ಭವಿಷ್ಯದ ಕುರಿತು ವರದಿ ನೀಡುವದಕ್ಕಿಂತ ಮುಂಚೆ ಕೃಷಿಕರು ಕಣಗಿಲ ಮರದ ಹಣ್ಣು ನೋಡಿ ಮಳೆ ಲೆಕ್ಕ ಹಾಕುತ್ತಾರೆ. ಮಳೆಗೂ ಈ ಮರಕ್ಕೂ ಒಂದು ವಿಶೇಷ ಸಂಬಂಧವಿದೆ. ಮರದ ಟೊಂಗೆ, ಟಿಸಿಲಿನ ಬುಡದಿಂದ ಕೊನೆತನಕ ಹಣ್ಣು ಗೊಂಚಲು ತುಂಬಿದ್ದರೆ ಮುಂದಿನ ಮಳೆಗಾಲ ಚೆನ್ನಾಗಿ ಆಗುತ್ತದೆಂದೂ, ಟೊಂಗೆಯ ನಡುವೆ ಮಾತ್ರ ಫಲವಿದ್ದರೆ ನಡುವಿನ ಒಂದೆರಡು ಮಳೆ ಮಾತ್ರ ಸುರಿಯುತ್ತದೆಂದು ಹೇಳುತ್ತಾರೆ. 'ಸೃಷ್ಟಿ ನೋಡಿ ವೃಷ್ಟಿ ಫಲ' ಹೇಳುವ ಅನುಭವ ಜ್ಞಾನ ಕಾಡು ನೆಲದ ಮಲೆನಾಡಿಗರಲ್ಲಿ ಸಹಜವಾಗಿದೆ. ಈ ಲೆಕ್ಕಾಚಾರ ಕೆಲ ಸಂದರ್ಭದಲ್ಲಿ ತಪ್ಪಿದ್ದೂ ಇದೆ. ಅದೇನೇ ಇರಲಿ ಕಾಡು ಫಲ ಮಳೆ ಭವಿಷ್ಯದ ದಿಕ್ಸೂಚಿಯಾದದ್ದು ಪರಂಪರೆ ಕತೆ. ಜಾನುವಾರುಗಳು ಮರದ ಫಲದಲ್ಲಿ ನೀರು ಕಂಡರೆ ಮಲೆನಾಡಿನ ಜನ ಮರದ ಬೇರು ಬಿಡಿಸಿ ಕತ್ತಿಯಲ್ಲಿ ಕೆತ್ತುತ್ತಾರೆ, ಸರಾಗವಾಗಿ ಜಿನುಗುವ ಬೇರು ನೀರನ್ನು ಸಂಗ್ರಹಿಸಿ ವಿಶೇಷ ಅಡುಗೆಗಳಲ್ಲಿ ಉಪಯೋಗ, ಅಕ್ಕಿ ಹಿಟ್ಟಿನ ಚಕ್ಕುಲಿ ತಯಾರಿಯಲ್ಲಿ ಬಳಸುವ ಪರಿಪಾಟ ಈಗಲೂ ಇದೆ.

ನೀರಿನ ಸುತ್ತ ಸಾಗುವ ಕಣಗಿಲ ಚರಿತ್ರೆಯಲ್ಲಿ ಮರದ್ದು ಮಾತ್ರ ಕಣ್ಣೀರ ಕತೆ. ಹೇರಳವಾಗಿ ಮರಗಳಿದ್ದ ನೈಸರ್ಗಿಕ ಕಾಡು ಕತ್ತರಿಸಿ ತೇಗದ ನೆಡುತೋಪನ್ನು ಮಲೆನಾಡಿನಲ್ಲಿ ಬೆಳೆಸಲಾಗಿದೆ. ದಾಂಡೇಲಿ ರಾಮಾಯಣ ಕಾಲದ ದಂಡಕಾರಣ್ಯವಾಗಿತ್ತು ಎಂಬ ದಂತಕತೆಯಿದೆ. ದಟ್ಟ ಕಾಡಿನ ಈ ಪ್ರದೇಶದಲ್ಲಿ ಹೇರಳ ವನ್ಯಮೃಗಗಳಿದ್ದವು. ಶತಮಾನಗಳಿಂದ ಇಲ್ಲಿ ತೇಗದ

ಏಕಜಾತಿಯ ತೋಟ ಬೆಳೆಸಲು ಕಾಡು ನಾಶವಾಗಿದೆ. ದಾಂಡೇಲಿಯ ವನ್ಯ ಜೀವಿ ವಲಯದ ಪ್ರದೇಶದ ಹೆಚ್ಚಿನ ಭಾಗದಲ್ಲಿ ಈಗ ತೇಗ ತುಂಬಿದೆ. ಹಣ್ಣು ಕೊಡುವ ಕಣಗಿಲ ಮರಗಳ ಸಂಖ್ಯೆ ಕಡಿಮೆಯಾಗಿದೆ, ಬೇಸಿಗೆಯಲ್ಲಿ ಪ್ರಾಣಿಗಳ ಸ್ಥಿತಿ ಗಂಭೀರ. ವನ್ಯ ಪ್ರಾಣಿಗಳ ಕುಡಿಯುವ ನೀರಿನ ಸಮಸ್ಯೆ ಗುರುತಿಸಿದ ಅರಣ್ಯ ಇಲಾಖೆ ಜಲಸಂರಕ್ಷಣೆಯಲ್ಲಿ ಜಾಗ್ರತವಾಗಿದೆ. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಏಡಿಬಿ) ನೆರವಿನಿಂದ ಕೆರೆಗಳ ನಿರ್ಮಾಣ ಮಾಡಿದೆ. ಕಳೆದ ನಾಲ್ಕು ವರ್ಷಗಳ ಈಚೆಗೆ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಜಲ ಸಂರಕ್ಷಣೆಯ ವಿವಿಧ ಮಾದರಿಗಳು ರೂಪುಗೊಂಡಿವೆ. ಪ್ರಾಣಿಗಳ ಬೇಸಿಗೆ ದಾಹ ಇಂಗಿಸಲು ಒಂದು ಕಾಲಕ್ಕೆ ಕಣಗಿಲ ಮರ ಮಾಡುತ್ತಿದ್ದ ಕೆಲಸವನ್ನು ಈಗ ದುಬಾರಿ ಕೆರೆಗಳು ಮಾಡಬೇಕಾಗಿದೆ, ಕೆರೆ ನಿರ್ಮಾಣಕ್ಕೆ ಕಾಸಿಗಾಗಿ ವಿದೇಶಿ ಸಾಲ ಪಡೆಯಬೇಕಾಗಿದೆ.


ಚಿಕ್ಕ ಕಾಡು ಹಣ್ಣಿನಲ್ಲಿ ವನ್ಯ ಜೀವಿಗಳ ನೀರ ನೆಮ್ಮದಿಯಿದೆ ಎಂಬುದನ್ನು ನಾವು ಗುರುತಿಸಿಲ್ಲ, ಹೀಗಾಗಿ ಉಳುಮೆ ಎತ್ತುಗಳಿಗೆ ಶಕ್ತಿ ನೀಡಿದ ಮರ ಈಗ ಸ್ವತಃ ಶಕ್ತಿ ಕಳಕೊಂಡಿದೆ. ನೊಗ ಹೊರುವ ಎತ್ತುಗಳಿಗೆ ತೇಗದ ನೆಲದಲ್ಲಿ ಕಣಗಿಲಿಲ್ಲ, ಕಾಡು ಅಲೆದ ವನವಾಸಿ ಗೌಳಿಗರ ಎದೆಯ ಮಾತುಗಳಲ್ಲಿ ಕಣ್ತೆರೆಸುವ ಚಿತ್ರಗಳಿವೆ.

**ಸತ್ವ ಹೀನತೆ ವಿರುದ್ಧ ಸಸ್ಯ ಟಾನಿಕ್ !**

ಈಚಲು ಗಿಡ, ಬಿಕ್ಕೆ ಗಿಡಗಳು ಕಾಡು ಗುಡ್ಡಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆದಿವೆಯೆಂದರೆ ಭೂಸವಕಳಿಯಾಗಿ ನೆಲದಲ್ಲಿ ಸತ್ವ ಉಳಿದಿಲ್ಲ ಎಂದರ್ಥ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ನೆಲಕ್ಕೆ ಹೊಸ ಜೀವ ಕೊಡಲು ನಿಸರ್ಗ ಕೆಟ್ಟ ಮಣ್ಣಿನಲ್ಲೂ ಸುಲಭಕ್ಕೆ ಬೆಳೆವ ಸಸ್ಯಗಳಿಗೆ ಅವಕಾಶ ನೀಡುತ್ತದೆ. ಈಚಲು, ಬಿಕ್ಕೆ ಗಿಡದ ಒಣ ಎಲೆಗಳು ಗಿಡದ ಬುಡದಲ್ಲಿ ಶೇಖರಣೆಯಾಗುವ ಕ್ರಿಯೆ ಹಲವು ವರ್ಷ ನಡೆದು ಮಣ್ಣಿನ ಸುಧಾರಣೆಯಾಗುತ್ತದೆ. ಬಯಲು ಸೀಮೆಯ ಕಲ್ಲುಗುಡ್ಡಗಳಲ್ಲಿ ಕಳ್ಳಿಗಿಡಗಳು ಬರಗಾಲದ ನೆಲದಲ್ಲಿ ಬದುಕುವ ಜಾಣ್ಮೆ ಕಲಿತು ನೆಲದ ಸತ್ವ ಹೆಚ್ಚಳಕ್ಕೆ ನೆರವಾಗುತ್ತವೆ.



ಕರಾವಳಿ ಗುಡ್ಡದ ಗೆಳೆಯ
ಕುರುಡು ನಂದಿ



ಬರದ ಬಯಲುಸೀಮೆಗೆ ಶಕ್ತಿ
ನೀಡುವ ಬಂದರಿಕೆ ಗಿಡ

ಹಿಡಿ ಮಣ್ಣು ಸಿಗದ ಕರಾವಳಿಯ ಕಲ್ಲು ಗುಡ್ಡದಲ್ಲಿ ಸಹ ಹುಲ್ಲು, ಮುಳ್ಳುಕಂಟಿ ಇದ್ದೇ ಇದೆ. ಕನಪ್ಪಾಡಿ (ಕರುಡು ನಂದಿ) ಎಂಬ ಸಸ್ಯ ಇಂತಹ ಕೆಟ್ಟ ಪರಿಸ್ಥಿತಿಯಲ್ಲೂ ಚೆನ್ನಾಗಿ ಬೆಳೆಯುತ್ತದೆ. ಜಾನುವಾರು ಇದನ್ನು ತಿನ್ನುವದಿಲ್ಲ, ಗಿಡವನ್ನು ಉರುವಲಿಗೆಂದು ಯಾರೂ ಕಡಿಯುವದಿಲ್ಲ, ಗಿಡದ ಒರಟು ತೊಗಟೆ ಬೆಂಕಿ, ಬಿಸಿಲಿನ ಉರಿಯನ್ನು ಮೀರಿ ಬೆಳೆಯುವದಕ್ಕೆ ಅನುಕೂಲವಾಗಿದೆ. ಅಲ್ಲಿ ಬೆಳೆದ ಗಿಡದ ಎಲೆ, ಕಾಂಡಗಳು ಭೂಮಿಯ ಸತ್ವಾಂಶ ಹೆಚ್ಚಿಸುತ್ತವೆ. ಮಣ್ಣಿನ ಪರಿಸ್ಥಿತಿ ಸುಧಾರಣೆ ಬಳಿಕ ಸಸ್ಯ ಜಾತಿಗಳು ಕಾಲಕಾಲಕ್ಕೆ ಬದಲಾಗುತ್ತ ಹೊಸ ಜಾತಿ ಬೆಳೆಯಲು ಅವಕಾಶ ನೀಡುತ್ತವೆ. ನಾವು ಇಂದು ದಟ್ಟ ಕಾಡು ನೋಡುತ್ತೇವೆ. ಇದೇನು ಕಲಾವಿದ ಅರೆಕ್ಷಣದಲ್ಲಿ ಚಿತ್ರಿಸಿದ ಹಾಗೇ ಪವಾಡವಾಗಿ ನಿಸರ್ಗ ಬೆಳೆಸಿದ್ದಲ್ಲ. ಹಲ್ಲು, ಕಳೆಗಿಡ, ಮುಳ್ಳುಗಿಡ ಹೀಗೆ ಒಂದಾದನಂತರ ಒಂದರಂತೆ ಸಸ್ಯಗಳು ಕೂಡುತ್ತ ಕಾಡು ಬೆಳೆಯುತ್ತದೆ.

# ಚಂದಕಲು

## ಕಾಡು ನೆಲದ ಹಸುರು ಗುರಾಣಿ!

ನಿತ್ಯಹರಿದ್ವರ್ಣ ಕಾಡು ಕಂಗಾಲು ಬೇಂಚಿನಲ್ಲಿ ಕೂತಾಗ ಮರು ಮಾತಿಲ್ಲದೇ ನೆಲ ಸಂರಕ್ಷಣೆ ಕೆಲಸಕ್ಕೆ ನಿಲ್ಲುತ್ತದೆ. ಸಸ್ಯಶಾಸ್ತ್ರಜ್ಞರು ಇದನ್ನು ಬೆಂಕಿ ಬಿದ್ದಲ್ಲಿ ಬೆಳೆಯುವ ಕುಲ, ಬೆಂಕಿಕಿಡ್ಡಿ ತಯಾರಿಕೆಗೆ ಲಾಯಕ್ಕೆಂದು ಬುಡದಿಂದ ತುದಿತನಕ ಬೆಂಕಿಗೆ ನಂಟು ಹಾಕಿದರು. ಸಸ್ಯಶಾಸ್ತ್ರ ಗ್ರಂಥ ಕೆದಕಿದರೆ ಇದರ ಒಂದಡಿ ಅಗಲದ ಎಲೆ ತುಂಬ ಬರೆಯುವಷ್ಟು ವಿವರ ಕೂಡಾ ದೊರೆಯುವದಿಲ್ಲ !. ಕಾಡು ಸಸ್ಯದ ಬಗೆಗೆ

ಪುಸ್ತಕದ ವಿವರಕ್ಕಿಂತ ಕೃಷಿಕರ ಪುಸ್ತಕದ ಅರಿವು ದೊಡ್ಡದಿದೆ.

ಬ್ರಹ್ಮೂರಿನ ಗುಡ್ಡವನ್ನು ಬುಡಮೇಲು ಮಾಡಿದಂತೆ ಬೆಂಕಿ ಕದನ, ಕಾಡು ದಹನ. ಮೊದಲ ಮಳೆ ಬಿದ್ದದ್ದೇ ಪಟಪಟನೆ ಎಲ್ಲಿಂದಲೋ ಹಸುರು ಗುರಾಣಿ ಸೇನೆ ಅಲ್ಲಿಗೆ ಬಂತು, ಸ್ಮಶಾನ ಕಾಯುವಂತೆ 'ಚಂದಕಲು' ಎಂಬ ವಿಶಿಷ್ಟ ಸಸ್ಯ ಸಂತೆ ನೆರೆಯಿತು. ನೆಲದ ಮಾನ ರಕ್ಷಣೆಯ ಸಾಕ್ಷಾತ್ಕಾರ. ಕಾಳ್ಗಿಚ್ಚಿನ ದುಃಖದ ಬಜಾರವಾಗಿದ್ದಲ್ಲಿ ಮಳೆ ಬಿದ್ದಾಕ್ಷಣ ಸ್ವರೂಪ ಬದಲು, ಬೆತ್ತಲೆ ನೆಲಕ್ಕೆ ತುರ್ತು ಹಸುರು ಚಿಕಿತ್ಸೆ, ಚೆಂದದ ಚೆಂದಕಲಿನ ಹೆಜ್ಜೆ. ಬೆಂದ ನೆಲದಲ್ಲಿ ನವ ಉತ್ಸಾಹ.



ಚಂದಕಲು ಗಿಡ

ಉತ್ತರ ಕನ್ನಡದ ಕುಮಟಾ ತಾಲೂಕಿನ ಬ್ರಹ್ಮೂರಿನ ಕಾಡುಗುಡ್ಡದ ಬೆಂಕಿ ಹಾಗೂ ನಂತರದ ಪರಿಣಾಮದಲ್ಲಿ ಸ್ಪುಟವಾದ ಸಸ್ಯ ಶಕ್ತಿಯ ಸಾಕ್ಷ್ಯಚಿತ್ರ !. ಬೆಂಕಿ ಕೆನ್ನಾಲಿಗೆಗೆ ನೆಲದಲ್ಲಿ ಒಂದಡಿ ದಪ್ಪ ಮುಚ್ಚಿಗೆ ಹಾಕಿದ್ದ ತರಗೆಲೆಗಳು ಕರ್ಪೂರದಂತೆ ಉರಿದವು. ಬೆಂಕಿ ಆರಿಸಲು ಕಡಿದಾದ ಶಿಖರ ಏರಿ ಧಗೆ ಉರಿಯಲ್ಲಿ ಜಂಗಲ್ ಬಚಾವು ಸಾಧ್ಯವಿಲ್ಲ. ಬೆಟ್ಟದ ಬೆಂಕಿ ಹೆಮ್ಮರಗಳ ತುತ್ತ ತುದಿಯಿಂದ ಹೊಗೆ ಕಕ್ಕಿಸುವ ಹೊತ್ತಿಗೆ ತಳಹಂತದ ಮರ, ಗಿಡ, ಬಳ್ಳಿಗಳೆಲ್ಲ ಬೆಂದು ಬಯಲಾದವು. ದಿನ ಕಳೆದ ಬಳಿಕ ಗುಡುಗುಮ್ಮ ಬಂದ, ಮನೆ ಛಾವಣಿಯಿಂದ ನೀರು ದೊಪದೊಪನೆ ಸುರಿಯುವ ಹಾಗೇ ವರ್ಷಧಾರೆ, ವಾರ್ಷಿಕ ೪.೫೦೦ ಮಿಲಿ ಮೀಟರ್ ಅಬ್ಬರದ ಮಳೆ !. ಎಕರೆಯಲ್ಲಿ ಕೋಟ್ಯಾಂತರ ಲೀಟರ್ ಪ್ರವಾಹ. ಇಳೆಗೆ ಹಸುರು ಮುಚ್ಚಿಗೆ ಇಲ್ಲದಿದ್ದರೆ ಮಲೆನಾಡಿನ ಮಳೆಗೆ ಪಕ್ಕಾ 'ಮಾರಿ' ವೇಷ !. ಮೇಲ್ಮೈ ನೆಲದ ಸತ್ವವೆಲ್ಲ ಖಾಲಿ. ಎಣಿಕೆಯಂತೆ ಹಾಗಾಗಲಿಲ್ಲ. ಅರಣ್ಯ ದಹನ ದುಃಖದ ಮಧ್ಯೆ ಮೊದಲು ಮಳೆ ಹನಿಗೆ ನೆಲ ಸಂರಕ್ಷಣೆಗೆ ಕಾಡೇ ದಾರಿ ಹುಡುಕಿ ಚಂದಕಲು ಸಸ್ಯಗಳನ್ನು ಕರೆಯಿತು. ಬಟ್ಟಲು ಗಾತ್ರದ ಎಲೆಗಳು ಬಾನಿಗೆ ಮುಖಮಾಡಿ ಮಳೆ ಹನಿ ವೇಗ ತಡೆಯುವ ಸಾಧನವಾದವು. ಫಲವತ್ತಾದ ಮಣ್ಣು, ಖನಿಜಾಂಶ ಮಳೆ ಹನಿ ಕಿತ್ತೊಯ್ಯುದಂತೆ ಅದು ನೆಲ ತುಂಬ ಬೆಳೆಯಿತು. ಮಳೆಗಾಲ ಮುಗಿದ ಕಾಡು ಸಹಜ ಸ್ಥಿತಿ ತಲುಪುವವರೆಗೂ ನೆಲ ರಕ್ಷಣೆಯ ಜಿದ್ದಿಗೆ ಗಿಡಗಳು ಬ್ರಹ್ಮೂರಿನ ಬೆಂಕಿ ನೆಲದ ಬೆರಗಾದವು.

ಕಾಡು ಕಾಯುವ ಯೋಧ ಎಂದು 'ಚಂದಕಲು' ತಾಕತ್ತು ನೋಡಿ ಹೇಳಬಹುದು. ಮೃದು ಕಟ್ಟಿಗೆ, ಚೌಬೀನೆ ದೃಷ್ಟಿಯಿಂದ ಪೈಸಾ ಕಿಮ್ಮತ್ತಿಲ್ಲದ ಕುಲ. ಆದರೂ ಕಾಡಿನ ಆಪತ್ಬಾಂದವ ಎಂದು ಗಿಡ ಗುಣ ನೋಡಿ ಪಶ್ಚಿಮ ಘಟ್ಟ, ಕರಾವಳಿಯಲ್ಲಿ ಜನ ಮನ್ನಣೆ. ನಿತ್ಯಹರಿದ್ವರ್ಣ ಕಾನನ ಕಂಗಾಲು ಚೇಂಬಿನಲ್ಲಿ ಕೂತಾಗ ನಾವು ಪರಿಸರ ಸೆಮಿನಾರುಗಳಲ್ಲಿ 'ಇಂಟಲೆಕ್ಚುವಲ್ ಡಿಬೇಟ್' ಮಾಡುತ್ತೇವೆ. ಮಾತಿಲ್ಲದ ಸಸ್ಯ ಸಂರಕ್ಷಣೆ ಕೆಲಸ ಮಾಡುತ್ತದೆ. ಬ್ರಿಟೀಷ್ ಸಸ್ಯಶಾಸ್ತ್ರಜ್ಞರು ಇದನ್ನು ಬೆಂಕಿ ಬಿದ್ದಲ್ಲಿ ಬೆಳೆಯುತ್ತದೆಂದರು. ನಿತ್ಯ ಹರಿದ್ವರ್ಣ ಮರ, ಪರಂಗಿ ಹುಣ್ಣಿಗೆ ಔಷಧ, ಮರದಿಂದ ರಾಳ ಉತ್ಪನ್ನ, ಕಾಗದಕ್ಕೆ ಗಂಜಿ ತಯಾರಿಲು ಲಾಯಕ್ಕು ಎಂದು ಗಿಡ ಪರಿಚಯ ದಾಖಲಿಸಿ ಕೊನೆಗೆ ಬೆಂಕಿಕಡ್ಡಿ ತಯಾರಿಕೆಗೆ ಉಪಯುಕ್ತವೆಂದು ಬುಡದಿಂದ ಕೊನೆತನಕ ಬೆಂಕಿಗೆ ನಂಟು ಹಾಕಿದರು !.

ಹಡಗು ಕಟ್ಟಲು, ಮನೆ ನಿರ್ಮಾಣ, ರೇಲ್ವೆ ಸ್ಲೀಪರ್, ಪಿಠೋಪಕರಣ ಗಳಿಗೆ ಪ್ರಯೋಜನವಿಲ್ಲದ ಈ ಸಸ್ಯ ನಮ್ಮ ಸಸ್ಯಶಾಸ್ತ್ರಜ್ಞರ ಪ್ರೀತಿ ಸಂಪಾದಿಸಲಿಲ್ಲ. ಮೃದು ಕಟ್ಟಿಗೆಯೆಂಬ ಮೂದಲಿಕೆ ಅಂಟಿದ್ದು ಬಿಟ್ಟರೆ ವಿಶೇಷ ಪಾತ್ರ ಕಾಣೋದಿಲ್ಲ. ಹಳ್ಳಿಗಾಡಿನ ಜನ ಮಾತ್ರ ಕಾಡಿನ ಜೇನು ತೆಗೆದಾಗ, ಮೀನು ಹಿಡಿದು ಮಾರುವಾಗ ಅಗಲದ ಇದರ ಎಲೆಯನ್ನು ಆರೋಗ್ಯಕರ ಪ್ಯಾಕಿಂಗ್ ಸಾಮಗ್ರಿಯಾಗಿ ಬಳಸಿದರು. ಮನೆ ಬಳಕೆಗೆ ಉಪ್ಪು ಸಂಗ್ರಹಿಸುವಾಗ ಕರಗಿ ನೀರಾಗಿ ಹಾಳಾಗುವ ಪ್ರಮೇಯ ತಪ್ಪಿಸಲು ಇದರ ಎಲೆಯನ್ನು ಉಪ್ಪು ಸಂರಕ್ಷಿಸಲು ಲಾಯಕ್ಕೆಂದರು. ಮರ ಸೀಳಿ ಹಲಗೆ ತಯಾರಿಸಿ ಪೆಟ್ಟಿಗೆ ಮಾಡಿಸಿ ಒಳಗಡೆ ಇದರ ಎಲೆಹಾಸಿ ಉಪ್ಪು ಸಂಗ್ರಹನಡೆಯಿತು. ಮರಕ್ಕೆ ಉಪ್ಪಳಿಕೆ, ಉಪ್ಪೆಲೆ ಹೆಸರು ಪ್ರಾಪ್ತಿಯಾಯ್ತು !. ಬಟ್ಲು ಚಂದ್ರಿಕೆ, ಚೂತಕಣ್ಣಿ, ಚಂಡಕಣ್ಣಿ ಎಂದು ಕರೆಯಲ್ಪಡುವ ಈ 'ಗುರಾಣಿಗಿತ್ತಿ' ಬಗೆಗೆ ನಮ್ಮ ಸಸ್ಯಶಾಸ್ತ್ರ ಗ್ರಂಥ ಕೆದಕಿದರೆ ಇದರ ಒಂದಡಿ ಎಲೆ ತುಂಬ ಬರೆಯುವಷ್ಟು ವಿವರ ಕೂಡಾ ದೊರೆಯುವದಿಲ್ಲ !. ದಾಖಲೆಯಲ್ಲಿ ವಿವರ ಇಲ್ಲ ಎಂದ ಮಾತ್ರಕ್ಕೆ ಗಿಡವೇನು ದುಃಖಿಸಿ ಕುಳಿತಿಲ್ಲ, ಕರಾವಳಿಯ ಕಲ್ಲುಗುಡ್ಡ, ತೋಟದಂಚಿನಲ್ಲಿ, ಬೆಂಕಿ, ಮರಕಡಿತಗಳಿಂದ ಅರಣ್ಯ ನಶಿಸಿದ ಸ್ಥಳಗಳ ನೋವು ಗ್ರಹಿಸಿ ತಟ್ಟನೆ ಓಡಿ ಬಂದು ನೆಲಸತ್ವ ಸಂರಕ್ಷಣೆ ಮಾಡುತ್ತಿದೆ. ನೆಲದಲ್ಲಿ ಇದು ಬೆಳೆದಿದೆಯೆಂದರೆ ಆ ಜಾಗ ಬೆಂಕಿ, ಮಾನವ ಹಸ್ತಕ್ಷೇಪಗಳಿಗೆ ಒಳಗಾಗಿದೆ ಎಂದು ಭವಿಷ್ಯ ಹೇಳುವಷ್ಟು ಗಿಡ ಗುಣ ನಿಖರ.


ಬಲು ಬೇಗ ನೇರಕ್ಕೆ ಬೆಳೆಯುವ ಚಂದಕಲು ಗುಣ ಗುರುತಿಸಿದ ಕೃಷಿಕ ಜೋಸೆಪ್ ಶಿವಮೊಗ್ಗದ ಕಾನೂರು ಕೋಟೆ ಸನಿಹದ ತಮ್ಮ ಕೃಷಿ ಭೂಮಿಯಲ್ಲಿ ಸಸ್ಯ ಬೆಳೆಸಿದರು. ಆರು ವರ್ಷದ ಹಿಂದೆ ನೆಡುತೋಪು ಮಾಡಿದರು. ಸರಸರನೇ ಬೆಳೆದ ಗಿಡದ ಬುಡಕ್ಕೆ ಕಾಳು ಮೆಣಸಿನ ಬಳ್ಳಿ ಹಬ್ಬಿಸಿದ್ದಾರೆ. ಈಗ ನೋಡಿದರೆ ನಾವು ಹುಬ್ಬೇರಿಸುತ್ತೇವೆ. 'ಉಪ್ಪಳಿಕೆ ಮೆಣಸು ಬೆಳೆಸಲು ಲಾಯಕ್ಕುಂಟು' ಎಂದು ಈಗ ಗಿಡದ ಗುಣಗಾನ. ಕಾಸರಗೋಡಿನ ಮಿಯಪದವು ಹಳ್ಳಿಯ ಪರಿಸರ ಪ್ರೇಮಿ ಡಾ । ಚಂದ್ರಶೇಖರ ಚೌಟರು ಮಾತಾಡುವಾಗ ಅವರಲ್ಲಿ ಪದೇ ಪದೇ 'ಉಪ್ಪಳಿಕೆ' ಪ್ರೀತಿ ಕಾಣುತ್ತಿತ್ತು. ನಮ್ಮಲ್ಲಿ ಲೆಕ್ಕಕ್ಕಿಲ್ಲದ ಸಸ್ಯಕ್ಕೆ ಕಾಸರಗೋಡು ಪ್ರಾಂತ್ಯದಲ್ಲಿ ಜನ ಮನ್ನಣೆಯಿದೆ. ಅಡಿಕೆ ತೋಟಕ್ಕೆ ಪಶ್ಚಿಮದ ಬಿಸಿಲು ಬಾಧೆ. ನೆಲದ ಕಳೆ ಗಿಡವಾಗಿ

ಸುಲಭವಾಗಿ ಬೆಳೆಯುತ್ತಿದ್ದ ಉಪ್ಪಳಿಕೆಯನ್ನು ತೋಟದಂಚಿಗೆ ಪೋಷಿಸಿದ ಕೃಷಿಕರು ಬಿಸಿಲು ತಡೆಗೆ ಸುಲಭದ ಹಸಿರು ಮರ ಬೇಲಿಯಾಗಿ, ಸೊಪ್ಪಿನ ಗೊಬ್ಬರಕ್ಕಾಗಿ ಸಸ್ಯ ಲಾಭವನ್ನು ತಲತಲಾಂತರದಿಂದ ಕಂಡುಕೊಂಡಿದ್ದಾರ !. ೪೦-೫೦ ಅಡಿಯೆತ್ತರದ ಮರವಾಗಿ ಬೆಳೆವ ಇದು ಕೃಷಿಕರ ಆಪ್ತ ನೆಂಟ. ಕೇರಳ ಸುತ್ತಿದರೆ ಅಲ್ಲಿನ ಮನೆ ಹಿತ್ತಿಲು, ತೋಟ ಹೀಗೆ ಎಲ್ಲೆಂದರಲ್ಲಿ ಕಾಣುವ ಸಸ್ಯ ಇದು. 'ಕೇರಳದಲ್ಲಿ ಶ್ರೀಗಂಧದ ಮರವನ್ನು ಸುಲಭದಲ್ಲಿ ಕತ್ತರಿಸಲು ಪರವಾನಗಿ ದೊರೆಯಬಹುದು, ಆದರೆ ಉಪ್ಪಳಿಕೆ ಕಡಿಯಲು ಮಾತ್ರ ಅರಣ್ಯ ಇಲಾಖೆಯಿಂದ ಸುತಾರಾಂ ಪರವಾನಗಿ ದೊರೆಯುವದೇ ಇಲ್ಲ ಎನ್ನುವ ಮಾತು ಕೇಳಿದ್ದೇನೆ. ಮರ ಬದುಕಿದ್ದಾಗ ಮಾಡುವ ಲಾಭ ಕಡಿದ ಮೇಲೆ ಸಿಗುವದಿಲ್ಲ ಎಂಬ ಸತ್ಯ ಎಲ್ಲರಿಗೂ ಖಾತ್ರಿಯಾಗಿದೆ.

ಗೇರಸಪ್ಪಾ ಕಣಿವೆಯಲ್ಲಿ ಶರಾವತಿ ಟೇಲರೇಸ್ ಯೋಜನೆಗೆ ೧೯೯೭ರಲ್ಲಿ ನೂರಾರು ಎಕರೆ ಕಾಡು ಬಯಲಾಗಿತ್ತು. ಅಲ್ಲಿನ ಮಾಸ್ತಿಮನೆ ತಿರುವಿನ ದಿಬ್ಬದಲ್ಲಿ ನಿಂತು ಶರಾವತಿಯ ಕಣಿವೆ ನೋಡಿದರೆ ಮರ ಹತ್ಯೆ ನಡೆದು ಗರಗಸದ ಅಟ್ಟಹಾಸದ ಬಳಿಕ ಆಣೆಕಟ್ಟು ಮೇಲೇಳುತ್ತಿತ್ತು. ಮಳೆಗಾಲಕ್ಕೆ ಮುನ್ನ ಗಿಡ, ಬಳ್ಳಿ, ಮರ, ಪೊದೆಯನ್ನೆಲ್ಲ ಕತ್ತರಿಸಿ ಕೂಲಿಗಳು ಬಿಡಾರಕ್ಕೆ ಓಡಿದ್ದರು. ಅಬ್ಬರದ ಮಳೆಗೆ ಕಣಿವೆಯ ಮಣ್ಣು ಕೊಚ್ಚಿ ಓಡುವ ಹೊತ್ತು ಭೂಸವಕಳಿ ತಡೆವ ಕಳಕಳಿಯ ಜನ ಯಾರೂ ಇರಲಿಲ್ಲ. ಬಯಲಾದ ಕಾಡು ನೆಲದಲ್ಲಿ ಕೇವಲ ಒಂದೇ ತಿಂಗಳ ಸಮಯದಲ್ಲಿ ಚಂದಕಲು ಸಸ್ಯಗಳು ಸಾವಿರ ಸಾವಿರವಾಗಿ ಹತ್ತಾರು ಅಡಿ ಎತ್ತರ ಬೆಳೆದವು ಸುತ್ತೆಲ್ಲ ಚಂದಕಲು ಸಾಮ್ರಾಜ್ಯ ಬೆಳೆಸಿದ ನೆಲ ನಿತ್ಯಹರಿದ್ವರ್ಣ ಕಾಡಿಗೆ ಕತ್ತಿಕಾಳಗದ ವಿರುದ್ಧ ಗುರಾಣಿ ತಿರುಗಿಸಿದಂತೆ ಕಾಣುತ್ತಿತ್ತು.

ಮಳೆಕಾಡಿಗೆ ಮರುಜನ್ಮ ನೀಡಲು ಮುಂಚೂಣಿಯಲ್ಲಿ ಶ್ರಮಿಸುವ ಚಂದಕಲನ್ನು 'ಮಕರಂಗಾ ಪೆಲ್ಟಾಟಾ' ಎಂದು ಶಾಸ್ತ್ರೀಯ ಹೆಸರಿನಿಂದ ಕರೆಯಲಾಗುತ್ತದೆ. 'ಪೆಲ್ಟಾಟಾ' ಎಂದರೆ ಗುರಾಣಿ ಎಂದರ್ಥ !. ಸಸ್ಯ ತನ್ನ ಎಲೆಯನ್ನು ಗುರಾಣಿಯಾಗಿಸಿ ನೆಲ ರಕ್ಷಣೆಗೆ ತಲತಲಾಂತರದಿಂದ ಶ್ರಮಿಸುತ್ತಿದೆ. ನಾವು ಭಾಷಣ, ಠರಾವಿನ ಭರಾಟೆಯಲ್ಲಿ ಪರಿಸರ ಸಂರಕ್ಷಣೆಯ ಸವಕಲು ದಾರಿ ಹಿಡಿದರೆ ಹಸುರು ಗುರಾಣಿ ಹಿಡಿದ ಗಿಡ ಬೆಟ್ಟದ ಬೆರಗಾಗಿ ಕಾಣುತ್ತಿದೆ.

## ನದಿ ಸಂರಕ್ಷಣೆಗೆ ಹಸುರು ನೌಕರರು !




ನದಿ ದಂಡೆಯ ಸಸ್ಯಗಳು ಭೂಸವೆತ ತಡೆಯುತ್ತವೆ

ಪಶ್ಚಿಮ ಘಟ್ಟದ ಕಾಡಿನ ಹೂಡ್ಲು ಪ್ರದೇಶವನ್ನು ವಿಜ್ಞಾನಿಗಳು ಹಾರ್ಟ್‌ಗಳೆನ್ನುತ್ತಾರೆ !. ಮಳೆ ನೀರನ್ನು ಹೂಡ್ಲಿನ ಜೌಗಿನಲ್ಲಿ ಹಿಡಿದಿಡುವ ಗಿಡ ಮರಗಳ ಬೇರಿಗೆ ಇಲ್ಲಿ ಅಭಿಧಮನಿ ಕೆಲಸ. ಹಿಡಿದಿಟ್ಟ ಹನಿ ವರ್ಷವಿಡೀ ಶುದ್ಧಜಲವಾಗಿಸಿ ಹರಿಸುವದು ಝರಿ, ಹಳ್ಳ, ನದಿಗಳ ಅಪಧಮನಿ ಹೊಣೆ, ಹೈಗ. ವಾಟೆ ಬಿದಿರು, ಮುಂಡಿಗೆ, ಸುರಹೊನ್ನೆ, ಅಪ್ಪೆ ಮಾವು, ನೀರತ್ತಿ, ಬನಾಟೆ, ಹೊಳೆಗೇರು, ಬಿಳಿಮತ್ತಿ, ಹೊಳೆದಾಸವಾಳ, ಕುಂಟುನೇರಲು, ಲಕ್ಕಿ, ಅತ್ತಿ, ತೋರಂಗಲ, ವಾತಂಕೊಲ್ಲಿ, ವಿಣ್ಣೆ ಹೊನ್ನೆ, ಕಾಂಡ್ಲ, ಕೆಳಹಂತದ ಪರ್ನ್‌ಗಳು, ಹುಲ್ಲುಗಳು ಹೀಗೆ ನೂರಾರು ಸಸ್ಯ ಜಾತಿ ಮಣ್ಣು ನೀರಿನ ಸಂರಕ್ಷಣೆಗೆ ನಿಂತಿವೆ. ಇವನ್ನು ನದಿಯಂಚಿನ ಸಸ್ಯಗಳೆನ್ನುತ್ತೇವೆ. ಸರಕಾರ ಜಲಾನಯನ ಇಲಾಖೆ ಇವತ್ತು ಆರಂಭವಾಗಿದ್ದರೆ ಪ್ರಕೃತಿ ಸಹಸ್ರಾರು ವರ್ಷ ಹಿಂದೆ ನದಿದಂಡಿಗೆ ಡಿಪಾರ್ಟ್‌ಮೆಂಟ್ ತೆಗೆದಿದೆ, ಹಸಿರು ಸಮವಸ್ತ್ರದ ನೌಕರರನ್ನು ನೇಮಿಸಿದೆ.

# ಹೆಬ್ಬತ್ತಿ ಗೌಡರ ಪಾಳಯದಲ್ಲಿ

# ರಾಜವೃಕ್ಷದ ಸಂಸಾರ

ಜನ ಮರ ಏಕೆ ಬೆಳೆಸುತ್ತಾರೆ ? 'ಬರಗಾಲ, ರೋಗರುಜನಿ, ಹೆಣ್ಮಕ್ಕಳ ಮದ್ವಿ, ಮತ್ತೇನಾರ ಅನು ಆಪತ್ತು ಆದ್ರೆ ಅಧಾರ ಇರ್ಲಿ' ಅಂತ ಸಾಗವಾನಿ ಬೆಳೆಸಿದ ಶತಮಾನದ ಕತೆ ಇಲ್ಲಿದೆ.

ಬಿಸಿಲ ಝಳದ ಮಧ್ಯೆ ಸಾಗವಾನಿ ತೋಪಿನ ಕಾಲುದಾರಿಯಲ್ಲಿ ಸಾಗಿದ್ದೇವು. 'ಇವೇ ನೋಡ್ರ... ಸಾಹೇಬ್ರ, ನಮ್ಮಜ್ಜರ ಕಾಲದಾಗ... ನೆಟ್ಟಿದ್ದು, ಬರಗಾಲ, ರೋಗರುಜನಿ, ಹೆಣ್ಮಕ್ಕಳ ಮದ್ವಿ, ಮತ್ತೇನಾರ ಅನು ಆಪತ್ತು ಆದ್ರ ಆಧಾರ ಇರ್ಲಿ ಅಂತ ಸಾಗವಾನಿ ಬೆಳೆಸ್ಯಾರಿ..' ನೀಲಕಂಠ ಗೌಡರು ಮರಕ್ಕೆ ಮೈಚಾಚಿ ಕತೆ ಆರಂಭಿಸಿದರು.



ಮದುವೆ ಹಣಕ್ಕೆಂದು ಬೆಳೆಸಿದ ಸಾಗವಾನಿ ಗಿಡಗಳು !

'ನಮ್ಮದು ದೊಡ್ಡ ಕುಟುಂಬ, ಆಗ ೧೯೭೭ನೇ ಇಸ್ವಿ ಅಕ್ಟೋಬರ್ ತಿಂಗಳು, ಬತ್ತದ ಪೈರು ಕಟಾವಾಗಿತ್ತು, ಇದ್ದಕ್ಕಿದ್ದಂಗೆ ಆಲಿಕಲ್ಲು ಮಳೆ

ಸುರೀತು, ಬೆಳಿ ಮ್ಯಾಗ ಹೊಳೆ ಹರೀತು, ಕೊಯ್ದಿಟ್ಟ ಫಸಲು ಕೈಗೆ ಹತ್ತಲಿಲ್ಲ, ಬೆವರಿನ ಫಲಯೆಲ್ಲ ಮಣ್ಣಾಯ್ತು, ಮಂದಿಗೆ ಅನ್ನ ಕೊಡೋ ಮನೆತನದಾಗ.... ಮನೆಮಂದಿಗೆ ಗಂಜಿ ದಕ್ಕೋದು ಕಷ್ಟ ಅತು. ದಿಕ್ಕೇ ತೋಚಲಿಲ್ರಿ... . ಆಗ ಮರಗಳೇ ನಮಗ.... ಬದುಕು ಕೊಟ್ವು, ಮರ ಕಡಿದು ಮಾರಿ ಬಂದ ರೊಕ್ಕದಾಗ ಅನ್ನ ಕಂಡ್ವಿ' ಮರಗಳ ಮೈದಡವಿ ಮುಂದೆ ಹೊರಟರು. ಜೊತೆಯಲ್ಲಿ ಮನೆ ಮಂದಿಯ ದಂಡು, ಅಜ್ಜ ನೆಟ್ಟ ಮರಗಳ ಮಧ್ಯೆ ಒಂದು ಸಂಭ್ರಮದ ಸಂತೆ.

ಟಿಪ್ಪೂಸುಲ್ತಾನರ ಕಾಲದಲ್ಲೇ ತೇಗದ ಮರಕ್ಕೆ ರಾಜವೃಕ್ಷದ ಪಟ್ಟ, ತರುವಾಯದಲ್ಲಿ ಆಡಳಿತಕ್ಕೆ ಬಂದ ಬ್ರಿಟೀಷರು ಹಸುರು ಹೊನ್ನಿಗೆ ಇನ್ನಷ್ಟು ಕಾನೂನು ಕಟ್ಟಲೆ ಹೇರಿ ಖಜಾನೆ ಭರ್ತಿಗೆ ಲಕ್ಷ್ಯಹರಿಸಿದರು. ಅರಣ್ಯ ಭೂಮಿಯಲ್ಲಿ ಸರಕಾರಿ ನೆಡುತೋಪು ತೋಪು ಬೆಳೆದದ್ದು ಅರಣ್ಯ ಇತಿಹಾಸ. ಉತ್ತರ ಕನ್ನಡದ ಬನವಾಸಿ ಸನಿಹದ ಹೆಬ್ಬತ್ತಿ ಕುಟುಂಬದ್ದು ಮಾತ್ರ ಖಾಸಗಿ ನೆಲದಲ್ಲಿ ಹಸುರು ಸೃಷ್ಟಿಯ ಒಂದು ಯಶೋಗಾಥೆ.

ಕ್ರಿ.ಶ. ೧೯೧೮ರ ಕಾಲ, ಮಹಾಮಾರಿ ಬೇನೆ ಹೆಬ್ಬತ್ತಿ ಊರಿಗೆ ಲಗ್ಗೆ ಹಾಕಿತು, ಅದೇ ಹೊತ್ತಿಗೆ ಬರಗಾಲ ಬಂದು ಊರಿನ ಕೆರೆ ಒಣಗಿತ್ತು. ಜನ ಗೂಳೆ ಹೋದರು. ಆಗಿದ್ದ ೧೦-೧೨ ಎಕರೆ ಅಡಿಕೆ ತೋಟ ಸಂಪೂರ್ಣ ಹಾಳಾಯಿತು. ಭೀಕರ ಬರ ಅನುಭವಿಸಿದ ಬೆನ್ನಲ್ಲೇ ಭವಿಷ್ಯದ ಲೆಕ್ಕಹಾಕಿದ ಜಾಣ ಮಲ್ಲಿಕಾರ್ಜುನ ಗೌಡರು ತೇಗವೆಂಬ ರಾಜವೃಕ್ಷ ಬೆಳೆಸಲು ಅಣಿಯಾದರು. ಹೆಬ್ಬತ್ತಿ ಗೌಡರು ಕುಟುಂಬಕ್ಕೆ ಉತ್ತರ ಕನ್ನಡದ ಸಿದ್ದಾಪುರ ತಾಲೂಕಿನ ಹೆಗ್ಗೋಡಮನೆ ಜೊತೆ ನೆಂಟಸ್ತನ. ಬ್ರಿಟೀಷ್ ಕಾಲದಲ್ಲಿ ರಾವ್‌ಸಾಹೇಬ್ ಪದವಿ ಪಡೆದ ಪ್ರತಿಷ್ಠಿತ ಮನೆತನ ಅದು, ಬ್ರಿಟೀಷ್ ಕಲೆಕ್ಟರ್, ಅಧಿಕಾರಿಗಳ ಜೊತೆ ಸಂಪರ್ಕ. ತೇಗದ ಕೃಷಿಗೆ ಅಲ್ಲಿ ಸ್ಫೂರ್ತಿ. ಮಲ್ಲಿಕಾರ್ಜುನ ಗೌಡರು ತಮ್ಮ ಸಹೋದರರಾದ ಪುಟ್ಟಣ್ಣಯ್ಯ ಹಾಗೂ ಕಲ್ಲಪ್ಪ ಗೌಡರ ಸಹಕಾರದೊಂದಿಗೆ ಮನೆ ಹಿಂಭಾಗದ ಮಾಲ್ಕಿ ಭೂಮಿಯಲ್ಲಿ ಗಿಡ ನೆಡಲು ಮುಂದಾದರು. ಸೊರಬ ತಾಲೂಕಿನ ತೆಲಗದ್ದೆ ಜಂಗಲ್‌ದಿಂದ ಸಾಗವಾನಿ ಮರದ ಬೇರುಗಳನ್ನು ಕಿತ್ತು ತಂದು ಸಸಿ ಮಾಡಿ ನೆಟ್ಟರು.

ಸುಮಾರು ೧೨೦-೧೫೦ ವರ್ಷಗಳ ಹಿಂದೆ ಈ ಹೆಬ್ಬತ್ತಿ ಪ್ರದೇಶದ ಕಾನನದಲ್ಲಿ ನೈಸರ್ಗಿಕವಾಗಿ ತೇಗದ ಮರಗಳಿದ್ದವು, ನಂತರ ಬಹುತೇಕ

ಕಡಿದು ನಾಶವಾದವು. ಸ್ವತಃ ಅರಣ್ಯ ಇಲಾಖೆ ಬನವಾಸಿ ಪ್ರದೇಶದಲ್ಲಿ ಕಲ್‌ಕರಡಿ ಎಂಬಲ್ಲಿ ೧೯೬೭ರಲ್ಲಿ ತೇಗದ ತೋಟ ಬೆಳೆಸಿದ್ದರೆ ಕೃಷಿಕ ಮಲ್ಲಿಕಾರ್ಜುನ ಗೌಡರು ಅರಣ್ಯ ಇಲಾಖೆಗಿಂತ ೪೬ ವರ್ಷ ಮುಂಚೆ ಈ ಕೃಷಿ ನೆಲದಲ್ಲಿ ಅರಣ್ಯ ವೃಕ್ಷ ನೆಟ್ಟರು !. ಮರ ಆಪತ್ತಿನಲ್ಲಿ ನೆರವಾಗಲಿ ಎಂಬುದು ಮುಖ್ಯ ಉದ್ದೇಶ. ಈ ಪ್ರದೇಶ ಆಗಾಗ ಬರಗಾಲಕ್ಕೆ ತುತ್ತಾಗುವದು, ವಿವಿಧ ಕಾಯಿಲೆಗಳಿಂದ ಜನ ತಲ್ಲಣಿಸುವದು, ಇದಲ್ಲದೇ ಹುಲ್ಲಿನ ಮನೆಗಳೇ ಜಾಸ್ತಿಯಿದ್ದ ಆ ಕಾಲದಲ್ಲಿ ಬೆಂಕಿ ಹಾವಳಿಯಿಂದ ಇಡೀ ಊರುಗಳೇ ದವಸ ಧಾನ್ಯಸಹಿತ ನಾಶವಾಗಿದ್ದ ಸಂಕಟ ಕಂಡಿದ್ದರು. ಹೇಗಿದ್ದರೂ ಕೃಷಿಕ ಬೆಳೆಸಿದ ತೇಗವನ್ನು ಸರಕಾರ, ಖಾಸಗಿಯವರು ಖರೀದಿಸುವ ವಿಶ್ವಾಸ. ಮರಗಳಿಗೆ ಬೇಡಿಕೆ ಇದೆ. ಒಂದಿಷ್ಟು ಹಣ ದೊರೆಯುತ್ತದೆಂಬ ಲೆಕ್ಕಾಚಾರ.ಮೊದಲಬಾರಿಗೆ ೧೯೭೧ರಲ್ಲಿ ೧೫೦ ಮರ ಮಾರಾಟ ನಡೆಯಿತು. ನಂತರ ೧೯೭೭ರಲ್ಲಿ ಅಕ್ಟೋಬರ್‌ನಲ್ಲಿ ಆಲಿಕಲ್ಲು ಮಳೆಯಾಗಿ ಬೆಳೆ ನಷ್ಟವಾದಾಗ ಕೆಲವು ಮರ ಕಡಿಸಿ ಮಾರಿದರು. ಹೀಗೆಯೇ ಮುಂದೆ ೧೯೮೬, ೧೯೯೧ರಲ್ಲಿ ಮರ ಮಾರಾಟ ಮಾಡಿ ಸಂಕಷ್ಟಗಳಿಂದ ಬಚಾವಾಯಿತು. ಖಾಸಗಿ ಭೂಮಿಯಲ್ಲಿರುವ ಮರ ಕಡಿತಕ್ಕೆ ಅರಣ್ಯ ಅಧಿಕಾರಿಗಳಲ್ಲದೇ ಪ್ರದೇಶದ ಸಹಾಯಕ ಆಯುಕ್ತರ ಪರವಾನಗಿ ಬೇಕು. ಮರದ ಮೌಲ್ಯ ೧೦ ಸಾವಿರದಷ್ಟಿದ್ದಾಗ ಮಾತ್ರ ಸಹಾಯಕ ಆಯುಕ್ತರು ಪರವಾನಗಿ ನಡೆದೀತು. ಇನ್ನೂ ಜಾಸ್ತಿಯಾದರೆ ಜಿಲ್ಲಾಧಿಕಾರಿ ಒಪ್ಪಿಗೆ ಬೇಕು. ಹೇಳಿಕೇಳಿ ಸಾಗವಾನಿಗೆ ಚಿನ್ನದ ಬೆಲೆ. ಒಂದೊಂದು ಮರವೇ ೧೫-೨೦ ಸಾವಿರ. ಪರಿಸ್ಥಿತಿ ಹೀಗಿರುವಾಗ ಮರಕಡಿತ ಕಾನೂನಿನ ಸುತ್ತು ಬಳಸು ದಾರಿಗಳಲ್ಲಿನ ಅನುಭವ, ಕೆಲವೊಮ್ಮೆ ಮರ ಬೆಳೆಸಿದ್ದಕ್ಕಿಂತ ಕಡಿಯುವದೇ ಕಷ್ಟವಾದದ್ದೂ ಇದೆ.

ಮರ ಕಡಿದ ನಂತರದಲ್ಲಿ ಬುಡದಲ್ಲಿ ಪುನಃಚಿಗುರುತ್ತದೆ. ಅದರಲ್ಲಿ ಸಬಲವಾಗಿದ್ದ ಎರಡು ಮೂರು ಟಿಸಿಲು ಮಾತ್ರ ಉಳಿಸಿ ಬೆಳೆಸಬೇಕು. ಅವು ಮರವಾಗಿ ಬೆಳೆದಾಗ ಕಟಾವಿನ ಘಳಿಗೆಯಲ್ಲಿ ಎಲ್ಲವನ್ನೂ ಸಂಪೂರ್ಣ ಕಡಿಯದೇ ಒಂದು ಮರ ಹಾಗೇ ಉಳಿಸುವದು, ಕಡಿದ ಕಾಂಡದ ಬುಡದಲ್ಲಿನ ಆಯ್ದ ಚಿಗುರನ್ನು ಪುನಃಪೋಷಿಸಿ ಬೆಳೆಸಬೇಕು. ಹೀಗೆ ನಿರ್ವಹಣೆ ಮಾಡುವದರಿಂದ ನಾಲ್ಕಾರು ಕಟಾವಿನಲ್ಲೂ ತೋಟ ಸಂಪೂರ್ಣ ಕಟಾವಾಗದೇ ಹಲವು ಮರಗಳು ಹಾಗೇ ಉಳಿಯುತ್ತವೆ. ಕಟಾವು ಮಾಡದ

ಮರಗಳು ಸಂತರದಲ್ಲಿ ಬೇಗ ಬೆಳೆಯುತ್ತವೆ. ತೇಗದ ತೋಟ ನಿರ್ವಹಣೆಯ ಈ ಜಾಣ್ಮೆಯನ್ನು ಗುಜರಾಥಿನ ಜೋರಾವರ್‌ಮಲ್ ಜೈನ್ ಎಂಬ ವ್ಯಾಪಾರಿ ತಮಗೆ ಕ್ರಿ.ಶ. ೧೯೬೫ರಲ್ಲಿ ಹೇಳಿದ್ದನ್ನು ಈಗಲೂ ಪಾಲಿಸಿಕೊಂಡು ಬಂದಿರುವದಾಗಿ ಮನೆಯ ಚಂದ್ರಶೇಖರ ಗೌಡರು ಹೇಳುತ್ತಾರೆ.

ಹೆಬ್ಬತ್ತಿಯ ಈ ಕುಟುಂಬದಲ್ಲಿ ೨೫ಜನ ಸದಸ್ಯರು. ಇಂದು ಹೊಲ, ಭಾಗಾಯತ ಎಲ್ಲ ಸೇರಿ ೯೨ ಎಕರೆ ಭೂಮಿ. 'ಸಾಗವಾನಿ ಕುಂಬ್ರಿ' ಎಂದು ವಾಡಿಕೆಯಲ್ಲಿ ಕರೆಯುವ ಈ ೯ ಎಕರೆ ಕ್ಷೇತ್ರದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮರಗಳಿವೆ!. ಎರಡೂವರೆ ಅಡಿಯಿಂದ ಆರಂಭಿಸಿ ಐದು ಅಡಿ ಸುತ್ತಳತೆಯ ಮರಗಳು. ಅಜ್ಜನೆಟ್ಟ ತೇಗ ನಂಬಿ ಈ ಮನೆಯ ಮಕ್ಕಳು ಕೂತಿಲ್ಲ. ಮತ್ತೆ ಮತ್ತೆ ಗಿಡ ನೆಡುತ್ತಲೆ ರಾಜವೃಕ್ಷದ ಸಂಸಾರಕ್ಕೆ ನೆಲದಲ್ಲಿ ಆಶ್ರಯ ನೀಡುತ್ತಿದ್ದಾರೆ. ನಾಲ್ಕು ವರ್ಷದ ಹಿಂದಷ್ಟೇ ೪೦೦ತೇಗ ನಾಟಿ ಮಾಡಿದ್ದಾರೆ.

'ಗಿಡ ರೈತಾರ್ನ ಕೈಬಿಡಾಂಗಿಲ್ರಿ........ ನಾವು ನೆಟ್ವಿ ಅದರ ಫಲ ಪಡದ್ವಿ. ಅರ್ರೈಕ ಆದ್ರ ಏನು ಮಾಡೆವು ಅಂತಿರಿ?. ಕಾಡು ಗಿಡಕ್ಕೆ ನೀರ ಹಾಕಾಂಗಿಲ್ಲ, ಗೊಬ್ಬರ ಸುರುವಿಲ್ಲ, ಸುಮ್ನ ನೆಟ್ಟು ಕೂತೇವ್ರಿ..., ಬಿಡುವಿನ ವ್ಯಾಳ್ಯಾಗ ಹೀಂಗ ಮನೆಮಂದಿ ಯಾರ್‍ಯಾರ ಬಂದು ನೋಡಿ ಹೋಗ್ತೇವಿ. ಒಂದೇ ಒಂದು ಮರ ಕಳ್ಳತನಾ.... ಆಗಿಲ್ರಿ'. ಅವಿಭಕ್ತ ಕುಟುಂಬದ ಮನೆ ಮಂದಿಯೇ ತೋಟದ ಪಾಲಿನ ಫಾರೆಸ್ಟ್ ಗಾರ್ಡ್‌ಗಳಾಗಿ ಹಸುರು ಹೊನ್ನು ಬೆಳೆಸಿದ ಅನುಭವದ ಧ್ವನಿ ಇದು.

ಕರ್ನಾಟಕದಲ್ಲಿ ರೈತರು ಬೆಳೆಸಿದ ತೇಗದ ಹಳೆಯ ತೋಟ ಯಾವುದೆಂಬ ಬಗೆಗೆ ಖಚಿತ ಮಾಹಿತಿಯ ಕೊರತೆಯಿದೆ. ಆದರೆ ಅಂತಹ ತೋಟಗಳಲ್ಲಿ ಹೆಬ್ಬತ್ತಿ ಮೊದಲ ಸಾಲಲ್ಲಿ ನಿಲ್ಲುವಲ್ಲಿ ಯಾವ ಸಂಶಯವಿಲ್ಲ. ಅರಣ್ಯ ವೃಕ್ಷಗಳ ಪೈಕಿ ಸಾಗವಾನಿ ಅಂದರೆ ಬಂಗಾರದ ತುಂಡು, ನಾಲ್ಕಡಿ ಸುತ್ತಳತೆ, ೨೦ಅಡಿ ಉದ್ದದ ಮರದ ದಿಮ್ಮಿ ಕನಿಷ್ಟ ೧೫-೨೦ ಸಾವಿರಕ್ಕೆ ವಿಕ್ರಿಯಾಗಬಲ್ಲ ಸರಕು. ಮರಗಳನ್ನು, ಹಣದ ಲೆಕ್ಕದಲ್ಲಿ ಅಳೆದರೆ ಅದು ಕೋಟ್ಯಾಂತರ ಬೆಲೆ ಬಾಳಬಹುದು. ಹಾಗಂತ ಹಣ ಗಳಿಕೆಗೆ ಇದ್ದೆಲ್ಲ ಮರ ಮಾರುವ ಧುರಾಸೆ ಇವರಲ್ಲಿಲ್ಲ. ಕಷ್ಟದ ಕಾಲಕ್ಕೆ ಮಿತವಾಗಿ ಮಾರಾಟ. 'ಕಡಿದು ಮಾರಿದ್ರ ರೊಕ್ಕ ಆಕತಿ.... ಕರೆ!, ಹಂಗಂತ.... ನಾವು ಕಡಿಯಾಕ ಹೋಗಿಲ್ರಿ... ..... ಮುಂದೆ ಕಾಲ ಹೇಂಗ ಬರ್‍ತಾವು ಹೇಳಾಕ ಬರಾಂಗಿಲ್ರಿ,

ಮರ ಬೆಳಸಿದ್ರ ಹಣ ಉಳಿಸಿದಾಂಗೆ ಅಲ್ಲೇನ್ರಿ ?' ಬರಗಾಲದ ಈ ಉರಿ ಬಿಸಿಲಲ್ಲಿ ಕೇಳಿ ಬಂದ ಹಸುರುಳಿಸುವ ತಂಪನೆಯ ಮಾತು ಕೃಷಿ ನೆಲದ ದೊಡ್ಡ ಪಾಠ.

### ಹೆಗಡೆ ಎಂಬ ಅಶ್ವತ್ಥ ಗ್ರಾಮ !



**ಉತ್ತರ ಕನ್ನಡದ ಕುಮಟಾದ ಹೆಗಡೆ ಊರಿನಲ್ಲಿ ಅಶ್ವತ್ಥ ಮನೆಗಳಿವೆ**

ಉತ್ತರ ಕನ್ನಡ ಕುಮಟಾ ಪೇಟೆಯಿಂದ ಮೂರು ಕಿಲೋ ಮೀಟರ್ ದೂರದಲ್ಲಿ ಹೆಗಡೆ ಎಂದ ಹಳ್ಳಿಯಿದೆ. ಇಲ್ಲಿ ರಸ್ತೆ ಪಕ್ಕ ಸುಮಾರು ೪೦–೪೫ ಅಶ್ವತ್ಥ ಮರಗಳಿವೆ. ಇವಕ್ಕೆ ಆಕರ್ಷಕ ಕಟ್ಟೆಗಳಿವೆ !. ಊರಿಗೆ ಒಂದೊ, ಎರಡೊ ಅಶ್ವತ್ಥ ಮರಗಳಿರುವದು ಗೊತ್ತು. ಅವುಗಳ ಸುತ್ತ ಶ್ರದ್ಧಾ ಭಕ್ತಿಯಿಂದ ನೀರೆಯರು ಪ್ರದಕ್ಷಿಣೆ ಹಾಕುವದು ತಿಳಿದದ್ದೆ. ಕಿಲೋ ಮೀಟರ್ ಸುತ್ತಳತೆಯಲ್ಲಿ ಇಷ್ಟೊಂದು ಅಶ್ವತ್ಥ ಮರಗಳು ಏಕೆ?. ಮಕ್ಕಳಾಗದ

ದಂಪತಿಗಳು ಸಂತಾನವೃದ್ಧಿಗೆ ಹರಕೆ ಹೊತ್ತು ಅಶ್ವತ್ಥ ಗಿಡ ನೆಡುತ್ತಾರೆ. ಅಶ್ವತ್ಥ ನೆಟ್ಟು ಮರವಾದಾಗ ಅದಕ್ಕೆ ಬ್ರಹ್ಮೋಪದೇಶ ಮಾಡಿದವರು ಇದ್ದಾರೆ. ಗಿಡ ನೆಟ್ಟು ಪೋಷಿಸುವಲ್ಲಿ ಹರಕೆ ಈಡೇರಿಕೆಯ ಜೊತೆ ದಾರಿಹೋಕರಿಗೆ ನೆರಳಾಗಲಿ, ಪಶು ಪಕ್ಷಿಗಳಿಗೆ ಅನುಕೂಲವಾಗಲಿ ಎಂಬ ಅಪೇಕ್ಷೆಯಿದೆ. ಮಕ್ಕಳಿಲ್ಲದ ದಂಪತಿಗಳು ಹರಕೆ ಹೊತ್ತು ಅರಳಿಗಿಡ ನಾಟಿ ಮಾಡಿದ ಮೇಲೆ ಮಕ್ಕಳಾದವೆ ಎಂಬುದು ಬೇರೆ ವಿಚಾರ. ಆದರೆ ಸಸಿ ನಾಟಿ ಮಾಡಿದವರು ಸ್ವಂತ ಮಗುವಿನ ಹಾಗೇ ಅಕ್ಕರೆಯಲ್ಲಿ ಭಕ್ತಿಯಿಂದ ಗಿಡ ಬೆಳೆಸಿದ್ದಾರೆ. ಗಿಡದ ಸುತ್ತ ಕೆಂಪುಕಲ್ಲಿನ ಕಟ್ಟೆ ನಿರ್ಮಾಣ ಮಾಡಿದ್ದಾರೆ. ಶ್ರೀಶಾಂತಿಕಾ ಪರಮೇಶ್ವರಿ ದೇವಸ್ಥಾನ, ಕಾನಮ್ಮ ದೇವಸ್ಥಾನ, ಗಣಪತಿ ದೇವಸ್ಥಾನ, ಬೀರ ದೇವಸ್ಥಾನ, ಈಶ್ವರ ದೇವಸ್ಥಾನ, ಗೋಪಾಲಕೃಷ್ಣ ದೇವಸ್ಥಾನಗಳು ಇಲ್ಲಿ ಪ್ರಮುಖ ವಾದುದು. ಈ ದೇವಾಲಯಗಳ ವಿವಿಧ ಉತ್ಸವ, ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ ಮೆರವಣಿಗೆ ಹೊರಟಾಗ ಮಾರ್ಗಮಧ್ಯೆ ಪೂಜೆ ಸಲ್ಲಿಸುವದಕ್ಕೆ ಅನುಕೂಲವಾಗುವಂತೆ ಅರಳಿಕಟ್ಟೆಯಲ್ಲಿ ಮನೆ ನಿರ್ಮಿಸ ಲಾಗಿದೆ. ಗೋಕರ್ಣ ಕ್ಷೇತ್ರಕ್ಕೆ ಹೆಗಡೆ ಮಾರ್ಗದಲ್ಲಿ ಹೋಗುವ ಪ್ರವಾಸಿಗರು ವಿಶ್ರಾಂತಿಗೆ ಹೆಗಡೆಯ ಅರಳಿಮರದ ನೆರಳನ್ನು ಆಶ್ರಯಿಸುತ್ತಿದ್ದರು. ಮಠ ಮನೆಗಳು ಉಚಿತ ಪ್ರವಾಸಿ ವಸತಿಗೃಹಗಳಂತೆ ಶತಮಾನಗಳ ಹಿಂದೆ ಬಳಕೆಯಾಗುತ್ತಿದ್ದವು. ಅಶ್ವತ್ಥಕಟ್ಟೆಗಳನ್ನು ಇಲ್ಲಿ ನಿರ್ಮಿಸಿದವರ ಹೆಸರಿನಿಂದ ಗುರುತಿಸಲಾಗುತ್ತದೆ. ಕಾಶಿನಾಥ ಶಾನಭೋಗರಕಟ್ಟೆ, ಹೆಗಡೆ ಕಟ್ಟೆ, ದೇವರ ಹೆಗಡೆ ಕಟ್ಟೆ ಹೀಗೆ ಮುಂತಾದ ಹೆಸರುಗಳ ಕಟ್ಟೆಗಳಿವೆ.

# ಮಸಣಕ್ಕೆ ಮರ ಬೆಳೆದವರು!

ಹಸಿರೇ ಉಸಿರೆಂದು ನಾವು ಘೋಷಣೆ ನಡೆಸಿದ್ದರೆ ಉತ್ತರ ಕನ್ನಡದ ಸಿದ್ದಾಪುರದ ಮನಮನೆ ಹಳ್ಳಿಯ ಗ್ರಾಮಸ್ಥರು ಹೆಣ ಸುಡುವ ಕಟ್ಟಿಗೆಗಾಗಿ ಹಸಿರು ಬೆಳೆಸಿದ್ದಾರೆ. ಬೋಳು ಬಯಲಾಗಿ ಸಾವಿನ ದವಡೆಗೆ ಸಿಲುಕಿದ ಹಳ್ಳಿಯ ಗುಡ್ಡಕ್ಕೆ ಮೂರು ದಶಕಗಳ ಪರಿಶ್ರಮದಿಂದ ಕಾಡಿಗೆ ಮರುಜನ್ಮ ನೀಡಿದ್ದಾರೆ. ಇಲ್ಲಿನ ಕಾಡು ಕಟ್ಟಿಗೆ ಕಡಿಯಲು ಊರಲ್ಲಿ ಯಾರಾದರೂ ಸಾಯ ಬೇಕು ಎಂದು ನಿಯಮ ಹೇರಿದ್ದಾರೆ!

ನಾವು ಬೇಡ ಬೇಡವೆಂದರೂ ಕಾಡಿನ ಸಾವಿಗೆ ದಾರಿ ತೋರಿದೆವು .... ಸ್ವಾಗತ ಹಾಡಿದೆವು. ಕೊನೆಗೆ ನಮ್ಮವರ ಸಾವಿಗೆ ಕಾಡು ಮುನಿದು ಶವ ಸುಡುವ ಕಟ್ಟಿಗೆಗೂ ಸಮಸ್ಯೆ ಎದುರಾಯಿತು. ಇದು ಹೆಣಕ್ಕಾಗಿ ಮೀಸಲು ಅರಣ್ಯ ಬೆಳೆಸಿದವರ ಕತೆ. ಉತ್ತರ ಕನ್ನಡದ ಸಿದ್ದಾಪುರದ ಮನಮನೆ ಹಳ್ಳಿಗೆ ಹೋದರೆ ಅಲ್ಲಿ 'ಮಸಣಕ್ಕೆ ಮೀಸಲು ಅರಣ್ಯ' ಕಾಣುತ್ತದೆ.

ಚಟ್ಟ ಕಟ್ಟಿ ಸ್ಮಶಾನಕ್ಕೆ ಒಯ್ದರೆ ಅಲ್ಲಿ ಹೆಣ ಸುಡಲೂ ಕಟ್ಟಿಗೆಯಿಲ್ಲದ ಬಡತನ. ಸುಟ್ಟು ಸಂಸ್ಕಾರ ಮಾಡುವ ಪರಂಪರೆಗೆ ನಿಸರ್ಗದ ಛಡಿಯೇಟು. ಸಾವಿನ ಕ್ಷಣ ಒಡನಾಡಿಗಳ ಅಳುವಿನ ಭಾರದ ಹೊರೆಯಾದರೆ ಸಂಸ್ಕಾರಕ್ಕೆ ಕಟ್ಟಿಗೆ ಹುಡುಕಲು ಕೊಡಲಿಯೇರಿಸಿ ಹೊರಟವರ ಭಾರ ಇನ್ನೂ ದೊಡ್ಡದು. ಕಿಲೋ ಮೀಟರ್ ... ಎರಡು ಕಿಲೋ ಮೀಟರ್ ದೂರ ನಡೆದರೂ ಹೆಣ ಸುಡಲು ಕಟ್ಟಿಗೆ ಸಿಗದ ದುಃಸ್ಥಿತಿ. ಹಾಗಾಗಿ ಊರಲ್ಲಿ ಸಾವು ಕಂಡಾಗೆಲ್ಲ ಹಳ್ಳಿಗರು ಕಟ್ಟಿಗೆ ಹುಡುಕಿ ಅಲೆದು ಅತ್ತರು. ಶವಸಂಸ್ಕಾರಕ್ಕೆ ಕಟ್ಟಿಗೆ ನೀಡದಷ್ಟು ಕಾಡು ಬಡವಾಗಬಾರದು ಎಂದು ಕಾಡಿನ ಸಂರಕ್ಷಣೆಗೆ ಕಟಿಬದ್ಧರಾದರು.! 'ಯಾರಾದರೂ ಸತ್ತರೆ ಮೂರು ಕಿಲೋ ಮೀಟರ್ ದೂರದ ತಾಳಗುಪ್ಪ ಪ್ಲೈವುಡ್ ಕಾರ್ಖಾನೆಯವರಿಂದ ನಾವು ಹೆಣ ಸುಡಲು ಕಟ್ಟಿಗೆ ದಾನ ಕೇಳುವ ಪ್ರಸಂಗಗಳೂ ಎದುರಾದವು. ಸತತ ತೊಂದರೆ ಅನುಭವಿಸಿದ ತರುವಾಯ ಮನ್‌ಮನೆಯ ಕಾನ್‌ಮೂಲೆಯಲ್ಲಿ ಕಾಡು ಬೆಳೆಸುವ ನಿರ್ಧಾರ ಮಾಡಿದೆವು' ಹಳ್ಳಿಗ ಹುಬ್ಬಾ ಮಾರ್‍ಯ ನಾಯ್ಕ (೫೬) ಕಾಡು ಬೆಳೆಸಿದ ಮೂಲದ ಕತೆ ಹೇಳುತ್ತಾರೆ.



ಹೆಣ ಸುಡಲು ಕಾಡು ಬೆಳೆಸಿದ ಮನಮನೆ ಹಳ್ಳಿಗರು

ಮೂರು ದಶಕಗಳ ಹಿಂದೆ ಶವಕ್ಕಾಗಿ ಕಾಡು ಬೆಳೆಸಿ ಕಟ್ಟಿಗೆ ಉಳಿಸುವ ಉಪಾಯ ಹೂಡಿದವರು ಹಳ್ಳಿಯ ಹಿರಿಯ ಕೆಂಪ ಬಡಿಯಾ ಲಿಂಗಿ. ಮಲೆನಾಡಿನ ಮನಮನೆ ಈ ಹಳ್ಳಿ ಒಂದು ಕಾಲದಲ್ಲಿ . ನೈಸರ್ಗಿಕವಾಗಿ ಶ್ರೀಮಂತ. ಬರಬರುತ್ತ ಕಾಡು ಕಣ್ಮರೆಯಾಗಿ ಕುಟಾಗ್ರತೆಯ ಕಾಲ ಬಂತು. ಆಗ ಗ್ರಾಮದ ಕುರುಚಲು ಅರಣ್ಯ ಭೂಮಿಯಲ್ಲಿ, ಗೋಮಾಳದಲ್ಲಿ ಕಾಡು ಬೆಳೆಸುವ ಕನಸು ಕಂಡರು. ಬಡವರ ಕೈಯಲ್ಲಿ ಕಾಸಿರಲಿಲ್ಲ. ಗುಂಡಿ ತೋಡಿ ಸಸಿ ನೆಡುವ ಉಮೇದಿಯಿರಲಿಲ್ಲ. ಕಾಡಿನ ಸುತ್ತ ಬೇಲಿಯ ಕೋಟೆ ಕಟ್ಟಿ ಹಸಿರು ಸಾಧನೆಗೆ ಶಿಸ್ತಿನ ಬೋರ್ಡು ತಗಲಿಸುವ ಖಯಾಲಿ ಇರಲಿಲ್ಲ, ಹಣ ನೀಡಿ ಕಾವಲುಗಾರರನ್ನು ನೇಮಿಸಿಕೊಳ್ಳಲಂತೂ ಇವರಿಗೆ ಸಾಧ್ಯವೇ ಇಲ್ಲ, ವಾಕಿಟಾಕಿ, ಜೀಪ್ಸಿ ವಾಹನ, ವಿದೇಶಿ ತರಬೇತಿ, ನೆರವು ಛೆ ... ಛೇ ಯಾವುದೂ ಇಲ್ಲ. ಇಂತವರು ಕಾಡು ಬೆಳೆಸುವ ಕ್ರೀಯೆಯಲ್ಲಿ ಕೇಂದ್ರ ಬಿಂದುವಾದರು. 'ಹೆಣ ಸುಡುವ ಕಟ್ಟಿಗೆಗಾಗಿ ಗ್ರಾಮದ ಕಾನ್‌ಮೂಲೆ ಗುಡ್ಡದಲ್ಲಿ ಕಾಡು ಬೆಳೆಯಲು ಆಸ್ಪದ ನೀಡಬೇಕು.' ಎಂದು ಹಳ್ಳಿಗರು ಸಹಮತದಿಂದ ಧ್ವನಿಗೂಡಿಸಿದರು. ಕತ್ತಿ, ಕೊಡಲಿಗಳ ಹಸ್ತಕ್ಷೇಪವಿಲ್ಲದಿದ್ದರೆ ನಿಸರ್ಗ ತಾನಾಗಿಯೇ ಕಾಡು ಬೆಳೆಸುತ್ತದೆಂಬ ದೃಢ ವಿಶ್ವಾಸ. ಗುಡ್ಡದಲ್ಲಿನ ಹಸಿರು ಬಳಕೆಯ ಮೇಲೆ ಸಂಪೂರ್ಣ ನಿಶೇಧ ಜಾರಿಯಾಯಿತು.

ಹಸಿರು ಆಡಳಿತ ಹಾಗೂ ಊರ ಅಭಿವೃದ್ಧಿಗಾಗಿ ಮನಮನೆ ಗ್ರಾಮ ಅಭಿವೃದ್ಧಿ ಸಮಿತಿ ರಚನೆ. ಹಾಗಂತ ಕಾಡಿನ ನಿರ್ವಹಣೆಯೇ ಸಮಿತಿಯ ಪ್ರಧಾನ ಕೆಲಸವಲ್ಲ. ಹಳ್ಳಿಯ ಹಬ್ಬ, ಉತ್ಸವಗಳ ಯೋಜನೆಗಳು ಮುಖ್ಯ ಕಾರ್ಯಗಳು. ಮೀಸಲು ಕಾಡಿನಲ್ಲಿ ಯಾರಾದರೂ ಶಾಸನ ಮುರಿದರೆ ಪಂಚಾಯ್ತಿ ಸೇರಿಸಿ ಎಚ್ಚರಿಸುವ ಕಾರ್ಯ ಮಾತ್ರ ಇದರದು. ಹೀಗೆ ಕಾಡಿನ ಸಂರಕ್ಷಣೆ ನಾಜೂಕಾಗಿ ಮುಂದುವರಿಯಿತು ಊರ ಹಿರಿಯರ ದೂರ ದರ್ಶಿತ್ವ ಗ್ರಾಮದ ಹೊಸ ತಲೆಮಾರಿಗೆ ಹಸಿರು ಬಳುವಳಿ ನೀಡಿತು. ಈಗ ಮನಮನೆಯ ದ್ಯಾವಾ ಮಾರ್ರ್ಯಾ ನಾಯ್ಕ ಗ್ರಾಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಹಳ್ಳಿಯಲ್ಲಿ ಸುಮಾರು ೨೫೦ ಮನೆಗಳಿದ್ದು ೧೫೦೦ ಜನಸಂಖ್ಯೆ. ಕೃಷಿಯೇ ಮೂಲ ಕಸುಬಾದ ಇಲ್ಲಿ ಸಾವಿರಾರು ದನಕರುಗಳಿವೆ. ಮೇವಿಗೆ ಹಾಗೂ ಕೃಷಿ ಗೊಬ್ಬರಕ್ಕೆ ಇವರ ಸಂರಕ್ಷಿತ ಕಾಡು ನೆರವಾಗಿದೆ. ಹೆಣ ಸುಡುವ ಕಟ್ಟಿಗೆಗಾಗಿ ಮೀಸಲಾದ ಈ ಕಾಡಿನಲ್ಲಿ ಗ್ರಾಮಸ್ಥರು ದನಕರು ಮೇಯಿಸುವದು, ಮರಗಳಡಿ ಬಿದ್ದ ತೆರಕನ್ನು ಮುಪತ್ತಾಗಿ ಒಯ್ಯುವ ಸೌಲಭ್ಯಗಳಿವೆ. ಆದರೆ ಯಾರೂ ಕಟ್ಟಿಗೆ, ಸೊಪ್ಪು, ಗಿಡ ಕಡಿಯುವಂತಿಲ್ಲ. ಒಣಗಿ ಬಿದ್ದ ಚಿಕ್ಕ ಟೊಂಗೆ ಸಹ ಎತ್ತಿ ಈಚೆ ತರುವದಕ್ಕೆ ನಿಶೇಧವಿದೆ. ನಿಮಯ ಮೀರಿವರಿಗೆ ಪಂಚಾಯ್ತಿ ತೀರ್ಮಾನದ ಪ್ರಕಾರ ದಂಡ ವಿಧಿಸಲಾಗುತ್ತದೆ. ಇದು ಸಮಿತಿಯ ಆಧಾಯ ಮೂಲವಾಗಿದ್ದು ಕಾಡು ಕಡಿಯುವವರನ್ನು ಹಿಡಿದುಕೊಟ್ಟವರಿಗೆ ಪ್ರೋತ್ಸಾಹ ಧನ ನೀಡಿಕೆಗೆ ದಂಡದ ಹಣದ ವಿನಿಯೋಗ. ಈಗ ೪-೫ ವರ್ಷಗಳ ಹಿಂದೆ ಒಮ್ಮೆ ನಮ್ಮ ಕಾಡಿನಲ್ಲಿ ಒಂದೆರಡು ಸಾರಿ ಅಕ್ರಮ ಗಿಡ ಕಡಿದ ಪ್ರಸಂಗ ನಡೆದಿದೆ. ಅವರನ್ನು ಹಳ್ಳಿಗರು ಹಿಡಿದರು. ಪಂಚಾಯ್ತಿ ಸಭೆ ಸೇರಿತು. ಗಿಡ ಕಡಿದವರು ತಾವು ಮಾಡಿದ ತಪ್ಪಿಗಾಗಿ ಪಂಚಾಯ್ತಿ ತೀರ್ಮಾನದ ಪ್ರಕಾರ ದಂಡ ನೀಡಿದರು. ಗಿಡ ಕಡಿದವರನ್ನು ಹಿಡಿದವರಿಗೆ ೧೦೦ ರೂಪಾಯಿ ಬಹುಮಾನ ನೀಡಲಾಯಿತು. ಆನಂತರ ಯಾರೂ ಕಾಡು ಕಡಿಯುವ ಕಾರ್ಯ ಮಾಡಿಲ್ಲ. ಸಾಮಾನ್ಯವಾಗಿ ಮನಮನೆಯವರು ಹೆಣ ಸುಡುವ ಕಟ್ಟಿಗೆಗಾಗಿ ಕಾಡು ಬೆಳೆಸಿಕೊಂಡಿದ್ದಾರೆಂದು ಅಕ್ಕಪಕ್ಕದ ಹಳ್ಳಿಗರಿಗೆಲ್ಲ ಚೆನ್ನಾಗಿ ತಿಳಿದಿರುವದರಿಂದ ಯಾರೂ ಕಾಡಿನ ನಿಯಮ ಮುರಿದು ಕತ್ತಿ ಹಚ್ಚುವದಿಲ್ಲ ಎಂದು ಹಳ್ಳಿಯ ಯುವಕ ಈಶ್ವರ ನಾಯ್ಕ (೪೦) ಕಾಡು ಬೆಳೆದ ಕಾರಣಗಳನ್ನು ಪಟ್ಟಿಮಾಡುತ್ತಾರೆ.

ಸುಮಾರು ಕ್ರಿ.ಶ. ೧೯೬೫ರಿಂದ ಈ ಹಳ್ಳಿಯ ಕಾನ್‌ಮೂಲೆ ಗುಡ್ಡದಲ್ಲಿ ಸತತ ಪರಿಶ್ರಮದ ಪರಿಣಾಮ ಹೊಸ ತಲೆಮಾರಿನ ನಿತ್ಯ ಹರಿದ್ವರ್ಣ ಜಾತಿಯ ಮರ, ಗಿಡಗಳು ಬೆಳೆದಿವೆ. ಬೋಳು ಬಯಲಿಗೆ ಹಸಿರು ಬಂದಿದೆ. ನೈಸರ್ಗಿಕವಾಗಿ ಪಶು ಪಕ್ಷಿಗಳ ನೆರವಿನಿಂದ ನೂರಾರು ಜಾತಿಯ ಗಿಡಗಳು ಬೆಳೆದಿವೆ. ಮನಮನೆ ಕಾನ್‌ಮೂಲೆ ಗುಡ್ಡಕ್ಕೆ ಕಾಡಿನ ಆಸ್ತಿ ಮರಳಿ ದಕ್ಕಿದೆ. 'ನಮ್ಮ ಕಾನು' ಅಭಿಮಾನದ ಮಾತು ಮನಮನೆಯಲ್ಲಿ ಕೇಳತೊಡಗಿದೆ. ದಟ್ಟ ಕಾಡಿನಲ್ಲಿ ಮಾತ್ರ ಕಾಣಸಿಗುವ ಅರಿಶಿನ ಗುರಿಗೆ ಸಸ್ಯಗಳೂ ಅಧಿಕ ಗಾತ್ರದ ೧೦–೧೫ ಗಿಡಗಳನ್ನು ಇಲ್ಲಿ ನೋಡಬಹುದು. ಹೀಗೆಯೇ ೪೫ ಎಕರೆ ನೈಸರ್ಗಿಕ ಕಾಡು ಸಂಮೃದ್ಧವಾಗಿದೆ. ಯಶಸ್ಸಿನ ಅನುಭವದಿಂದ ಕಳೆದ ಹದಿನೈದು ವರ್ಷಗಳ ಈಚೆಗೆ ಗ್ರಾಮದ ಕ್ವಾಟೆಗುಡ್ಡೆ ಎಂಬಲ್ಲಿ ಮತ್ತೆ ಹೊಸದಾಗಿ ೧೫ ಎಕರೆ ಕಾಡನ್ನು ಇಂತಹುದೇ ಪ್ರಯತ್ನದಿಂದ ಬೆಳೆಸಲಾಗಿದೆ. ಕಳೆದ ೪೫ ವರ್ಷಗಳಲ್ಲಿ ಕಾಡು ಬೆಳೆಸುವ ನಿರ್ಧಾರದಲ್ಲಿ ಚಾಚುತಪ್ಪದೇ ಮುಂದುವರಿದ ಹಳ್ಳಿಯಲ್ಲಿ ಈಗ ೫೦ ಎಕರೆ ನೈಸರ್ಗಿಕ ಅರಣ್ಯ ಹಣದ ವ್ಯಯವಿಲ್ಲದೆ ಬೆಳೆದಿದೆ. ಈಗ ಗ್ರಾಮಸ್ಥರು ಯಾರಾದರೂ ಸತ್ತರೆ ಶವ ಸಂಸ್ಕಾರಕ್ಕೆ ಕಾಡಿನ ಉಚಿತವಾಗಿ ಕಟ್ಟಿಗೆ ನೀಡಲಾಗುತ್ತದೆ.

ಮನಮನೆ ಕಾಡಿನಲ್ಲಿ ಈಗ ಕಟ್ಟಿಗೆ ಕಡಿಯುವ ಸದ್ದು ಬಂತು ಎಂದರೆ ಹಳ್ಳಿಯಲ್ಲಿ ಯಾರೊ ಹೆಣವಾದರೂ ಎಂದೇ ಅರ್ಥ. ಅದಿಲ್ಲದಲ್ಲಿ ಯಾರೂ ಕಟ್ಟಿಗೆ ಕಡಿಯುದಿಲ್ಲ. ಜಾತಿ ಸಮುದಾಯದ ಪ್ರಾಬಲ್ಯಗಳು ನಿಸರ್ಗ ಸಂರಕ್ಷಣೆಯ ನಿಯಮಗಳ ಕಟ್ಟುನಿಟ್ಟಿನ ಪಾಲನೆಗೆ ಇಲ್ಲಿ ಹೆಚ್ಚು ಅನುಕೂಲವಾಗಿವೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಬೇರೆ ಬೇರೆ ಜಾತಿ ವರ್ಗದ ಜನ ಅನ್ಯೂನ್ಯವಾಗಿ ಬದುಕಿದ್ದರೂ ಒಂದೊಂದು ಜಾತಿಯವರೂ ಪ್ರತ್ಯೇಕ ಹಬ್ಬ, ಉತ್ಸವಗಳನ್ನು ನಡೆಸುವದು ವಾಡಿಕೆ. ಊರಿನ ಕೋಲಕಾರ, ಮುಖಂಡರು ಇಡೀ ಹಳ್ಳಿಯ ಆಂತರಿಕ ಆಡಳಿತ ವ್ಯವಸ್ಥೆಯನ್ನು ನಿಯಮಾನುಸಾರ ಮುನ್ನಡೆಸಿಕೊಂಡು ಹೋಗುವದು ಜಾಯಮಾನ. ಗಡಿಪೂಜೆ, ಹೊಳೆಹಬ್ಬ, ಆದ್ರೆ ಮಳೆ ಹಬ್ಬ, ಭೂತನ ಹಬ್ಬ ಮುಂತಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹಳ್ಳಿ ಹಿರಿಯರ ಮಾರ್ಗದರ್ಶನದಲ್ಲಿ ಜಾತಿ ಗುಂಪುಗಳು ಒಂದಾಗಿ ಕೂಡಿ ನಲಿಯುವ ಸಂಭ್ರಮವಿದೆ, ಜಾನಪದ ಸೊಗಸಿದೆ. ಧಾರ್ಮಿಕವಾಗಿ, ಸಾಂಪ್ರದಾಯಿಕವಾಗಿ ನಡಾವಳಿ. ಪರಂಪರೆಯ ಪಾಲನೆಯ ಒಂದು ಭಾಗವಾಗಿ ಹೀಗೆ ಕೂಡುವ ಹಳ್ಳಿಗರ ಮನಸ್ಸು

ಇನ್ನೊಂದು ಅರ್ಥದಲ್ಲಿ ಜಾತಿ, ಸಮುದಾಯಗಳ ಒಗ್ಗಟ್ಟನ್ನು ಸಾಧಿಸುತ್ತದೆ. ಇಂತಹ ಯಶಸ್ಸು ಅರಣ್ಯ ಸಂರಕ್ಷಣೆಯ ನಿಯಮ ಪಾಲನೆಗೆ ಇಲ್ಲಿ ಅನುಕೂಲವಾಗಿದೆ. ಇಲ್ಲಿ ಅರಣ್ಯಾಭಿವೃದ್ಧಿಯ ಸಹಭಾಗಿತ್ವ ಒಂದು ಪರಿಕೀಯ ಶಾಸನದ ಹೇರಿಕೆಯಾಗದೇ ಸಮುದಾಯದ ಒಳ ಮನಸ್ಸಿನ ಹುಟ್ಟಾಗಿದೆ. ಗೆಲುವಿಗೆ ನೆರವಾಗಿದೆ.

**'ಮಧುಗಿರಿಯ ಪೌಳಿ'**

**ಇಲ್ಲಿ ಕಾಡು ಕಾಯುವದು ದೇವರ ಪಾಳಿ !**

ಗೊಲ್ಲ ಸಮುದಾಯದವರು ಮಧುಗಿರಿಯ ಪೌಳಿಯ ತಮ್ಮಣ್ಣ ದೇವರೆದುರು ವರ್ಷಕ್ಕೊಮ್ಮೆ 'ಪರ' ನಡೆಸುತ್ತಾರೆ. ಸುತ್ತಲಿನ ಸಮುದಾಯದವರು ಆ ವರ್ಷ ಬೆಳೆದ ಫಸಲನ್ನು ದೇವರಿಗೆ ಹರಕೆಯಾಗಿ ಅರ್ಪಿಸುವ ಸಂದರ್ಭ ಇದು, ಊರೆಲ್ಲ ಉತ್ಸಾಹದಲ್ಲಿ ಭಾಗಿಯಾಗುತ್ತದೆ. ತಮ್ಮಣ್ಣ ದೇವರು ತಮ್ಮ ಹೊಲದ ಬೆಳೆಯನ್ನು ಕಾಡು ಪ್ರಾಣಿಗಳಿಂದ ಸಂರಕ್ಷಿಸುತ್ತಾನೆ ಎಂಬ ನಂಬಿಕೆಯಿದೆ. ಇದಕ್ಕೆ ಪ್ರತಿಯಾಗಿ ಸುಗ್ಗಿ ಬಳಿಕ 'ಪರ' ಪೂಜೆ ಅರ್ಪಣೆ. ಮಧುಗಿರಿಯ ಬೋಳು ಬಂಡೆ ಬೆಟ್ಟಗಳ ಪೈಕಿ ಪೌಳಿಯಲ್ಲಿ ಮಾತ್ರ ಹಸುರಿದೆ. ಕಾಡು ಬೆಳೆದಿದೆ. ಇದು ದೇವರ ಕಾಡು ಎಂಬ ನಂಬಿಕೆಯಿಂದ ಶತಮಾನಗಳಿಂದ ಸಂರಕ್ಷಿತವಾಗಿದೆ. ಇಲ್ಲಿ ಗಿಡ ಕಡಿದವರಿಗೆ ಹಿಂದೆ ಅನೇಕ ತೊಂದರೆ ತಾಪತ್ರಯ ಎದುರಾಯಿತೆಂದು ಜನ ಕಾಲದ ಕತೆ ಹೇಳುತ್ತಾರೆ. ಇಂದಿಗೂ ನಂಬಿಕೆ ಮುಂದುವರಿದಿದ್ದು ಯಾರೊಬ್ಬರೂ ಪೌಳಿಯ ಗಿಡ ಕಡಿಯುವದಿಲ್ಲ. ಇಲ್ಲಿ ಚುಜ್ಜಲಿ, ಆಲೆ, ಕಕ್ಕೆ , ಬೇವು, ಜವಧಾರಿ ಮುಂತಾದ ಗಿಡಗಳು ೧೦ ಎಕರೆ ಕ್ಷೇತ್ರದಲ್ಲಿ ಬೆಳೆದಿವೆ. ಕೃಷಿ ಬಳಕೆ, ಜಾನುವಾರು, ಉರುವಲು ಹೀಗೆ ಯಾವ ಕಾರಣಕ್ಕೂ ಇಲ್ಲಿ ಮರ ಕಡಿಯಬಾರದೆಂಬ ಕಟ್ಟುನಿಟ್ಟಿನ ನಿಯಮವಿದೆ. ಶತಮಾನಗಳಿಂದ ಪೌಳಿ ಕಾಯುವ ಪಾಳಿ ಇಲ್ಲಿ ತಮ್ಮಣ್ಣ ದೇವರದ್ದಾಗಿದೆ ! ಭಯದಿಂದ ಹಸುರು ಸಂರಕ್ಷಿತವಾಗಿದೆ.

# ಹೈಗದ ಬೆಟ್ಟ

## ಕೃಷಿಕರ ಅಕ್ಕರೆಯ ಮೊನೋಕಲ್ಚರ್ ತೋಪು

ರಾಜ್ಯದ ಪಶ್ಚಿಮ ಘಟ್ಟದ ನೆಡುತೋಪನ್ನು ಈಗ ಅಸ್ಟ್ರೇಲಿಯನ್ ಮೂಲದ ಸಸ್ಯಗಳು ಆಳುತ್ತಿವೆ. ಕೃಷಿ ಅನುಕೂಲಕ್ಕೆಂದು ರೈತರೇ ಬೆಳೆಸಿದ ದೇಸೀ ಸಸ್ಯದ ಬಹೂಪಯೋಗಿ ನೆಡುತೋಪಿನ ಮಲೆನಾಡು ಮಾದರಿ ಇಲ್ಲಿದೆ.

ಪುಟ್ಟ ವಿಮಾನವೇರಿ ಪಶ್ಚಿಮ ಘಟ್ಟದ ಮೇಲೆ ತಿರುಗಾಡುತ್ತ ಸಸ್ಯಗಳ ಮುಖ ನೋಡಬೇಕು. ಅದು ಅಸಾಧ್ಯವಾದರೆ ನಿಮ್ಮೂರಿನ ಎತ್ತರದ ಗುಡ್ಡ ಏರಿ ದೂರದ ಕಾಡುಗಳತ್ತ ಕಣ್ಣಾಯಿಸಬೇಕು. ಜೀವ ವೈವಿಧ್ಯ ವಿಚಾರ ಸಂಕಿರಣದ ಸಂಶೋಧನಾ ಪ್ರಬಂಧಗಳಿಗೂ ಎದುರು ಕಾಣುವ ಮನೋ ಕಲ್ಚರ್ ಎಂಬ ವಿಲಕ್ಷಣ ಮುಖಕ್ಕೂ ಅಜಗಜಾಂತರ ವ್ಯತ್ಯಾಸ. ಕಾಡಿನ ಸ್ವರೂಪವನ್ನು ನೆಡುತೋಪು ವಿರೂಪಗೊಳಿಸಿದ ದೃಶ್ಯ. 'ಕಾರಣಾಂತರದಿಂದ ಕಾಡು ನಶಿಸಿದ ಜಾಗದಲ್ಲಿ ನೆಡುತೋಪು ಬೆಳೆಸುವದು ತಪ್ಪಲ್ಲ, ಅಲ್ಲಿ ಸಸ್ಯ ವೈವಿದ್ಯದ ಮಾನ ಕೊಂಚ ಕಾಪಾಡಿ' ಕರ್ನಾಟಕ ಅರಣ್ಯ ಇಲಾಖೆಯ ಕಿವಿ ಹಿಂಡುವ ಕೆಲಸ ಎರಡು ದಶಕಗಳಿಂದ ನಡೆದೇ ಇದೆ. ಆದರೂ ಸಾಮಾಜಿಕ ಅರಣ್ಯ, ಪಶ್ಚಿಮ ಘಟ್ಟ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ;ಅಕೇಸಿಯಾ ಇಲಾಖೆ' ಎನ್ನುವಂತೆ ಅರಣ್ಯ ಇಲಾಖೆ ವರ್ತನೆ. ಆಸ್ಟ್ರೇಲಿಯನ್ ಮೂಲದ ಸಸ್ಯಗಳಿಗೆ ಇವತ್ತು ಕರ್ನಾಟಕದ ನೆಡುತೋಪಿನ (ಕ್ಷಮಿಸಿ ಜಗತ್ತಿನ ಉಷ್ಣವಲಯದ ಸ್ಥಿತಿಯೂ ಬೇರೆ ಅಲ್ಲ) ಸಿಂಹಪಾಲು ಮೀಸಲು.



ಕೃಷಿಕರ ಪ್ರೀತಿಯ
ಹೈಗದ ಕಾಡು

ದೇಸಿ ಸಸ್ಯಗಳ ನೆಡುತೋಪು ಸಾಧ್ಯವಿಲ್ಲವೇ?. ಬೇಗ ಬೆಳೆಯುವ, ಕೃಷಿಕರಿಗೆ ಬಹೂಪಯೋಗಿಯಾದ, ಕಡಿದಂತೆ ಮತ್ತೆ ಚಿಗುರುವ ಸಸ್ಯಗಳನ್ನು ನೀವೇಕೆ ಬೆಳೆಸುತ್ತಿಲ್ಲ?. ಪಶ್ಚಿಮ ಘಟ್ಟದ ಸಾವಿರಾರೂ ಸಸ್ಯಜಾತಿಗಳ ಪೈಕಿ ಕೆಲವನ್ನಾದರೂ ನೆಡುತೋಪಿಗಾಗಿ ಏಕೆ ಆಯ್ದುಕೊಳ್ಳಲಿಲ್ಲ?. ದೇಸೀಯ ಸಸ್ಯಗಳ ನೆಡುತೋಪು ಸಾಧ್ಯತೆ ಬಗೆಗೆ ಅರಣ್ಯ ಸಂಶೋಧನಾ ವರದಿಗಳಿವೆಯೆ?. ಪಲ್ಪ್‌ವುಡ್ (ತಿರುಳು ಕಟ್ಟಿಗೆ) ಪ್ರಾಯೋಜಿತ ಈ ನೀತಿ ಶೋಭೆಯಲ್ಲ ಎಂಬುದೆಲ್ಲ ಸವಕಲು ಪ್ರಶ್ನೆ. ಆಗ ಅಧಿಕಾರಿಗಳು ಯಥಾ ಪ್ರಕಾರ 'ಸಮ್ಮಿಶ್ರ ನೆಡುತೋಪು ಮಾದರಿ' ಬಗೆಗೆ ಹೇಳುತ್ತಿದ್ದರು. ಕೊನೆಗೆ ನೋಡಿದಾಗೆಲ್ಲ ಅದೇ ಅಕೇಶಿಯಾ, ಗಾಳಿ, ನೀಲಗಿರಿ, ಸಿಲ್ವರ್ ಓಕ್, ಪೈನಸ್, ಸಾಗವಾನಿ (ಇದೊಂದು ಮಾತ್ರ ದೇಸೀಯ) ಮುಖಗಳು.

ವಿದೇಶಿ ಹಣ, ವಿದೇಶಿ ತೋಪಿನ ಇಲಾಖೆಯ ಸ್ವರೂಪ ಕೊಂಚ ಮರೆಯೋಣ. ಸ್ಥಳೀಯ ಹಳ್ಳಿಗರ ಸೃಷ್ಟಿಯ ಪ್ರಜ್ಞೆ ನೋಡುವಾಗ 'ಹೈಗದ ಬೆಟ್ಟ' ಪಕ್ಕನೆ ನೆನಪಾಗುತ್ತದೆ. ದಟ್ಟ ಹಸಿರಿನ ದಪ್ಪ ಎಲೆ, ನಿತ್ಯಹರಿದ್ವರ್ಣ, ನೇರಕ್ಕೆ ಬೆಳೆವ ಕಾಂಡ, ಸುಲಭಕ್ಕೆ ನುಸುಳಲು ಅಸಾಧ್ಯವಾದ ದಟ್ಟನೆ, ಬೆಟ್ಟದ ಹೊಕ್ಕರೆ ನಡು ಬೇಸಿಗೆಯಲ್ಲಿ ತಂಬೆಲರ ಖುಷಿ, ಇದು ಹೈಗ (Hopea Wightiana) ವಿಶೇಷ. ಈಗಾಗಲೆ ನೆಡುತೋಪಿಗೆ ಬಳಕೆಯಾದ ವಿದೇಶಿ ಸಸ್ಯಗಳ ಪೈಕಿ ನೀಲಗಿರಿ ಹೊರತು ಪಡಿಸಿ ಇನ್ನುಳಿದವೆಲ್ಲ ೧೦–೧೫ ವರ್ಷದ ಒಂದು ಕಟಾವು ಬಳಿಕ ಚಿಗುರುವದಿಲ್ಲ. ಮತ್ತೆ ಸಸಿ ನಾಟಿಯಿಂದ ಶ್ರೀಗಣ ಆರಂಭ, ಸಸಿ ಬೆಳೆಸುವದು, ಬುಲ್ಡೋಜರ್, ಕಾವಲು ಎಂದು ಹೆಕ್ಟೇರಿಗೆ ೧೫–೨೫ ಸಾವಿರ ಖರ್ಚಿನ ಪಟ್ಟಿ. ಅದರೆ ಇದು ನಾಟಿ ಮಾಡಿದ ಸಸಿಯಲ್ಲ, ರಕ್ಷಣೆಗೆ ಪೈಸಾ ಖರ್ಚಿಲ್ಲ, ನೈಸರ್ಗಿಕವಾಗಿ ಅಲ್ಲೆ ಹುಟ್ಟಿದ್ದನ್ನು ಹೆಚ್ಚಿನ ಶ್ರಮವಿಲ್ಲದೆ ಪೋಷಿಸಿದ ಬಳಿಕ ಕಂಡ ಮನೋಕಲ್ಚರ್ !.

ಸೊಪ್ಪನ್ನು ಮಳೆಗಾಲದಲ್ಲಿ ಕತ್ತರಿಸಿದರೆ ಮರ ಸಾಯುತ್ತದೆ. ಹೀಗಾಗಿ ಮತ್ತಿ, ಹುನಾಲು, ಮಾವು ಮುಂತಾದ ಮರಗಳ ಟೊಂಗೆಯನ್ನು ಮಳೆಗಾಲದಲ್ಲಿ ಕಡಿಯಬಾರದು ಎನ್ನುತ್ತಾರೆ. ರೈತರ ಹೈಗ ಹಾಗಲ್ಲ. ಕತ್ತಿಯ ಪ್ರಹಾರವನ್ನೂ, ಎಲ್ಲ ಕಾಲದಲ್ಲೂ ತಡೆದುಕೊಂಡು, ಮತ್ತೆ ಮತ್ತೆ ಚಿಗುರುವ ದೊಡ್ಡ ಗುಣ. ಪರಿಸರದ ಮಾತಾಡುತ್ತ ಕೊನೆಗೆ ಕಡಿಯುವ ವಿವಾದಾಸ್ಪದ ವಿಚಾರ ಏಕೆ? ಎನ್ನಬಹುದು. ಇದು ರೈತರು ಸೊಪ್ಪು, ಗೊಬ್ಬರಕ್ಕಾಗಿ ಬಳಸುವ ಮರ. 'ಬೆಳೆಸಿ – ಬಳಸುವ' ಕೃಷಿಕರ ನೆಂಟಸ್ತಿಕೆ. ಮನೆ

ನಿರ್ಮಾಣಕ್ಕೆ ಗಿಡದ ಕಾಂಡ ಎಳೆಯಾಗಿ ಬಳಕೆ. ಕೃಷಿಕರ ಮಾತಿನಲ್ಲಿ ಹೇಳುವದಾದರೆ' ಹೊಗೆ ತಾಗುವಲ್ಲಿ ಹೈಗದ ಎಳೆ ಬಳಸಿದರೆ ಕಬ್ಬಣದಷ್ಟು ಗಟ್ಟಿ'. ಬೇಲಿಗೂಟ, ಮಾಳದ ಕಂಬ, ಕೃಷಿ ಉಪಕರಣ, ತೆರಕು ಹೀಗೆ ಅವಶ್ಯಕತೆ ಹತ್ತಾರು ತರಹ.

ಯಕ್ಷಗಾನದ ವೇಷದಾರಿಯ ಬುಜಕೀರ್ತಿ ಹೋಲುವ ಜುಮ್ಮಿನ ಮರದ ಮುಳ್ಳು ಗೊತ್ತಲ್ಲ ?. ಹಾಗೇ ಹೈಗ ಬೆಳೆಯುವಲ್ಲಿ ಕಡಿದಾದ ಕಿರಿ ಕಿರಿ ಗುಡ್ಡಗಳು. ಮೋಡಕ್ಕೆ ರಂಧ್ರ ಕೊರೆದಂತೆ ಇಲ್ಲಿ ೨೫೦೦-೩೦೦೦ ಮಿಲಿ ಮೀಟರ್ ಮಳೆ. ಅಬ್ಬರದ ಮಳೆಗೆ ಭೂಸವಕಳಿ ಜಾಸ್ತಿ. ತಡೆಯ ಛಲ ಹೈಗ. ಇದಕ್ಕೆ ಕೆಟ್ಟ ಮಣ್ಣಿನಲ್ಲೂ ಸುಲಭಕ್ಕೆ ಬೆಳೆವ ತಾಕತ್ತು. ಅಡಿಕೆ ತೋಟಕ್ಕೆ ಗೊಬ್ಬರ ಹಾಕಿದ ಬಳಿಕ ಹೈಗದ ಸೊಪ್ಪು ಮುಚ್ಚುವಕ್ರಮ, ಇಷ್ಟೆಲ್ಲ ಮಳೆ ಸುರಿಯುವಲ್ಲಿ ಬೇರೆ ಮರದ ಸೊಪ್ಪು ಹಾಕಿದರೆ ಎಲ್ಲ ಕೊಳೆತು, ಗೊಬ್ಬರವೂ ನೀರುಪಾಲು. ಹೈಗದ ಎಲೆಯದು ಮಣ್ಣು ಸಂರಕ್ಷಣೆ ವಿಚಾರದಲ್ಲಿ ಪಾಲಿಥೀನ್ ಹಾಳೆಯ ಹಾಸಿನಂತೆ. ಭರ್ತಿ ಮಳೆಗಾಲದ ತನಕವೂ ಮೈಬಗ್ಗಿಸಿ (ಮೈಕರಗಿಸದ !) ಸೇವೆ. ಮಣ್ಣಿನ ಫಲವತ್ತತೆ ಬಚಾವು, ಹಾಗಾಗಿ ರೈತರಲ್ಲಿ ಶತಮಾನದಿಂದಲೂ ಈ ಗಿಡ ಪೋಷಣೆ ಪ್ರೀತಿ.

ಉತ್ತರ ಕನ್ನಡದ ಸಿದ್ಧಾಪುರ ತಾಲೂಕಿನ ಕ್ಯಾದಗಿ ಅರಣ್ಯ ವಲಯದಲ್ಲಿ ಹೈಗ ಹೇರಳ. ಅಡಿಕೆ ಕೃಷಿಕರ ಇಲ್ಲಿನ ಸೊಪ್ಪಿನ ಬೆಟ್ಟವಂತೂ ಹೈಗಮಯ. ಒಂದು ಎಕರೆಯ ಸಸ್ಯಜಾತಿಗಳ ಗಣತಿ ನಡೆಸಿದರೆ ಶೇಕಡಾ ೮೫-೯೦ರಷ್ಟು ಇದೊಂದೇ !. ಸೊಪ್ಪಿನ ಬೆಟ್ಟಗಳಲ್ಲಿ ಸಾಮಾನ್ಯ ಕಂಡು ಬರುವ ಮತ್ತಿ, ಹುನಾಲು, ಕವಲು, ಹೊನ್ನೆ, ಅಣಲೆ, ನೇರಲು ಇಲ್ಲಿಲ್ಲ. ಏಕ ಜಾತಿ ಸಸ್ಯ ಬೆಳೆದಾಗ ಸಸ್ಯಕ್ಕೆ ರೋಗ ತಗಲುವ ಅವಕಾಶ ಜಾಸ್ತಿ ಎಂಬ ಮಾತಿದೆ. ಇಲ್ಲಿ ಹೇಳಿಕೊಳ್ಳುವ ರೋಗವಿರದಿದ್ದರೂ ಮರದ ಕಾಂಡ ಕೊರೆವ ಹುಳುವಿನ ಬಾದೆಯಿದೆ. ಹುಳು ಸಣ್ಣ ಸಣ್ಣ ರಂಧ್ರ ಕೊರೆದಲ್ಲಿ ಅಂಟು ಸ್ರವಿಸಿ ಕೆಲ ವರ್ಷಗಳಲ್ಲಿ ಮರ ಸಾಯುತ್ತದೆ. ಹಾನಿ ನಗಣ್ಯ ಪ್ರಮಾಣದಲ್ಲಿದೆ. ಬೆಂಕಿಗೆ ಹೆದರುವ ಗುಣವಿದೆ, ನಿತ್ಯಹರಿದ್ವರ್ಣ ಅರಣ್ಯ ಪ್ರದೇಶದ ಮರವಾದ್ದರಿಂದ ಬೆಂಕಿ ಪ್ರಮೇಯ ಸ್ವಾಭಾವಿಕವಾಗಿ ಕಡಿಮೆ. ಕಾಡಲ್ಲಿ ೨-೪ ಅಡಿ ಸುತ್ತಳತೆಯ ಎತ್ತರದ ಮರ ಕಾಣಸಿಗುತ್ತದೆ. ರೈತರ ಬೆಟ್ಟದಲ್ಲಿ ಮಾತ್ರ ೨೫-೩೦ ಅಡಿಗಳ ಸೀಮಿತ ಎತ್ತರ, ನಿರಂತರ ಕಡಿತದ ಪರಿಣಾಮ. ಇನ್ನೊಂದು ಕುತೂಹಲಕರ ವಿಚಾರವೆಂದರೆ ಕಾಡಲ್ಲಿ ಬೆಳೆವ ಒಂದು

ಜಾತಿಯ ಅಣಬೆಯನ್ನು ಕೃಷಿಕರು ಹೈಗದ ಅಣಬೆ ಎನ್ನುತ್ತಾರೆ. ಇದು ಹೈಗದ ಮರದ ಬುಡದಲ್ಲಿ ಮಾತ್ರ ಬೆಳೆಯುತ್ತದಾದ್ದರಿಂದ ಈ ಹೆಸರು ಬಂದಿದೆ.

ಅರಣ್ಯ ನೆಡುತೋಪಿನ ಪಾಠವನ್ನು ಇಷ್ಟು ಕಾಲ ವಿದೇಶಿ ತರಬೇತಿ. ವಿದೇಶಿ ಸಸ್ಯ, ಅರಣ್ಯಾದರಿತ ಉದ್ದಿಮೆಗಳಿಂದ ಕಲಿಯಲಾಗಿದೆ. ಮಣ್ಣಿನಲ್ಲಿ ಜನಿಸಿದ ದೇಸೀ ಸಸ್ಯದ ಇಂಥ ನೆಡುತೋಪು ಮಾದರಿ ಪಾಠಗಳು ಅರಣ್ಯ ವಿದ್ಯಾಲಯದಲ್ಲೂ ತುಂಬ ವಿರಳ. ಕರಾವಳಿ, ಪಶ್ಚಿಮಘಟ್ಟದಲ್ಲೆಲ್ಲ ಬೆಳೆವ ಗುಣದ ಹೈಗದಿಂದ ಕಲಿಯಬೇಕಾದುದು ಸಾಕಷ್ಟಿದೆ. ಆದರೆ ನಾಲ್ಕು ಗೋಡೆ ಈಚೆ ಬಂದು, ನೆಲ ಇಳಿದು ಬೆಟ್ಟ ಹತ್ತಿ ಪಾಠ ಕಲಿಯಬೇಕು. ಮನುಷ್ಯ ತನಗೆ ಬೇಕಾದ ಜಾತಿ ಗಿಡವನ್ನು ಬೆಳೆಸಿದರೆ, ನೆಲ ಪರಿಸರಕ್ಕೆ ಬೇಕಾದ ಗಿಡವನ್ನು ನಾಜೂಕಾಗಿ ಬೆಳೆಸುತ್ತದೆ. ಇಲ್ಲಿ ಮಾತ್ರ ಮನುಷ್ಯರಿಗೂ, ಪರಿಸರಕ್ಕೂ ಹೈಗವೇ ಅದದ್ದು ವಿಶೇಷ.

**ಅಣಲೆಯ ಸಸಿ ಬೆಳೆಸುವ ಜಾನುವಾರುಗಳು !**

ಒಮ್ಮೆ ಅರಣ್ಯ ಇಲಾಖೆಯ ನರ್ಸರಿಯಲ್ಲಿ ಸಾವಿರಾರು ಅಣಲೆಕಾಯಿ ತಂದು ಸಸಿ ಮಾಡಲು ಮಡಿಯಲ್ಲಿ ಹಾಕಿದ್ದರು. ಒಂದೇ ಒಂದು ಕಾಯಿ ಮೊಳಕೆಯೊಡೆಯಲಿಲ್ಲ. ಇದೇಕೆ ಸಸಿಯಾಗಲಿಲ್ಲ ಎಂದು ಇಲಾಖೆಯವರಿಗೆ ಆಘಾತ. ಅಣಲೆ ಕಾಯಿ ಸಸಿಯಾಗಿ ಬೆಳೆಯಲು ಕಾಯಿಯ ದಪ್ಪತೊಗಟೆ ಒಡೆಯಬೇಕು ಎಂದು ದನಗಾಹಿಯೊಬ್ಬರು ಬೀಜ ರಹಸ್ಯ ತಿಳಿಸಿದರು. ಮರದಿಂದ ಸಾವಿರಾರು ಕಾಯಿ ನೆಲದಲ್ಲಿ ಬಿದ್ದು ರಾಶಿಯಾದರೂ ಇವೆಲ್ಲ ಮೊಳಕೆಯೊಡೆಯುವದಿಲ್ಲ, ನಮ್ಮ ಜಾನುವಾರುಗಳು ಕಾಡಲ್ಲಿ ಮೇವಿಗಾಗಿ ಅಲೆಯುವಾಗ ಅವುಗಳ ಕಾಲ್ಗೊರಸಿನ ಭಾರ ಅಣಲೆ ಕಾಯಿಯ ಮೇಲೆ ಬಿದ್ದು ದಪ್ಪ ತೊಗಟೆ ಒಡೆಯುತ್ತದೆ. ಅಣಲೆ ನಂತರ ಮೊಳಕೆಯೊಡೆದು ಬೆಳೆಯುತ್ತವೆ !. ಮಾತು ಕೇಳಿದ ಅರಣ್ಯ ನರ್ಸರಿಯವರು ಮಾರನೆ ದಿನ ಪುಟ್ಟ ಮರದ ಸುತ್ತಿಗೆ ಹಿಡಿದರು, ಅಣಲೆಕಾಯಿ ದಪ್ಪ ಕವಚ ಒಡೆದು ಬೀಜ ಸಂಸ್ಕಾರಕ್ಕೆ ನಿಂತರು, ಪ್ರಯೋಗ ಯಶಸ್ವಿಯಾಯಿತು, ಸಸಿ ಬೆಳೆವಣಿಗೆ ಸುಲಭವಾಯಿತು.

# ಮಲೆನಾಡು ಗುಡ್ಡದಲ್ಲಿ ಅರಣ್ಯಜ್ಞಾನದ ಹತ್ಯಾಕಾಂಡ

**ಕೃಷಿ ಭೂಮಿ ಏಡಿ ನಿಯಂತ್ರಣಕ್ಕೆ ಮತ್ತಿ ಸೊಪ್ಪಿಲ್ಲ, ಭತ್ತದ ಬೆಳಕೊಳೆ ತಡೆಯಲು ಮುಕ್ಕಡನ ಟೊಂಗೆಯಿಲ್ಲ. ನಾಟಿ ಮಾಡಿದ ಗದ್ದೆ ಕೆಂಪೇರಿ ಮುನಿಸಿ ಕೂತಾಗ ತೂಬರ ಗೂಟ ಊರುವ ಚಿಕಿತ್ಸೆಗೆ ಗಿಡವಿಲ್ಲ. ಏಕನಾಯಕ, ಸೊಗದೇ ಬೇರು, ಮದ್ದರಸ, ಮಂಗನಬಳ್ಳಿ, ನೆಲ್ಲಿ, ಅಣಲೆ ಸರ್ಪಗಂಧಿ ಎಲ್ಲವೂ ಬುಲ್ಡೋಜರ್ ಪ್ರಹಾರದಲ್ಲಿ ನೋಡು ನೋಡುತ್ತಲೆ ಸರ್ವನಾಶವಾದವು !**

ಅಮೇರಿಕಾದ ಖ್ಯಾತ ಪರಿಸರ ತಜ್ಞ ಆಲ್ಡೋ ಲಿಯೋಪೋಲ್ಡ್ ಇಂದಿಗೆ ೭೦ ವರ್ಷ ಹಿಂದೆ ಜರ್ಮನಿ ಅರಣ್ಯ ನೆಡುತೋಪು ನೋಡಲು ಹೋಗುತ್ತಾರೆ. 'ಜರ್ಮನ್ನರು ಇಡೀ ಜಗತ್ತಿಗೆ ಕಾಡನ್ನು ಮೂಲಂಗಿ ನೆಡುವಂತೆ ನೆಡುವದನ್ನು ಕಲಿಸಿದ್ದಾರೆ. ಒಂದೇ ತಲೆಮಾರಿನಲ್ಲಿ ಇಡೀ ದೇಶದ ಕಾಡನ್ನು ಹೊಸ ಪ್ರಬೇಧವೊಂದರಿಂದ ಬದಲಾಯಿಸಿದ್ದಾರೆ' ಎಂದು ಉದ್ಗರಿಸುತ್ತಾರೆ. ನಮ್ಮ ಮಲೆನಾಡಿನ ಯಾವುದೇ ಗುಡಕ್ಕೆ ಬಂದರೆ ಲಿಯೋಪೋಲ್ಡ್ ಕಂಡ ಚಿತ್ರವೇ ಇದೆ. ಗುಡ್ಡಗಳಿಗೆಲ್ಲ ಏಕರೂಪ ಶಾಸನ, ಸಸಿಗಳಿಗೆ ಸಾಲಿನ ನಿವೇಶನ. ಇದು ಅಕೇಸಿಯಾ ಮೂರನೇ ತಲೆಮಾರಿನ ಆಡಳಿತ ಎಂದು ಶೀರ್ಥಹಳ್ಳಿ ಹಳ್ಳಿಗರು ಬೇಸರದಲ್ಲಿ ಹೇಳುತ್ತಾರೆ. ಅಲ್ಲಿ ಕಾಡು ಗುಡ್ಡದಲ್ಲಿ ಸಸಿ ನಾಟಿ ಚಾಲುವಾಗಿ ನಾಟಿ – ಕಾವಲು – ಕಟಾವು ಪುನರಾವರ್ತನೆ ನಡೆದು ಈಗ ಮೂರನೇ ಬಾರಿಗೆ ಅದೇ ಅರಣ್ಯ ಕೃಷಿ.



ನೈಸರ್ಗಿಕ ಕಾಡು ಕಡಿದು ಬೆಳೆಸಿದ ಸಾಗವಾನಿ

ಏಕಜಾತಿ ನೆಡುತೋಪು ನೈಸರ್ಗಿಕ ನೋಟಗಳನ್ನು ಮೂಲೆ ಗುಂಪಾಗಿಸಿದೆ. ಇಲ್ಲಿ ಮೂಲಂಗಿ ನೆಡುತ್ತಾರೋ? ಅಥವ ಬಟಾಟೆ ಬೆಳೆಯುತ್ತಾರೋ? ಬೇಲಿಯಂಚಿನಲ್ಲಿ ಅನುಮಾನ ಶುರುವಾಗುತ್ತದೆ. ನೈಸರ್ಗಿಕ ಗಿಡ ಕಡಿದು ಟ್ರ್ಯಾಕ್ಟರ್‌ನಲ್ಲಿ ಚೆಂದದ ಉಳುಮೆ. ಬೆಂಕಿ ಹಾಕಿ ಗಿಡಗಂಟಿಗಳ ಉಚ್ಚಾಟನೆ, ಕೃಷಿ ನೆಲದ ಹಾಗೇ ಕಾಡು ಭೂಮಿ ಪರಿವರ್ತನೆ. ಪಶ್ಚಿಮ ಘಟ್ಟದ ಸೂಕ್ಷ್ಮ ಅರಿಯದೇ ಭೂಸವಳಿಗೆ ಆಮಂತ್ರಣ, ಇಳಿಜಾರು ನೆಲದಲ್ಲೂ ನೆಡುತೋಪು ಬೆಳೆಸುವ ನಾಲಾಯಕ್ ವರ್ತನೆಗೆ ಇಲ್ಲಿ ಮೈಸೂರು ಪೇಪರ್ ಮಿಲ್ಸ್ ಹೆಸರುವಾಸಿ. ೧೫೦೦ ಸಸ್ಯ ಜಾತಿ ಬದುಕಿದ ನೆಲವೆಲ್ಲ ನಾಶ, ಗಿರಿ ಕಣಿವೆಗಳೆಲ್ಲ ಆಸ್ಟ್ರೇಲಿಯನ್ ಸಸ್ಯ ಕೋಟೆ. ಅಹಾರ, ಔಷಧ, ಕೃಷಿ, ಗುಡಿ ಕೈಗಾರಿಕೆಗೆ ನೆಲದ ಸಸ್ಯ ಬಳಸಿ ಬೆಳೆದ ಶತ ಶತಮಾನಗಳ ಅದ್ಭುತ ಜ್ಞಾನ ಪರಂಪರೆ ಅಕೇಸಿಯಾ ಎದುರು ಪರದೇಸಿ, ತಾಯ್ನೆಲದ ಸಸ್ಯಸಿರಿ ನಾಶದ ನೋವಿನ ಧ್ವನಿ ಇವತ್ತಿಗೂ ಪ್ರತಿ ಗುಡ್ಡ ಗುಡ್ಡಗಳ ಮಾರ್ಧನಿ.

ಇಪ್ಪತ್ತು ವರ್ಷ ಹಿಂದೆ ಕರ್ನಾಟಕ ಸರಕಾರ ಎಮ್ ಪಿ ಎಮ್‌ಗೆ ಅರಣ್ಯ ಭೂಮಿ ಹಸ್ತಾಂತರಿಸಿದ್ದೇ ಎಲ್ಲಕ್ಕೂ ಮೂಲ. ಕಾಗದ ಕಾರ್ಖಾನೆ ಫಲ್ಪ್‌ವುಡ್‌ಗೆ ಕೈಗಾರಿಕಾ ತೋಪು ಬೆಳೆಸಲು ಗುಡ್ಡಗಳಿಗೆ ಬುಲ್ಡೋಜರ್ ದಂಡಯಾತ್ರೆ ನಡೆಸಿತು. ಅಗಕೇಸಿಯಾ ಸಾಮ್ರಾಜ್ಯ, ಶರಾವತಿ ಟೇಲರೇಸ್ ಜಲ ವಿದ್ಯುತ್ ಯೋಜನೆಗೆ ನಾಶವಾದ ನೈಸರ್ಗಿಕ ಅರಣ್ಯಕ್ಕೆ ಪರಿಹಾರಾತ್ಮಕ ನೆಡುತೋಪು, ಸಾಮಾಜಿಕ ಅರಣ್ಯ ಯೋಜನೆ, ಉರುವಲು ಅಭಿವೃದ್ಧಿ ಎಂದು ಮತ್ತೆ ಮತ್ತೆ ತೀರ್ಥಹಳ್ಳಿಗೆ ಲಗ್ಗೆ, ಕೋಟೆ ವಿಸ್ತರಣೆ. ಗೋಮಾಳ, ಸಿ ಮತ್ತು ಡಿ ದರ್ಜೆ ಭೂಮಿ, ಸಸ್ಯ ದಟ್ಟನೆಯ ಸಾವಿರಾರು ಎಕರೆ ಕಾಡೆಲ್ಲ ನೆಡುತೋಪಿನ ಹೊಟ್ಟೆಬಾಕನಿಗೆ ಅರ್ಪಣೆ !.

ಕಣಿವೆ ನೆರಳಲ್ಲಿ ಸೂರು ಕಟ್ಟಿದವರ ಬದುಕಿನ ಹಗಲು ಕತ್ತಲು. ಹೆಗಲಿಗೆ ಚಿಂತೆಯ ಭಾರ. ನೇಗಿಲು ಹಿಡಿದ ರೈತರಿಗೆ ಮಣ್ಣಿನ ಸತ್ವ ಹೆಚ್ಚಿಸಲು ಪಣಗಾಟ, ಹೆಜ್ಜೆ ತಪ್ಪಿದ ಕೃಷಿ. ಮೇವಿಲ್ಲದ ಜನುವಾರು ಎಲುಬಿನ ಗೂಡು. ಹೈನುಗಾರಿಕೆಗೆ ಮರಣಾಂತಿಕ ಏಟು. ಕೃಷಿ ಭೂಮಿ ಏಡಿ ನಿತಂತ್ರಣಕ್ಕೆ ಮತ್ತಿ ಸೊಪ್ಪಿಲ್ಲ, ಭತ್ತದ ಬಿಳಿಕೊಳೆ ತಡೆಯಲು ಮುಕ್ಕಡನ ಟೊಂಗೆಯಿಲ್ಲ. ನಾಟಿ ಮಾಡಿದ ಗದ್ದೆ ಕೆಂಪೇರಿ ಮುನಿಸಿ ಕೂತಾಗ ತೂಬರ ಗೂಟ ಊರುವ ಚಿಕಿತ್ಸೆಗೆ ಗಿಡವಿಲ್ಲ. ಏಕನಾಯಕ, ಸೊಗದೇ ಬೇರು, ಮದ್ದರಸ, ಮಂಗನಬಳ್ಳಿ, ನೆಲ್ಲಿ, ಅಣಲೆ, ಸರ್ಪಗಂಧಿ ಎಲ್ಲವೂ ಬುಲ್ಡೋಜರ್

ಅಲುಗಿಗೆ ಸರ್ವನಾಶ. ಮೂಲಿಕೆಯಿಲ್ಲದೇ ನಾಟಿ ವೈದ್ಯ ಮನೆತನಕ್ಕೆ ಜ್ಞಾನ ಮರೆಯುತ್ತಿದೆ. ಮಳೆಗಾಲಕ್ಕೆ ಕಾಡು ಕೆಸವಿನ ಅಡುಗೆ ತಯಾರಿಸಲು ಆಸೆಪಟ್ಟ ಹೆಣ್ಮಗಳು ಬರೀಗೈಲಿ ವಾಪಸ್. ಪುಟ್ಟ ಬಾಲೆಯ ಜಡೆಗೆ ಸೀತಾಳೆ ಹೂವಿನ ದಂಡೆ ಸಿಗಲಿಲ್ಲ. ಬಾಯಾರಿಕೆಗೆ ನುರುಕಲು ದಂಟು ತಿನ್ನಬಹುದು, ಕುಮುಸಲು ಬಳ್ಳಿಯ ನೀರು ಕುಡಿಯಬಹುದು, ಬಚ್ಚಲು ಬಳ್ಳಿ ಹಾಕಿದರೆ ಹಸುವಿನ ಹಾಲು ಜಾಸ್ತಿ, ತ್ರಿಫಲ ಚೂರ್ಣಕ್ಕೆ ಏನೆಲ್ಲ ಬೇಕು ? ಅನುಭವ, ಶಿಕ್ಷಣ ಕಾಡು ಕಲಿಸಿದ ಪಾಠ.

ಹಳ್ಳಿಯ ೭೦ರ ಹಿರಿಯಜ್ಜನ ಕಿವಿಯಲ್ಲಿ ಆನೆ ಘೀಳಿಟ್ಟ ಧ್ವನಿ ಇದೆ. ಮೇವಿಗೆ ಹೋದ ಹಸು ಹೊಳೆ ಬದಿಯಲ್ಲಿ ಹುಲಿ ಪಾಲಾದದ್ದು ತೈಲ ಚಿತ್ರದಂತೆ ಕಾಣುತ್ತಿದೆ. ಸಂತೆ ತರಕಾರಿಗೆ ಹೋಗದೆ ಕಾಡು ಸೊಪ್ಪು, ಗಡ್ಡೆಗಳಲ್ಲೆ ಹದಿನೆಂಟು ಮಕ್ಕಳ ಸಾಕಿದ ಸಂಸಾರವಿದೆ. ಸಿಂಗಾರ ಹೂವಿನ ಜೇನು, ಸೀಗೆ ಹೂವಿನ ಜೇನು, ತೆಂಗರೆ ಬಳ್ಳಿಯ ಜೇನು, ಮತ್ತಿ ಹೂವಿನ ಜೇನು ಎಂದು ಕಾಡಿನ ಜೇನನ್ನು ರುಚಿಯಲ್ಲಿ ವಿಭಾಗಿಸಿದ ಪ್ರಾವಿಣ್ಯ ನಾಲಿಗೆ ತುದಿಗೆ ನಿಂತಿದೆ. ಈಗ ಬೆಟ್ಟಕ್ಕೆ ಬೆಟ್ಟವೇ ಮಂಗ ಮಾಯ. ನಂಬಿದ ಜನಕ್ಕೆ ತಲೆಮಾರಿಗೂ ಮಾಯದ ಗಾಯ. ಅರಣ್ಯ ಅನುಭವ ಮೆಟ್ಟುತ್ತ ವರ್ಷದಿಂದ ವರ್ಷಕ್ಕೆ ನೆಡುತೋಪು ನೆಗೆತ. ಕಾಡು ಹಣ್ಣಿನ ರುಚಿ, ಹೂವಿನ ಪರಿಮಳದ ಒಡನಾಟ ಅಸಾಧ್ಯ ಸ್ಥಿತಿ. ನವಿಲಿನ ನರ್ತನ, ಚಿಲಿಪಿಲಿ ಗಾನ ಸ್ತಬ್ಧ. 'ಹೂವಿನ ಪರಾಗಸ್ಪರ್ಶಕ್ಕೆ ಜೇನು ಬೇಕು' ಅಡಿಕೆ ತೋಟದ ಹೊಸ ಪರಿಸ್ಥಿತಿ !. ಮಲೆನಾಡಿನ ತೀರ್ಥಹಳ್ಳಿ ಮೊನೋಕಲ್ಚರ್ ದುಃಖದ ರಾಜದಾನಿ. ಆಸ್ಟ್ರೇಲಿಯನ್ ವೈರಸ್ ಜಾಡ್ಯಕ್ಕೆ ಅಲ್ಲಿನ ಸಿರಿ ಸಂಜೀವಿನಿ ಗುಡ್ಡವೆಲ್ಲ ಬಲಿ.



ಪಶ್ಚಿಮ ಘಟ್ಟದ ತುಂಬ ಈಗ ಅಕೇಸಿಯಾ ನೆಡುತೋಪು

ಮಕ್ಕಳು ನಿತ್ಯ ನೋಡುವದೆಲ್ಲ ಅಕೇಸಿಯಾ, ಗಾಳಿ, ಮ್ಯಾಜಿಯಂ, ನೀಲಗಿರಿ, ಫೈನಸ್ !. ಅರಣ್ಯ ಸಸ್ಯ ವೈವಿಧ್ಯ ನೋಡದೇ ನೆಡುತೋಪಿನ ಒಡನಾಟದಲ್ಲಿ ಹೊಸ ತಲೆಮಾರು ಬೆಳೆಯುತ್ತಿದೆ. ಔಷಧ, ಅರಣ್ಯ ಜ್ಞಾನ ಎಲ್ಲಿದೆ ? ತೀರ್ಥಹಳ್ಳಿ ಮಲೆನಾಡು ಜಾಗ್ರತ ಸಮುದಾಯದ ಕೆ.ಜಿ. ಶ್ರೀಧರರ ಆತಂಕ. ಕೃಷಿಕರು ಹಾಡಿಯಲ್ಲಿ ಸಂರಕ್ಷಿಸಿದ ಕಾಡಲ್ಲಿ ಇಂದು ಯಾವ ಯಾವ ಸಸ್ಯಜಾತಿ ತೀರ್ಥಹಳ್ಳಿಯಲ್ಲಿ ಬೆಳೆದಿತ್ತೆಂಬುದನ್ನು ನೋಡಬಹುದು, ಉಳಿದ ಜಾಗವೆಲ್ಲ ಮೊನೋಕಲ್ಚರ್ ತುಂಬಿದೆ ಕೋಣಂದೂರು ಸನಿಹದ ಸರು ಹಳ್ಳಿಗ ವಿ.ಎನ್. ಉಮೇಶ್ ಹೇಳುತ್ತಾರೆ. ಕ್ರಿ.ಶ, ೧೯೯೮ಲರಲ್ಲಿ ನಡೆದ ಒಂದು ಅಧ್ಯಯನ ಪ್ರಕಾರ ಎಮ್ ಪಿ ಎಮ್ ನೆಡುತೋಪಿನ ಪಕ್ಕ ರೈತರು ಸಂರಕ್ಷಿಸಿದ ಕಾನನದಲ್ಲಿ ೮೦ ಜಾತಿಯ ಔಷದ ಸಸ್ಯ ದೊರೆತಿದೆ. ನೆಡುತೋಪಿನಲ್ಲಿ ಹಲ್ಲುಕಡ್ಡಿ ಕೂಡಾ ಸಿಗಲಿಲ್ಲ. ಶೇಕಡಾ ೫ರಷ್ಟು ಮೇವಿನ ಸಸಿ ನೆಡಬೇಕು. ಎಕರೆಗೆ ೨೦ ಶ್ರೀಗಂಧದ ಗಿಡ ಬೆಳೆಸಬೇಕು, ಎಣ್ಣೆಗಿಡ, ಬಿದಿರು ಬೆಳೆಯಬೇಕು ಎಮ್ ಪಿ ಎಮ್ ಒಪ್ಪಂದದಲ್ಲಿ ಶರತ್ತಿನ ಸಾಲು. ಒಪ್ಪಂದ ಮರೆತು ಇಳಿ ಜಾರಿನಲ್ಲಿ ಅಗೆತ, ಮಳೆಗಾಲದಲ್ಲಿ ಕಡಿತ, ಬೆಂಕಿ ಹಾಕಿ ಸಸಿನಾಶ. ಬುಲ್ಡೋಜರ್ ಉಳುಮೆಯಲ್ಲಿ ಭೂಸವಕಳಿ. ಇದು ಸಮೃದ್ಧ ತೀರ್ಥಹಳ್ಳಿಗೆ ಎರಡು ದಶಕದ ನೆಡುತೋಪಿನ ಬಳುವಳಿ !.

ಪರಿಸರ, ಸಾಮಾಜಿಕ, ಆರ್ಥಿಕ ದೃಷ್ಟಿಯಿಂದ ಶ್ರೀಗಂಧ, ಹುಣಸೆ, ಅಂಟಿನಮರ, ಹಣ್ಣು ಹಂಪಲಿನ ಗಿಡ ಬೆಳೆಸುವ ಪ್ರದೇಶದ ಇದು. ಇಲ್ಲಿ ಕೈಗಾರಿಕಾ ನೆಡುತೋಪು ಬೆಳೆಸಿದ್ದೇ ತಪ್ಪು. ಬುಲ್ಡೋಜರ್ ಅಗೆತ ಅರಣ್ಯ ಸಂರಕ್ಷಣೆ ಕಾಯ್ದೆ ಉಲ್ಲಂಘನೆ. ಅರಣ್ಯ ಇಲಾಖೆ ಹಾಗೂ ಎಮ್ ಪಿ ಎಮ್ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ ಎಂದು ಪಶ್ಚಿಮ ಘಟ್ಟ ಅರಣ್ಯ ಅಭಿವೃದ್ಧಿ ಯೋಜನೆ ನಿರ್ದೇಶಕ ದಿಲೀಪ್‌ಕುಮಾರ್ ಸ್ವತಃ ೧೯೯೮ ಫೆಬ್ರುವರಿ ೨೧ರಂದು ರಾಜ್ಯದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ ಪತ್ರಿಸಿದ್ದಾರೆ !. ಜನ ಧ್ವನಿಯೆತ್ತಿದ್ದಾರೆ. ಅಳಲು ಕೇಳುವವರಾರು ?

ರಾಷ್ಟ್ರೀಯ ಅರಣ್ಯ ಸಂರಕ್ಷಣೆ, ಸಮುದಾಯ ಭೂಮಿ ಹಿತ ಗೊತ್ತೇ ಇಲ್ಲ. ಲೀಸು ನೀಡಿದ ಕಾಡಿನ ಮುಖ ನೋಡುವ ಅರಣ್ಯ ಇಲಾಖೆ ನಾಪತ್ತೆ, ಕಳ್ಳನಾಟಾ, ಬಗರ್‌ಹುಕುಂ ಆಕ್ರಮಣ. ಹೈಬ್ರಿಡ್ ನೀಲಗಿರಿ ೮ ವರ್ಷಕ್ಕೆ ೩೨ ಕ್ಯುಬಿಕ್ ಮೀಟರ್, ಅಕೇಸಿಯಾ ೧೨೮, ಹೈಬ್ರಿಡ್ ಅಕೇಸಿಯಾ ೩೨೦ ಕ್ಯುಬಿಕ್ ಮೀಟರ್ ಪಲ್ಪವುಡ್ ನೀಡುತ್ತದೆಂದು ಲೆಕ್ಕಹಾಕುತ್ತ ಮೆಡುತೋಪಿನ

ಲಾಭ ಹುಡುಕುವ ಮಾರ್ವಾಡಿ ಮನಸು. 'ಗಿಡ ನೆಡಿ ... ಗಿಡಕಡಿ' ಎಲ್ಲೆಡೆ ಧ್ಯೇಯ ವಾಕ್ಯ. ಅರಣ್ಯ ನೆಲ ಕಟುಕರ ಮನೆ, ಇಲ್ಲಿಯೇ ನಮ್ಮ ಹೊಸ ತಲೆಮಾರಿನ ಪುಟಾಣಿ ಪ್ರಪಂಚ. ಕಡಿಯಲು ಬೆಳೆಸುವ ನೆಡುತೋಪಿನಲ್ಲಿ ಅರಣ್ಯ ಜ್ಞಾನದ ಹತ್ಯಾಕಾಂಡದ ಧುರಂತ ಪ್ರಾತ್ಯಕ್ಷಿಕೆ. ಪರಿಸರ ಕಾನೂನು ಹಾಗೆಂದರೇನು ? ತೀರ್ಥಹಳ್ಳಿ ಗುಡ್ಡಗಳ ದೊಡ್ಡ ಅನುಮಾನ!.

## ಅಡವಿ ಆಹಾರ

ಕಾಡಿನ ಜೇನು, ಹಣ್ಣು ಹಂಪಲು, ಗಡ್ಡೆ ಗೆಣಸು ಮುಂತಾದ ಕಿರು ಅರಣ್ಯ ಉತ್ಪನ್ನ ಸಂಗ್ರಹಿಸುವ ಅರಣ್ಯವಾಸಿಗಳಲ್ಲಿ ಜೀವನ ವಿಧಾನಕ್ಕೂ ಆಹಾರ ಪದ್ಧತಿಗೂ ಸಂಬಂಧವಿದೆ. ಕರ್ನಾಟಕ ಪಶ್ಚಿಮ ಘಟ್ಟದಲ್ಲಿ ಬರುವ ಸುಬ್ರಹ್ಮಣ್ಯ ಗ್ರಾಮದಲ್ಲಿ ನಡೆಸಿದ ಅಧ್ಯಯನದ ಪ್ರಕಾರ ಹಳ್ಳಿಗರು ಅಲ್ಲಿನ ಅರಣ್ಯ ಪ್ರದೇಶಗಳಲ್ಲಿರುವ ೨೦ ಸಸ್ಯಗಳ ಬೇರು, ಗಡ್ಡೆ, ಎಲೆ, ಹಣ್ಣು, ಕಾಯಿ, ಬೀಜ ಮುಂತಾದ ಭಾಗಗಳನ್ನು ಆಹಾರವಾಗಿ ಗುರುತಿಸಿದ್ದರು. ಅರಣ್ಯ ಮೂಲದ ಸಾಂಪ್ರದಾಯಿಕ ಅಹಾರಗಳನ್ನು ಬುಡಕಟ್ಟು ಜನ ಬಳಸುತ್ತಾರೆ. ಕಾಡಿನ ಬದುಕು ಇವರ ಅಹಾರ ಪದ್ಧತಿಗಳ ಮೇಲೆ ಮಹತ್ವದ ಪ್ರಭಾವಬೀರಿದೆ. ದೇಹಕ್ಕೆ ಅಗತ್ಯ ಪೋಷಕಾಂಶ, ಖನಿಜಾಂಶಗಳನ್ನು ಈ ಕಾಡು ತರಕಾರಿಗಳಿಂದ ಪಡೆಯುತ್ತಾರೆ. ಅಡುಗೆ ತಯಾರಿಕೆಯ ಜ್ಞಾನ ತಲೆಮಾರಿನಿಂದ ಹರಿದು ಬರುತ್ತದೆ. ಆದರೆ ಇಂದು ಅರಣ್ಯನಾಶ ಅಹಾರ ಪದ್ಧತಿಗಳಲ್ಲಿ ಬದಲಾವಣೆ ತಂದಿದೆ.



ಅಡವಿ ಆಹಾರ ವನವಾಸಿಗಳ ಅನುಭವ ಜ್ಞಾನ

ಕುಣಬಿ ವನವಾಸಿಗರು ವಾಸಿಸುವ ಅಣಶಿ ಪ್ರಾಂತದಲ್ಲಿ ೩೦ ವರ್ಷದ ಹಿಂದೆ ೩೧ ಜಾತಿಯ ಕಾಡಿನ ಸಸ್ಯಗಳನ್ನು ತರಕಾರಿಯಾಗಿ, ೪೧ ಸಸ್ಯಗಳನ್ನು ಕೃಷಿಹಾಗೂ ಗೃಹ ಬಳಕೆಗಾಗಿ, ಮಾರಾಟಕ್ಕಾಗಿ ೩ ಸಸ್ಯಗಳ ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತಿದ್ದರು. ಇದಲ್ಲದೇ ಔಷಧಕ್ಕಾಗಿ ೬೫ ಸಸ್ಯಗಳನ್ನು ಬಳಸುತ್ತಿದ್ದರು. ಅಂದರೆ ಸುಮಾರು ಕಾಡಿನ ೧೨೫ ಸಸ್ಯಗಳನ್ನು ಸಂಗ್ರಹಿಸುತ್ತಿದ್ದರು ಎಂದು ಈ ಕುರಿತು ಅಧ್ಯಯನ ನಡೆಸಿದ ಬಾಲಚಂದ್ರ ಹೆಗಡೆ ಸಾಯಿಮನೆ ಹೇಳುತ್ತಾರೆ.

## ಕಾನ್‌ಗೌರಿ ಎಂಬ ಪಕಾಸಿನ ಮರ.


ಗರಗಸದಿಂದ ಕೊಯ್ದು ಮನೆ ಛಾವಣಿಗೆ ಬೇಕಾದ ಪಕಾಸು ಮಾಡುವದು ತಿಳಿದಿದೆ. ಅದರೆ ನಮ್ಮ ಪಶ್ಚಿಮ ಘಟ್ಟದ ಕಾನು ಗೌರಿ ಎಂಬ ಮರ ಬಳಕೆ ತೀರ ಸರಳ. ಇದನ್ನು ಕೊಡಲಿಯಿಂದ ಸುಲಭದಲ್ಲಿ ಸೀಳಿ ಚೆಂದದ ಪಕಾಸು ತಯಾರಿಸಬಹುದು. ಮರದ ಕಾಂಡ ಸಿದ್ಧ ಪಕಾಸಿನ ಖಜಾನೆ. ತೇಟ್ ಗರಗಸದಲ್ಲಿ ಕೊಯ್ದು ಚೌಬೀನೆಗೆ ಸಾಟಿಯಾಗಬಲ್ಲಂತಹ ಕಟ್ಟಿಗೆ ಇದರಲ್ಲಿ ದೊರೆಯುತ್ತದೆ.

ಮನೆ ನಿರ್ಮಿಸುವಾಗ ಮರ ಕೊಯ್ತದ ಪರಿಣಿತರು ಬೇಕು. ಕೊಯ್ಯಲು ಗರಗಸ ಬೇಕು. ಮನೆ ನಿರ್ಮಾಣದ ಉಪಯೋಗಕ್ಕೆ ಬಳಸುವಾಗಂತೂ ದೂರದ ಸಾಮಿಲ್‌ಗಳಲ್ಲಿ ಬೇಕಾದ ಅಳತೆಗೆ ತಕ್ಕಂತೆ ಕೊರೆತದ ಸಂಸ್ಕಾರವಾಗಬೇಕು. ಇವು ಇತ್ತೀಚೆಗೆ ಬಂದ ರೂಢಿ. ಆದರೆ ಕಾನ್‌ಗೌರಿ ಮರಕ್ಕೆ ಇದ್ಯಾವುದೂ ಬೇಡ.. ಹಲವು ವರ್ಷ ಬಾಳಿಕೆ ಬರಬಲ್ಲ ಚೌಬೀನೆಯಾದ ಕಾನ ಗೌರಿ ಪಶ್ಚಿಮ ಘಟ್ಟದ ನಿತ್ಯ ಹರಿದ್ವರ್ಣ ಮರ. ದಾರದಂತೆ ನೇರಕ್ಕೆ, ಸಿಲಿಂಡರ್‌ನಷ್ಟು ದುಂಡಗೆ ಬೆಳೆಯುತ್ತದೆ. ಕೊಡಲಿ ಮಾತ್ರವಿದ್ದರೂ ಬಳಕೆಗೆ ಬೇಕಾದ ಪಕಾಸನ್ನು ತಯಾರಿಸುವದು ವೈಶಿಷ್ಟ್ಯ. ೩೦ – ೪೦ ವರ್ಷಗಳ ಹಿಂದೆ ಇದರ ಪಕಾಸು ಬಳಸಿ ಕಟ್ಟಿದ ಮನೆಗಳನ್ನು ಈಗಲೂ ಮಲೆನಾಡಿನಲ್ಲಿ ನೋಡಬಹುದು.

# ಕಲ್ಲಳ್ಳಿ : ಬರದ ಸೀಮೆಯ ಹಸುರು ಗಾಥೆ

ಕಲ್ಲುಗುಡ್ಡಕ್ಕೆ ಅಂಬ್ಲಿ ಕಿಚಡಿ ಹೊತ್ತು ಮಳೆ ಹಬ್ಬ ಮಾಡುತ್ತಿದ್ದ ಊರಲ್ಲಿ ಕಳ್ಳಿಗಿಡಗಳೇ ತುಂಬಿದ್ದವು. ಅಲ್ಲಿ ಕ್ರಿ.ಶ, ೧೯೭೬ರಿಂದ ಸತತ ೨೧ ವರ್ಷ ಬರದಬ್ಬರದ ಚಂಡೆ, ಮೃದಂಗ !. ಪರಿಸ್ಥಿತಿ ನೋಡಿದ ಸರಕಾರ 'ನಿಮ್ಮ ಬಿರಾಡ (ಭೂಕಂದಾಯ) ನಮ್ಗ ಬ್ಯಾಡ !' ಎಂದು ಕಂದಾಯ ಕೈಬಿಟ್ಟಿತು. ಮಳೆ ಹಬ್ಬ ಮಾಡುತ್ತಿದ್ದ ಜನ ಗುಡ್ಡದ ಬಣ್ಣ ಬದಲಿಸಲು ಯೋಚಿಸಿದರು, ಮರ ಬೆಳೆಸಿದರೆ ಮಳೆ ಬಂದೀತೆಂದು ಲೆಕ್ಕ ಹಾಕಿದರು. 'ಕಾಡು ಬೆಳೆಸಲು ಹಣಬೇಕು' ಎಂಬುದು ಹಳೆಯ ಕತೆ. ಸಂರಕ್ಷಣೆಯ ಅಚಲ ನಿರ್ಧಾರ ಸಾಕು ಎಂಬುದು ಹಳ್ಳಿಗರ ಸಾಹಸ ಗಾಥೆ !.

ಗುಡ್ಡದ ಕಲ್ಲುಗುತ್ತಿಯ ಎತ್ತರದಲ್ಲಿ ನಿಂತು ಬರದ ನೆಲದ ಬಡವರು ಬರೆದ ಹಸುರು ಚಿತ್ರ ಕಣ್ಣಾಡಿಸುತ್ತಿದ್ದೆ. 'ಅವು ನಮ್ಮ ಹಾಂಗ ಊರು ಬಿಟ್ಟು ಹ್ವಾಗಿದ್ವವ್ರಿ...., ನಿಧಾನಕ್ಕ.... ಈಗ ವ್ಹಾಪಸ್ ಬರ್ತಾ ಅದಾವ್ರಿ' ಹಳ್ಳಿಗ ತಿಪ್ಪಣ್ಣ ಹೇಳುತ್ತಿದ್ದರು. ಬರಕ್ಕೆ ಬದುಕು ದಿಕ್ಕೆಟ್ಟು ವಲಸೆ ಹೋದವರು ಮತ್ತೆ ಹಳ್ಳಿಗೆ ಮರಳಿದ ಹಾಗೇ ಪ್ರಾಣಿ, ಪಕ್ಷಿ ಹಿಂಡು ಕಾಡಿಗೆ ಮರಳಿದ ಬೆರಗನ್ನು ಬೆರಳಿಟ್ಟು ತೋರಿಸುತ್ತಿದ್ದರು. 'ಕಾಡು ಬೆಳಸಾಕ.... ಹಣಾ.... ಯ್ಯಾಕ್ ಬೇಕ್ರಿ...!?...... ಜನಾ... ಇದ್ರ... ಸಾಕಲ್ರಿ....' ಹಸಿರು ಸ್ನೇಹಿ ಸಂಗಪ್ಪ ಉಪ್ಪಲದಿನ್ನಿ ಹಳ್ಳಿಯ ಸಾಕ್ಷ್ಯ ಚಿತ್ರಕ್ಕೆ ಪೀಠಿಕೆ ಹಾಕಿದರು.



ಕಾಡು ರಕ್ಷಣೆಗೆ ಕಲ್ಲಿನಕಟ್ಟೆ


ಅದು ಜಮಖಂಡಿಯ ಕಲ್ಲಳ್ಳಿ, ಇತಿಹಾಸದ ಉದ್ದಕ್ಕೂ ಬರಕ್ಕೆ ಬೆಚ್ಚಿ ಬೀಳುತ್ತಿದ್ದ ಊರು. ಒಂದು ಬುಟ್ಟಿ ಮಣ್ಣು ಅಗೆದರೆ ಹತ್ತು ಬುಟ್ಟಿಕಲ್ಲು ಸಿಗುವ ಗುಡ್ಡ, ಹಳ್ಳಿ ಹೆಸರಿಗೆ ತಕ್ಕಂತೆ ವೇಷ. ಕೃಷಿ ನೆಲಕಚ್ಚಿ ನಂಬಿದ ನೆಲೆ ಮಂದಿ ಗುಳೆ, ಊರಿಗೆ ಊರೇ ಬಿಕೋ ಎಂಬ ಸ್ಥಿತಿ. ಕಳ್ಳಿಗಿಡಗಳ ಸಾಮ್ರಾಜ್ಯ ಕಲ್ಲು ಸಂಧಿಗೆ ನಿಂತು ಕ್ಷಾಮ ಢಂಗುರಕ್ಕೆ ಚಾಮರ ಹಿಡಿದಿದ್ದವು. 'ಕಾಡು ಬೆಳೆಸಿದ್ರೆ ಮಳೆ ಬರ್ತದಂತ್ರಿ...' ಬರದ ಬವಣೆಗೆ ಬೆಂದವರು ಶಿಶುಗಳನ್ನೆತ್ತಿ ಊರಾಚೆ ಹೊರಟಾಗ ಕಾಡಿನ ಕನಸು. ಕೈಯಲ್ಲಿ ಕಾಸಿಲ್ಲ, ಎದುರು ಇದ್ದದ್ದು ನೆಲದ ಮೂಳೆಯಂತಹ ಕಲ್ಲು ಗುಡ್ಡ, ವಿಕಾರ ನಗೆ!. ಪ್ರತಿಹೆಜ್ಜೆ ದೊಡ್ಡ ಸವಾಲು.

ಮಳೆ ಚೆನ್ನಾಗಿ ಸುರಿದು ಹೊಲ ಹಸನಾದರೆ ರೈತ ಬದುಕು. ಮಳೆಗಾಗಿ ಬಸವಣ್ಣನ ಗುಡಿಯಲ್ಲಿ ಊರ ಮಂದಿ ಹಬ್ಬ ಆಚರಿಸುವದು ವರ್ಷದ ಹೊರೆ. ಅಂದು 'ಅಂಬ್ಲಿ ಕಿಚಡಿ' (ಅನ್ನ ಪ್ರಸಾದ) ತಪ್ಪಲ್ಲಿ ಹೊತ್ತ ಹಿರಿಯ ಮೈಗೆ ಕಂಬಳಿ ಹೊದ್ದು ಮೇಲು ದೀಪ ಬಸವಣ್ಣನ ಜಾಗಕ್ಕೆ ಹೆಜ್ಜೆಯಿಡುತ್ತಾರೆ. ಆಗ ಅವರ ಪಾದಕ್ಕೆ ಹನಿಹನಿ ನೀರು ಸೋಕುವ ನೂರಾರು ಜನ, ನೀರ ನೆಮ್ಮದಿಗೆ ಜನ ನಂಬಿದ ವಿಧಿ ವಿಧಾನ. ಅವರೆಲ್ಲ ವರ್ಷಕ್ಕೊಮ್ಮೆ ಕಳ್ಳಿಗಿಡದ ಕಲ್ಲುಗುಡ್ಡ ಹೀಗೆ ಏರುತ್ತಿದ್ದರು, ಬಾವಿಯ ನೀರೆತ್ತಿ ಕೃತಕ ಮಳೆ ಸಿಂಪರಣೆ ಮಾಡುತ್ತಿದ್ದರು. ಉತ್ತರೆ ಮಳೆಗೆ ಬಿಳಿ ಜೋಳ ಬಿತ್ತನೆಗೆ ಕೂರಿಗೆ ಹೊಲಕ್ಕೆ ಇಳಿಸುವ ಮುಂಚೆ ಮಳೆ ಪ್ರಾರ್ಥನೆ ಅದು. ಮನೆ ಮನೆಯಿಂದ ಕೂಡಿಸಿತಂದ ಸೇರುಪಾವು ಧಾನ್ಯಗಳ ಅಡುಗೆ, ಬೋಳುಗುಡ್ಡದಲ್ಲಿ ಅಂಬ್ಲಿ ಕಿಚಡಿ ಸಹಭೋಜನ ಸಂಭ್ರಮ. ಹಬ್ಬ ನಡೆದಿದ್ದು ಖರೆ, ಮಳೆ ಮೋಡಕ್ಕೆ ಕಾದಿದ್ದ ಊರು ಮಾತ್ರ ಬರದ ಅಂಗಳದಲ್ಲಿ ಗಡದ್ದಾಗಿ ಮಲಗಿತ್ತು. ಕ್ರಿ.ಶ, ೧೯೭೬ರಿಂದ ಮುಂದೆ ಸತತ ೨೧ ವರ್ಷ ಬರದಬ್ಬರದ ಚಂಡೆ, ಮೃದಂಗ !. ಪರಿಸ್ಥಿತಿ ನೋಡಿದ ಸರಕಾರ' ನಿಮ್ಮ ಬಿರಾಡ (ಭೂಕಂದಾಯ) ನಮ್ಗ ಬ್ಯಾಡ !' ಎಂದು ಕಂದಾಯ ಕೈಬಿಟ್ಟಿತು. ಮಳೆ ಹಬ್ಬ ಮಾಡುತ್ತಿದ್ದ ಜನ ಕಲ್ಲು ಗುಡ್ಡದ ಬಣ್ಣ ಬದಲಿಸಲು ಯೋಚಿಸಿದರು. ಮರ ಬೆಳೆಸಿದರೆ ಮಳೆ ಬಂದೀತೆಂದು ಲೆಕ್ಕ ಹಾಕಿದರು.

'ಗುಡ್ಡದಾಗ ಯಾರೂ ದನ ಮೇಯಿಸಬ್ಯಾಡ್ರಿ...., ಆಡು, ಕುರಿ ಬಿಡಬ್ಯಾಡ್ರಿ...., ಹುಲ್ಲು, ಗಿಡ ಕಡಿಬ್ಯಾಡ್ರಿ..., ಬೆಂಕಿ ಹಾಕಬ್ಯಾಡ್ರಿ... ಅಚಾನಕ್ ಜಾನುವಾರ ಸಗಣಿ ಬಿದ್ರೂ ಮುಟ್ಟ್ಬ್ಯಾಡ್ರಿ...., ಕಾಡು ಬೆಳೆಸಬೇಕ್ರಪಾ....

ನಮ್ಗ ಮಳಿ.... ಬೇಕು !' ಬಾಯ್ಬೇಲಿ ಮಾತು ಮೇಳವಾಯಿತು, ಓಣಿ ಓಣಿಯಲ್ಲಿ ಜಾಗೃತಿ ಮಿಂಚು ಮೂಡಿತು. ತಳವಾರ, ಲಿಂಗಾಯತ, ಜೈನ, ಬಜಂತ್ರಿ, ಕುರುಬ, ರೆಡ್ಡಿ, ಬೇಡ. ಪಂಚಾಳ, ಬ್ರಾಹ್ಮಣ, ನಾವಿ ಜಾತಿ ಬೇಧವಿಲ್ಲದೇ ಅಚಲ ನಿರ್ಧಾರ. ಸಂರಕ್ಷಣೆ ನಿಯಮ ಪಾಲನೆ.

ಮುಂಗಾರಿಗೆ ಹುರಳಿ, ಮೂಕಣಿ, ಸಜ್ಜೆ, ಶೇಂಗಾ, ಹೆಸರು ಕೃಷಿ. ಹಿಂಗಾರಿಗೆ ಗೋಧಿ, ಕಡ್ಲೆ, ಜೋಳ, ಕುಸಬಿ ಬೆಳೆವ ನೆಲ.೨೮೦೦ ಜನಸಂಖ್ಯೆ, ೩೫೦೦ ಎಕರೆ ಅರಣ್ಯ ಭೂಮಿ. ಆಡು, ಕುರಿ ದನಕರು ಸೇರಿದಂತೆ ೭೦೦ ಸಾಕು ಪ್ರಾಣಿಗಳಿಗೆ ಹೊಲದ ಮೇವು, ಕಾಡಿನ ಗಿಡಗಂಟಿ, ಹುಲ್ಲು ಬೇಕು. ಜಮಖಂಡಿ ಸಂಸ್ಥಾನ ಕಾಲದಲ್ಲಿ ನದಿದಂಡೆಯ ೩೦೦ ಎಕರೆ ಜಾನುವಾರು ಮೇವಿಗಾಗಿಯೇ 'ಕುರಾನ್' (ಗೋಮಾಳ) ಬಿಟ್ಟಿದ್ದರು. ಜನಸಂಖ್ಯೆ ಹೆಚ್ಚಳ ಬಳಿಕ ಕೃಷಿಗೆ ಅತಿಕ್ರಮಣ, ಕುರನ್ ಕಣ್ಮರೆ. ಇದ್ದಲಿ ಭಟ್ಟಿ, ಉರುವಲು, ಬೆಂಕಿ ಎಂದು ಅತ್ತ ಕಾಡು ಅತ್ತಿತು, ಕುರುಚಲು ಹಸಿರು ಹೈರಾಣ. ಬರ ಓಡಿಸಲು ಹಳ್ಳಿಗರು ೮೦೦ ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಲು ಜಾಗೃತರಾದರು. 'ಕಾಡಿಗೆ ದನ ಬಿಡಬೇಡಿ, ಗಿಡ ಕಡಿಬೇಡಿ, ಕಾಡಿಗೆ ಹೋಗಬೇಡಿ 'ಬೀದಿ ಢಂಗುರ, ನಿಯಮ ಉಲ್ಲಂಘನೆಗೆ ದಂಡ ತೆರಬೇಕು ಎಂಬ ಕಟ್ಟಪ್ಪಣೆ !.



ಕಳ್ಳಿ ಗಿಡಗಳಿದ್ದ ಜಮಖಂಡಿಯ ಕಲ್ಲುಗುಡ್ಡ



ಹಳ್ಳಿಗರ ನೇತ್ರತ್ವದಲ್ಲಿ ಗುಡ್ಡ ಹಸಿರಾಯಿತು

ಕಾಡು ಬೆಳೆಸುವ ಮಾತಿಗೆ ಊರಿಗೆ ಊರೇ ಶಿರಬಾಗಲು ಇಲ್ಲಿ ಸೋಜಿಗ ಪರಂಪರೆಯಿದೆ. ಹಳ್ಳಿ ಒಳಿತಿಗಾಗಿ ಮನಸ್ಸು ಕೂಡಿಸುವ ಸಮುದಾಯದ ಕೆಲಸಗಳಿಗೆ ಕಲ್ಲಳ್ಳಿ ಯಾವತ್ತೂ ಎತ್ತಿದ ಕೈ. ವೆಂಕಟೇಶ ದೇವಸ್ಥಾನ ಜಾತ್ರೆ, ಬಸವೇಶ್ವರ ಜಾತ್ರೆ, ಮಳೆ ಹಬ್ಬ, ಕೃಷಿ ಕೆಲಸದ ಮುನಿಯಾಳು (ಮುರಿಯಾಳು) ಪದ್ಧತಿ, ಯುವಕ ಸಂಘದ ಕಾರ್ಯಕ್ರಮ ಹೀಗೆ ಹತ್ತಾರು ಕೆಲಸಕ್ಕೆ ಹಳ್ಳಿಗರೆಲ್ಲ ಹೆಗಲು ಕೊಡುವದು ಕಡ್ಡಾಯ. ಸಾಮಾಜಿಕ ಕಾರ್ಯಗಳಲ್ಲಿ ಕೂಡುವ ಸಂಸ್ಕಾರ. ಊರಲ್ಲಿ ತಂಟೆ ತಕರಾರು ಎದ್ದರೂ ಹಿರಿಯರದೇ ನ್ಯಾಯದಾನ. ಜಾತಿ ಜನಾಂಗದ ಹಿರಿಯರು, ದೇವಾಲಯ ಸಮಿತಿಗಳ ಅಧ್ಯಕ್ಷರಿಗೂ ಅರಣ್ಯ ಸಂರಕ್ಷಣೆ ಬಗೆಗೆ ಕಾಳಜಿ. ೧೯೮೫ರಲ್ಲಿ ಸಂರಕ್ಷಣೆ ಚೊಚ್ಚಲು ಹೆಜ್ಜೆ. ೧೯೮೭ರಲ್ಲಿ 'ಅರಣ್ಯ ಸಂರಕ್ಷಣಾ ದಳ'ದ ಸಮೂಹಶಕ್ತಿ ಸ್ವರೂಪ, ೧೯೯೯ರಲ್ಲಿ ೪೧೦ ಸದಸ್ಯರ ಗ್ರಾಮ ಅರಣ್ಯ ಸಮಿತಿಯಾಗಿ ಸಂಘಟನೆ ಶಿಸ್ತು ಹೆಮ್ಮರ. ಕರ್ನಾಟಕ ಅರಣ್ಯ ಇಲಾಖೆ ಕಾಡು ಕಾಯಲು ಓರ್ವ ಕಾವಲುಗಾರರನ್ನು ಒದಗಿಸಿದೆ. ಸಂರಕ್ಷಿತ ಪ್ರದೇಶ ಸುತ್ತ ಕಲ್ಲುಗೋಡೆ ನಿರ್ಮಾಣವಾಗಿದೆ.

ಹಳ್ಳಿಗರ ಕಾಡು ಕಾಯಲು ಉಚಿತ ಹೊಸ ಮಾಳಿ (ಕಾವಲುಗಾರ) ಬಂದ ಹಾಗೇ ತೋಳ, ಚಿರತೆಗಳು ಈಗ ಸೇರಿಕೊಂಡಿವೆ. ೧೯೯೩ರವರೆಗೆ ಕಾಡಿಗೆ ದನಕರು ಪ್ರವೇಶ ನಿಶೇಧವಿತ್ತು. 'ಆಗ ನಿಯಮ ಮಾಡಿದ್ವಿ.... .....

ಈಗ ಜಾನುವಾರು ಕಾಡಿಗೆ ಬಿಡಾಕ... ಮಂದಿ ವಲ್ಲೆ ಅಂತಾರ, ಸೀಮ್ಯಾಗ ಇದ್ದ ತೋಳ ನಮ್ ಕಾಡ್ ಸೇರ್ಯಾವ್ರಿ...., ದನಕರು ಮೇವಿಗೆ ಹೊದ್ರ ಗಬ್‌ನೇ ಬಾಯ್ ಹಾಕ್ತಾವ್ರಿ... ..... ಈವರಿಗೆ ಲೆಕ್ಕ ತೆಗೆದ್ರ... ನೂರಾರು ಕುರಿ ತೋಳದ ಬಾಯೀಗ್ ಬಿದ್ದಾವ್ರಿ...., ೯ ವರ್ಷದ ಹಿಂದೆ ಕುರುಬರ ಹುಡುಗೀನ.... ಹಂದಿ ಕೊಂದೈತ್ರಿ... !' ಜಮಖಂಡಿಯಿಂದ ೧೦ ಕಿಲೋ ಮೀಟರ್ ದೂರದ ಗುಡ್ಡದ ಹಸಿರು ಸತ್ಯಗಳು ಅಚ್ಚರಿ ಹುಟ್ಟಿಸುತ್ತವೆ. ವನ್ಯಜೀವಿ ಆವಾಸವಾಗಿ ನೆಲ ಬದಲಾದ ಸ್ಥಿತಿ ಸಾರುತ್ತವೆ.

ಮೃದ್ವಂಗಿ ಹುಳುವಿನ ದೇಹ ಕವಚ, ಮೊಲದ ಹಿಕ್ಕೆ ಕಾಡು ತಿರುಗುವಾಗ ಕಣ್ಣಿಗೆ ಬೀಳುತ್ತ ಸಿರಿತನ ಸಾರುತ್ತವೆ. ಚೆಂದದ ಚಿಟ್ಟೆಗಳ ಹಾರಾಟ ಮನಸೆಳೆಯುತ್ತದೆ. ಬಂಗಾರ ತೂಗುವ ಗುಲಗುಂಜ ಬೀಜ, ಚೆನ್ನಪಟ್ಟಣದ ಗೊಂಬೆ ತಯಾರಿಸುವ ಅಲಗತ್ತಿ ಗಿಡ, ಹೆಣ್ಣು ಮಕ್ಕಳ ತಲೆ ಹೇನಿಗೆ ಔಷಧಿಯಾಗುವ ಆರಿಕಾಯಿ, ಗಿಡ ತುಂಬ ಬೀಜದ ಸುಗ್ಗಿ ಸಾರುವ ಮಿಶವಾಳ, ಕಕ್ಕೆ, ಏಕ್ಕೆ, ಮದರಂಗಿ, ಚದರಂಗಿ, ಅಂಕಲಿ, ಬಿದಿರು, ಶ್ರೀಗಂಧ, ಬರಗಿ, ಬೇವು, ಬನ್ನಿ, ಬಾರಿ, ಮಾವು, ಹುಣಸಿ, ಆಲ, ತುಮರಿ, ಮರಗೋಣಕಿ, ಒಂಟಿ ಬಳ್ಳಿ, ಕಕ್ಕೊಡಿ, ಹಾಲಿ, ಮುಳಮಕ್ಕಿ ಮುಂತಾದ ೧೦೦ಕ್ಕೂ ಹೆಚ್ಚು ಜಾತಿಯ ಗಿಡ ಬಳ್ಳಿ ಸಂರಕ್ಷಣೆಯಿಂದ ಬೆಳೆದಿವೆ !. ಕಾಡು ಬೆಳೆಸುವ ಮೊದಲ ದಿನಗಳಲ್ಲಿ ಮುಳ್ಳು ಗಿಡಗಳು ಮಾತ್ರವಿದ್ದವು, ಈಗ ಮುಳ್ಳಿಲ್ಲದ ಗಿಡಗಳು ಬೆಳೆಯುತ್ತಿವೆ. ೧೯೯೦ರಲ್ಲಿ ಇದೇ ಕಾಡು ನೆಲದಲ್ಲಿ ಅರಣ್ಯ ಇಲಾಖೆ ೧೦ ಎಕರೆ ಕ್ಷೇತ್ರದಲ್ಲಿ ನಾಟಿ ಮಾಡಿದ ನೀಲಗಿರಿ, ಬೇವು, ಸಾಗವಾನಿ ಸಸಿಗಳಲ್ಲಿ ಈಗ ಬೆರಳೆಣಿಕೆಯಷ್ಟೂ ಉಳಿದಿಲ್ಲ !. 'ನಾವು ಕಷ್ಟಪಟ್ಟು ತಗ್ಗು ಹೊಡೆದು ನೆಟ್ಟರೆ ಸಸಿ ಸಾಯ್ತಾವ.... ಇದ್ ಹ್ಯಾಂಗ ಭೂಮೀನ.... ತನ್ನ ಪಾಡಿಗೆ ಇಷ್ಟೊಂದು ಗಿಡ ಬೆಳೆಸ್ತದ !? 'ಹಳ್ಳಿಗರ ಅಚ್ಚರಿ. ಸಂರಕ್ಷಣೆ ಮಾತ್ರದಿಂದ ಕಲ್ಲಳ್ಳಿ ನೆಲ ಹಸಿರು ಹೆತ್ತ ದಾಖಲೆ ಇಡೀ ನಮ್ಮ ಅರಣ್ಯಾಭಿವೃದ್ಧಿ ಹೆಜ್ಜೆಗಳನ್ನೇ ಬುಡಮೇಲು ಮಾಡುತ್ತವೆ. ದೇಸೀ ಹಸುರು ಧರ್ಮ ಸಾರುತ್ತ ಹೊಸ ಪಾಠ ಹೇಳುತ್ತದೆ.

ಕಾಡು ಬೆಳೆಸಿದ ಊರಿಗೆ ಮಳೆ ಬಂತೆ ? ೨೦ ವರ್ಷಗಳ ಬಳಿಕ ಊರಿನೆದುರು ಪ್ರಶ್ನೆ. 'ಬಲಿತಕಡೆ ಊರು ಬದಲಾಗೇತ್ರಿ.... ..... ಕಾಡು ಬದಲಾಗೇತ್ರಿ....' ಏಳು ವರ್ಷಗಳ ಕಾಲ ಅರಣ್ಯ ಸಂರಕ್ಷಣೆಯ

ನೇತ್ರತ್ವವಹಿಸಿದ ಸಂಗಪ್ಪ ಉಪಲದಿನ್ನಿ ಹೇಳುತ್ತಾರೆ. ೩೦ ವರ್ಷದ ಹಿಂದೆ ವರ್ಷವಿಡೀ ಹರಿಯುತ್ತಿದ್ದ ಕತ್ತೆಕೊಳ್ಳ ಕಾಡು ನಶಿಸಿದಂತೆ ಬತ್ತಿ ಹೋಗಿತ್ತು. ಈಗ ೬ ತಿಂಗಳು ಜುಳು ಜುಳು ನೀರ ನಿನಾದ. ಕಬ್ಬು, ತೆಂಗು, ಲಿಂಬು ಎಂದು ನೀರಾವರಿ ಬೆಳೆ ಕ್ಷೇತ್ರ ವಿಸ್ತರಣೆಯಾಗಿದೆ. ಕಾಡಿನ ಒಣ ಕಟ್ಟಿಗೆ ಉರುವಲಾಗಿ ಅಡುಗೆ ಆಧಾರವಾಗಿದೆ. ಕಾಡು ಕೃಷಿಗೆ ಕನ್ನಡಿ ಹಿಡಿದಿದೆ. ಎಲ್ಲಕೂ ಮುಖವಾಗಿ ಬರಗಾಲದ ವಿಕಾರ ನಗೆ ಬೀರುತ್ತಿದೆ ಕಲ್ಲು ಗುಡ್ಡ ಈಗ ಕಾಸಿಲ್ಲದ ಬಡವರ ಕೈಯಲ್ಲಿ ಬದಲಾಗಿದೆ. 'ಈಗ ನಾನು ಕಲ್ಲು - ಹಳಿಯಲ್ಲ !' ಎನ್ನುತ್ತಿದೆ. ಅದು ಈಗ ಹಸುರು ಹಳ್ಳಿಯಾಗಿದೆ.

**ಬಿದಿರು ಕಟಾವಿಗೂ ಕಾಲ ನಿರ್ಣಯ !**



ಹುಣ್ಣಿಮೆ ಸಂದರ್ಭ ಬಿದಿರು ಕಡಿದರೆ ಹುಳುಬಾದೆ !

ಕಾಡು ಬಿದಿರು ಕಡಿಯಲು ಕಾಲ ಮುಹೂರ್ತ ಮುಖ್ಯವೇ? ಹೌದು ಎನ್ನುತ್ತಾರೆ ಬಳಸಿ ಬಲ್ಲವರು. ಹುಣ್ಣಿಮೆ ಹತ್ತಿರ ಬಂದಾಗ ಬಿದಿರು ಕಡಿದರೆ ನಂತರ ಬಳಸಿದ ಈ ಬಿದಿರಿಗೆ ಹುಳ ಬೀಳುವದು ಜಾಸ್ತಿ ಎಂಬ ನಂಬಿಕೆಯಿದೆ. ಇದು ನಿಜವೇ ? ಎಂದು ಸದಾ ಬಿದಿರು ಬಳಸಿ ಬಲ್ಲ ಮೇದಾರರಲ್ಲಿ ಕೇಳಿದರೆ ' ಇದು ನಿಜ' ಎನ್ನುತ್ತಾರೆ. ಹುಣ್ಣಿಮೆ ಹೊತ್ತಿನಲ್ಲಿ ಬಿದಿರು ಗಳುಪಿನಲ್ಲಿ ಕೀಟಗಳನ್ನು ಸೆಳೆಯುವ ಗುಣ ಜಾಸ್ತಿಯಾಗುತ್ತದೆ ಎಂಬುದಂತೂ ಇದರಿಂದ ಸಾಬೀತು. ಏಕೆ ಹೀಗೆ ? ಉತ್ತರ ಹುಡುಕ ಬೇಕು.

# ಕಾರ್ಲಕಟ್ಟೆಯ ಕಲ್ಲಿನಲ್ಲಿ ಕಾಡು ಬೆರಗು


**ಪಶ್ಚಿಮ ಘಟ್ಟದಲ್ಲಿ ಬ್ರಿಟನ್‌ನ ಸಹಾಯದಿಂದ ಬೆಳೆಸಿದಂತಹ ಡಾಲರ್ ನೆಡುತೋಪು ಇದಲ್ಲ, ಬಯಲು ಸೀಮೆಯಲ್ಲಿ ಜಪಾನಿನ ಸಾಲದಲ್ಲಿ ಬೆಳೆಸಿದ ಯೆನ್ ಕಾಡು ಇದಲ್ಲ. ಬದಲಾಗಿ 'ಆಣೆ ಕಾಡು'. ಊರ ದೇವರೆದುರು 'ಕಾಡು ಕಾಯುತ್ತೇವೆ, ಗಿಡ ಕಡಿಯುವದಿಲ್ಲ' ಎಂದು ಭಕ್ತ ಸಮೂಹ 'ಆಣೆ' ಹಾಕಿ ಬೆಳೆಸಿದ ವಿಶಿಷ್ಟ ಕಾನನ!.**

ಅದು ಕಾರ್ಲಕಟ್ಟೆ ಲಮಾಣಿ ತಾಂಡ. ೪೦೦ ಮನೆಗಳ ಊರ ನಡುವೆ ಶ್ರೀಲಕ್ಷ್ಮಿ ವೆಂಕಟೇಶ್ ದೇವಸ್ಥಾನ. ದೇವಾಲಯದ ಮೈಕ್‌ನಿಂದ ಮುಂಜಾನೆ ಊರಿಗೆ ಕೇಳುವ ಹಾಗೇ ಒಂದು ಸಂದೇಶ. 'ಊರ ಮುಂದಿನ ಗುಡ್ಡದಾಗ ಯಾರಾರೂ ಗಿಡ ಮುಟ್ಟಿದರೆ ಅಂಗಾರ (ದೇವರ ಎದುರಿರುವ ಭಸ್ಮ) ಮುಟ್ಟಿದ್ದಂಗ. ಯಾರೂ ತೊಪ ಲಾ ಮುಟ್ಟ ಬ್ಯಾಡ್ರಿ.... . ಕಟ್ಗಿ ಕಡಿ ಬ್ಯಾಡ್ರಿ' ಧ್ವನಿ ಊರಿಗೆಲ್ಲ ಕೇಳುತ್ತದೆ. ಕಟ್ಟು ಮಸ್ತಾದ ಆಸಾಮಿ ಕೃಷ್ಣಪ್ಪ ಕೈಯಲ್ಲಿ ಕುಡುಗೋಲು ಹಿಡಿದು ಸರಸರ ದೇವರ ಗುಡ್ಡ ಏರ ತೊಡಗುತ್ತಾರೆ. ೧೭೦ ಎಕರೆ ದೇಶದ ಕಾಡು ಗುಡ್ಡದ ಯವುದೋ ಕಲ್ಲು ಬಂಡೆಯಲ್ಲಿ ನಿಂತು ಇಡೀ ಕಾಡಿನ ಕಾವಲು ನಡೆಸುತ್ತಾರೆ. ಹಳ್ಳಿಯ ಜನ ಹೊಲದಲ್ಲಿ ಬೆಳೆಸಿದ ಗಿಡ. ದೂರದಿಂದ ತಂದ ಜಾಲಿ ಕಟ್ಗೆಯನ್ನು ಉರುವಲಿಗೆ ಬಳಸುತ್ತಾರೆಯೇ ವಿನಃ ಪಕ್ಕದ ಗುಡ್ಡದ ಒಂದೇ ಒಂದು ಗಿಡ ಕಡಿಯುವದಿಲ್ಲ.



ಬೈಲಹೊಂಗಲದ ಕಾರ್ಲಕಟ್ಟೆ ಕಾಡು

ಕ್ರಿಶ, ೧೯೪೮–೪೯ರಲ್ಲಿ ಅಲ್ಲಿ ಬೆಟ್ಟದ ತುಂಬ ಬರೀಕಲ್ಲು. ಅಲ್ಲೊಂದು ಇಲ್ಲೊಂದು ಮುಳ್ಳುಕಂಟಿಗಳು. ಮಳೆ ಬರಲಿಲ್ಲ. ಬರಗಾಲ ಬಂತು. ದನಕರುವಿಗೆ ಮೇವಿರಲಿಲ್ಲ. ಊರ ಗುಡಿಯಲ್ಲಿ ಕೂಡಿದ ಜನಸಮೂಹ ಬೋಳಾದ ದೇವರ ಗುಡ್ಡವನ್ನು ಹಸಿರಾಗಿಸಲು ನಿರ್ಧರಿಸಿತು. ಯಾರೂ ಗುಡಕ್ಕೆ ಹೋಗಬಾರದು. ಗಿಡ ಕಡಿಯಬಾರದು. ದನಕರು. ಆಡು ಮೇಯಿಸಬಾರದು ಎಂದು ಅದೇಶಿಸಿದರು. ಕ್ರಿಶ, ೧೯೫೫ರಲ್ಲಂತೂ ಯಾರಾದರೂ ಒಂದು ಕಾಡು ಗಿಡ ಕಡಿದರೆ ಅದೇ ಜಾತಿಯ ಎರಡು ಸಸಿ ನಾಟಿ ಮಾಡಿ ಅಲ್ಲಿ ಬದುಕಿಸಬೇಕೆಂಬ ನೇಮಕ. ನನ್ನ ತಂದೆ ತಾಯಿ ಇರಲಿ. ಅಕ್ಕ – ತಂಗಿ ಇರಲಿ. ಬಂದು ಬಳಗ ಇರಲಿ, ಯಾರೇ ಕಾಡಿನ ತೊಪ್ಪಲು ಕಡಿದರೂ ಶ್ರೀವೆಂಕಟೇಶ್ವರ ಸಾಕ್ಷಿ ಯಾಗಿ ನಿಮಗೆ ತಂದು ಒಪ್ಪಿಸ್ತೀನಿ'. ಎಂದು ಪ್ರತಿಜ್ಞೆ ಗೆಯು ಇವರು ೨೦ ವರ್ಷ ಕಾಡು ಕಾಯ್ದರು !. ದೇವರ ಹುಂಡಿಯ ಹಣದಿಂದ ಈ ವಾಚ್‌ಮೆನ್‌ಗೆ ಆಗಲೇ ೫೦೦ ರೂಪಾಯಿ ಪಗಾರು !. ತಪ್ಪಿತಸ್ಥರ ಶಿಕ್ಷೆಗೆ ದೇವಾಲಯವೇ ಕೋರ್ಟು, ಹಿರಿಯರ ನ್ಯಾಯದಾನ. ಬೇಸಿಗೆಯಲ್ಲಿ ಗಿಡ ಒಣಗತೊಡಗಿದಾಗ ಆ ಕಾಲಕ್ಕೆ ಜನಸೇರಿ ಸೋಮನಗುಂಡಿ ಬಾವಿಯಿಂದ ನೀರು ಎತ್ತಿ ಕಾಡು ಗಿಡಗಳನ್ನು ಪೋಷಿಸಿದರು. 'ಇವತ್ತಿಗೂ ಗಳಿಯ ಹೊಡಿಯ್ಯಾಕ ಬಾರಕೋಲು ಸೈತ ಕಡಿಯೋದಿಲ್ರಿ...., ಕಡಿದ್ರ ದಂಡ ಹಾಕ್ತೇವ್ರಿ...' ಹಳ್ಳಿಗ ಯಂಕಪ್ಪ ರಾಥೋಡ್ ಜಂಗಲ್ಲಿನ ಕಟ್ಟುನಿಟ್ಟಾದ ನಿಯಮ ವಿವರಿಸುತ್ತಾರೆ.



ಆಡು ಕಯುವ ಕೃಷ್ಣಪ್ಪ , ದೇವರ ಹುಂಡಿ ಹಣದಲ್ಲಿ ಇವರಿಗೆ ವೇತನ ನೀಡಿಕೆ !

ನೈಸರ್ಗಿಕ ಸಂಪತ್ತಿನ ರಕ್ಷಣೆಗೆ ಹಳ್ಳಿಗರು ಟೊಂಕ ಕಟ್ಟಿದ ಹೆಮ್ಮೆ ಬಯಲು ಸೀಮೆಯ ಊರಿದು. ಬೇವು, ದಿಂಡಲ, ತೊಗಲಿ, ಆರಿಗಿಡ, ಕಾರಿಗಿಡ, ಕೌಳಿ, ನಗರಿ, ಆಲ, ಬಸರಿ, ಬಣ್ಣದರಣಿ, ಹಾಲಿ, ಚೆಲ್ಲದಗಿಡ, ಗುಗ್ಗಳ, ಬಿಲ್ವಪತ್ರೆ, ಬನ್ನಿ, ಹೊಲ, ಪಿನಿವಾಳ, ಹೆಬ್ಬೇವು, ಬಂಡಾಟಿ, ನೇರಲೆ, ಬಿಕ್ಕೆ ಮುಂತಾದ ಗಿಡಗಳು ಬೆಳೆದಿವೆ. ಹಾಗಂತ ಇಲ್ಲಿನ ಯಾವೊಂದು ಜಾತಿ ಗಿಡವನ್ನು ನಾಟಿ ಮಾಡಿಲ್ಲ, ಬದಲಾಗಿ ನೈಸರ್ಗಿಕವಾಗಿ ಒಂದೊಂದಾಗಿ ಬೆಳೆಯುತ್ತ ಹಸುರು ಸಿರಿ ತುಂಬಿದೆ. ತೋಳ, ಕಾಡುಹಂದಿ, ನವಿಲುಗಳು ಇಲ್ಲಿ ಈಗ ಆಶ್ರಯ ಪಡೆದಿವೆ. ಗೋವಿನ ಜೋಳ, ಕಬ್ಬು, ದ್ರಾಕ್ಷಿ, ಹತ್ತಿ, ಜೋಳ, ಬದನೆ ಮುಂತಾದ ಬೆಳೆ ಬೆಳೆಯುವ ಇಲ್ಲಿ ೪೦೦ ಮನೆಗಳು, ೩ ಸಾವಿರ ಜನಸಂಖ್ಯೆ. ದಸರಾ, ಹೋಳಿಹುಣ್ಣಿಮೆ, ಯುಗಾದಿ ಹಬ್ಬಗಳಲ್ಲಿ ಊರ ಜನ ಸೇರಿ ಆಚರಣೆ. ರಾಮನವಯಿಯಂದು ೩-೪ ಸಾವಿರ ಜನ ಸೇರುವ ದೊಡ್ಡ ಜಾತ್ರೆ, ಅಂದು ಮಧ್ಯಾಹ್ನ ೧೨ಗಂಟೆಗೆ ಸರಿಯಾಗಿ ಎಲ್ಲರೂ ಗುಡಿಗೆ ಬರಬೇಕೆಂದು ಹೊಣಪ್ಪ ಡಂಗುರ ಹೊಡೆಯುತ್ತ ಹೋಗುತ್ತಾರೆ. ಗುಡಿಗೆ ಬಂದವರಿಗೆ ಶಂಕರಪ್ಪ ಬಸಪ್ಪ ಪೂಜಾರ್‌ರಿಂದ ಹಸುರು ವಚನ ಬೋಧನೆ. 'ಮನೆತನ, ಸಂಬಂಧಿಕರು ಯಾರೇ ಇರಲಿ, ತಾಯಿ, ಪತ್ನಿ ಯಾರೇ ಗಿಡಾ.... ಕಡಿದ್ರೂ ಹಿಡಿದು ಒಪ್ಪಿಸ್ತೀನಿ' ಊರಿನ ಜನರೆಲ್ಲ ಈ ದಿನ ದೇವರೆದುರು ಪ್ರತಿ ವರ್ಷ ಪ್ರಮಾಣ ಮಾಡುತ್ತಾರೆ.

ಯಕ್ಕುಂಡಿ ಸನಿಹದ ಕಾರ್ಲಕಟ್ಟೆಯಲ್ಲಿ ಇವತ್ತು ನಾವು ನೋಡುವದು ಪಶ್ಚಿಮ ಘಟ್ಟದಲ್ಲಿ ಬ್ರಿಟನ್‌ನ ಸಹಾಯದಿಂದ ಬೆಳೆಸಿದಂತಹ ಡಾಲರ್ ಕಾಡಲ್ಲ, ಬಯಲು ಸೀಮೆಯಲ್ಲಿ ಜಪಾನಿನ ಸಾಲದಲ್ಲಿ ಬೆಳೆಸಿದ ಯೆನ್ ಕಾಡಲ್ಲ. ಬದಲಾಗಿ 'ಆಣೆ ಕಾಡು' ಹಾಕಿ ಬೆಳೆಸಿದ ಕಾನನ!. ಇಲ್ಲಿದ್ದ ಲಮಾಣಿ ಜನಾಂಗವಾದರೂ ಊರಿನ ಜನವೇ ಹೇಳುವ ಹಾಗೇ ಒಂದು ಕಾಲದಲ್ಲಿ ಕಾಡು ಕಡಿಯುವದರಲ್ಲಿ ನಿಸ್ಸೀಮರು. ಕಟ್ಟಿಗೆ ಹೊರೆಯನ್ನು ಯಕ್ಕುಂಡಿಗೆ ಹೊತ್ತು ಮಾರುವವರು. ಈಗ ಊರಿನ ಗುಡ್ಡದಲ್ಲಿ ಹಸುರು ಬೆಳೆಸಿದ ಹರಿಕಾರರು.

ಇಡೀ ಊರನ್ನು ಹಸುರಿನಲ್ಲಿ ಕಟ್ಟಿದ ವ್ಯಕ್ತಿ ಸೆಕ್ರೇಟರಿ ಶಿವಪ್ಪ ಎಂಬ ಎಲೆ ಮರೆಯ ಪರಿಸರಪ್ರೇಮಿ, ನಾಲ್ಕನೆ ತರಗತಿ ಓದಿದ ಶಿವಪ್ಪ ಹಳ್ಳಿಯಲ್ಲಿ ೧೯೫೫ರಲ್ಲಿ ಜೊಯಿಂಟ್ ಫಾರ್ಮಿಂಗ್ ಸೊಸೈಟಿ ಸ್ಥಾಪಿಸಿದವರು. ೨೦

ಎಕರೆ ಅರಣ್ಯ ಭೂಮಿಯನ್ನು ಕೃಷಿ ಉದ್ದೇಶಕ್ಕಾಗಿ ಸರಕಾರದಿಂದ ಪಡೆದರು. ಬಡ ರೈತರಿಗೆ ಪ್ರತಿ ಕುಟುಂಬಕ್ಕೆ ೨ ಎಕರೆಯಂತೆ ಹಂಚಿದರು. ಎಕರೆಗೆ ೧ ರೂಪಾಯಿ ಭೂ ಬಾಡಿಗೆ. ಪ್ರತಿ ವರ್ಷ ಬಾಡಿಗೆ ವಸೂಲಿಗಾಗಿ ಫಾರ್ಮಿಂಗ್ ಸೂಸೈಟಿ ಸೆಕ್ರೇಟ್ರಿ ಮನೆ ಮನೆ ಓಡಾಟ. ಕೃಷಿಗೆ ಸುಲಭದಲ್ಲಿ ಭೂಮಿ ಒದಗಿಸಿದ ಶಿವಪ್ಪ ಹಳ್ಳಿ ಬಡವರ ಪ್ರೀತಿಯ ಸೆಕ್ರೇಟರಿ ಶಿವಪ್ಪರಾದರು. ಸನಿಹದ ಯಕ್ಕುಂಡಿ, ಧೂಪದಾಳ, ಬಡ್ಲಿ ಎಲ್ಲೆಡೆ ಸೆಕ್ರೇಟರಿ ಶಿವಪ್ಪನಾದರು. ಇವರದು ಕಾರುಬಾರಿ ಮನೆತನ. ಅಂದರೆ ಊರಿನ ಹಿರಿಯ, ನಾಯಕರು ಎಂದರ್ಥ. ಹಳ್ಳಿಗೆ ಸಂಬಂಧಿಸಿದ ಯಾವುದೇ ನಿರ್ಧಾರಕ್ಕೆ ಶಿವಪ್ಪ ಕಾರುಬಾರಿ ಮಾತು ಪ್ರಧಾನ. ಪ್ರೀತಿಯಿಂದ ಬಡ ಹಳ್ಳಿಗರ ಮನಗೆದ್ದ ಶಿವಪ್ಪ ಜನರ ಮನಸ್ಸನ್ನು ಹಸುರಿನತ್ತ ಸೆಳೆದರು. ದೇವಾಲಯವನ್ನು ಕೇಂದ್ರವಾಗಿಸಿ ದೇವರಗುಡ್ಡದಲ್ಲಿ ಹಸುರು ಬೆಳೆಸಿದರು.



ಲಮಾಣಿ ಸಮುದಾಯವನ್ನು ಹಸುರು ಹಾದಿಗೆ ತಂದ ಸೆಕ್ರೇಟರಿ ಶಿವಪ್ಪ

ಈಗ ೭೨ರ ಶಿವಪ್ಪರಿಗೆ ಸರಿಯಾಗಿ ನಡೆದಾಡಲಾಗದು. ಆದರೂ ಮನೆಯಿಂದ ನಿತ್ಯ ಹೊರಗಡೆ ಕೂತು ಎದುರಿನ ದೇವರಗುಡ್ಡ ನೋಡುತ್ತಾರೆ. ಕಾರ್ಲಕಟ್ಟೆಯ ಕಲ್ಲುಗುಡ್ಡದ ಹಸುರು ಅಜ್ಜನ ಜೊತೆ ಮಾತಾಡುತ್ತದೆ.

### ಬಿದಿರು ಬಂದಳಿಕೆ

ಬಂದಳಿಕೆ ಎಂಬ ಪರಾವಲಂಬಿ ಸಸ್ಯ ವಿವಿಧ ಮರಗಳಲ್ಲಿ ಬೆಳೆಯುತ್ತಿದೆ. ಬಂದಳಿಕೆ ಬೆಳೆದಂತೆ ತನಗೆ ಆಶ್ರಯ ನೀಡಿದ ಮರವನ್ನೇ ಸಾಯಿಸುತ್ತದೆ. ಕವಲು ಮರದಲ್ಲಿ ಬೆಳೆದ ಬಂದಳಿಕೆಯನ್ನು ಜಾನುವಾರು ರೋಗಕ್ಕೆ ಔಷಧಿಯಾಗಿ ಬಳಸುತ್ತಾರೆ. ಯಾವ ಮರದ ಬಂದಳಿಕೆ ಯಾವ ರೋಗಕ್ಕೆ ಔಷಧಿ ಎಂಬ ಅರಿವು ನಾಟಿ ವೈದ್ಯರಲ್ಲಿದೆ. ಶಿರಸಿಯ ಹಳ್ಳಿಯೊಂದರಲ್ಲಿ ನಾಟಿ ವೈದ್ಯದ ಕುರಿತ ಹಳೆಯ ಪುಸ್ತಕದಲ್ಲಿ ಬಿದಿರಿನಲ್ಲಿ ಬೆಳೆದ ಬಂದಳಿಕೆಯನ್ನು ಬತ್ತದ ಕಣಜಕ್ಕೆ ಹಾಕಿದರೆ ಕಣಜ ಅಕ್ಷಯ ಪಾತ್ರೆಯಾಗುತ್ತದೆ, ಎಷ್ಟು ವರ್ಷವಾದರೂ ಕಣಜದ ಧಾನ್ಯ ಖರ್ಚಾಗುವದಿಲ್ಲ ಎಂದು ಬರೆಯಲಾಗಿದೆ. ಬಿದಿರಿನ ಬಂದಳಿಕೆ ಹುಡುಕಿ ಕಣಜಕ್ಕೆ ಹಾಕಲು ಈಗ ಯಾರೂ ಹೋಗುವದಿಲ್ಲ, ಏಕೆಂದರೆ ಬಿದಿರಲ್ಲಿ ಬಂದಳಿಕೆ ಬೆಳೆಯುವದಿಲ್ಲ ಎಂಬ ಜ್ಞಾನ ಕಾಡು ಓಡಾಡಿದ ಎಲ್ಲರಿಗೆ ಇದೆ !. ಕಾಡಿನ ಒಂದು ಸಸ್ಯವನ್ನು ಎಷ್ಟು ಸೂಕ್ಷ್ಮವಾಗಿ ನಾಟಿ ವೈದ್ಯರು ಶತಮಾನಗಳ ಹಿಂದೆ ಗಮನಿಸಿದ್ದರು ಎಂಬುದನ್ನು ಇಲ್ಲಿ ಗುರುತಿಸಬಹುದು.

### ಕರಾವಳಿಯ ಎಣ್ಣೆ ಹೊನ್ನೆ

ಕರಾವಳಿ ನದಿಯಂಚಿನಲ್ಲಿ ಹೊನ್ನೆ ಮರ ಬೆಳೆಯುತ್ತದೆ. ಇದನ್ನು ಎಣ್ಣೆ ಹೊನ್ನೆ ಎಂದು ಕರೆಯಲಾಗುತ್ತದೆ. ಹೊನ್ನೆ ಕಾಯಿಗಳಿಂದ ಎಣ್ಣೆ ತೆಗೆದು ದೀಪಗಳಿಗೆ ಬಳಸುವ ಪರಿಪಾಠ ಶತಮಾನಗಳ ಹಿಂದೆ ಇತ್ತು. ಕ್ರಿಶ ೧೮೦೧ರಲ್ಲಿ ಇಲ್ಲಿ ಪ್ರವಾಸ ಮಾಡಿದ ಫ್ರಾನ್ಸಿಸ್ ಬುಕಾನನ್ ಭಟ್ಕಳ ಸನಿಹದ ಶಿರಾಲಿಯಲ್ಲಿ ಹೊನ್ನೆಮರ ನೋಡಿದ್ದಾಗಿ ದಾಖಲಿಸುತ್ತಾರೆ. ಬಯೋಡಿಸೈಲ್ ನೀಡುವ ಈ ಮರವನ್ನು ಆಗ ಬೆಳೆಸುವ ಪರಿಪಾಠವಿತ್ತು.

# 'ದರೋಜಿ' ನೆಲದ ಕರಡಿ – ಕಾಡು

ಕರಡಿ ಸಂರಕ್ಷಣೆಗೆ ಹೊರಟ ನೆಲದಲ್ಲಿ ಕಾಡು ಬೆಳೆದಿದೆ. ಮಲೆನಾಡಿನ ಪ್ರದೇಶದಲ್ಲಿ ಕಂಡು ಬರುವ ಮತ್ತಿ, ನೇರಲ, ಹೊನ್ನೆ, ಬಿದಿರು, ಕಿಂದಳ, ಬೀಟೆ ಮುಂತಾದ ಸಸಿಗಳು ಇದ್ದಕ್ಕಿದ್ದ ಹಾಗೇ ಎದ್ದು ನಿಂತಿವೆ !. ಎಷ್ಟೋ ವರ್ಷಗಳಿಂದ ಭೂಮಿಯೊಳಗೆ ಸಾಯಲೋ ಬಿಡಲೋ ಎಂದು ಜೀವ ಹಿಡಿದುಕೊಂಡಿದ್ದ ಈ ಸಸ್ಯಗಳ ಬೇರುಗಳು ಸಂರಕ್ಷಣೆಯ ಅವಕಾಶದಲ್ಲಿ ಇಮ್ಮಡಿ ಉತ್ಸಾಹದಲ್ಲಿ ಚಿಗುರಿವೆ.

ರಾಜ್ಯದ ಬಯಲು ಸೀಮೆಯಲ್ಲಿ ಮತಂಗವನವೆಂಬ ವಿಶಾಲ ಅಡವಿ ಇತ್ತೆಂದೂ, ಅದರಲ್ಲಿ ಮತಂಗ, ಗಾಲವ, ಜಮದಗ್ನಿ ಮುಂತಾದ ಋಷಿಗಳು ವಾಸಿಸುತ್ತಿದ್ದರೆಂದೂ, ಕಾಡಿನ ಪೂರ್ವ ಭಾಗದಲ್ಲಿ ಪಂಪಾ ಎಂಬ ಹೊಳೆಯಿಂದ ನಿರ್ಮಾಣವಾದ ಪಂಪಾಸರೋವರ, ದಂಡೆಯಲ್ಲಿ ಋಷ್ಯಮೂಲಕವೆಂಬ ಪರ್ವತದ ಅಡವಿ, ಅಲ್ಲಿ ಕಿಷ್ಕಿಂದೆಯೆಂಬ ವಾನರ ರಾಜಧಾನಿ!. ಇದೇನು ಇದ್ದಕ್ಕಿದ್ದ ಹಾಗೇ ಪುರಾಣ ಪ್ರವಚನ ಶುರುವಾಯ್ತು ಎಂದು ಹುಬ್ಬೇರಿಸಬೇಡಿ! ಕಿಷ್ಕಿಂಧೆಯೇ ಈಗಿನ ನಮ್ಮ ಹಂಪಿ ಕ್ಷೇತ್ರ ಎನ್ನಲಾಗುತ್ತದೆ. ಹಂಪಿಯ ಸುತ್ತ ದಟ್ಟ ಕಾಡಿತ್ತು ಎಂಬುದಕ್ಕೆ ಪುರಾಣ ಸಾಕ್ಷಿ ಇದು.



ಕರಡಿ ಸಂರಕ್ಷಣೆಯಿಂದ ದರೋಜಿಯಲ್ಲಿ ಕಾಡು ಬೆಳೆಯಿತು

ಹಂಪಿಯನ್ನು ಸೇರಿಕೊಂಡ ಬಳ್ಳಾರಿಸೀಮೆ ಪೂರ್ವಾಶ್ರಮದಲ್ಲಿ ದಟ್ಟ ಕಾಡು ಹೊಂದಿತ್ತು ಎಂಬುದನ್ನು ಎಂತಹ ಸಾಕ್ಷ್ಯಕೊಟ್ಟರೂ ಈಗ ಯಾರೂ ಒಪ್ಪಲಾರರು. ಬಂಡೆ ಬೆಟ್ಟ, ಬೋಳುಗುಡ್ಡ, ಬಳ್ಳಾರಿಜಾಲಿ ಬಿಟ್ಟರೆ ಹಸುರು ಗಾವುದ ದೂರ. ಕಾಡಿನ ಕತೆಗಳಿಗಿಂತ ಗಣಿಗಾರಿಕೆ ಆರ್ಭಟಕ್ಕೆ ಪರಿಸರವನ್ನು 'ಕಾಡುವ' ಕತೆಗಳೇ ತುಂಬಿವೆ. ಇಡೀ ಸೀಮೆಗೆ ಸಂಡೂರು ಕಣಿವೆ ಜಿಲ್ಲೆಯ ಹಸುರು ಸಿರಿ. ಮಿಕ್ಕಿದ್ದೆಲ್ಲಾ ಜಿಂದಾಲ್ ಕಣಿವೆಯ ಕೆಂಪು ದೂಳು, ಗಣಿ ದಧ್ದಿನ ಮುಖ, ಕುರಿಗಾಹಿ ಕೊಕ್ಕೆಗೆ ಹಸಿರು ತೆತ್ತು ಸೊರಗಿದ ವಿಕಲಾಂಗ ಬೇವಿನ ಮರಗಳು. ಇದೇ ಬಳ್ಳಾರಿ ಬಿಳಿಕಲ್ ಕಾಯ್ದಿಟ್ಟ ಕಾಡಿನ ಸರ್ವೆ ನಡೆಸಿ ನಕ್ಷೆ ಬರೆದ ಬ್ರಿಟೀಷರು ಕ್ರಿ.ಶ, ೧೮೬೫ರಲ್ಲಿ ಅಲ್ಲಿನ ಗುಡ್ಡವನ್ನು 'ಕರಡಿ ಗುಡ್ಡ'ವೆಂದು ಕರೆದಿದ್ದಾರೆ. ಹಂಪಿ ಬಳಿ ಜಂಬನಾಥಗುಡ್ಡವಿದೆ. ಕರಡಿ ವಾಸಿಸುವಂತಹ ಪರಿಸರ ಪರಿಸ್ಥಿತಿ ಬಯಲು ಭೂಮಿಯಲ್ಲಿತ್ತು ಎಂಬುದಕ್ಕೆ ಜನಪದರ ಬಾಯಲ್ಲೂ ಮಾಹಿತಿ, ಆಧಾರಗಳಿವೆ. ಕಾಡು ಹುಡುಕುತ್ತ ಹೊರಟವರಿಗೆ ಕರಡಿ ಅಡ್ಡ ಬಂತು ಎನ್ನಬೇಡಿ, ಅಸಲು ಕರಡಿಯೇ ಇವತ್ತಿನ ಕಾಡಿನ ಕತೆಯ ಕಥಾ ನಾಯ(ಕಿ)ಕ!.

ವಿಜಯನಗರ ಸಾಮ್ರಾಜ್ಯದ ಹೆಬ್ಬಾಗಿಲು ಅರ್ಥಾತ್ ದರ್ವಾಜಿ ಈಗಿನ ದರೋಜಿ ಹಳ್ಳಿ, ಇದರಾಚೆ ಬಿಳಿಕಲ್ ಕಾಯ್ದಿಟ್ಟ ಕಾಡು. ಬೆಟ್ಟದಲ್ಲಿ ಹಸುರು ಹುಡುಕ ಬೇಕು, ಕಾವಲಿಯಿಂದ ಬೆಂಕಿಗೆ ಬೀಳುತ್ತ ಹೇಗೋ ಬದುಕಿದ ಬೆರಳೆಣಿಕೆ ಕರಡಿಗಳು. ಪಾಳ್ಯದ ಗುಡ್ಡದ ಕಲ್ಲುಗುಹೆಗಳಲ್ಲಿ ಹಗಲಿಡೀ ಠಿಕಾಣಿ. ರಾತ್ರಿಯಾದರೆ ಕುಣಿತ ನಿತ್ಯದ ರಂಪಾಟ. ಕಾಡು ಕರಡಿ ಊರೆಲ್ಲಾ ದಾಂದಲೆ ಹರಡಿ, ಬೆಳೆ ನಷ್ಟಕ್ಕೆ ಬೇಸತ್ತವರು ಕಾಡನ್ನೆ ಬಿಟ್ಟು ಹೊರಡಿ ಎಂದು ಕರಡಿ ಬದುಕಿನ ಮೇಲೆ ಹುಕುಂ ಚಲಾಯಿಸುವ ಹೊತ್ತು. ಅಷ್ಟರಲ್ಲಾಗಲೇ ಕರಡಿಗಳಿಗೆ ಕಾಡು ನೆಲದಲ್ಲಿ ಆಶ್ರಯ ಒದಗಿಸಲು ವನ್ಯ ಪ್ರೇಮಿಗಳು ಮುಂದಾದರು. ಪರಿಸರ ಪ್ರೇಮಿಗಳ ಆಸಕ್ತಿಯಿಂದ ಸುಮಾರು ೧೪ ಸಾವಿರ ಎಕರೆ ಪ್ರದೇಶ ಜಾಂಬವಂತರ ಬದುಕಿಗೆ ಮೀಸಲಾಯ್ತು. ವನ್ಯಜೀವಿ ಛಾಯಾಗ್ರಾಹಕ ಹಾಗೂ ಸಚಿವ ಎಮ್. ವಾಯ್. ಘೋರ್ಪಡೆ ವಿಶೇಷ ಪ್ರಯತ್ನದಿಂದ ಕ್ರಿ.ಶ, ೧೯೯೪ರ ಅಕ್ಟೋಬರ್‌ನಲ್ಲಿ ದರೋಜಿ ಕರಡಿಧಾಮವಾಗಿ ಅಧೀಕೃತ ಘೋಷಣೆ, ವನ್ಯಜೀವಿ ವಿಭಾಗಕ್ಕೆ ಸೇರ್ಪಡೆ. ನಂತರ ಕ್ರಿ.ಶ, ೧೯೯೮ರಲ್ಲಿ ಇಲ್ಲಿ ಇದ್ದದ್ದು ೬೫ ಕರಡಿಗಳು. ನಿತ್ಯ ಸಂಜೆ ಐದು ಗಂಟೆಗೆ ದರೋಜಿ ವೀಕ್ಷಣಾ ಬಂಡೆಯೇರಿ ಕುಳಿತರೆ ಕಲ್ಲುಗುಹೆಗಳಿಂದ

ಈಚೆ ಬರುವ ಕರಡಿಗಳು ಅರಣ್ಯ ಇಲಾಖೆ ಆಹಾರವಾಗಿ ಇಟ್ಟ ಬಾಳೆಗೊನೆ ತಿನ್ನುತ್ತವೆ. 'ಈಗ ನಾವು ನೂರಾಗಿದ್ದೇವೆ' ಎಂದು ಸಾರುತ್ತವೆ.

ಕರಡಿ ಧಾಮಕ್ಕೆ ೧೫ ವರ್ಷಗಳಾಗಿವೆ. ಕರಡಿಗಳ ಜೊತೆ ಕಾಡು ಅಚ್ಚರಿಯಾಗಿ ಬದಲಾಗಿದೆ. ವಿಜಯನಗರದ ಹೆಬ್ಬಾಗಿಲು, ಹೆಬ್ಬಂಡೆಗಳ ಬೆಟ್ಟ, ಪಾಳ್ಯದ ಗುಡ್ಡವನ್ನೆಲ್ಲ ಬುಡಮೇಲು ಮಾಡಲು ಗಣಿಗಾರಿಕೆಯವರು ನಡೆಸಿದ್ದ ಪೈಪೋಟಿ ಮೂಲೆಗುಂಪಾಗಿದೆ. ಕಲ್ಲಿಗೆ ಬೆಲೆ ಕಟ್ಟುವ ನೆಲದಲ್ಲಿ ಕಾಡು ಕರಡಿಗೆ ಪ್ರೀತಿ ತೋರಿಸಿದೆ ಬಳಿಕ ನೆಲದ ತುಂಬ ಹಸಿರು ಸೂಸಿದೆ. ಚೋಟುದ್ದ ಗಿಡವನ್ನೂ ಬಿಡದೇ ಉರುವಲು, ಕೃಷಿ, ಜಾನುವಾರು ಮೇವಿಗಾಗಿ ಮುಗಿಸುವದೊಂದೇ ಪರಿಪಾಠವಾದ ನೆಲಕ್ಕೆ ಈಗ ೧೫ ಜನ ಕಾವಲುಗಾರರು. ಕಮಲಾಪುರ, ಒಡ್ಡಿನಗೆರೆ, ಚಿನ್ನಾಪುರ, ನಲ್ಲಾಪುರ, ದೇವಲಾಪುರ, ದರೋಜಿ, ಕುರೇಕೊಪ್ಪ, ಗಾದಿಗನೂರು, ಭೂವನಹಳ್ಳಿ, ಧರ್ಮಸಾಗರ, ಪಾಪಿನಾಯಕನಹಳ್ಳಿ ಮುಂತಾದ ಕಾಡಿನ ಸುತ್ತಲಿನ ಹಳ್ಳಿಗರ ಕಾಡು ಕಡಿತ, ಬೆಂಕಿ ಪ್ರಹಾರ, ಅತಿಕ್ರಮಣಕ್ಕೆ ತಡೆಬಿದ್ದಿದೆ. ಮೇಲುಸ್ತುವಾರಿಗೆ ವಲಯ ಅರಣ್ಯಾಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಜಾಗ್ರತಿವಹಿಸಿದರು. ೨೦ ಕಿಲೋ ಮೀಟರ್ ಉದ್ದಕ್ಕೆ ಕಲ್ಲಿನ ರಕ್ಷಣಾ ಗೋಡೆ ಎದ್ದಿದೆ. ಸೀತಾಫಲ, ನೇರಲು, ಹಲಸು, ಹುಣಸೆ, ಅತ್ತಿ, ಆಲ ಮುಂತಾಗಿ ೨೦೦ ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯ ಇಲಾಖೆ ಸಸಿ ಬೆಳೆಸಿದೆ. ೨೦ ಕೆರೆಗಳು, ೪ ವೀಕ್ಷಣಾಗೋಪುರ ಹೀಗೆ ನೆಲಜಲ ಸಂರಕ್ಷಣೆಯ ಪ್ರಯತ್ನ ಸಾಗಿದೆ. ಆರಂಭದ ದಿನದಲ್ಲಿ ಕರಡಿ ರಕ್ಷಣೆ ಕಾನೂನಿನಿಂದ ಜನ ತೊಂದರೆ ಅನುಭವಿಸಬೇಕಾಗುತ್ತದೆಂದು ವಿರೋಧಿಸಿದ ಹಳ್ಳಿಗರೇ ಸ್ವತಃ ಸಂರಕ್ಷಣೆಗೆ ಮುಂದಾದರು. ಅಧಿಕಾರಿಗಳ ಆಸಕ್ತಿ, ಹಳ್ಳಿಗರ ಸಹಕಾರ ಒಂದಾಯಿತು.

ಈಗ ದರೋಜಿ ನೆಲ ಮಾತಾಡುತ್ತದೆ. ಸಂರಕ್ಷಣೆ ಪರಿಣಾಮಕಾರಿ ಯಾಗಿದ್ದರೆ ಸಸಿ ನಾಟಿ ಮಾಡದೇ ಕಾಡು ಬೆಳೆಸಬಹುದೆಂಬುದನ್ನು ಸಾರುತ್ತದೆ. ಕರಡಿ ಸಂಸಾರಕ್ಕಾಗಿ ಜಾನಿ, ಉಲ್ಪಿ, ಲೇಬಿ, ಕವಳೆ, ಬಾರೆ, ಗೊರವಿ, ಕಲ್ಲಂಟಿ ಮುಂತಾದ ಹಣ್ಣುಗಳು ನೈಸರ್ಗಿಕವಾಗಿ ದೊರೆಯುತ್ತದೆ. 'ಮಲೆನಾಡಿನ ಪ್ರದೇಶದಲ್ಲಿ ಕಂಡು ಬರುವ ಮತ್ತಿ, ನೇರಲ, ಹೊನ್ನೆ, ಬಿದಿರು, ಕಿಂದಳ, ಬೀಟೆ ಮುಂತಾದ ಸಸಿಗಳು ಇದ್ದಕ್ಕಿದ್ದ ಹಾಗೇ ಬೆಳೆದಿವೆ. ಎಷ್ಟೋ ವರ್ಷಗಳಿಂದ ಭೂಮಿಯೊಳಗೆ ಸಾಯಲೋ ಬಿಡಲೋ ಎಂದು

ಜೀವ ಹಿಡಿದುಕೊಂಡಿದ್ದವು ಸಿಕ್ಕ ಅವಕಾಶದಲ್ಲಿ ಇಮ್ಮಡಿ ಉತ್ಸಾಹದಲ್ಲಿ ಚಿಗುರಿವೆ. 'ಬಳ್ಳಾರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಜಶೇಖರ ಕರಡಿ ರಕ್ಷಿಸಿದ ನೆಪಕ್ಕೆ ಕಾಡು ಬದಲಾದ ಸ್ವರೂಪ ವಿವರಿಸುತ್ತಾರೆ. ವೈವಿಧ್ಯಮಯ ಹುಲ್ಲು, ಮೂಲಿಕೆಗಳು ಮಣ್ಣಿನ ಸ್ವರೂಪವನ್ನೇ ಬದಲಿಸಿಸುತ್ತಿವೆ. ಕಾಡು ಕಡಿತ ನಿಶೇಧ, ಬೆಂಕಿ ತಡೆ, ಜಲ ಸಂರಕ್ಷಣೆ, ಜಾನುವಾರುಗಳಿಂದ ರಕ್ಷಣೆ ನೀಡಿದರೆ ಕಾಡು ಸುಲಭದಲ್ಲಿ ಎಲ್ಲೆಡೆ ಬೆಳೆಯುತ್ತದೆ ವಲಯ ಅರಣ್ಯಾಧಿಕಾರಿ ಎಸ್, ಎಸ್, ಮಠ ಅನುಭವದ ಮಾತಾಡುತ್ತಾರೆ. ಚಿರತೆ, ತೋಳ, ನರಿ, ಕತ್ತೆ, ಕಿರುಬ, ನವಿಲು, ಕಲ್ಲಾಮೆ ಹೀಗೆ ಜೀವಸಂಕುಲ ಅಲ್ಲಿ ಹೆಚುತ್ತಿದೆ. ಬಯಲುನಾಡಿನ ಪ್ರವಾಸಿ ತಾಣವಾಗಿ ವರ್ಷಕ್ಕೆ ೩–೪ ಸಾವಿರ ಜನರನ್ನು ಸೆಳೆಯುತ್ತಿದೆ.

ದರೋಜಿ ಅಚೆ ಇದ್ದದ್ದು ಬುಕ್ಕಸಾಗರ ಕಾಯ್ದಿಟ್ಟ ಅರಣ್ಯ. ಅದು ಈಗ ಅಕ್ಷರಶಃ ಅದು ಕಡಿದುಬಿಟ್ಟ ಅರಣ್ಯ, ಬೋಳು ಗುಡ್ಡ. 'ಹತ್ತು ವರ್ಷದ ಹಿಂದೆ ದರೋಜಿ ಕೂಡಾ ಹಾಗೇ ಇತ್ತು.' ಬಲ್ಲವರು ಬೆರಳುತೋರಿಸುತ್ತಾರೆ. ಬೇರು ಮೂಲಕ್ಕೆ ಸಂರಕ್ಷಣೆ ಮುಖೇನ ಬೆಳೆವ ಅವಕಾಶ ದೊರೆತರೆ ಎಲ್ಲೆಡೆ ನೆಲದ ಮುಖ ಬದಲಿಸಬಹುದು. ದಾಖಲೆಯ ವಿಶ್ವಾಸ ದರೋಜಿಯಲ್ಲಿದೆ.

**ಹುಲಿ ಬರಕನ ಹೂ**



ಹುಲಿ ಬರಕನ ಹೂ – ಹುಲಿ ಕತೆ ಹೇಳುತ್ತದೆ

ಕರಾವಳಿ, ಮಲೆನಾಡು ಹಾಗೂ ಅರೆ ಮಲೆನಾಡಿನಲ್ಲಿ ಹುಲಿ ಬರಕನ (Moullava Spicafa (Daiz) ಹೂ ಎಂಬ ಹೂವು ಕಾಡಿನ ಮುಳ್ಳು ಬಳ್ಳಿಯಲ್ಲಿ ನವೆಂಬರ್ ಹೊತ್ತಿಗೆ ಅರಳುತ್ತದೆ. ಇದನ್ನು ಮಾಲತಿ ಹೂ, ತುಳಸಿ ಹಬ್ಬದ ಹೂ ಎಂದು ಕರೆಯಲಾಗುತ್ತದೆ. ಬಳ್ಳಿ ಮೈಗೆ ತಾಗಿದರೆ ತರಚುಗಾಯ ಗ್ಯಾರಂಟಿ. ಇದರಿಂದಾಗಿ ಬಳ್ಳಿಗೆ ಹುಲಿ ಬರಕನ ಹೂ ಎಂಬ ಹೆಸರು ಬಂದಿರಬಹುದು. ನಮ್ಮ ಜನಪದರ ನಂಬಿಕೆಯೊಂದು ಈ ಹೂವಿನ ಸುತ್ತ ತಗಲಿಕೊಂಡಿದೆ. ಇದು ಹೂವರಳಿಸಿದರೆ ಕಾಡಲ್ಲಿ ಸಂಚರಿಸುವವರು ಎಚ್ಚರದಿಂದ ವರ್ತಿಸಬೇಕು ಎಂದು ಅಪಾಯದ ಫಲಕ ಇದು ! ಈ ಹೂವು ಅರಳಿದ ಕಾಲಕ್ಕೆ ಹುಲಿಗಳು ಬೆದೆಗೆ ಬರುತ್ತವಂತೆ, ಹುಲಿ ಬೆದೆಗೆ ಬಂದಾಗ ಮನುಷ್ಯರ ಮೇಲೆ ಸರ್‍ರನೆ ಏರಿ ಬರಬಹುದು. ಇಂತಹ ತುರ್ತು ಸಂದೇಶವನ್ನು ಸಾಮಾನ್ಯ ಜನಕ್ಕೆ ಹೇಳಲು ಕಾಡು ಹೂವು ಮಾಧ್ಯಮವಾಗಿದೆ. ಅಷ್ಟು ದೂರದಿಂದಲೇ ನಮ್ಮನ್ನು ಸೆಳೆಯುವ ಹುಲಿ ಬರಕನ ಕೆಂಪು ಹೂ ಈಗಲೂ ಹುಲಿಯ ನೆನಪು ಮೂಡಿಸುತ್ತದೆ.

### ಗೆದ್ದಲು ತಡೆಗೆ ಒರಲೆ ಬಳ್ಳಿ

ಉತ್ತರ ಕನ್ನಡದ ಯಲ್ಲಾಪುರ ಬರಬಳ್ಳಿಯಲ್ಲಿನ ಕಾಡು ಬಳ್ಳಿಯೊಂದಕ್ಕೆ ಒರಲೆ ಬಳ್ಳಿ ಎಂಬ ಹೆಸರಿದೆ. ಇದನ್ನು ಗೆದ್ದಲು ನಿಯಂತ್ರಣಕ್ಕೆ ಹಳ್ಳಿಗರು ಬಳಸುವ ಪರಿಪಾಟವಿತ್ತು. ಮನೆ ನಿರ್ಮಿಸುವಾಗ ಕಂಬ ಹುಗಿಯುವ ಜಾಗಗಳಲ್ಲಿ ಈ ಬಳ್ಳಿ ಚೂರುಗಳನ್ನು ಹಾಕಿ ಒರಲೆ ನಿಯಂತ್ರಣ ಮಾಡುತ್ತಿದ್ದರು.

# ಜೋಗಿಮಟ್ಟಿ

## ಬಯಲು ನೆಲದ ಹಸುರು ಶಕ್ತಿ

'ಕಾಡು ನೆಲಕ್ಕೆ ಪ್ರೋಟೆಕ್ಷನ್ ಕೊಡಿ, ಪ್ಲಾಂಟೇಷನ್ ಯೋಚನೆ ಬಿಟ್ಟುಬಿಡಿ' ಚಿತ್ರದುರ್ಗದ ಜೋಗಿಮಟ್ಟಿಯಲ್ಲಿ ಅರಣ್ಯಾಭಿವೃದ್ಧಿ ಪಾಠಕ್ಕೆ ನೆಲದ ನೇರ ಧ್ವನಿ. ಸುತ್ತಲಿನ ಕಾಡು ನೋಡಿದರೆ ಬಯಲು ಸೀಮೆಯಿಂದ ಹೈಜಾಕ್ ಆಗಿ ಮಲೆನಾಡಿಗೆ ಬಂದ ಅನುಮಾನ. ಬೋಳು ಹೊಲ, ಬೇವಿನ ಮರ ಮಾತ್ರ ಕಾಣಬಹುದಾದಲ್ಲಿ ಮಲೆನಾಡಿನ ಗಿಡಜಾತಿಗಳ ಮೇಲುಗೈ, ಅವಿರೋಧ ಆಯ್ಕೆ. ಸಹಜ ಸೃಷ್ಟಿ.

ಉಪನಾಯಕನಹಳ್ಳಿಯ ಜೋಗಿ ಜನಾಂಗಕ್ಕೆ ನಾಡಿನ ಮನೆ ಮನೆಯ ಪ್ರಾಚೀನ ಇತಿಹಾಸ, ವಂಶಾವಳಿ ಹೇಳುವ ಕಾಯಕ. ಹಿರಿ ಜೋಗಿಗಳು ಮಾಸಿದ ಕಡತ ಬಿಚ್ಚಿದರೆ ಸನಿಹದ ಜೋಗಿಮಟ್ಟಿ ಹಳೆಯ ಕತೆ. ಇಲ್ಲಿನ ಹಳ್ಳಿಗ ಪಟೇಲ್ ಮಲ್ಲಪ್ಪ ಹಾಗೂ ಕೆ.ಗೋಪಾಲರಂತೂ ಸೀದಾ ನಮ್ಮನ್ನು ೧೨ನೇ ಶತಮಾನಕ್ಕೆ ಒಯ್ದು ನಿಲ್ಲಿಸುತ್ತಾರೆ. ಆ ಕಾಲಕ್ಕೆ ಮಚ್ಚೇಂದ್ರನಾಥ ರೆಂಬ ಯೋಗಿಗಳು ದವಳಪ್ಪನಗುಡ್ಡದ ಮಾರ್ಗವಾಗಿ ಕಾಡುಗುಡ್ಡ ಸಂಚರಿಸಿ ಗಿಡಮೂಲಿಕೆ, ರಸೌಷಧ, ಸಿದ್ಧೌಷಧಗಳ ಆಗರವಾದ ಇಲ್ಲಿ ನೆಲೆಸಿದರು. ಜೋಳಿಗೆ ಹಾಕಿಕೊಂಡು ಊರೂರಲ್ಲಿ ಭಿಕ್ಷಾಟನೆ ಮಾಡಿ ಭಕ್ತರಿಗೆ ಬೆಟ್ಟದಲ್ಲಿ ಅನ್ನಸಂತರ್ಪಣೆ ನಡೆಸುತ್ತಿದ್ದರು. ಹಳ್ಳಿಗರ ರೋಗರುಜಿನಿಗಳಿಗೆ ಔಷಧ ಉಪಚಾರ ಮಾಡುತ್ತಿದ್ದರು. ಜೋಗಿಸಿದ್ದೇಶ್ವರೆಂದು ಹೆಸರಾದ ಅವರು ಇಲ್ಲಿ ಸಜೀವ ಸಮಾಧಿಯಾದರೆಂದು ಕಾಲದ ಇತಿಹಾಸ ಹೇಳುತ್ತಾರೆ. ಮುಂದೆ ಈ ಪ್ರದೇಶ ಜೋಗಿ ಮರಡಿ, ಜೋಗಿಮಟ್ಟಿ ಎಂದು ಪ್ರಸಿದ್ಧವಾಯಿತು. ಗಿಡಮೂಲಿಕೆಗಳ ಆಗರ, ಯೋಗಿಗಳ ನೆಲೆಯಾಗಿ ಮೆರೆದ ಸ್ಥಳದಲ್ಲಿ ಈಗ ಮೂರು ದಶಕಗಳ ಹಿಂದೆ ಕಾಣುತ್ತಿದ್ದುದು ಬೋಳು ಬೆಟ್ಟ, ಬಂಡೆಗಲ್ಲು !. ನಾಗರಹಾವು ಸಿನೆಮಾ ನೋಡಿದರೆ ನಿಮಗಿದು ಇನ್ನಷ್ಟು ಪಕ್ಕಾ ಅರ್ಥವಾಗುತ್ತದೆ. 'ಬಾರೇ .. ಬಾರೇ ... ಚೆಂದದ ಚೆಲುವಿನ ತಾರೆ .....' ಹಾಡು ಇಲ್ಲಿಯೇ ಚಿತ್ರೀಕರಣವಾಗಿದೆ. ಹುಲ್ಲುಗಾವಲು, ಕಲ್ಲುಗುಡ್ಡ ಮಾತ್ರ ಪರಿಸರ ಸಾಕ್ಷಿಯಾಗಿ ಸಿನೆಮಾದಲ್ಲಿ ಕಾಣುತ್ತದೆ.


ದನಕರುಗಳ ಮೇವು, ಆಡು, ಕುರಿಗಳಿಗಾಗಿ ಗಿಡ ಕಟಾವು. ಇಂಗಳದಾಳ್, ಲಮಾಣಿಹಟ್ಟಿ, ಕುಂಚಿಗಿನಾಳ, ಓಬಯ್ಯನಹಳ್ಳಿ, ಉಪನಾಯಕನಹಳ್ಳಿ, ನಂದಿಪುರ, ಗಂಜಿಗಟ್ಟಿ, ಜಾನ್‌ಕೊಂಡ, ಈರಜ್ಜನಹಟ್ಟಿ ಹೀಗೆ ಸುತ್ತಲಿನ ಹಳ್ಳಿಗರಿಂದ ದಿನ ಬೆಳಗಾದರೆ ಬೆಟ್ಟಕ್ಕೆ ದಂಡಯಾತ್ರೆ. ಸೌದೆಗಾಗಿ ಕುರುಚಲು ಗಿಡವೂ ಬುಡ ಸಮೇತ ಖಾಲಿ. ಸುಲಭಕ್ಕೆ ಬೆಳೆವ ದಿಂಡಗ ಗಿಡ ಲಮಾಣಿಗರ ತಲೆಹೊರೆಯಾಗಿ ಗುಡ್ಡವಿಳಿದು ಚಿತ್ರದುರ್ಗ ಪೇಟೆಗೆ ಮಾರಾಟಕ್ಕೆ ಹೊರಟಾಗಂತೂ ಹಸುರು ಪ್ರೇಮಿಗಳು ಹೌಹಾರಿದ್ದರು. ಯಾರಿಗೂ ಕಾಡಿನ ಕನಿಷ್ಠ ಕನಸು ಉಳಿದಿರಲಿಲ್ಲ. ಜೋಗಿಸಿದ್ದೇಶ್ವರರು ನೆಲೆಸಿದ ಇತಿಹಾಸ ಬಲ್ಲವರಿಗೂ ಜೋಗಿಮಟ್ಟಿಯ ಹಸುರು ಜಗತ್ತು ಊಹಿಸಲೂ ಸಾಧ್ಯವಿರದಷ್ಟು ಎಕ್ಕುಟ್ಟಿ ಹೋಗಿತ್ತು. ಬೇಸಿಗೆ ಬಂದರೆ ಇಡೀ ಗುಡ್ಡ ಬೆಂಕಿ ಮನೆ. ಮಣ್ಣು ಸವಕಳಿಯಾಗಿ ಗಿಡಗಂಟಿಗಳ ಸಜೀವ ಸಮಾಧಿ.



ಜೋಗಿಮಟ್ಟಿ ಈಗ ಮರಗಳ ಬೀಡು

ಚಿತ್ರದುರ್ಗ ಪೇಟೆಯಿಂದ ೧೨ ಕಿಲೋ ಮೀಟರ್ ದೂರ, ಸಮುದ್ರಮಟ್ಟದಿಂದ ೩೮೦೩ ಅಡಿ ಎತ್ತರದ ಇದು ಇಂದು ಬಯಲು ನಾಡಿನ ಸಸ್ಯಕಾಶಿ. ೧೦.೭೧೮ ಹೆಕ್ಟೇರ್ ಪ್ರದೇಶದ ಕಾಡು ಪ್ರಯೋಗ ಭೂಮಿ. ಮೊದಲ ಬಾರಿಗೆ ಕರ್ನಾಟಕ ಅರಣ್ಯ ಇಲಾಖೆ ಹಾದಿ ತಪ್ಪಿ ನಡೆದ ಬಳಿಕ ಅನಾವರಣವಾದ ಬೆರಗು. ಅರಣ್ಯಾಭಿವೃದ್ಧಿ ಎಂದರೆ ಬುಲ್ಡೋಜರ್ ಓಡಿಸುವದು, ಗುಂಡಿತೋಡಿ ಸಾಲಿನಲ್ಲಿ ಗಿಡ ನೆಡುವದು, ಏಕಜಾತಿ ನೆಡುತೋಪು ಬೆಳೆಸುವದು ಎಂಬುದು ೨೦೦ ವರ್ಷಗಳಿಂದ ಚಾಚೂತಪ್ಪದೆ

ನಡೆದ ಹಾದಿ. ನಾವು ಖಾಕಿ ಯೂನಿಫಾರ್ಮ್ ತೊಟ್ಟ ಹಾಗೇ ಅರಣ್ಯಕ್ಕೂ ಒಂದು ಸಮವಸ್ತ್ರ ಉಡುಗೊರೆ. ನೆಡುತೋಪಿನತ್ತ ಅಚಲ ಮಾರ್ಗ ಪ್ರೀತಿ. ಹತ್ತು ಅಡಿ ಚೌಕದ ಭೂಮಿಯಲ್ಲಿ ಕಣ್ತೆರೆದು ನೋಡಿದರೆ ಹತ್ತಾರು ಜಾತಿ ಸಸ್ಯ ಕಾಣುವ ಪಶ್ಚಿಮ ಘಟ್ಟದಲ್ಲಿ ಕೂಡಾ ರಾಜ್ಯದ ದೊಡ್ಡ ಜಮೀನ್ದಾರ ಅರಣ್ಯ ಇಲಾಖೆ ಅಕೇಸಿಯಾ, ಕ್ಯಾಸುರೀನಾ, ತೇಗ ನೀಲಗಿರಿ, ಫೈನಸ್ ಬೆಳೆಗಾಗಿ ಅನುಸರಿಸಿದ್ದು ಕಾಲದ ರೈತರ 'ಕುಂಬ್ರಿ ಕೃಷಿ' ಪ್ರತಿಕೃತಿ !.



ಮಣ್ಣು, ನೀರಿನ ಸಂರಕ್ಷಣೆ ಅರಣ್ಯ ಅಭಿವೃದ್ಧಿಗೆ ಪ್ರೇರಣೆ

ಜೋಗಿಮಟ್ಟಿ ಹಾಗಲ್ಲ, ಪರಂಪರೆ ಹಾದಿ ಆಚೆ ದೂರ ನಡಿಗೆ, ಸಸಿ ನಾಟಿಗಿಂತ ಸಂರಕ್ಷಣೆ ಪ್ರಧಾನ ಆದ್ಯತೆ. ಎರಡು ದಶಕದ ಪರಿಣಾಮ ನೋಡಿದರೆ ನಾಡಿನ ಸಸ್ಯಸಿರಿಗಳೆಲ್ಲ ನೈಸರ್ಗಿಕವಾಗಿ ಬೆಳೆದಿವೆ. ರಾಯಚೂರು ಸೀಮೆ ಕರಿಜಾಲಿ, ಬಳ್ಳಾರಿ ಜಾಲಿ. ಮೊಳಕಾಲ್ಮೂರಿನ ಕಮರ, ಖಾನಾಪುರದ ಅಣಾಲೆ, ಮಲೆನಾಡಿನ ಬೆಟ್ಟ ಹೊನ್ನೆ, ಚಿಕ್ಕಮಂಗಳೂರಿನ ಶ್ರೀಗಂದ, ಬಂಜರು ನೆಲದ ಕಳ್ಳಿಗಿಡಗಳನ್ನು ಒಂದು ನೋಟ, ಒಂದೇ ಬೆಟ್ಟದಲ್ಲಿ ನೋಡುವಾಗಂತೂ ಸಮ್ಮಿಶ್ರ ಸರಕಾರದ ಹಾಗೇ ಕಾಣುತ್ತದೆ. ಹಕ್ಕಿಗಳೇ ಬೀಜೋಪಚಾರ ಮಾಡಿ ಬೆಟ್ಟತುಂಬ ಬಿತ್ತಿದ ಶ್ರೀಗಂಧ ಅಕೇಸಿಯಾ ತೋಪಿನ ಹಾಗೇ ಎದ್ದಿದೆ. ಮತ್ತಿ, ಹುನಾಲು, ಹೊನ್ನೆ, ಸೀಗೆ. ನೇರಲು, ಕಾಡುಮಲ್ಲಿಗೆ, ಕುರಿಗಂಧ, ನೆಲ್ಲಿ, ಬೇವು, ಹೆಬ್ಬೇವು, ಕಿರು ಬಿದಿರು, ದಿಂಡಗ ಗಿಡಗಳ ಯಾದಿ ಬೆಳೆಯುತ್ತದೆ. ಪ್ರಮುಖವಾಗಿ ಸುಮಾರು ೬೩ ಮರಜಾತಿಗಳಿರುವ ಇಲ್ಲಿ ಎರಡು ಮೀಟರ್ ಸುತ್ತಳತೆಯ ಹೊನ್ನೆ, ನೇರಲೆ ಹಾಗೂ ಮೀಟರ್ ಸುತ್ತಳತೆ ಒಂದೆರಡು ಬೀಟೆ ಮರಗಳು ಇಡೀ ಕಾಡಿನ

ಹಳೆಯ ಶಾಸನ, ನೆಲದ ತಾಕತ್ತಿನ ಪುಟ್ಟ ನಿದರ್ಶನವಾಗಿವೆ. ಇನ್ನುಳಿದವು ೨೦–೨೫ ವರ್ಷ ಪ್ರಾಯದ ಹೊಸ ಗಿಡಗಳು.

ಜೋಗಿಮಟ್ಟಿಯಲ್ಲಿ ಕ್ರಿ.ಶ. ೧೯೮೪ರಿಂದ ಅರಣ್ಯ ಇಲಾಖೆ ಜಾನುವಾರು ಪ್ರವೇಶ ನಿಶೇಧಿಸಿತು, ದನಕರು ತಡೆಗೆ ಕಾಡಿನ ಸುತ್ತ ಅಗಳ, ರಸ್ತೆ ಪಕ್ಕ ತಂತಿ ಬೇಲಿ ನಿರ್ಮಾಣ. ಬೇಸಿಗೆ ನಾಲ್ಕಾರು ತಿಂಗಳು ೪೦–೫೦ಜನ ಕಾವಲುಗಾರರ ಸೈನ್ಯ ಬೆಂಕಿ ತಡೆಗೆ ಶ್ರಮಿಸಿತು. ಮಣ್ಣು ನೀರಿನ ಸಂರಕ್ಷಣೆ ಪ್ರಧಾನವಾಗಿ ಕಾಡು ಕಣಿವೆಗಳ ಆಯಕಟ್ಟಿನ ಜಾಗಗಳಲ್ಲಿ ತಡೆಗಟ್ಟುಗಳ ನಿರ್ಮಾಣ, ಕೆರೆ ಅಭಿವೃದ್ಧಿ ಕಾರ್ಯ ನಡೆಯಿತು. ಕಾಡೊಳಗಿನ ಕುಮಾರನಕಟ್ಟೆ, ಒಕ್ಕಲಿಗನಕಟ್ಟೆ, ಜೋಗಿಕಟ್ಟೆ, ದೊಡ್ಡಣ್ಣನಕಟ್ಟೆ, ತಿಮ್ಮಣ್ಣನಾಯಕನ ಕೆರೆ, ಬೀರಮಲ್ಲಪ್ಪನ ಕೆರೆ ಹೀಗೆ ಹನಿ ಹನಿ ನೀರು ಹಿಡಿದಿಡುವ ಜಲಪಾತೆಗಳಾದವು. ಅಗತ್ಯವಿದ್ದಲ್ಲಿ ಸಸಿ ನೆಡುವದರ ಜತೆಗೆ ಸ್ಥಳೀಯ ಸಸ್ಯಗಳ ಪುನರುತ್ಪತ್ತಿಗೆ ಅವಕಾಶ ಒದಗಿಸಿತು.೨೦ ವರ್ಷದ ಹಿಂದೆ ಕಾಲುಗಾರನಾಗಿ ಬೋಳು ಬೋಳಾದ ಜೋಗಿಮಟ್ಟಿಗೆ ಬಂದ ನರಸಿಂಹಪ್ಪನಿಗೆ ಕಡು ಬಿಸಿಲಲ್ಲಿ ನೆರಳಿಗೆ ಗಿಡ ಹುಡುಕಬೇಕಿತ್ತು. ಸಂರಕ್ಷಣೆಯಿಂದ ನೆಲ ಬದಲಾದ ಪ್ರತಿಹಂತವನ್ನು ಆತ ಈಗ ನೆನಪಿಸಿಕೊಳ್ಳುತ್ತಾನೆ. ಹುಲ್ಲು ಬೆಳೆಯದ ಕಾಡು ನೆಲಕ್ಕೆ ಯೂರಿಯಾ ಸ್ಪ್ರೇ ಮಾಡಿದ್ದು, ಆ ವರ್ಷ ಹಳ್ಳಿಗರಿಗೆ ಕಾಡು ಹುಲ್ಲು ನೀಡಿದ್ದು, ಹುಲ್ಲು ಬೆಳೆದ ನಂತರದಲ್ಲಿ ಮಣ್ಣಿನ ಮುಖ ಬದಲಾಗಿ ಗಿಡಗಳು ಚಿಗುರಿದ್ದು, ಚಿಗುರಿದ ಹಸುರು ಬೆಂಕಿಯಿಂದ ಕಮರುವ ಹೊತ್ತು ಜಾಗೃತ ಸಿಬ್ಬಂದಿ ಶ್ರಮಿಸಿದ್ದೆಲ್ಲ ನೆನಪಿಸುತ್ತಾರೆ. ಮಳೆ ನೀರಿನ ಸಂರಕ್ಷಣೆ ಆರಂಭವಾದಾಗ ನೀರು ನಿಂತ ಪ್ರದೇಶದ ಸಸ್ಯ ಸಮೂಹದ ಮುಖ ಬದಲಾಗಿದ್ದೆಲ್ಲ ನರಸಿಂಹಪ್ಪರಿಗೆ ಚೆನ್ನಾಗಿ ಗೊತ್ತು. ಅಭಿವೃದ್ಧಿ ಹೆಜ್ಜೆಗೆ ಇದೆಲ್ಲ ಹೊಸ ಪಾಠ.

ಕಾಡಿನ ಸಿರಿಗೆ ಕನ್ನಡಿಯಂತೆ ಈಗ ಜಿಂಕೆ, ಕರಡಿ, ಮೊಲ, ಹಂದಿ, ನವಿಲು ನರ್ತಿಸುತ್ತಿವೆ. ಜೇನಿನ ಗಾನ ಕೇಳುತ್ತದೆ. ಕಾಡಿನ ಅತಿಥಿಯಾಗಿ ಬಂದ ಚಿರತೆಗೆ ಈಗಿಲ್ಲಿ ಖಾಯಂ ಅಂಚೆ ವಿಳಾಸವಿದೆ !. 'ಸಂರಕ್ಷಣೆಯಿಂದ ಅರಣ್ಯಾಭಿವೃದ್ಧಿ ಹೇಗೆ ಸಾಧ್ಯ ಎಂಬುದು ಸಾಕಾರವಾಗಿದೆ. ಅರಣ್ಯಾಭಿವೃದ್ಧಿ ಪರ್ಯಾಯ ಮಾರ್ಗ ಕಾಣುತ್ತಿದೆ' ಚಿತ್ರದುರ್ಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿ, ಎಸ್, ಕರಿಯಪ್ಪ ನಮ್ಮೆದುರು ಬಯಲು ನಾಡಿನ ನೆಲದ ಹಸಿರು ಶಕ್ತಿ ಎದುರಿಡುತ್ತಾರೆ.

ಬ್ರಿಟೀಷರು ಪ್ರಶಾಂತ ಗಿರಿಧಾಮವೆಂದು ಜೋಗಿಮಟ್ಟಿಯನ್ನು ೧೦೦

ವರ್ಷಗಳ ಹಿಂದೆ ಗುರುತಿಸಿ ಬಂಗ್ಲೆ ಕಟ್ಟಿಸಿದರು. ವಿಶ್ರಾಂತಿ ಬಯಸಿದ ವಿ.ಐ.ಪಿ ಗಳನ್ನು ತಾಣ ಸೆಳೆಯಿತು. ನಿಜಲಿಂಗಪ್ಪನವರನ್ನಂತೂ ಬೆಟ್ಟ ಪದೇ ಪದೇ ಎಳೆಯುತ್ತಿತ್ತು. ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಆಗಾಗ ಇಲ್ಲಿ ವಸತಿ. ಇಲ್ಲಿಗೆ ಬಂದ ಗಣ್ಯಾತಿ ಗಣ್ಯರು ಜಾಗವನ್ನು ಹಾಡಿ ಹೊಗಳಿದ್ದು ಅವರದೇ ಹಸ್ತಾಕ್ಷರದಲ್ಲಿ ಇವತ್ತಿಗೂ ಇದೆ. ಕ್ರಿ.ಶ, ೧೯೨೯ರಿಂದ ಇಲ್ಲಿನ ಪುಸ್ತಕದಲ್ಲಿ ದಾಖಲಾಗುತ್ತಿದೆ. ಬಯಲು ಸೀಮೆಯಲ್ಲಿ ನೂರಾರು ಕಿಲೋ ಮೀಟರ್ ಸುತ್ತಾಡಿ ದಣಿದವರಿಗೆ ಬೆಟ್ಟ ಏರಿದರೆ ಹೊಸ ಚೈತನ್ಯ ಸ್ಫೂರ್ತಿ. ಪೂರ್ತಿ ಹಸಿರೆಲ್ಲ ಸೂರೆ ಹೋಗಿದ್ದರೂ ಬೆಟ್ಟದ ಸ್ವರೂಪ ಜನರ ಪ್ರೀತಿಯ ಮೂಲವಾಗಿತ್ತು. ಜೋಗಿ ಸಮಾಧಿ ಪೂಜೆಗೆ ಬರುವವರು, ಆಡುಮಲ್ಲೇಶ್ವರ ದೇವಾಲಯಕ್ಕೆ ಬಂದವರು, ಚಿತ್ರದುರ್ಗದ ಕೋಟೆ ನೋಡಲು ಬಂದವರು ಗುಡ್ಡ ಏರುತ್ತಿದ್ದರು. ಕಾಡಿನ ಸ್ವರೂಪ ಬದಲಾದ ಇತ್ತೀಚಿನ ವರ್ಷಗಳಲ್ಲಿ ಶಾಲಾ ಮಕ್ಕಳಿಗೆ ಬೆಟ್ಟವೇ ಮುಂದಾಗಿ ಪರಿಸರ ಪಾಠ ಹೇಳುತ್ತಿದೆ. ನಾಗರಹಾವಿನ ಚೆಂದದ ಚೆಲುವಿನ ತಾರೆ ಹಾಡು ನೋಡಿ ಕಾಡಿಗೆ ಬಂದರೆ ಬದಲಾವಣೆ ಅಚ್ಚರಿ ಮೂಡಿಸುತ್ತದೆ.

ಜೋಗಿಮಟ್ಟಿಯಲ್ಲಿ ೧೨ ನೇ ಶತಮಾನದಲ್ಲಿ ಸಿದ್ದೇಶ್ವರರು ಬೆಟ್ಟದ ಮೂಲಿಕೆಗಳಿಂದ ಔಷಧಿ ಅರೆದು ನಾಡಿನ ಜನರ ರೋಗ ನಿವಾರಿಸಿದ್ದರು. ಅರಣ್ಯಾಭಿವೃದ್ಧಿ ಎಂದರೆ ನೆಡುತೋಪು ಬೆಳೆಸುವದು ಎಂಬ ನಮ್ಮ ಮೊನೋಕಲ್ಚರ್ ವ್ಯಾದಿಗೆ ಈಗ ಇಡೀ ಜೋಗಿಮಟ್ಟಿ ಬೆಟ್ಟದಲ್ಲಿ ಸಿದ್ಧೌಷಧವಿದೆ!. ಸಂರಕ್ಷಣೆಯಿಂದ ಕಾಡು ಬೆಳೆಸಿದ ಮಾದರಿಯಿದೆ.

**ಶತಮಾನದ ಮನೆಗಳಲ್ಲಿ ದಾಲ್ಚಿನ್ನಿ ಎಲೆಗಳು !**


ಮಲೆನಾಡಿನಲ್ಲಿ ಮಹಡಿ ಮನೆ ನಿರ್ಮಿಸುವಾಗ ಮರದ ಹಲಗೆಗಳನ್ನು ಮುಚ್ಚಿ ಮಣ್ಣು ಹಾಕುತ್ತಿದ್ದರು. ಈ ಹಲಗೆಗಳು ವರ್ಷಗಳು ಕಳೆದಂತೆ ಕ್ರಮೇಣ ಗೆದ್ದಲು ತಿನ್ನುತ್ತಿದ್ದವು. ಹೀಗಾಗಿ ಗೆದ್ದಲು ನಿಯಂತ್ರಣಕ್ಕೆ ಕಾಡಿನ ದಾಲ್ಚಿನ್ನಿ ಎಲೆಗಳು ಶತಮಾನಗಳ ಹಿಂದೆ ಬಳಕೆಯಲ್ಲಿದ್ದವು. ಹಲಗೆಯ ಮೇಲೆ ದಾಲ್ಚಿನ್ನಿ ಸೊಪ್ಪು ಹಾಕಿ ನಂತರದಲ್ಲಿ ಮಣ್ಣು ಹಾಕಿ ಮಹಡಿಯ ನೆಲ ನಿರ್ಮಿಸುತ್ತಿದ್ದರು. ಇದರಿಂದ ಗೆದ್ದಲು ಕಾಟದಿಂದ ಕಟ್ಟಿಗೆಯನ್ನು ಬಚಾವು ಮಾಡುವ ವಿದ್ಯೆ ಆ ಕಾಲದ ನಿರ್ಮಾಣ ಪ್ರವೀಣರಿಗೆ ತಿಳಿದಿತ್ತು. ಈಗ ಹಳೆಯ ಮನೆ ಕೆಡವುವಾಗ ಶತಮಾನಗಳ ಹಿಂದಿನ ದಾಲ್ಚಿನ್ನಿ ಎಲೆಗಳು ದೊರೆಯುತ್ತಿವೆ, ಇವು ಎರಡು ದಿನಗಳ ಹಿಂದೆ ಕಾಡಿನಿಂದ ತಂದಿರಬಹುದು ಎಂಬಷ್ಟು ಶತಮಾನಗಳ ಬಳಿಕವೂ ತಾಜಾ ಆಗಿರುತ್ತವೆ!

# ಕೋಟಿಗೊಬ್ಬ ಮೇಟಿ !

ಬಿಜಾಪುರ ಬಿಳಿಜೋಳದ ರೊಟ್ಟಿ, ಕಲ್ಲು ಬಂಡೆಯ ಮಳೆ ನೀರು ಕುಡಿದು ಭಣ ಭಣ ಬಾಂಡ್ರಾವಿ ಬೆಟ್ಟದ ಮೂರು ಸಾವಿರ ಎಕರೆಯಲ್ಲಿ ಕಾಡು ಬೆಳೆಸಿದವರು ಫಾರೆಸ್ಟ್ ಗಾರ್ಡ್ ನಾಗಪ್ಪ ಜುಮ್ಮಣ್ಣ ಮೇಟಿ. ಸಾವಿನ ದವಡೆಯಲ್ಲಿದ್ದ ಭೂಗತ ಬೇರಿಗೆ ಸಂರಕ್ಷಣೆಯಿಂದ ಹೊಸ ಜೀವ ನೀಡುವ ಮುಖೇನ ಅರಣ್ಯಾಭಿವೃದ್ಧಿ ಸಾಧಿಸಿದರು. 'ಬೇರು ಮೂಲಕ್ಕೆ ಅನನ್ಯ ಪ್ರೀತಿ, ಇದು ಗಾರ್ಡ್ ಮೇಟಿಯ ಹೊಸ ಅರಣ್ಯ ನೀತಿ'

ಒಬ್ಬ ಫಾರೆಸ್ಟ್ ಗಾರ್ಡ್ ಏನು ಮಾಡಬಹುದು?

ಬೆಳಿಗ್ಗೆ ಎದ್ದು ಯೂನಿಫಾರ್ಮ್ ತೊಟ್ಟು ಸಾಹೇಬರಿಗೆ ಸೆಲ್ಯೂಟ್ ಹೊಡೆದು ಅರಣ್ಯದಲ್ಲಿ ಗಸ್ತು ತಿರುಗಬಹುದು. ಬೆಂಕಿ ಆರಿಸುತ್ತ ನೆಡುತೋಪು, ನೈಸರ್ಗಿಕ ಅರಣ್ಯ ಕಾಯಬಹುದು. ಇನ್ನೂ ಹೆಚ್ಚೆಂದರೆ ಉರುವಲು ಕಟ್ಟಿಗೆ, ನಾಟಾ ಕಡಿಯುವವರು, ಕಲ್ಲು ಒಡೆಯುವವರು, ಅತಿಕ್ರಮಣ ಮಾಡುವವರನ್ನು ಸಾಹೇಬರ ಟೇಬಲ್ಲಿನೆದುರು ಜಬರ್‌ದಸ್ತಿನಲ್ಲಿ ಹಿಡಿದು ತರಬಹುದು. ಸ್ವಾಮಿ ! ಇಷ್ಟೇಲ್ಲ ಮಾಡಿದ ಮಾತ್ರಕ್ಕೆ ಕಾಡು ಅಭಿವೃದ್ಧಿಯಾಗುತ್ತದೆ ಎನ್ನುವ ಹಾಗಿದ್ದರೆ ದಟ್ಟ ಕಾಡು ಕರ್ನಾಟಕದಲ್ಲಿ ಎಲ್ಲೆಂದರಲ್ಲಿ ತುಂಬಿರಬೇಕಿತ್ತು. ಕಾಡು ಕಾಯಲು ನಿಂತ ಫಾರೆಸ್ಟ್ ಗಾರ್ಡ್ ಅರಣ್ಯ ಗುನ್ಹೆ ಗುರುತಿಸಬಹುದು, ಆದರೆ ಇನ್ನಿಲ್ಲದ ವಶೀಲಿ ಯುಗದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ, ಸಂರಕ್ಷಣೆ ಯಶಸ್ಸು ತೀರ ಕಡಿಮೆ. ಅರದಲ್ಲೂ ಕೆಳ ವರ್ಗದ ನೌಕರರಿಗಂತೂ ಕಾಡು ಕಾಯಲು ಖಾಕಿ ತೊಟ್ಟರೂ ಅರಣ್ಯ ರಕ್ಷಣೆ ಮಾಡುತ್ತೇವೆಂದು ಎದೆ ತಟ್ಟಿ ಹೇಳುವ ಆತ್ಮವಿಶ್ವಾಸವಿಲ್ಲ. ಸಮಾಜ ಹಾಗೂ ನೌಕರ ವರ್ಗದಲ್ಲಿ ಅಭಿವೃದ್ಧಿ ಅಸಾಧ್ಯವೆಂಬ ನಕಾರಾತ್ಮಕ ಧೋರಣೆ ಒಳಗೊಳಗೆ ಬೆಂಗಾಡಿನಂತೆ ಬೆಳೆಯುತ್ತಿದೆ.



ಮರ ಪ್ರೀತಿಸುವ ಮೇಟಿ ಬಂದ ಬಳಿಕ ಬಾಂಡ್ರಾವಿ ಪರಿಸರ ಬದಲಾಯಿತು


ಕೊಂಚ ತಾಳಿ, ಚಿತ್ರದುರ್ಗದ ಮೊಳಕಾಲ್ಮೂರು ಬಾಂಡ್ರಾವಿಯ ಬೆಟ್ಟ ಬೇರೆಯದೇ ಹೊಸ ಕತೆ ಹೇಳುತ್ತಿದೆ. 'ಬೇರು ಮೂಲಕ್ಕೆ ಅನನ್ಯ ಪ್ರೀತಿ.... ಇದು ಗಾರ್ಡ್ ಮೇಟಿಯ ಹೊಸ ಅರಣ್ಯ ನೀತಿ 'ಎಂದು ಸುತ್ತೆಲ್ಲ ಸಾರುತ್ತಿದೆ. ಮ್ಯಾಟ್ರಿಕ್ ಓದಿದ ಗಾರ್ಡ್ ನಾಗಪ್ಪ ಮೇಟಿ ಅರಣ್ಯಾಭಿವೃದ್ಧಿ ಇತಿಹಾಸಕ್ಕೆ ಅದ್ಬುತ ಹೊಸ ಭಾಷ್ಯ ಬರೆದಿದ್ದಾರೆ. ಅರೆಜೀವ ಹಿಡಿದು ಇಂದು ಸಾಯಲೋ... ನಾಳೆ ಸಾಯಲೋ ಎಂದು ಸಾವಿನ ದವಡೆಯಲ್ಲಿದ್ದ ಭೂಗತ ಬೇರುಗಳು ಸಂರಕ್ಷಣೆ ನೀತಿಗೆ ಹಸುರು ನಗು ಕಲಿತಿವೆ. ನರ್ಸರಿ, ನೀರಾವರಿ, ಬೇಲಿ, ಬುಲ್ಡೋಜರ್ ಇದ್ದರೆ ಮಾತ್ರ ಅಭಿವೃಧ್ಧಿ ಸಾಧ್ಯವೆಂಬ ಮಾತು ಬಿಟ್ಟು ಸಂರಕ್ಷಣೆ ಮಾತ್ರದಿಂದ ಕಾಡು ಬೆಳೆದಿದೆ. ರಸ್ತೆಪಕ್ಕ ಒಂದು ಗಿಡ ನೆಟ್ಟರೆ ವಾರಕ್ಕೆ ೭೦ ಲೀಟರ್ ನಂತೆ ಮೂರು ವರ್ಷ ಸತತ ನೀರಾವರಿ ಮಾಡಿ ಮರ ಬೆಳೆಸುವ ಇಲ್ಲಿ ಗಿಡ ನಾಟಿ, ನೀರಾವರಿಗೆ ಕಾಸು ಖರ್ಚಿಲ್ಲದೇ ಕಾಡು ಬೆಳೆದಿದೆ. ೩೦ ವರ್ಷ ಕಠಿಣ ತಪಸ್ಸಿನ ಫಲವಾಗಿ ಸಾವಿರಾರು ಎಕರೆಯಲ್ಲಿ

ನೈಸರ್ಗಿಕ ಕಾಡು ನಳನಳಿಸಿದೆ !. ಮೇಟಿ ಜನಮನ ಪರಿವರ್ತಿಸಿ ವನ ಬೆಳೆಸಿದ್ದನ್ನು ಗಮನಿಸಿದ ಪರಿಸರ ವಿಜ್ಞಾನಿಗಳು ಸಸಿ ನೆಟ್ಟು ಕಾಡು ಬೆಳೆಸುವ ಮಾರ್ಗ ಅನುಸರಿಸಿದ್ದರೆ ಇಷ್ಟು ಬೆಳೆಸಲು ೧೪ ಕೋಟಿ ರೂಪಾಯಿ ಬೇಕಾಗಿತ್ತೆಂದು ಲೆಕ್ಕ ಹೇಳಿದ್ದಾರೆ.

ಬಿಜಾಪುರ ಹಂಡ್ರಗಲ್‌ನ ೨೭ ವರ್ಷದ ನಾಗಪ್ಪ ಮೇಟಿ ಬಾಂಡ್ರಾವಿ ಗಾರ್ಡ್ ಆಗಿ ನೇಮಕವಾದರು. 'ನಾನು ಬಂದಾಗ ನೀನು ಬಾಂಡ್ರಾವಿ ಕಾಡಲ್ಲಿ ಇರದಿದ್ದರೆ ಕೆಲಸದಿಂದ ತೆಗೆದು ಹಾಕ್ತೀನಿ' ಚಿತ್ರದುರ್ಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಚೌಡಪ್ಪ ಮಾತು ಕೆಲಸ ಸಿಕ್ಕಿದ ಖುಷಿಯಲ್ಲಿ ತಣ್ಣಗೆ ನಡುಕ ಹುಟ್ಟಿಸಿತು. ಸಾಹೇಬರು ರಾತ್ರಿ, ಹಗಲು ಯಾವಾಗಾದರೂ ಬರಬಹುದು, ಕೆಲಸ ಹೋಗಬಹುದು. ಭಯದಲ್ಲಿ ಹೆದರುತ್ತ ೧೯೭೪ರ ಅಕ್ಟೋಬರ್ ೧೯ರಂದು ಬಾಂಡ್ರಾವಿ ಕಾಡಿಗೆ ಬಂದರು.

ಚಿತ್ರದುರ್ಗದ ಮೊಳಕಾಲ್ಮೂರು ವಲಯದ ಬಾಂಡ್ರಾವಿ ಪ್ರದೇಶದ ೧೩೦೬.೮೭ (೩೨೨೯ ಎಕರೆ) ಹೆಕ್ಟೇರ್ ಕಾಡನ್ನು ಕ್ರಿ.ಶ, ೧೯೦೪ರಲ್ಲಿ ಸರಕಾರ ಕಾದಿಟ್ಟ ಅರಣ್ಯವೆಂದು ಘೋಷಿಸಿತ್ತು. ಆ ಕಾಲಕ್ಕೆ ಎರಡು ಮೂರು ಜನರ ಅಪ್ಪುಗೆಗೂ ಸಿಗದ ನೈಸರ್ಗಿಕ ಕಮರಾ ಮರಗಳು ಹೇರಳ. ಇದ್ದಿಲು ಸುಡುವದು, ಕಮರಾ ಗಿಡಗಳ ನಾರು ತೆಗೆಯುವದು, ಉರುವಲು, ಮೇವು, ಬೆಂಕಿ ಹೀಗೆ ನಾಶದ ಪ್ರಹಾರಕ್ಕೆ ಬೆಟ್ಟ ಬೋಳಾಯಿತು. ಸ್ವಾತಂತ್ರ್ಯ ತರುವಾಯದಲ್ಲಂತೂ ಬಳ್ಳಾರಿ, ಬೆಂಗಳೂರು, ಆಂಧ್ರಕ್ಕೆ ಇದ್ದಿಲು ಪೂರೈಕೆಗೆ ಕಮರಾ, ಜಾಲಿ, ತುಗಲಿ ಕಡಿಯುತ್ತ ಕಾಡು ಕುರುಕ್ಷೇತ್ರ, ರಕ್ಷಿತ ಅರಣ್ಯದ ಬಿಗಿ ನಿಯಮ ಪಾಲನೆ ಪ್ರಜ್ಞೆ ಮೂಡಿಸಬೇಕಾದ ಗಾರ್ಡ್‌ಗಳು 'ಊರಾಗ.... ಮುದ್ದೆ...ಗುಡಿಯಾಗ ನಿದ್ದೆ' ತತ್ವದಲ್ಲಿ ಕೆಲಸ ಮಾಡುತ್ತಿದ್ದರು !. ಹಳ್ಳಿಗರಿಂದ ರಾಗಿ ಮುದ್ದೆ ತಿಂದು ಕಾಡು ಕಡಿಯಲು ನೆರವಾಗುತ್ತಿದ್ದರು. ಹನುಮಾಪುರ – ಮೆಟ್ರಿಕ್ಕಿ – ಬಳ್ಳಾರಿಯ ದಾರಿಯಂತೂ ಬಾಂಡ್ರಾವಿ ಬೆಟ್ಟದ ಕಟ್ಟಿಗೆ ಸಾಗಾಟದ ರಹದಾರಿ. ಬೆಂಕಿ ಹಾವಳಿ ತೀವ್ರವಾಗಿ ನೈಸರ್ಗಿಕ ಪುನರುತ್ಪತ್ತಿ ಇರಲಿಲ್ಲ. ವರ್ಷಕ್ಕೆ ೩೫೦–೪೦೦ ಮಿಲಿ ಮೀಟರ್ ಮಳೆ, ಕಾಡು ಕ್ಷಾಮದ ಚಿತ್ರಕ್ಕೆ ರೂಪದರ್ಶಿ. ಗಸ್ತು ತಿರುಗುತ್ತ ೧೯೭೪ರಲ್ಲಿ ಎತ್ತರದ ಉಪಗುಂಡಲು ಬಂಡೆಯಲ್ಲಿ ಮೇಟಿ ನಿಂತರೆ ಕುಬ್ಜ ಕಂಟಿಗಳೇ ಸುತ್ತೆಲ್ಲ ಕಾಣುತ್ತಿದ್ದವು !. ಅಲ್ಲಿನ ಇದ್ದಲಿ ಭಟ್ಟಿ, ಉರುವಲು ಸಾಗಾಟ. ಅರಣ್ಯ ಸುತ್ತಲಿನ ಹಳ್ಳಿ

ಜನಗಳೇ ಕಟ್ಟಿಗೆ ವ್ಯಾಪಾರದಲ್ಲಿ ನಿರತವಾದ ಚಿತ್ರ ನೋಡಿದ ಮೇಲಂತೂ ರಕ್ಷಣೆ ಅಸಾಧ್ಯವೆನಿಸಿತು.



ಮಲೆನಾಡಿನ ಕಾಡು ನೆನಪಿಸುವ ಕಮರಾ ಕಾಡು, ಸಂರಕ್ಷಣೆಯಿಂದ ಹಸುರು ಸಾಧ್ಯತೆ

ಮುಂದೇನು ? ಕೆಲಸಕ್ಕೆ ರಾಜೀನಾಮೆ ನೀಡುವದೇ ಲಾಯಕ್ಕೆಂದು ಸೀದಾ ವಲಯ ಅರಣ್ಯಾಧಿಕಾರಿ ಮಲ್ಲೇಶಯ್ಯರಲ್ಲಿ ಹೋದರು. ಅವರು ಆಗಷ್ಟೇ ಬಂದು ಎರಡು ತಿಂಗಳಾಗಿತ್ತು. ಬಾಂಡ್ರಾವಿಯ ಕಾಡು ಕಡಿತದ ವಿಚಾರವನ್ನು ಯಾವೊಬ್ಬ ಗಾರ್ಡ್‌ಗಳು ಆವರೆಗೆ ವರದಿ ಮಾಡಿರಲಿಲ್ಲ. ಹೆದರಬೇಡ ಜನರ ಪ್ರೀತಿ, ವಿಶ್ವಾಸ ಗಳಿಸು, ದುರಾಸೆ ಮಾಡಬೇಡ, ಸುಳ್ಳು ಹೇಳ ಬೇಡ' ಬುದ್ಧಿ ಹೇಳಿದರು. ಹತ್ತಾರು ಸಾವಿರ ರೂಪಾಯಿತೆತ್ತರೂ ಸಿಗದ ಸರಕಾರಿ ಕೆಲಸ ಸುಲಭದಲ್ಲಿ ಸಿಕ್ಕಿದ್ದು ಅದೃಷ್ಟವೆಂದೇ ಬಣ್ಣಿಸಿದರು. ಸಂರಕ್ಷಣೆಗೆ ಎಲ್ಲ ಸಹಕಾರ ನೀಡುವದಾಗಿ ಹುರಿದುಂಬಿಸಿದರು. ಮನಸ್ಸು ಬದಲಾಗಿ ಬಾಂಡ್ರಾವಿಗೆ ಮರಳಿದರು.

## ಬಿಜಾಪುರ ರೊಟ್ಟಿ .... ಗುಲುಕುಲು ಬಂಡೆ ಮಳೆ ನೀರು

ಕಾಡು ಕಡಿತ ಕೈಮೀರಿದ್ದರಿಂದ ಹಗಲು ರಾತ್ರಿ ಕಣ್ಗಾವಲು ಮುಖೇನ ನಿಯಂತ್ರಣ ಸಾಧಿಸಬೇಕಿತ್ತು. ಬಿಜಾಪುರದ ಬಿಳಿ ಜೋಳದ ರೊಟಿಗಂಟು ಹೊತ್ತು ವನವಾಸಿಯಾದರು. ಸಂತೆಗುಡ್ಡ, ಉಪಗುಂಡಲು, ಗುಲುಕಲು ಬಂಡೆಯೇ ನಿಸರ್ಗ ಮನೆ. ಗಡಿಗೆಯಲ್ಲಿ ಅನ್ನ ಬೇಯಿಸಿ ಊಟ. ಒಮ್ಮೆ

ಮಾಡಿದ ರೊಟ್ಟಿ ೧೫-೨೦ ದಿನ ಬಳಕೆ. ಅಲ್ಲಿಯವರೆಗೂ ಕಾಡಿನಲ್ಲಿ ಠಿಕಾಣಿ. ಗುಲುಕಲು ಬಂಡೆಯ ತಗ್ಗಿನಲ್ಲಿ ಮಳೆ ನೀರು ಶೇಖರವಾಗಿ ಯುಗಾದಿ ಹಬ್ಬದವರೆಗೆ ನಿಂತಿರುತಿತ್ತು. ಕಲ್ಲುಸಂಧಿಯ ಮಳೆ ನೀರು ಸೇವನೆ! ಬಿಜಾಪುರ ಬಿಳಿಜೋಳದ ರೊಟ್ಟಿ ತಿಂದ ಗಟ್ಟಿ ಜೀವ ಬೆಂಗಾಡಿನಲ್ಲಿ ಹಸುರು ಅರಳಿಸುವ ಹೊಸ ಚೇತನವಾಯಿತು. ಬಿಜಾಪುರದ ವ್ಯಕ್ತಿಯೊಬ್ಬ ಒಣ ರೊಟ್ಟಿ ನಂಬಿ ಕಾಡು ಸೇರಿದ್ದಾನೆ' ಬಾಂಡ್ರಾವಿ ಜನ ಅಚ್ಚರಿಪಟ್ಟರು. ರಾಗಿ ಮುದ್ದೆ, ಅನ್ನ ಆಹಾರವಾದ ಅಲ್ಲಿ ಹೀಗೆ ಜನ ಬದುಕಬಹುದು ಎಂಬುದು ತಿಳಿದಿರಲಿಲ್ಲ. ಕಾಡಿಗೆ ಗಾರ್ಡ್ ಬಂದರೋ, ಕಾಡು ಮನುಷ್ಯರು ಸೇರಿದರೋ ಅನುಮಾನ. ಮರ ಕಟುಕರ ಪಾಲಿಗೆ ಕಾಲ ಬದಲಾಯಿತು. ಕತ್ತಿ, ಕೊಡಲಿ ಹಿಡಿದು ಮರಕ್ಕೆ ಎರಡು ಕಚ್ಚು ಹಾಕುವದರೊಳಗೆ ನಡು ರಾತ್ರಿಯಲ್ಲೂ ಕಪ್ಪು ಮನುಷ್ಯ ಎಲ್ಲೆಂದರಲ್ಲಿ ಎದುರು ನಿಂತಿರುತ್ತಿದ್ದರು....!. ಆಂಧ್ರದಂಚಿನ ತೆಲಗುಮಯ ನೆಲದಲ್ಲಿ ಬಿಜಾಪುರದ ನಾಗಪ್ಪ ಮೇಟಿ ಕನ್ನಡ ಯಾರಿಗೆ ತಾನೆ ಅರ್ಥವಾಗುತ್ತೆ ?. ಇನ್ನು ಮನೆ ಬಿಟ್ಟು ಕರಡಿಗಳ ಹಾಗೇ ನಡುರಾತ್ರಿಯಲ್ಲೂ ಕಾಡಿನ ಗಿಡ, ಕಲ್ಲುಬಂಡೆ ಸಂಧಿಯಲ್ಲಿ ತಿಂಗಳು ಗಟ್ಟಲೆ ಕಾಲ ಕಳೆಯುತ್ತಿದ್ದ ವೈಖರಿ. ಹನುಮಾಪುರದ ಜನಗಳ ಮಾತಿನಲ್ಲಿ ಹೇಳುವದಾದರೆ ಆಗ ಇವರನ್ನು .... ಕರ್ರ...ಗೆ ಕಪ್ಪಲಟ... . ನಲ್ ನಾಗಪ್ಪ...., ...ಕರಡಿ, ಕರಿ ಹೆಗ್ಗಣ .... ಎಂದೇ ಗುರುತಿಸಿದ್ದರು. ಕಾಡು ಅರ್ಥ ಮಾಡಿಕೊಳ್ಳಲು ಹೋದವರು ಟೀಕೆಯ ವಸ್ತುವಾದರು. ಮುದ್ದೆ ಗಾರ್ಡ್‌ಗಳ ಜಾಗದಲ್ಲಿ 'ನಲ್ಲ ನಾಗಪ್ಪ ಬಂದಾನ... ....' ಹಳ್ಳಿಗರಿಗೆ ಮೈಚಳಿ ಬಿಟ್ಟಿತು. 'ನಮ್ಮ ಹೊಲದಾಗ.... ನೂರಾರು ಚೀಲ ನೆಲ್ಲು (ಭತ್ತ) ಇದ್ರು ನಾವು ಕಾಯಾಣಿಲ್ಲ, ನೀನು ಬಿಜಾಪುರದಿಂದ ಬಂದು ರಾತ್ರಿ ಕಾಡಿನ ಮರ ಕಾಯ್ತೀಯಲ್ಲೋ ! ನಿನ್ ಕೆಲಸಕ್ಕ... ಕೈಮುಗಿದ್ವಪಾ... .... ಮತ್ ಈ ಕಡೆ ನಾವು ಬರಾಂಗಿಲ್ಲ' ಆಂಧ್ರದ ಮಡೇನಹಳ್ಳಿ, ಈರಾಳ್‌ದಿಂದ ಈಸು ಕಡಿಯಲು ಬಂದು ರಾತ್ರಿ ೧೨ ಗಂಟೆಗೆ ಸಿಕ್ಕಿಬಿದ್ದ ರೈತರು ಕೈ ಮುಗಿದರು.

## ಕಡಿಯುವವರನ್ನೇ ಕಾಯಲು ಕರೆದರು !

ಮೇಟಿ ಡ್ಯೂಟಿ ಆರಂಭದ ೧೫ನೇ ದಿನ. ಬೊಮ್ಮದೇವರಹಳ್ಳಿ ಲಿಂಗಪ್ಪ ಎಂಬವರು ಲಾರಿಯಲ್ಲಿ ಕಟ್ಟಿಗೆ ತುಂಬಿ ಬಳ್ಳಾರಿಗೆ ಸಾಗಿಸುತ್ತಿದ್ದರು. ಸಂತೆಗುಡ್ಡದಲ್ಲಿ ಲಾರಿ ಸಿಕ್ಕಿಬಿತ್ತು. ತಕ್ಷಣ ೫೦೦ ರೂಪಾಯಿ ಲಂಚ ನೀಡಲು

ಬಂದರು, ನಿರಾಕರಿಸಿದರು. ಆಗ ಗಾರ್ಡ್‌ಗೆ ಇದ್ದ ಬೇಸಿಕ್ ಪಗಾರು ೬೨ ರೂಪಾಯಿ ! ಎಲ್ಲಸೇರಿ ೨೫೦ ರೂಪಾಯಿ ಹೆಚ್ಚುವರಿ ಲಂಚದ ಆಮಿಷ ! ಕರ್ತವ್ಯ ಪ್ರಜ್ಞೆ ಜಾಗೃತ, ಕೇಸ್ ದಾಖಲಾಯಿತು. ಮುಂದೆ ಬಳ್ಳಾರಿ – ಬೆಂಗಳೂರಿನ ಸೌದೆ ಸಾಗಿಸುತ್ತಿದ್ದ ಲಾರಿ ಮಾಲಕರು ಗಾರ್ಡ್‌ರನ್ನು ಸರಿ ಮಾಡಿದರೆ ಮಾತ್ರ ಅರಣ್ಯಕ್ಕೆ ಬರುವದಾಗಿ ಕಾಡುಗಳ್ಳರಿಗೆ ಹೇಳಿದರು. ಇತ್ತ ಕಾಡು ಹಾಗೂ ಹಳ್ಳಿ ಜನರನ್ನು ಬದಲಿಸುವತ್ತ ಮೇಟಿ ಮುಂದುವರಿದರು.

ಹಳ್ಳಿ ಜನರಲ್ಲಿ ಕಾಡಿನ ಪ್ರೀತಿ ಇರಲಿಲ್ಲ. ಕಡಿಯುವದೇ ಕೆಲಸ. ಸಂತೆಗುಡ್ಡದಲ್ಲಿದ್ದ ಮಲ್ಲಿ ಪೀರ ಎಂಬಾತನಂತೂ ಪ್ರತಿ ಸಾರಿ ಮೇಟಿ ಕೈಗೆ ಸಿಕ್ಕಿ ಬಿದ್ದು ಗೋಳೋ ಎಂದು ಅಳುತ್ತಿದ್ದ, ನಾನು ಮತ್ತೆ ಕಾಡು ಕಡಿಯುವದಿಲ್ಲ ಎಂದು ಪ್ರಮಾಣ ಮಾಡುತ್ತಿದ್ದ, ಮರಳಿ ಮತ್ತೆ ಕಡಿತಕ್ಕೆ ಬರುತ್ತಿದ್ದ !. ಕೊನೆಗೆ ವಿಚಾರಿಸಿದರೆ ಏಳು ಜನ ಹೆಣ್ಣು ಮಕ್ಕಳ ತಂದೆಯಾದ ಆತನಿಗೆ ಕಾಡು ಕಡಿತವೇ ಅನ್ನದ ಆಧಾರವಾಗಿತ್ತು. ಕೊನೆಗೆ ಮೇಟಿ ಉಪಾಯಮಾಡಿ ಮರ ಕಡಿಯುತ್ತಿದ್ದ ಮಲ್ಲಿ ಫೀರನನ್ನು ಕರೆದು ದಿನಗೂಲಿ ವಾಚಮನ್ ಆಗಿ ಕಾಡು ಕಾಯುವ ಕೆಲಸಕ್ಕೆ ಸೇರಿಸಿಕೊಂಡರು !. ಕೊಡಲಿ ಹಿಡಿದವರನ್ನು ಪರಿವರ್ತಿಸಿ ಕಾಯಲು ಹಚ್ಚಿದರು. ಜಾನುವಾರು, ಕುರಿ ಮೇಯಿಸುವವರು ಗಿಡ ಕಡಿಯುತ್ತಿದ್ದರು. ಇವರಿಗೆ ಕತ್ತಿ ತರದಂತೆ ನಿಶೇಧ ಹೇರಿ ಕಡಿತಕ್ಕೆ ತಡೆ ಹಾಕಿದರು. ಬೆಂಕಿ ರಕ್ಷಣೆ, ಕಾಯ್ದಿಟ್ಟ ಅರಣ್ಯದ ಗಡಿ ಗುರುತು ನಿರ್ಮಾಣ ಕೆಲಸಗಳನ್ನು ಇವರಿಂದ ಮಾಡಿಸಿದರು. ಮರ ಕಟಾವಿನ ಪತ್ತೆಗೆ ಬಳಸಿದರು, ಜಾನುವಾರು ಮೇವಿಗೆ ಕಾಡಲ್ಲಿ ಅವಕಾಶ ವಿದ್ದುದರಿಂದ ಜನ ವಿಶ್ವಾಸ ಸಾಧ್ಯವಾಯಿತು. ಬೇರು ಮೂಲಕ್ಕೆ ಸಂರಕ್ಷಣೆ, ಮೂಲ ಸಮಸ್ಯೆಗೆ ಚಿಕಿತ್ಸೆ ಹುಡುಕುವ ವೈದ್ಯಗುಣ ಮೇಟಿಗೆ ಬಂತು.

## ಕಾಡಿನ ಜತೆ ಆಪ್ತ ಸಂಬಂಧ

ಕಾಡಲ್ಲಿ ಮೇಟಿ ಜತೆ ಓಡಾಡುವದೇ ಒಂದು ಸಂಭ್ರಮ. ಪ್ರತಿಕಲ್ಲು ಬಂಡೆ, ಗುಡ್ಡ, ಮರದ ಸನಿಹ ಹೋದಾಗೆಲ್ಲ ಅಲ್ಲಿನ ಪರಿಸರ ದಾಖಲೆಗಳು ಸಿಗುತ್ತವೆ. ಆಯಾಸವಾಗಿ ಒಮ್ಮೆ ಕವಳಿ ಗಿಡದ ಸನಿಹ ಮಲಗಿದ್ದರು. ಅಲ್ಲಿಗೆ ಕರಡಿ ಬಂತು, ಏನೂ ಮಾಡುವ ಹಾಗಿಲ್ಲ ! ಮಲಗಿದಲ್ಲಿಂದಲೇ ಕಲ್ಲು ಹರಳಿನಲ್ಲಿ ಹೊರಳುತ್ತ ನಿಧಾನಕ್ಕೆ ಬಚಾವಾದರು. ಕವಳಿ ಹಣ್ಣು ತಿಂದು

ಕರಡಿ ಹೋಯಿತು. ೨೦ ವರ್ಷದ ಹಿಂದಿನ ಆ ಘಟನೆ ನೆನಪಿಸಿಕೊಂಡು ಈಗ ಗಿಡ ತೋರಿಸುತ್ತ ಇದೇ ಗಿಡ ತನ್ನನ್ನು ರಕ್ಷಿಸಿತು ಎನ್ನುತ್ತಾರೆ. ಕೆ. ಆರ್. ಪುರ ಕಾಡು ತಿರುಗುವಾಗ ಕಲ್ಲು ಬಂಡೆಯಲ್ಲಿ ಕರಡಿ ಇವರ ಮೇಲೆ ದಾಳಿ ನಡೆಸಿ ಎರಡು ತಿಂಗಳು ಆಸ್ಪತ್ರೆ ಸೇರಿದರು. ಕಾಡೊಳಗಿನ ದಾಸಮ್ಮಾಳ ಗೋಕುಂಟೆಯ ಒಡ್ಡು ದುರಸ್ತಿ ನಡೆಯುತ್ತಿತ್ತು. ಹತ್ತಾರು ಕೂಲಿಕಾರರು ಕೆಲಸ ಮಾಡುತ್ತಿದ್ದರು. ಅವರು ಅಲ್ಲಿನ ಮೂರು ಕಮರಾ ಮರ ಕಡಿಯುವ ಮಾತಾಡುತ್ತಿದ್ದ ವಿಚಾರ ಕಿವಿಗೆ ಬಿತ್ತು. ಮುಂದಿನ ಒಂದು ತಿಂಗಳು ಸತತ ಹಗಲು ರಾತ್ರಿ ಮರಕ್ಕೆ ಮೇಟಿ ಸರ್ಪಗಾವಲು. ಮರ ಉಳಿಸಿ ಅದಕ್ಕೆ ಬ್ರಹ್ಮ, ವಿಷ್ಣು, ಮಹೇಶ್ವರ ಎಂದು ನಾಮಕರಣ ಮಾಡಿದ್ದಾರೆ. ಈಗಲೂ ಕಾಡಿಗೆ ಹೋದಾಗ ಮರ ನೋಡುವ ಆಪ್ತ ಸಂಬಂಧ. ಸನಿಹದ ಸಂಡೂರಿನ ಕಾಡು ಅತಿಕ್ರಮಣವಾಗಿದೆ, ಬಾಂಡ್ರಾವಿಯ ಕಾಡಿಗೆ ಏಕೆ ಮರ ಕಡಿತ, ಅತಿಕ್ರಮಣಕ್ಕೆ ನೀವು ಹೋಗುತ್ತಿಲ್ಲ ? ಮಾಜಿ ಸಚಿವ ಘೋರ್ಪಡೆ ಸುತ್ತಲಿನ ಹಳ್ಳಿಗರನ್ನು ಒಮ್ಮೆ ಕೇಳಿದ್ದರು. 'ಮರ ಕಡಿದ್ರೆ ಆ ಗಾರ್ಡ್ ಅತ್ತು ಬಿಡ್ತಾನ್ರಿ... !' ಅದ್ಕೆ ಹೋಗೋದಿಲ್ಲ' ಎಂದು ಹಳ್ಳಿಗರು ಹೇಳಿದರಂತೆ !. ಮರ ಹಚ್ಚಿಕೊಳ್ಳುವ ಮನುಷ್ಯ ಬಂದರೆ ಜನ ಕೂಡಾ ಬದಲಾಗುತ್ತಾರೆ.

ಹುಲ್ಲಿನಿಂದ ಹೆಮ್ಮರವಾಗುವ ನಿದರ್ಶನ ಬಾಂಡ್ರಾವಿ ಅರಣ್ಯ ಸಂರಕ್ಷಣೆ ಅನುಭವದಲ್ಲಿದೆ. ನೆಲ ಹಿಡಿದು ಬೆಳೆಯುವ ಹುಲ್ಲು ಅಲ್ಲಿನ ಮಣ್ಣಿನ ಸಂರಕ್ಷಣೆಗೆ ನೆರವಾಗುತ್ತದೆ. ನಂತರ ಬೇರೆ ಬೇರೆ ಜಾತಿ ಸಸ್ಯಗಳು ಮಣ್ಣುಗುಣ ಆದರಿಸಿ ಬೆಳೆಯುತ್ತಿದೆ. ಕಳ್ಳಿಗಿಡ, ಕುರುಚಲು ಹಂತದಿಂದ ಕಾಡು ನೋಡುತ್ತ ಬೆಳೆದವರು ಮೇಟಿ. ಸಂರಕ್ಷಣೆಯ ವಿವಿಧ ಮಾರ್ಗಗಳ ಮುಖೇನ ಇವತ್ತು ಬಾಂಡ್ರಾವಿ ಎಲ್ಲರನ್ನೂ ಸೆಳೆಯುತ್ತದೆ. ಎಕರೆಗೊಂದು ಮರವನ್ನೂ ನೋಡಲು ಅಸಾಧ್ಯಾವಾದ ಬಯಲು ನಾಡಿನಲ್ಲಿ ಸಾವಿರಾರು ಎಕರೆ ಹೇಗೆ ಬೆಳೆಯಿತು ? ಅರಣ್ಯ ಇಲಾಖೆಯ ಪ್ಲಾಂಟೇಶನ್ ರಿಜಿಸ್ಟರ್‌ಗಳು ನೆಡುತೋಪು ನಿರ್ಮಾಣದ ದಾಖಲೆ ವಿವರ ನೀಡುತ್ತವೆ. ಆದರೆ ಇದು ನೈಸರ್ಗಿಕ ಕಾಡಿನ ಸಂರಕ್ಷಣೆ, ಬರೆದ ದಾಖಲೆಗಳಿಗಿಂತ ಅನುಭವ ಪುಟಕ್ಕೆ ಆದ್ಯತೆ. ಫಾರೆಸ್ಟ್ ಪುಟದಲ್ಲಿ ೩೦ ವರ್ಷಗಳ ಕೌತುಕದ ಖಜಾನೆ ಭರ್ತಿಯಾಗಿದೆ.

## ಕತ್ತೆ ಕಟ್ಟಿಗೆಯಲ್ಲಿ ಕಾಡಿನ ಪಾಠ

ಅರಣ್ಯ ಅಪರಾಧ ಪ್ರಕರಣ ಹಿಡಿದಾಗಲೂ ಮೇಟಿ ಹೊಸ ಹೊಸ ಪಾಠ ನೀಡುತ್ತಿದ್ದರು. ಅಗಸರ ಭೀಮಣ್ಣ ರಾಜಾಪುರದಲ್ಲಿ ಸುಣ್ಣದ ಭಟ್ಟಿ ಮಾಡುತ್ತಿದ್ದರು. ಸುಣ್ಣ ಸುಡಲು ಕಟ್ಟಿಗೆ ಬೇಕು. ತನ್ನಮೂರು ಕತ್ತೆಗಳ ಮೇಲೆ ಕಟ್ಟಿಗೆ ಸಾಗಿಸುತ್ತಿದ್ದರು. ಭೀಮಣ್ಣನನ್ನು ಹಿಡಿದು ಹನುಮಾಪುರದಲ್ಲಿ ಪಂಚಾಯ್ತಿ ಸೇರಿಸಿದರು. ೧೦೦ ರೂಪಾಯಿ ದಂಡ ವಿಧಿಸಿದರು. ಕತ್ತೆಗಳ ಬೆನ್ನಿನ ಮೇಲೆ ಒಣ ಕಟ್ಟಿಗೆ ಒಯ್ದರೂ ಹಿಡಿದು ದಂಡ ಹಾಕುತ್ತಾರೆಂದು ಸುತ್ತೆಲ್ಲ ಊರಿಗೆ ಸುದ್ದಿಯಾಯ್ತು. ಕತ್ತೆ ಕಟ್ಟಿಗೆಯನ್ನೇ ಬಿಡಲಿಲ್ಲ, ಇನ್ನು ಬಂಡಿ ಕಟ್ಟಿಗೆ ಬಿಟ್ಟಾನೆಯೇ ಎಂದರು. 'ಬಂಡಿಕಟ್ಟಿಗೆ, ಲಾರಿ ಕಟ್ಟಿಗೆ ಬಿಟ್ಟರೆ ದಂಡ ತೆತ್ತ ಅಗಸರ ಭೀಮಣ್ಣ ತನಗೆ ಕಾಲುಮುರಿ ತಗೊಂಡಾನು...' ಎಂದು ಹಳ್ಳಿಗರಿಗೆ ಮೇಟಿ ಸಬೂಬು ಹೇಳಿದರು. ಬಳ್ಳಾರಿ ಲಾರಿಯವರು ಕಟ್ಟಿಗೆಗೆ ಬರಲು ಹೆದರತೊಡಗಿದರು. ಕತ್ತೆ ಕಟ್ಟಿಗೆಗೆ ದಂಡ ಹಾಕುವ ತಂತ್ರ ಮಾಡಿ ಉಳಿದವರನ್ನು ನಿಯಂತ್ರಣಕ್ಕೆ ತಂದರು.

ಮಗಳು ವೆಂಕಮ್ಮನ ಮದುವೆ ೧೯೮೫ರಲ್ಲಿ ನಿಶ್ಚಯವಾಯ್ತು. ಬಾಂಡ್ರಾವಿಯ ಸುತ್ತೆಲ್ಲ ಪರಿಚಯ, ಮದುವೆಗೆ ಎಲ್ಲರನ್ನೂ ಕರೆಯಬೇಕು. ಆದರೆ ಅಲ್ಲೊಂದು ಸಮಸ್ಯೆಯಿತ್ತು. ಆಗ ಮಗಳ ಮದುವೆಗೆಂದು ಗಾರ್ಡ್ ಬಿಜಾಪುರಕ್ಕೆ ಹೋಗುತ್ತಾರೆಂಬ ಸುದ್ದಿ ಜಾಹೀರಾಗುತ್ತದೆ. ಕಾಡು ಕಡಿಯಲು ಅದೇ ಸಮಯಕ್ಕೆ ನೆರೆಯ ಊರಿನ ಕಳ್ಳರು ಬರುತ್ತಾರೆ !. ಮದುವೆಯ ಸುದ್ದಿ ಯಾರಿಗೂ ತಿಳಿಯದಂತೆ ಜಾಗ್ರತಿವಹಿಸಿದರು. ಯಾರೊಬ್ಬರಿಗೂ ಆಮಂತ್ರಣ ನೀಡದೇ ಸದ್ದು ಗದ್ದಲವಿಲ್ಲದೇ ಊರಿಗೆ ತೆರಳಿ ಮೂರೇ ದಿನಕ್ಕೆ ಮದುವೆ ಮುಗಿಸಿ ವಾಪಸ್ಸಾದರು.

ಇನ್ನೊಂದು ಸಾಹಸ ನಿಶಾಚರ ನಡಿಗೆ ! ಕಾಡಲ್ಲಿ ರಾತ್ರಿ ಓಡಾಡುವಾಗ ಮೇಟಿ ಬ್ಯಾಟರಿ ಬಳಸುತ್ತಿರಲಿಲ್ಲ. ಅಮವಾಸ್ಯೆಯ ಕಗ್ಗತ್ತಲಿನಲ್ಲಂತೂ ಬೆಳಕಿಲ್ಲದೇ ಒಂದು ಹೆಜ್ಜೆ ಇಡಲು ಸಾಧ್ಯವೆ ಇಲ್ಲ. ಕಾಡು ಪ್ರಾಣಿ, ಮುಳ್ಳುಕಂಟಿ, ಕಲ್ಲು, ಕಾಲುವೆಗಳನ್ನು ಕತ್ತಲಲ್ಲೇ ಪಯಣಿಸುವ ನಿಶಾಚರಿಯಾದರು. ಬ್ಯಾಟರಿ ಬಳಸಬಹುದಿತ್ತಲ್ಲ ?. ಒಂದು ರಾತ್ರಿ ಗಾರ್ಡ್ ಬ್ಯಾಟರಿ ಬೆಳಕು ದೂರಿದಿಂದ ಗಮನಿಸಿ ತಾವು ಓಡಿ ಬಚಾವಾದ ಸಾಹಸವನ್ನು ಮ್ಯಾಗಳ ಕಣಿವೆಯ ಕೃಷಿಕರು ಆಪ್ತೇಷ್ಟರಲ್ಲಿ ಹೇಳಿಕೊಂಡಿದ್ದು

ಕಿವಿ ತಲುಪಿತು. ಆ ದಿನದಿಂದ ಬ್ಯಾಟರಿ ಬಳಕೆಗೆ ವಿದಾಯ ಹೇಳಿದರು ! ಗಾರ್ಡ್ ಎಷ್ಟು ಕೆಲಸ ಮಾಡ್ತಾನೆ ಎಂದು ವರದಿ ನೋಡಬಾರದು, ಅವರ ಬೂಟ್ ನೋಡಬೇಕು ಎಂಬುದು ಇವರ ತತ್ವ, ಕಾಲ್ನಡಿಗೆಯ ಗುರುತನ್ನು ಬೂಟಿನಲ್ಲಿ ಕಾಣಬಹುದು ಎಂಬುದು ಇವರ ಸೂತ್ರ.

## ಎಲ್ಲರಿಗೂ ಒಂದೇ ನ್ಯಾಯ

ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸುವದಕ್ಕಿಂತ ಮನಃಪರಿವರ್ತನೆ ಮಾರ್ಗಕ್ಕೆ ಮೇಟಿ ಒಲವು. ಬಡವ, ಶ್ರೀಮಂತ ಬೇಧವಿಲ್ಲದೇ ಪಂಚಾಯ್ತಿ ಕಟ್ಟೆಗೆ ಸೇರಬೇಕು. ಊರ ಹಿರಿಯರ ಸಮ್ಮುಖದಲ್ಲಿ ತೀರ್ಮಾನ. ಪ್ರಕರಣ ಮತ್ತೆ ಮರುಕಳಿಸದಂತೆ ಊರವರೇ ಜವಾಬ್ದಾರಿ ಜಾಮೀನು ! ಹಳ್ಳಿಗರ ಜತೆ ಪ್ರೀತಿಯಲ್ಲಿ ಮಾತಾಡುತ್ತಿದ್ದರು, ಆದರೆ ಅವರ ಮನೆಯಲ್ಲಿ ಊಟ, ಚಹ ಕುಡಿಯುತ್ತಿರಲಿಲ್ಲ. ಸಂರಕ್ಷಣೆ ವಿಚಾರದಲ್ಲಿ ಮೂಲಾಜಿಗೆ ಬೀಳುತ್ತಿರಲಿಲ್ಲ. ದಿಂಡಿಲ, ಒಡ್ಡೆ, ಲೇಬಿ ಗಿಡಗಳ ಗಳುವನ್ನು ಕಡಿದು ಹಳ್ಳಿಯ ಲಿಂಗಣ್ಣ, ಮಾರಣ್ಣ, ಬೊಮ್ಮಣ್ಣ ಮಾರುತ್ತಿದ್ದರು. ಮರ ಸಾಗಾಟಕ್ಕೆ ಲಕಲಳ್ಳಿ ನರಸಿಂಹಪ್ಪನ ಮೂರು ಬಂಡಿ ಬಾಡಿಗೆಗೆ ಪಡೆಯುತ್ತಿದ್ದರು. ನರಸಿಂಹಪ್ಪ ಊರಿಗೆಲ್ಲ ಶ್ರೀಮಂತರು, ಅವರ ಗಾಡಿ ಕಾಡಿಗೆ ಬಂದು ಸಿಕ್ಕಿಬಿತ್ತು. ಶ್ರೀಮಂತರಿಗೆ ಕೇಸು ಎಂದರೆ ಮರ್ಯಾದೆ ಪ್ರಶ್ನೆ. ವಿವಿಧ ರೀತಿಗಳಲ್ಲಿ ಒತ್ತಡ ಬಂತು. ಮೇಟಿಗೆ ವಾಸಕ್ಕೆಂದು ಸ್ವತಃ ಹನುಮಾಪುರದ ಜನ ಪ್ರೀತಿಯಿಂದ ಆಗಷ್ಟೇ ಮನೆ ಕಟ್ಟಿಸಿಕೊಟ್ಟಿದ್ದರು. ಈಗ ಅವರೆಲ್ಲ ಸೇರಿ ಜಮೀನ್ದಾರ ನರಸಿಮಹಪ್ಪನ ಮರ್ಯಾದೆ ಉಳಿಸಲು ಬಂಡಿ ಬಿಡುವಂತೆ ಒತ್ತಾಯಿಸಿದರು, ಮೇಟಿ ಜಗ್ಗಲಿಲ್ಲ. ಮೂರನೇ ದಿನ ಬೇರೆ ದಾರಿ ಕಾಣದೇ ಗಣ್ಯರಾದ ಕನ್ನೆಪ್ಪ, ಬೊಮ್ಮಯ್ಯ, ಪರಮೇಶ್ವರಪ್ಪ ಜಮೀನ್ದಾರ ನರಸಿಂಹಪ್ಪನ ಜತೆ ಪಂಚಾಯ್ತಿಗೆ ಬಂದರು. ಮರ ಕಡಿತ ಮಾಡುವದಿಲ್ಲವೆಂದು ಲಿಂಗಣ್ಣನ ಗುಂಪಿನಿಂದ ವಚನ ಪಡೆದರು, ಶ್ರೀಮಂತರು ಜಾಮೀನು ನೀಡಿದ ಬಳಿಕ ಬಂಡಿ ಬಿಟ್ಟರು. ಇದೇ ಮಾರ್ಗ ಅನುಸರಿಸಿ ೧೦ ಜನ ಮರಕಟುಕರ ವೃತ್ತಿ ಬದಲಿಸಿದರು.

ಹನುಮಾಪುರದ ಮೇಟಿಯ ಗುಡಿಸಲಿಗೆ ಓಬಳೇಶಿ, ಈರಾಳ ಮಾರಣ್ಣ ಒಂದು ಮಧ್ಯಾಹ್ನ ಬಂದರು, ಎಲ್ಲರೂ ಸೇರಿ ಊಟ ಮಾಡಿದರು. ಊಟವಾದ ತಕ್ಷಣ ಓಬಳೇಶಿ ಹಾಗೂ ಇತರರು ಗಡಿಬಿಡಿಯಲ್ಲಿ ಮನೆಯಿಂದ ಹೊರಟಿದ್ದು ಮೇಟಿಯ ಮೂರನೇ ಕಣ್ಣಿಗೆ ಬಿತ್ತು. ಎಷ್ಟೇ

ವಿಶ್ವಾಸಿಕರಾದರೂ ಅರಣ್ಯ ಸಂರಕ್ಷಣೆ ವಿಚಾರದಲ್ಲಿ ಅನುಮಾನ ಸ್ವಭಾತಃ ಉಳಿದಿರುತ್ತಿತ್ತು. ಹೀಗಾಗಿ ಅವರಿಗೆ ತಿಳಿಯದಂತೆ ಹಿಂಬಾಲಿಸಿದರು. ಗಾರ್ಡ್ ಮನೆಯಲ್ಲೇ ಊಟ ಮಾಡಿದ್ದ ಅವರು ಮೋಸದಲ್ಲಿ ಮರ ಕಡಿತ ಆರಂಭಿಸಿದರು. ಕಡಿಯುತ್ತಿದ್ದಂತೆ ಸೆರೆ ಸಿಕ್ಕರು. ಇನ್ನೂ ಊಟ ಮಾಡಿದ ಕೈ ಆರಿರಲಿಲ್ಲ, ತಾವು ಮೋಸ ಮಾಡಿದೆವೆಂದು ಅವರೆಲ್ಲ ಗಳಗಳ ಅತ್ತರು. ನಾನು ನಿಮಗೆ ಊಟ ಹಾಕಿ ನಿಮ್ಮನ್ನೇ ಹಿಡಿಯುವಂತಾಯಿತಲ್ಲ ಎಂದು ಮೇಟಿಗೂ ಕಣ್ಣೀರು ಹರಿಯಿತು. ಹೃದಯ ಪರಿವರ್ತನೆ ಮುಹೂರ್ತ ಅದು, ಮತ್ತೆ ಮುಂದೆಂದೂ ಅವರು ಮರ ಕಡಿತಕ್ಕೆ ಬರಲಿಲ್ಲ. ರಕ್ಷಣೆಗೆ ಕೈಗೂಡಿಸಿದರು.

## ಕಲುಸಂಧಿಯಲ್ಲಿ ಉಡದ ಬಾಲ.....

ಕಾಡಿನಲ್ಲಿ ಕೈರೆನ್ಸ್ ಕಟ್ಟಿದ್ದರು. ಗಡಿ ಗುರುತಿಗೆ ಕಲ್ಲುಗಳನ್ನು ಗೋಪುರದ ಹಾಗೇ ಕಟ್ಟುವ ಪರಿ ಅದು. ಆದರೆ ಆ ಕಲ್ಲುಗೂಡನ್ನು ಆಗಾಗ ಯಾರೋ ಕಿತ್ತು ಕೆಡವುತ್ತಿದ್ದರು. ಹೋಗಿ ಹೋಗಿ ಕಲ್ಲುಗೂಡನ್ನು ಏಕೆ ಕೀಳುತ್ತಾರೆಂದು ಅಚ್ಚರಿ. ಒಮ್ಮೆ ಕಾಡಲ್ಲಿ ಅಡ್ಡಾಡುವಾಗ ಹನುಮಾಪುರದ ಸಣ್ಣಮಾರಣ್ಣ ಗಡಿಬಿಡಿಯಲ್ಲಿ ಹೋಗುತ್ತಿರುವದನ್ನು ಗಮನಿಸಿದರು, ಹಿಂಬಾಲಿಸಿದರು. ಕಾಡಿನ ಉಡವೊಂದು ಓಡುತ್ತ ಹೋಗಿ ಗಡಿ ಗುರುತಿನ ಗೋಪುರದಲ್ಲಿ ಸೇರಿಕೊಂಡಿತ್ತು. ಸಣ್ಣ ಮಾರಣ್ಣ ಕಲ್ಲಸಂಧಿ ಸೇರಿದ ಉಡದ ಬಾಲ ಹಿಡಿದು ಬಿಟ್ಟು ಬಿಡದೇ ಜಗ್ಗುತ್ತಿದ್ದರು, ಉಡದ ಹಿಡಿತ ಕೇಳಬೇಕೆ ? ಕಲ್ಲುಸಂಧಿಯಲ್ಲಿ ಭಲವಾಗಿ ಕೂತಿತ್ತು. ಮಾರಣ್ಣ ಉಡದ ಬಾಲ ಜಗ್ಗತ್ತಿದ್ದರೆ ಮೇಲ್ಲನೇ ಹೋದ ಮೇಟಿ ಮಾರಣನ ರಟ್ಟೆ ಹಿಡಿದು ಜಗ್ಗ ತೊಡಗಿದರು !. ಕಂಗಾಲಾದ ಮಾರಣ್ಣ ಉಡದ ಬಾಲ ಬಿಟ್ಟರು, ಉಡದ ಜೀವ ಉಳಿಯಿತು, ಕೇರೆನ್ಸ್ ಬೀಳುತ್ತಿದ್ದ ಕಾರಣವೂ ಹೊರಬಿತ್ತು.

ಇಡೀ ಬಾಂಡ್ರಾವಿ ಬೆಟ್ಟದಲ್ಲಿ ಮೇಟಿ ಅರಣ್ಯ ನೀತಿ ಢಾಳಾಗಿ ಕಾಣುತ್ತಿದೆ. ಫಲವಾಗಿ ಇಂದು ಕಮರಾ, ತೆರೆ, ತುಗಲಿ, ಹಾಲೆ, ದೇವು, ಸೋಮ, ದಿಂಡಿಲ, ಬಿಕ್ಕೆ, ಜಾನಿ, ಉಲ್ಪಿ, ಕಾರೆ, ಕವಲಿ ಮುಂತಾದ ಗಿಡಗಳು. ಹಾಲೆ, ಉಗಣೆ, ಮುಡಸಿ, ತಿಟ್ಟಿಲಕಾಯಿ, ಮುಂತಾದ ಗಿಡಗಳು. ಹಾಲೆ, ಉಗಣೆ, ಮುಡಸಿ, ತಿಟ್ಟಿಲಕಾಯಿ, ಶತಾವರಿ, ದಾಗಡೆ, ತೀಡರ, ಆಡುಮುಟ್ಟದ ಬಳ್ಳಿ, ಹಾವು ಮುಟ್ಟದ ತೊಂಡೆ, ಗುಲಗುಂಜಿ,

ಕುಂಟಗಗಿನಬಳ್ಳಿ, ಅಮೃತ ಬಳ್ಳಿ ಮುಂತಾದ ಮೂಲಿಕೆಗಳು ಬೆಳೆದಿವೆ. ಕುಂಬಾರ ಕಲ್ಲು, ತಿರುಮಲಕಲ್ಲು, ಸಜ್ಜಲಗುಡ್ಡ ಕರಡಿಗಳ ಮನೆಯಾಗಿದೆ. ಚಿರತೆ, ನರಿ, ಮೊಲ, ಹಂದಿ, ನವಿಲು, ಮುಳ್ಳುಹಂದಿ, ಕತ್ತೆಕಿರುಬ ಮುಂತಾದ ಪ್ರಾಣಿ ಪಕ್ಷಿಗಳ ನೆಲೆಯಾಗಿದೆ.

ನಾನು ಅರಣ್ಯ ಅಧ್ಯಯನ ನಡೆಸುತ್ತ ಹನುಮಾಪುರ ಮಾರಮ್ಮನಕಟ್ಟೆ ಬೇವಿನ ಮರದ ಬುಡಕ್ಕೆ ಹೋದಾಗ ಅಲ್ಲಿ ಊರಿಗೆ ಊರೇ ಸೇರಿತ್ತು. ಒಂದು ಕಾಲದಲ್ಲಿ ಮರ ಕಡಿದವರು, ಉಡ ಹಿಡಿದವರು, ಕುರಿಗಾಹಿಗಳಾಗಿ ಗಿಡ ಕಡಿದವರು, ಬಳ್ಳಾರಿಗೆ ಕಟ್ಟಿಗೆ ಮಾರುತ್ತಿದ್ದವರು, ಇದ್ದಲಿ ಮಾಡುವವರು ಎಲ್ಲ ಜಮಾಯಿಸಿದ್ದರು. 'ನಾವು ಲೋಡ್ ಕಟ್ಟಿಗೆ ಮಾಡ್ತಾ ಇದ್ದೋರು, ಇವರ ಕಾರಣದಿಂದ ಬಿಟ್ಟು ಬಿಟ್ವಿ, ನೆನೆಸಿದಲ್ಲಿ ನಾಗಪ್ಪ ನಿಲ್ಲುತ್ತಿದ್ದರು !' ಹನುಮಾಪುರ ಸಣ್ಣ ಮಾರಣ್ಣ ನೆನಪು ಹಂಚಿದರು. ಹೊನ್ನೂರಪ್ಪನಂತೂ' ಇಂಥಾ ಜನಾ.... ಮತ್ತೆ ಈ ನೆಲದಲ್ಲಿ ಹುಟ್ಟೋದಿಲ್ರಿ...!' ಎಂದರು. ಜನರ ಅಭಿಮಾನಕ್ಕೆ ನಾಗಪ್ಪ ಮೇಟಿಯ ಕಣ್ಣಲ್ಲಿ ನೀರು ಬಂತು.

ನಿವೃತ್ತಿಯಾದ ನಂತರವೂ ನಾಗಪ್ಪ ರಾಮಪುರದ ಮನೆ ಬಿಟ್ಟು ಉಪಗುಂಡಲು ಬಂಡೆಯಲ್ಲಿ ಹಲವು ರಾತ್ರಿ ಕಳೆಯುತ್ತಿದ್ದರು. ಕಾಡು ಕಾಯುವದು ಕೆಲಸವಾಗುವ ಬದಲು ಜೀವನದ ಉಸಿರೆಂದು ಭಾವಿಸಿದರು. 'ಮೇಲಾಧಿಕಾರಿಗಳ ಸಹಕಾರ ಜನರ ಪ್ರೀತಿಯಿಂದ ಇದು ಸಾಧ್ಯವಾಗಿದೆ' ಮೇಟಿ ಸಹಾಯ ನೀಡಿದವರನ್ನು ಸದಾ ನೆನೆಯುತ್ತಿದ್ದರು. ಅಧಿಕಾರಿಗಳಾದ ಮಲ್ಲೇಶಯ್ಯ, ಮಲ್ಲಿಕಾರ್ಜುನ, ಗಮನಘಟ್ಟಿ ಮುಂತಾದ ಅಧಿಕಾರಿಗಳಲ್ಲದೇ ಮೇಟಿಯ ಪತ್ನಿ ಸಿದ್ದಮ್ಮರ ಸಹಾಯ ಇಲ್ಲಿ ಮಹತ್ವದ್ದು. ಈಗ ಮುನಿರಾಮ ಸಿಂಗ್, ಷಣ್ಮುಖಪ್ಪ, ಓಬಯ್ಯನಾಯಕ್, ಅಬ್ದುಲ್ ತಾವಾಬ್, ಓಬಳೇಶ್ ಮುಂತಾದ ಸಿಬ್ಬಂಧಿಗಳು ಬಾಂಡ್ರಾವಿ ರಕ್ಷಣೆಗೆ ಶ್ರಮಿಸುತ್ತಿದ್ದಾರೆ. ಮೇಟಿಯ ನೇತ್ರತ್ವದಲ್ಲಿ ಬಾಂಡ್ರಾವಿ ವನಶ್ರೀ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸ್ಥಾಪನೆಯಾಗಿದ್ದು ಗ್ರಾಮ ಅರಣ್ಯಾ ಸಮಿತಿ, ಸ್ವಸಹಾಯ ಸಂಘ ರಚನೆ ಮುಖೇನ ನೆಲದ ಸಂಬಂಧ ಉಳಿಸಿಕೊಂಡರು.

'ಬಾಂಡ್ರಾವಿಯ ಅರಣ್ಯಾ ಪಾಠ ಎಲ್ಲೆಡೆ ತಲುಪಬೇಕು, ಬಳ್ಳಾರಿ ವೃತ್ತದ

ಅರಣ್ಯ ತರಬೇತಿ ಕಾರ್ಯಕ್ರಮಗಳಲ್ಲಿ ಮೇಟಿಯವರನ್ನು ಫಾರೆಸ್ಟ್ ಮೇಷ್ಟ್ರಾಗಿ ಬಳಸುತ್ತೇವೆ' ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಪುಟ್ಟುಬುದ್ಧಿ ಹೆಮ್ಮೆಯಿಂದ ಮಾತಾಡಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿನ ತುರುಮಲಕಲ್ಲು, ಊರಗುಡ್ಡ, ಗುಲುಕುಲುಬಂಡೆ, ಸದ್ದಲ ಗುಡ್ಡ, ಹೊಸೇನರಾಯ ಕಲ್ಲು ಹೀಗೆ ಸುತ್ತಲಿನ ಸಾವಿರಾರು ಎಕರೆ ಬೆಟ್ಟಕ್ಕೆ ಬೆಟ್ಟವೇ ನಾಗಪ್ಪ ಮೇಟಿ ನೆಲದ ಕಠಿಣ ಭಾಷೆ ಓದಿ ಕಾಡು ಬೆಳೆಸಿದ ರೀತಿ ಹೇಳಿದವು.

'ಒಬ್ಬ ಸಾಮಾನ್ಯ ಗಾರ್ಡ್ ಏನೂ ಮಾಡಲಾಗದೆಂದು' ನಿತ್ರಾಣಗೊಂಡ ಅರಣ್ಯ ಇಲಾಖೆಯಲ್ಲಿ ಅದೇ ಪಗಾರು, ಅದೇ ಯೂನಿಫಾರ್ಮ್ ಮಧ್ಯೆ ಕೋಟಿಗೊಬ್ಬ ಮೇಟಿ ಕಾಣಿಸಿಕೊಂಡಿದ್ದು ಗಾರ್ಡ್ ಕುಲಕ್ಕೆ ಖ್ಯಾತಿ ತಂದ ವಿಚಾರ. ಸಾಧನೆ ಗಮನಿಸಿದ ಹಿರಿಯ ಅಧಿಕಾರಿಗಳು ಬಾಂಡ್ರಾವಿ ರಕ್ಷಿತ ಅರಣ್ಯಕ್ಕೆ 'ಗಾರ್ಡ್ ನಾಗಪ್ಪ ಜುಮ್ಮಣ್ಣ ಮೇಟಿ ರಕ್ಷಿತ ಅರಣ್ಯ' ಎಂದು ಎರಡು ವರ್ಷದ ಹಿಂದೆ ಮರು ನಾಮಕರಣ ಮಾಡಿದ್ದಾರೆ !. ರಾಮಪುರದಿಂದ ೧೮ ಕಿಲೋ ಮೀಟರ್ ದೂರದ ಬಾಂಡ್ರಾವಿ ತನಕ ಚೆಂದದ ಬೋರ್ಡು ಹಾಕಿದ್ದಾರೆ. ಎತ್ತರದ ಉಪಗುಂಡಲು ಬಂಡೆಯಲ್ಲಿ ಮೇಟಿಯ ಅನುಭವ ನುಡಿ ಬರೆದಿದ್ದಾರೆ.

ಒಮ್ಮೆ ಹಿಂತಿರುಗಿ ನೋಡಿ, ಭಣ ಭಣ ಬಾಂಡ್ರಾವಿ ಬೆಟ್ಟಕ್ಕೆ ಅದ್ಭುತ ಹಸಿರಿನ ಹೆಮ್ಮೆ ಹಿಂದೆ ಸಾವಿನ ದವಡೆಯಲ್ಲಿದ್ದ ಭೂಗತ ಬೇರಿನ ನೆನಪಿದೆ. ಅರಣ್ಯ ರಕ್ಷಣೆಯ ಬೇರುಮೂಲದ ಶ್ರಮಿಕ ಗಾರ್ಡ್‌ರ ಬೆವರಿನ ಗಾಥೆಯಿದೆ. ಕಟ್ಟಕಡೆಗೆ ಒಂದು ಮಾತು ಹೇಳಬೇಕು, ಮೇಟಿಯ ಜತೆ ಬಾಂಡ್ರಾವಿಯ ಕಾಡು ಹಲವು ಸಾರಿ ಸುತ್ತಿದ್ದೇನೆ. ಅರಣ್ಯ ಅಧ್ಯಯನ ಮಾಡುವಾಗ ಹನುಮಾಪುರ ಹಳ್ಳಿಗ ಹೊನ್ನರಪ್ಪ ' ಇಂಥಾ ಜನಾ... ಮತ್ತೆ ಈ ನೆಲದಲ್ಲಿ ಹುಟ್ಟೋದಿಲ್ರಿ... !' ಎಂದಿದ್ದರು, ಜನರ ಅಭಿಮಾನಕ್ಕೆ ನಾಗಪ್ಪ ಮೇಟಿಯ ಕಣ್ಣಲ್ಲಿ ನೀರು ಬಂತು. 'ನಾನು ಸತ್ತರೆ ಈ ಮರದ ಬುಡಕ್ಕೆ ಹುಗಿಬೇಕು' ಕಾಡಿನ ದಾಸಮ್ಮಾಳ್' ಗೋಕುಂಟಿಯ ಒಡ್ಡಿನ ಮೇಲಿನ ಬ್ರಹ್ಮ, ವಿಷ್ಣು, ಮಹೇಶ್ವರ ಎಂಬ ಮೂರು ಮರತೋರಿಸಿ ಹೇಳಿದ್ದರು. ಅದೆಲ್ಲ ಈಗ ನೆನಪು ಮಾತ್ರ, ದೇಶಕ್ಕೊಂದು ಮಾದರಿ ಅರಣ್ಯಾಭಿವೃದ್ಧಿ ತೋರಿಸಿದ ಮೇಟಿ ಈಗ ಇಹಲೋಕ ತ್ಯಜಿಸಿದ್ದಾರೆ. ಬಾಂಡ್ರಾವಿಯ ಬೆಟ್ಟದಲ್ಲಿ ಲೀನವಾಗಿದ್ದಾರೆ. ಮರಗಳ ಮಧ್ಯೆ ಅಮರರಾಗಿದ್ದಾರೆ.

### ಶಕ್ತಿ ಪೀಠಗಳಲ್ಲಿ ಪ್ರಾಣಿವಿಸ್ಮಯ

ಶಂಕರಾಚಾರ್ಯರು ಗೋಕರ್ಣಕ್ಕೆ ಬಂದಾಗ ಶತಶೃಂಗ ಪರ್ವತದಲ್ಲಿ ವಿಸ್ಮಯವೊಂದನ್ನು ನೋಡುತ್ತಾರೆ. ಕಾಡಿನಲ್ಲಿ ಹುಲಿ ಜಿಂಕೆಯ ಮರಿಗೆ ಹಾಲುಣಿಸುತ್ತದೆ !. ಇದು ವಿಶೇಷ ಶಕ್ತಿ ಕ್ಷೇತ್ರ ಎಂದು ಭಾವಿಸಿದ ಸಂಕರಾಚಾರ್ಯರು ಆ ಸ್ಥಳಲ್ಲಿ ಮಠ ಸ್ಥಾಪಿಸಿದರು. ಈ ಪ್ರದೇಶಕ್ಕೆ 'ಅಶೋಕಾ' ಎಂದು ಕರೆಯಲಾಗುತ್ತದೆ. ಶೃಂಗೇರಿ, ಮೂಡಿಬಿದಿರೆ, ಹಳೆಬೀಡು ಸೇರಿಂದತೆ ಪ್ರಮುಖ ಐತಿಹಾಸಿಕ, ಧಾರ್ಮಿಕ ಸ್ಥಳಗಳಿಗೆ ಹೋದರೆ ಇಂತಹ ದಂತಕತೆಗಳು ದೊರೆಯುತ್ತವೆ. ಹುಲಿ – ಹಸು, ಹಾವು – ಕಪ್ಪೆ, ಹುಲಿ – ಜಿಂಕೆ ಇವು ಸಹಬಾಳ್ವೆ ನಡೆಸಿದ ಚಿತ್ರಗಳ ಮುಖೇನ ನೆಲದ ಶಾಂತಿಯ ಸಂದೇಶ ಸಾರುತ್ತಾರೆ. ಇವು ನಡೆದ ಘಟನೆಗಳೇ ? ಎಂಬ ಪ್ರಶ್ನೆ ಬದಿಗಿಡೋಣ. ಇಲ್ಲಿ ಜೀವ ಸರಪಳಿಯ ವಿಸ್ಮಯಗಳನ್ನು ಗಮನಿಸಿದವರು ಸಹಜತೆಗೆ ಮೀರಿದ ನೋಟ ಹುಡುಕಿದ ರೀತಿ ಕಾಣುತ್ತದೆ.